ಬಿಳಿಗಿರಿರಂಗನ ಬೆಟ್ಟ
ಚರಿತ್ರೆ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಜಯಶಂಕರ ಎಸ್.

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರವಾಚಕರು ಮತ್ತು ಮುಖ್ಯಸ್ಥರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೮

566
566

ಬಿಳಿಗಿರಿರಂಗನ ಬೆಟ್ಟ
ಚರಿತ್ರೆ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಜಯಶಂಕರ ಎನ್.

ಮಾರ್ಗದರ್ಶಕರು
ಡಾ.ವಾಸುದೇವ ಬಡಿಗೇರ
ಪ್ರವಾಚಕರು ಮತ್ತು ಮುಖ್ಯಸ್ಥರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಬಿಳಿಗಿರಿರಂಗನಬೆಟ್ಟ: ಚರಿತ್ರೆ ಮತ್ತು ಪುರಾತತ್ವ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶ್ರೀ ಎನ್. ಜಯಶಂಕರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.


ಡಾ. ವಾಸುದೇವ ಬಡಿಗೇರ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15/10/2008


ಪರಿವಿಡಿ

ನಕ್ಷೆ

ಚಾಮರಾಜನಗರ ಜಿಲ್ಲೆ



ಯಳಂದೂರು ತಾಲ್ಲೂಕು



ಅಧ್ಯಾಯ ೧

ಪ್ರಸ್ತಾವನೆ

೧

ಪ್ರಸ್ತಾವನೆ

ಪ್ರಸ್ತಾವನೆ

ಕಾಲಗರ್ಭದಲ್ಲಿ ಹುದುಗಿ ಹೋದ ಅಪೂರ್ವ ಘಟನೆಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಅನ್ವೇಷಿಸಿ, ಸಂಶೋಧನೆ ಹಾಗೂ ಸಂಯೋಜನೆಯ ಮೂಲಕ ಕೂಲಂಕಶವಾಗಿ ವೈಜ್ಞಾನಿಕ ರೀತಿಯಲ್ಲಿ ನಿರೂಪಿಸುವುದೇ ಇತಿಹಾಸ. ಬುದ್ದಿಗ್ರಾಹ್ಯ ಶಿಸ್ತುಗಳಲ್ಲಿ ಇತಿಹಾಸ ಅತಿಯಾದ ಪರಿಶ್ರಮ ನೀಡುವ ಒಂದು ಕ್ರಮವಾಗಿದೆ. ಇತಿಹಾಸವು ನಮ್ಮ ಜೀವನಕ್ಕೆ ಯಾವಾಗಲೂ ಅಂಟಿಕೊಂಡಿದೆ. ನಾವು ಆಲೋಚಿಸುವ, ನಮ್ಮ ಲೌಕಿಕ ಚೌಕಟ್ಟು ಹಾಗೂ ನಮ್ಮ ವ್ಯವಹಾರ ವಿಧಾನಗಳಲ್ಲವೂ ಹಿಂದೆ ನಡೆದದ್ದರ ಅಥವಾ ಮುಂದಿನ ಯೋಜನೆಗಳ ಮೇಲೆ ಅವಲಂಬಿಸಿವೆ.

ಇತಿಹಾಸ ಮತ್ತು ಪುರಾತತ್ವ ಬಹಳ ಭಿನ್ನವಾದದ್ದು. ಇತಿಹಾಸ ಲಿಖಿತ ದಾಖಲೆಗಳ ವೈಜ್ಞಾನಿಕಾಧ್ಯಯನ. ಪುರಾತತ್ವ ಅಧ್ಯಯನ ವಿಷಯ ಆಯಾ ಕಾಲದ ಜನಾಂಗಗಳು ಬಳಸಿದ ವಸ್ತುಗಳು ಮತ್ತು ಕಟ್ಟಿದ ಕಟ್ಟಡಗಳು ಇವು ಯಥಾಸ್ಥಿತಿಯಲ್ಲಿ ಎಲ್ಲಿಯೂ ದೊರೆಯವು ಎಂಬುದು ಸ್ಪಷ್ಟ. ಹೆಚ್ಚಿನವು ಕಾಲದ ಹೊಡೆತದಿಂದ ನಷ್ಟವಾಗಿರುವ ಅವಶೇಷಗಳು ಮಾತ್ರ ಗತವೈಭವಕ್ಕೆ ತೋರುಗುರುತುಗಳಾಗಿ ಉಳಿದಿರುತ್ತವೆ. ಹಾಗಾಗಿ 'ಹಿಂದೆ-ಮುಂದೆ, ನೋಡಿ-ನಡೆ' ಎಂಬ ಸಲಹೆಯೂ ಬದುಕಿನ ಸತ್ಯವನ್ನು ತಿಳಿಸುತ್ತದೆ. ಜೀವನದಲ್ಲಿ ಅನುಭವ ಮುಖ್ಯವೆಂದು ಒಪ್ಪಿಕೊಳ್ಳುವುದಾದರೆ ಇತಿಹಾಸದ ಪ್ರಾಮುಖ್ಯತೆ ಅರಿವಾಗುತ್ತವೆ.

ಸಂಸ್ಕೃತಿ ಎನ್ನುವುದು ಮಾನವನ ಜ್ಞಾನ, ನಂಬಿಕೆ ಹಾಗೂ ವರ್ತನೆಗಳ ಸಮಗ್ರ ರೂಪುರೇಷೆಯಾಗಿರುವುದರಿಂದ ಇದರ ಬೃಹತ್ ಅಂತರ್ಜಾಲದಲ್ಲಿ ಭಾಷೆ, ಆಚಾರ ವಿಚಾರ, ಸಂಪ್ರದಾಯ, ಕಟ್ಟುಪಾಡುಗಳು, ವಿಧಿ ನಿಷೇಧಗಳು, ಕಲಾ ಪ್ರಕಾರಗಳು, ಸಾಧನೆಗಳು. ಹೀಗೆ ಪ್ರತಿಯೊಂದು ಅಂತರ್ಗತವಾಗಿರುತ್ತದೆ. ಕ್ರಿಯಾತ್ಮಕವಾದ ಸಂಸ್ಕೃತಿ ಸ್ಥಗಿತವಾದಂತೆ ಕಂಡರೂ ನಿರಂತರವಾಗಿ ಹೊಸ ನಮೂನೆಗಳನ್ನು ಸ್ವೀಕರಿಸುವ ಸ್ವಭಾವವನ್ನು ಇತಿಹಾಸ ಹೊಂದಿದೆ.

ಒಂದು ಪ್ರದೇಶದ ಚರಿತ್ರೆಯನ್ನು ಅಧ್ಯಯನ ಮಾಡಲು ಹಲವಾರು ಮಾರ್ಗಗಳಿವೆ. ಏಕೆಂದರೆ ಏಕ ಮುಖಿಯಾದ ಮಾರ್ಗವನ್ನು ಕ್ರಮಿಸಿದರೆ ಬೆಟ್ಟದ ಒಂದು ಪಾರ್ಶ್ವವನ್ನು ಮಾತ್ರ ಗ್ರಹಿಕೆಯ ತೆಕ್ಕಗೆ

ತಂದಂತೆ. ಎಲ್ಲ ಪಾರ್ಶ್ವಗಳ ಯಥಾ ವೃಷ್ಟಿಯ ನೋಟದಿಂದ ಬೆಟ್ಟವನ್ನು ಒಟ್ಟು ಸ್ವರೂಪದಲ್ಲಿ ಗ್ರಹಿಸಲು ಸಾಧ್ಯ. ಒಂದು ಪ್ರಾದೇಶಿಕ ಸಂಸ್ಕೃತಿಗೆ ಅದರದ್ದೇ ಆದ ಆಯಾಮಗಳಿರುತ್ತವೆ. ಈ ಎಲ್ಲಾ ಆಯಾಮಗಳನ್ನು ಅವಲೋಕಿಸಲು ವಿವಿಧ ಜ್ಞಾನ ಶಿಸ್ತುಗಳ ನೆರವನ್ನು ಪಡೆದು, ಆ ಪ್ರದೇಶದ ಸಂಸ್ಕೃತಿಯನ್ನು ರೂಪಿಸಲು ಕಾರಣೀಭೂತವಾದದ್ದನ್ನು ಶೋಧಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ಪ್ರಾಕೃತಿಕ ಆವರಣ, ಸಾಹಿತ್ಯ, ಸಾಮಾಜಿಕ ಸ್ವರೂಪ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆ ಮುಂತಾದ ಹಲವು ಜ್ಞಾನದ ಕೋನಗಳಿಂದ ಸಮೀಕ್ಷಿಸಿದಾಗ ಆ ಆಯಾಮಗಳ ಗ್ರಹಿಕೆ ಶಕ್ಯ.

ಬಿಳಿಗಿರಿರಂಗನ ಬೆಟ್ಟ : ಚರಿತ್ರೆ ಮತ್ತು ಪುರಾತತ್ವ ಅಧ್ಯಯನ ಎಂಬ ಶೀರ್ಷಿಕೆಯನ್ನುಳ್ಳ ಪ್ರಸ್ತುತ ಅಧ್ಯಯನವು ಈ ಬಗೆಯ ಉದ್ದೇಶವನ್ನಿಟ್ಟುಕೊಂಡು ರೂಪಿಸುವ ಪ್ರಯತ್ನವಾಗಿದೆ.

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಬಿಳಿಗಿರಿರಂಗನ ಬೆಟ್ಟವು ಜಿಲ್ಲಾ ಕೇಂದ್ರದಿಂದ ೪೫ ಕಿ.ಮೀ ದೂರದಲ್ಲಿದೆ. ಯಳಂದೂರನ್ನು ಬಿಟ್ಟು ಉಳಿದೆಲ್ಲ ತಾಲೂಕುಗಳು ಕರ್ನಾಟಕ ರಾಜ್ಯದ ಗಡಿ ತಾಲೂಕುಗಳಾಗಿವೆ. ಈ ಜಿಲ್ಲೆ ಬಹುಪಾಲು ಬೆಟ್ಟ ಗುಡ್ಡಗಳಿಂದ ಆವೃತವಾಗಿದೆ. ಮಹದೇಶ್ವರ ಬೆಟ್ಟ. ಹಿಮ್‌ದ ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಹೀಗೆ ಅನೇಕ ಬೆಟ್ಟ ಸಾಲುಗಳಿಂದ ಕೂಡಿದೆ.

ಬಿಳಿಗಿರಿರಂಗನ ಬೆಟ್ಟ ಪರಿಸರವು ಪುರಾತತ್ವ ದೃಷ್ಟಿಯಿಂದಲೂ, ರಾಜಕೀಯ ಹಿನ್ನೆಲೆ, ಆಡಳಿತ ವಿಭಾಗ, ಶಾಸನ, ದೇವಾಲಯ, ಮೂರ್ತಿಶಿಲ್ಪ ಮುಂತಾದ ಅಂಶಗಳನ್ನೊಳಗೊಂಡು ಅಧ್ಯಯನ ದೃಷ್ಟಿಯಿಂದ ಮಹತ್ವವುಳ್ಳ ಪ್ರದೇಶವಾಗಿದೆ. ಕರ್ನಾಟಕದ ದಕ್ಷಿಣ ಗಡಿಯ ನೀಲಗಿರಿ ಶ್ರೇಣಿಯಿಂದ ಒಂದು ಬೆಟ್ಟಗಳ ಸಾಲು ಮಲೆನಾಡಿನಲ್ಲಿರುವಂತೆ ಹಬ್ಬಿದೆ. ಈ ಪ್ರದೇಶದಲ್ಲಿ ಕೆಲವು ಮರುಳು ಮಿಶ್ರಿತ ಅಥವಾ ಜಂಬಟ್ಟಿಗೆಯಿಂದ ಕೂಡಿದ ಮಣ್ಣಿದೆ.

ಬಿಳಿಗಿರಿರಂಗನ ಬೆಟ್ಟವಿರುವ ಯಳಂದೂರು ಪರಿಸರದಲ್ಲಿ ಪ್ರಸಿದ್ಧ ರಾಜ ಮನೆತನಗಳಾದ ಗಂಗರಿಂದ ವಿಜಯನಗರ ಮತ್ತು ಮೈಸೂರು ಅರಸರ ಕಾಲದ ಐತಿಹಾಸಿಕ ಗುರುತುಗಳನ್ನು, ಸಂಸ್ಕೃತಿಯ ವೈವಿಧ್ಯತೆಗಳನ್ನು ಗರ್ಭೀಕರಿಸಿಕೊಂಡು ಬಂದಿದೆ. ಈ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅವಶೇಷಗಳನ್ನು ಸಮನ್ವಗೊಳಿಸಿಕೊಂಡು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಬಿಳಿಗಿರಿರಂಗನ ಬೆಟ್ಟ ಪರಿಸರದಲ್ಲಿ ಲಕ್ಷಾಂತರ ವರ್ಷಗಳಿಂದಲೂ ಮಾನವನು ತನ್ನ ಚಟುವಟಿಕೆ ಗಳನ್ನು ನಿರ್ವಹಿಸುತ್ತಾ ಬಂದಿದ್ದಾನೆ. ಶಿಲಾಯುಗ ಹಾಗೂ ಚಾರಿತ್ರಿಕ ಕಾಲಘಟ್ಟದಲ್ಲಿ ಮಹತ್ವದ ಪಾತ್ರವಹಿಸಿದ ಅನೇಕ ನೆಲೆಗಳು ಈ ಪ್ರದೇಶದಲ್ಲಿವೆ. ಇದುವರೆಗೂ ಈ ಪರಿಸರಕ್ಕೆ ಸಂಬಂಧಿಸಿದಂತೆ,

ಬಿಳಿಗಿರಿರಂಗನ ಬೆಟ್ಟ ಬೃಹತ್ ಶಿಲಾ ಸಂಸ್ಕೃತಿ ಕುರುಹುಗಳನ್ನು ಕುರಿತು ಹೆಚ್ಚಿನ ಒತ್ತು ನೀಡಲಾಗಿದೆ. ಆದರೆ ಬೇರೆ ಬೇರೆ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ಹಲವು ನೆಲೆಗಳು ಈ ಪರಿಸರದಲ್ಲಿವೆ. ಅಲ್ಲದೇ ಮೌಖಿಕ ಆಕರ, ನಂಬಿಕೆ ಸಂಪ್ರದಾಯ ಮೊದಲಾದವುಗಳು ಶ್ರೀಮಂತವಾಗಿ ಬೆಳೆದುಬಂದಿವೆ. ಅವುಗಳನ್ನು ಅಂತರ ಶಿಸ್ತಿಯ ನೆಲೆಯಲ್ಲಿ ಶೋಧಿಸುವ, ಸಂಯೋಜಿಸುವ ಹಾಗೂ ವಿಶ್ಲೇಷಿಸುವ ಅಧ್ಯಯನವನ್ನು ಮಾಡಲಾಗಿದೆ.

ಈ ಪರಿಸರದಲ್ಲಿ ಇತಿಹಾಸ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಕಟ್ಟಿಕೊಡುವ ಮಹತ್ವದ ಆಕರಗಳಾದ ದೇವಾಲಯಗಳಿವೆ. ವಾಸ್ತುಶಿಲ್ಪಕಲೆಯ ದೃಷ್ಟಿಯಿಂದ ಮಾತ್ರವಲ್ಲದೇ ಸಾಂಸ್ಕೃತಿಕವಾಗಿ ಅವುಗಳ ಅಧ್ಯಯನ ತುಂಬಾ ಅವಶ್ಯಕವಾಗಿತ್ತು. ಹಿಂದೆ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿರಿಸಿ ಕೊಂಡು ಪ್ರಸ್ತುತ ಅಧ್ಯಯನವನ್ನು ವಿಸ್ತರಿಸುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಬಿಳಿಗಿರಿರಂಗನ ಬೆಟ್ಟ ಪರಿಸರದ ಸುತ್ತಮುತ್ತಲಿನ ಪ್ರದೇಶವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಈ ಪರಿಸರದಲ್ಲಿ ಯಳಂದೂರು, ಸೋಲಿಗರ ಸ್ಥಳಗಳು, ಕೋಮಾರನ ಪುರ, ಹೊಂಡರಬಾಳು, ಪುರನಿ, ಬೂದಿತಿಟ್ಟು ಮುಂತಾದ ಗ್ರಾಮಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಗಂಗರಿಂದ ಮೈಸೂರು ಒಡೆಯರ ಆಡಳಿತಾವಧಿಯ ಕೊನೆಯ ಕಾಲಘಟ್ಟವನ್ನು ಆಯ್ದುಕೊಳ್ಳಾಗಿದ್ದು, ಈ ಕಾಲದ ನಂತರದ ಕೆಲವು ಮಹತ್ವದ ವಿಚಾರಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

ಇದುವರೆಗೆ ನಡೆದ ಅಧ್ಯಯನಗಳು

ಬಿಳಿಗಿರಿರಂಗನ ಬೆಟ್ಟ ಪರಿಸರದ ಪುರಾತತ್ವಕ್ಕೆ ಸಂಬಂಧಿಸಿದಂತೆ ಇದುವರೆಗೂ ವಿದ್ವಾಂಸರು ಬಿಡಿ ವಿವರಗಳನ್ನು ನೀಡಿದ್ದಾರೆ. ಈ ಪ್ರದೇಶಕ್ಕೆ ಸಂಬಂಧಪಟ್ಟ ಬಿಡಿ ಲೇಖನಗಳನ್ನು ಸಂಗ್ರಹಿಸಿ ಸಂಪಾದಿತ ಕೃತಿಗಳನ್ನು ಪ್ರಕಟಿಸಲಾಗಿದೆ. ಪುರಾತತ್ವ ವಿಚಾರಕ್ಕಿಂತ ಸೋಲಿಗರ ಬದುಕು ಬವಣೆಗಳ ಕುರಿತು ಹೆಚ್ಚು ಲೇಖನಗಳು ಪ್ರಕಟಣೆಯಾಗಿವೆ.

ಎಸ್.ಜಿ. ಮಾರಬ್ ಅವರು "The soliga of Biligirirangna hills" ಎಂಬ ಅಧ್ಯಯನದಲ್ಲಿ ಸೋಲಿಗರ ಕುರಿತಂತೆ ವಿಶೇಷ ಸಂಗತಿಗಳನ್ನು ತಿಳಿಸಿದ್ದಾರೆ. ಗಣೇಶಯ್ಯರವರು Biligiriranaswamy temple wild life sanctuary, ನಾಗಾರಾಜ ಅವರ ಬಿಳಿಗಿರಿರಂಗನ ಬೆಟ್ಟದ ಲೇಖನ, ಗಿರಿಜನ ಕಲ್ಯಾಣ ಕೇಂದ್ರದಿಂದ ಪ್ರಕಟಣೆಯಾದ Soliga Tribe and stride ಬರಹಗಳು ಪ್ರಮುಖವಾದವು. ಬಿಳಿಗಿರಿರಂಗನ ಬೆಟ್ಟ ಪರಿಸರದ ಪುರಾತತ್ವಕ್ಕೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನವನ್ನು ಕೈಗೊಳ್ಳುವ ಹಿನ್ನೆಲೆಯಿಂದ ಸಂಶೋಧನೆಗೆ ಪ್ರಸ್ತುತ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವು ಪ್ರಮುಖವಾಗಿ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗೆಯೇ ಈ ಬೆಟ್ಟದ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯದ ಮೂಲಕ ಪ್ರತಿಯೊಂದು ಸ್ಥಳಗಳನ್ನು ಖುದ್ದಾಗಿ ಭೇಟಿ ನೀಡಿ, ಅಲ್ಲಿನ ವಿವರಗಳನ್ನು ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ.

ಈ ಪ್ರದೇಶದಲ್ಲಿನ ಸ್ಥಳೀಯರು ಹಾಗೂ ಸಂಘ-ಸಂಸ್ಥೆಗಳ ನೆರವನ್ನು ಪಡೆಯಲಾಗಿದೆ. ಕ್ಷೇತ್ರ ಕಾರ್ಯದಲ್ಲಿ ಕಂಡುಬರುವ ಹೊಸ ನೆಲೆಗಳನ್ನು, ಕೆಲವು ಪ್ರಮುಖ ಸ್ಥಳಗಳನ್ನು ಛಾಯಚಿತ್ರ ತೆಗೆಯಲಾಗಿದೆ. ಪುರಾತತ್ವ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನಗಳಲ್ಲಿ ಚಾಲ್ತಿಯಲ್ಲಿರುವ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಂಡು ಚಾರಿತ್ರಿಕ ಆಕರಗಳನ್ನು ಕ್ಷೇತ್ರಕಾರ್ಯದಿಂದ ಸಂಯೋಜಿಸಿ, ವಿಷಯನುಸಾರ ವಿಭಾಗಿಸಿ, ವಿಶ್ಲೇಷಣೆ ಮತ್ತು ವಿಮರ್ಶೆಗಳ ಮೂಲಕ ಈ ಪ್ರದೇಶದ ಪೂರ್ಣ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಲಾಗಿದೆ.

ಅಧ್ಯಾಯ ೨

ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ

೨

ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ

ಒಂದು ಸ್ಥಳದ ಅಥವಾ ಪರಿಸರದ ಪ್ರಾಕೃತಿಕ ಲಕ್ಷಣಗಳು ಆ ಪ್ರದೇಶದ ಜನರ ಬದುಕನ್ನು ರೂಪಿಸುವುದರಲ್ಲಿ ಮತ್ತು ಅಲ್ಲಿನ ಜನತೆಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಭೌಗೋಳಿಕ ಪರಿಸರದ ಪಾತ್ರ ಬಹಳ ಮುಖ್ಯ. ಯಾವುದೇ ಇತಿಹಾಸವನ್ನು ಅಧ್ಯಯನ ಮಾಡುವಾಗ ಆ ಜನರ ಬದುಕು ಮತ್ತು ಸಂಸ್ಕೃತಿಗಳ ಮೇಲೆ ಭೌಗೋಳಿಕ ಪರಿಸರ ತುಂಬಾ ಪ್ರಭಾವ ಬೀರುತ್ತದೆ. ನೆಲ, ಜಲ, ಅರಣ್ಯ, ಹವಾಮಾನ ಅಲ್ಲಿನ ಜನರ ಬದುಕು ಹಾಗೂ ಸಂಸ್ಕೃತಿಗಳ ಮೇಲೆ ಪ್ರಮುಖ ಪಾತ್ರವಹಿಸುತ್ತವೆ. ಒಂದು ಸ್ಥಳದ ಹವಾಗುಣ ಬಾಹ್ಯ ಪರಿಸರದ ಪ್ರಭಾವದಿಂದಾಗಿ ರೂಪಿತವಾದ ಜೀವನ ವಿಧಾನ, ಉಂಟಾಗುವ ಮನಸ್ಥಿತಿ, ಗ್ರಹಿಕೆ, ಸಂವೇದನೆ ಅಭಿರುಚಿಗಳು ವಿಭಿನ್ನವಾಗಿರುತ್ತವೆ.

ಒಂದು ಪ್ರದೇಶ ಅಥವಾ ತೀರಾ ಪಕ್ಕದಲ್ಲೇ ಇರುವ ಪ್ರದೇಶಗಳೂ ಅಲ್ಲಿನ ಭೌಗೋಳಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗಳಿಗೆ ಸ್ಪಂದಿಸುತ್ತಾ ತನ್ನ ಪಕ್ಕದ ಪ್ರದೇಶಗಳಿಗಿಂತ ಭಿನ್ನವಾದ ವೈಶಿಷ್ಟ್ಯವನ್ನು ಉಂಟು ಮಾಡುತ್ತದೆ. ಈ ಪರಿಣಾಮದಿಂದಾಗಿ ಒಂದು ಪ್ರದೇಶದ ಸಂಸ್ಕೃತಿಯು ಮತ್ತೊಂದುಕ್ಕಿಂತ ವಿಭಿನ್ನತೆಯನ್ನು ಪಡೆದಿರುವುತ್ತದೆ. ಉಡುಗೆ-ತೊಡಗೆ, ಭಾಷಾಶೈಲಿ, ಧಾರ್ಮಿಕ ನಂಬಿಕೆಗಳು, ಆಹಾರಾಭ್ಯಾಸ ಮುಂತಾದ ಅಂಶಗಳಲ್ಲಿ ಪ್ರಾದೇಶಿಕ ಭಿನ್ನತೆ ಇರುತ್ತದೆ.

ಭೌಗೋಳಿಕ ವ್ಯತ್ಯಾಸಗಳಿಂದ ಮಾನವನ ದೈಹಿಕ ರಚನೆಯಲ್ಲಿ ಅಂತರ ಕಂಡುಬರುತ್ತದೆ. ಬೆಟ್ಟ ಗುಡ್ಡಗಳ ಮೇಲೆ ವಾಸ ಮಾಡುವ ಜನರ ದೈಹಿಕ ಸ್ವರೂಪ, ಸ್ವಭಾವ ಮತ್ತು ಬಯಲು ಸೀಮೆಯಲ್ಲಿ, ವಾಸ ಮಾಡುವ ಜನರ ಸ್ವರೂಪಕ್ಕಿಂತ ಭಿನ್ನವಾಗಿರುತ್ತವೆ. ಬೆಟ್ಟ-ಗುಡ್ಡಗಳಲ್ಲಿ ವಾಸ ಮಾಡುವ ಜನಸಮುದಾಯಗಳು ಆಮ್ಲಜನಕದ ಕೊರತೆಯನ್ನು ಅನುಭವಿಸುವುದರಿಂದ ಶ್ವಾಸಕೋಶದ ತೊಂದರೆಗಳು ಆಗಾಗ್ಗೆ ಕಂಡುಬರುತ್ತವೆ., ಸು. ೧೫೦೦-೩೦೦೦ ಅಡಿಗಳಷ್ಟು ಎತ್ತರದ ಪ್ರದೇಶಗಳಲ್ಲಿ ವಾಸ ಮಾಡುವವರನ್ನು ಕಾಡುವ ತೊಂದರೆಗಳಲ್ಲಿ 'ಸಿಕೆಲ್ ಸೆಲ್' ರಕ್ತಹೀನತೆ ಕಂಡುಬರುತ್ತದೆ.

ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಬಿಳಿಗಿರಿರಂಗನಬೆಟ್ಟ, ಚಾಮರಾಜನಗರ ಜಿಲ್ಲೆಯಾಗುವ ಮುಂಚೆ ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಸೇರಿತ್ತು. ಮೈಸೂರು ಜಿಲ್ಲೆಯ ವ್ಯಾಪ್ತಿ ವಿಸ್ತಾರವಾಗಿದ್ದ ಕಾರಣ, ಅಭಿವೃದ್ಧಿ ಮತ್ತು ಆಡಳಿತದ

ದೃಷ್ಟಿಯಿಂದ ಮೈಸೂರು ಜಿಲ್ಲೆಯ ಕೆಲವು ತಾಲೂಕುಗಳನ್ನು ಸೇರಿಸಿ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು.

ಚಾಮರಾಜನಗರ, ಯಳಂದೂರು ಗುಂಡ್ಲುಪೇಟೆ, ಕೊಳ್ಳೇಗಾಲಗಳನ್ನು ಸೇರಿಸಿ ೧೯೯೭ರಲ್ಲಿ ಚಾಮರಾಜನಗರ ಜಿಲ್ಲೆ ಅಸ್ತಿತ್ವಕ್ಕೆ ಬಂತ್ತು. ಯಳಂದೂರನ್ನು ಬಿಟ್ಟು ಉಳಿದೆಲ್ಲ ತಾಲೂಕುಗಳು ಕರ್ನಾಟಕ ರಾಜ್ಯದ ಗಡಿಗಳಾಗಿವೆ. ಈ ಜಿಲ್ಲೆಯು ಬಹುಪಾಲ ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಬಿಳಿಗಿರಿರಂಗನಬೆಟ್ಟ, ಮಲೆಮಹಾದೇಶ್ವರಬೆಟ್ಟ, ಹಿಮ್‌ದ್‌ಗೋಪಾಲಸ್ವಾಮಿಬೆಟ್ಟ ಹೀಗೆ ಬೆಟ್ಟ ಸಾಲುಗಳಿಂದ ಕೂಡಿದೆ.

ಚಾಮರಾಜನಗರ ಜಿಲ್ಲೆಯ ಅಂಚುಗಳಲ್ಲಿ ತಮಿಳುನಾಡಿನ ಪೆರಿಯಾರ್ ಜಿಲ್ಲೆಯ ಸತ್ಯಮಂಗಲ ತಾಲೂಕಿನ ಗಟ್ಟಿಯಲತ್ತೂರು ಅರಣ್ಯದವರೆಗೆ ವಿಸ್ತರಿಸಿದೆ. ಯಳಂದೂರು ತಾಲೂಕಿನ ಬಿಳಿರಂಗನ ಬೆಟ್ಟದ ಅರಣ್ಯ, ಚಾಮರಾಜನಗರದ ಸ್ಟೇಟ್ ಫಾರಸ್ಟ್, ಕೊಳ್ಳೆಗಾಲ ತಾಲೂಕಿನಲ್ಲಿ ದೊಡ್ಡ ಸಂಪಿಗೆ ರಕ್ಷಿತಾರಣ್ಯ ಇದ್ದರೆ, ತಮಿಳುನಾಡಿನ ಭಾಗದಲ್ಲಿ ಗಟ್ಟಿಯಲತ್ತೂರು ರಕ್ಷಿತಾರಣ್ಯವಿದೆ. ಕರ್ನಾಟಕ ರಾಜ್ಯದಲ್ಲಿ ಬಿಳಿರಂಗನ ಬೆಟ್ಟವನ್ನು ವನ್ಯಮೃಗಧಾಮ ಎಂದು ಗುರುತಿಸಲಾಗಿದೆ.

ಬಿಳಿರಂಗನ ಬೆಟ್ಟ ಉತ್ತರ-ದಕ್ಷಿಣದ ೧೧° ೫' - ೧೨° ೦೯' ಪೂರ್ವ-ಪಶ್ಚಿಮದ ಹಾಗೂ ೭೭° ೦೫' - ೭೭° ೧೫' ರ ಅಕ್ಷಾಂಶ ಮತ್ತು ರೇಖಾಂಶಗಳಲ್ಲಿ ಕರ್ನಾಟಕದ ಆಗ್ನೇಯ ದಿಕ್ಕಿನಲ್ಲಿದೆ. ೬೦೦ ಚ.ಕಿ.ಮೀ ವ್ಯಾಪ್ತಿಯನ್ನು ಪಡೆದ ಬಿಳಿರಂಗನ ಬೆಟ್ಟ ಪ್ರದೇಶದಲ್ಲಿ ೫೪೦ ಚ.ಕಿ.ಮೀ ಯಳಂದೂರು ಅರಣ್ಯ ಪ್ರದೇಶ ೨೬೩ ಚ.ಕಿ.ಮೀ. ಯಳಂದೂರಿನಲ್ಲಿ ೨೨೭೭೫.೩೨ ಎಕರೆ ವಿಸ್ತೀರ್ಣವುಳ್ಳ ಬಿಳಿರಂಗನ ಬೆಟ್ಟವಿದೆ. ದಕ್ಷಿಣೋತ್ತರವಾಗಿ ೩೫ ಕಿ.ಮೀ ಹಾಗೂ ಪೂರ್ವ ಪಶ್ಚಿಮವಾಗಿ ೧೫ ಕಿ.ಮೀ.ನಷ್ಟು ವ್ಯಾಪ್ತಿಯನ್ನು ಹೊಂದಿದೆ. ಸಮುದ್ರ ಮಟ್ಟದಿಂದ ಸು. ೬೦೦-೧೮೦೦ ಮೀಟರ್ ಎತ್ತರದಲ್ಲಿದೆ.[೧]

೧೯೦೪ರಲ್ಲಿ ಭೂ ಸಂಶೋಧನಾ ಇಲಾಖೆಯ ನಿರ್ದೇಶಕರಾಗಿದ್ದ ಡಬ್ಲ್ಯೂ.ಎಫ್.ಸ್ಮಿತ್ ಎಂಬುವರು ಬಿಳಿಗಿರಿರಂಗನಬೆಟ್ಟದ ಶಿಲೆಗಳ ವೀಕ್ಷಣಾ ಕಾರ್ಯವನ್ನು ಮಾಡಿದರು. ಅವರು ನೀಲಿಗಿರಿ ಶಿಲೆಗಳಿಗೂ ಇರುವಿಕೆಯ ಹೋಲಿಕೆಯನ್ನು ಪ್ರಸ್ತಾಪಿಸಿದ್ದಾರೆ. "ಕರ್ನಾಟಕದ ದಕ್ಷಿಣ ಗಡಿಯ ನೀಲಗಿರಿ ಶ್ರೇಣಿಯಿಂದ ಒಂದು ಬೆಟ್ಟ ಸಾಲು ಮಲೆನಾಡಿನಲ್ಲಿರುವಂತೆ ಎತ್ತರಕ್ಕೆ ಹಬ್ಬಿದೆ. ಈ ಪೂರ್ವದ ಸರಣಿ ಬಿಳಿಗಿರಿರಂಗನಬೆಟ್ಟದಲ್ಲಿ ಎದ್ದು ಕಾಣುವಂತಿದೆ. ಇದು ೧೬-೩೦ ಕಿ.ಮೀ.ಗಳಷ್ಟು ಅಗಲವಾಗಿದ್ದು ಪಾವಗಡದವರೆಗೂ ಹಬ್ಬಿದೆ. ಆದರೆ ಇದು ಒಂದೇ ನಿರಂತರ ಪರ್ವತ ಶ್ರೇಣಿಯಂತೆ ಕಾಣುವ ಬದಲು ಚದುರಿದ ಗುಂಪುಗಳಾಗಿ ರೂಪಿತವಾಗಿದೆ.[೨]

ಕಾವೇರಿ ನದಿ ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತಿದ್ದು, ಇದಕ್ಕಿದ್ದಂತೆ ಉತ್ತರಾಭಿಮುಖವಾಗಿ ಕೊಳ್ಳೇಗಾಲದ ಬಳಿ ತಿರುಗಿರುವುದನ್ನು ಗಮನಿಸಿ, "This could happen if the BR-MM range

to the East of the Shivasamudram fault has raised & moved north ward. This is further Supported by the fault that the sudden turn in the path of the river has occured at the Locus where its course is cut across by the major north south ranning fault (BR Hills- sivasamudram) along the western edge of B-Hills"ಎಂದು ಹೇಳಲಾಗಿದೆ.[೩]

ಬಿಳಿಗಿರಿರಂಗನ ಬೆಟ್ಟವು ೩ ರೀತಿಯ ಶಿಲಾವರ್ಗಗಳಿಂದ ಕೂಡಿದೆ. ಬೆಟ್ಟದಲ್ಲಿರುವ ಬಹುತೇಕ ಶಿಲೆಗಳು ಅಗ್ನಿಶಿಲೆಯಲ್ಲಿ ಒಂದಾದ ಚಾರ್ನ್‌ಕೈಟ್ ಶಿಲಾವರ್ಗಕ್ಕೆ ಸೇರಿದೆ. ಸುಮಾರು ೩೦೦೦ ಮಿಲಿಯನ್ ವರ್ಷಗಳಷ್ಟು ಪ್ರಾಚೀನವಾದ ಶಿಲೆಗಳು ಹೈಪರ್ ಸ್ತೀನ್ ಕ್ವಾರ್ಟ್ಸ್ ಮತ್ತು ಫೆಲ್ಡ್ ಸ್ಪಾರ್ ಎಂಬ ಖನಿಜಗಳಿಂದ ಕೂಡಿದೆ. ಬಿಳಿಗಿರಿರಂಗನ ಬೆಟ್ಟದಲ್ಲಿ ಚಾರ್ನಕೈಟ್ ಶಿಲಾ ಸಮೂಹದ ಉತ್ತಮ ವಾದ ವಿಧಗಳು ಸಿಗುತ್ತವೆ.[೪]

ನೀಲಗಿರಿಯಲ್ಲಿಯೂ ನೀಲವರ್ಣದ ಚಾರ್ನಕೈಟ್ ಶಿಲೆಗಳಿವೆ. ಆದರೆ ಈ ಪ್ರದೇಶದ ಚಾರ್ನಕೈಟ್ ಶಿಲೆಗಳ ರಾಸಾಯನಿಕ ಸಂಯೋಜನೆಯನ್ನು ಕುರಿತು ಡಾ. ಜನಾರ್ಧನ ವಿಶ್ಲೇಷಿಸಿ, ನೀಲಗಿರಿ ಹಾಗೂ ಇತರ ಪ್ರದೇಶಗಳಿಂದ ಸ್ವಲ್ಪ ವ್ಯತ್ಯಾಸ ಹೊಂದಿರುವುದನ್ನು ಗುರುತಿಸಿದ್ದಾರೆ.[೫] ಡಾ.ಸಿ. ಶ್ರೀಕಂಠಪ್ಪ ಅವರ ಶೋಧನೆಯ ಪ್ರಕಾರ "ಬಿಳಿಗಿರಿರಂಗನ ಬೆಟ್ಟದ ಶಿಲೆಗಳು ೩೪೦೦ ಮಿಲಿಯನ್ ವರ್ಷಗಳಷ್ಟು ಹಳೆಯದಾಗಿವೆ.[೬]

ರಂಗನಾಥ ಸ್ವಾಮಿಯ ದೇವಸ್ಥಾನ ಏಕಶಿಲಾ ಬಂಡೆಯ ಮೇಲಿದೆ. ಈ ಬೆಟ್ಟದ ಮತ್ತೊಂದು ಪಾರ್ಶ್ವ ಬಿಳಿಯ ಬಣ್ಣದ್ದಾಗಿ ಕಾಣುವುದರಿಂದ ಇದನ್ನು 'ಬಿಳಿಗಿರಿ' ಎಂದೇ ಹೆಸರಿಸಲಾಗಿದೆ. ಈ ಬೆಟ್ಟದಲ್ಲಿ ಕಲ್ಲು ಹೂ ಹೆಚ್ಚಾಗಿ ಬೆಳೆಯುವುದರಿಂದ ಬಿಳಿಗಿರಿರಂಗನ ಬೆಟ್ಟದ ಕೆಲವು ಬಂಡೆಗಳಿಗೆ ಬಿಳಿಯ ಬಣ್ಣ ಬಂದಿದೆ. ಬೆಟ್ಟದ ಮೇಲೆ ಬೆಳೆಯುವ ಕಲ್ಲು ಹೂಗಳನ್ನು ಸೋಲಿಗರು "ಕಲ್ಲುಪಾಚಿ" ಎಂದು ಕರೆಯುತ್ತಾರೆ. ಈ ಪಾಚಿಯನ್ನು ಔಷಧ ಹಾಗೂ ಆಹಾರ ತಯಾರಿಕೆಗಳಲ್ಲಿ ಬಳಸುತ್ತಾರೆ.

ಮಣ್ಣು

ಬಿಳಿಗಿರಿರಂಗನ ಬೆಟ್ಟದ ಅರಣ್ಯ ವಲಯಗಳಲ್ಲಿ ಜೈವಿಕಾಂಶ ಪ್ರಮಾಣವು ಹೆಚ್ಚಾಗಿದ್ದು ಅದು ಮಣ್ಣಿನ ಫಲವತ್ತತೆಯನ್ನು ನಿರ್ಧರಿಸುವಲ್ಲಿ ಮುಖ್ಯವಾಗಿದೆ. ಈ ಬೆಟ್ಟದಲ್ಲಿ ಗ್ರಾನೈಟ್ ಶಿಲೆಯಿಂದಾದ ಕೆಂಪು ಮರುಳು ಮಿಶ್ರಿತ ಅಥವಾ ಜಂಬಿಟ್ಟಿಗೆ ಮಣ್ಣಿದೆ. ಕೆಲವು ಕಡೆ ಎರೆಮಣ್ಣು, ಅಲ್ಲಲ್ಲಿ ಆಲ್ಯುಮಿನಿಯಮ್ ಹೆಚ್ಚಾಗಿದ್ದೆಡೆಯಲ್ಲಿ ರಂಗೋಲಿ ಮಣ್ಣು ಕಂಡುಬರುತ್ತದೆ. ಈ ಬೆಟ್ಟದ ಮೇಲ್ಪದರದಲ್ಲಿ ಚಾರ್ನಕೈಟ್ ಹಾಗೂ ಆ್ಯಂಫಿಬೋಲೈಟ್ ಶಿಲೆಗಳಿಂದಾದ ಮಣ್ಣಿನ ಪದರವಿದೆ. ಇಲ್ಲಿ ಕ್ಯಾಲ್ಸಿಯಂ ಮತ್ತು

ಮ್ಯಾಗ್ನೀಷಿಯಂ ಪದರಗಳು ದಟ್ಟವಾಗಿ ಇರುವುದರಿಂದ ಮಣ್ಣಿನಲ್ಲಿ ಅತಿ ಆಮ್ಲೀಯತೆಯಾಗಲೀ ಅತಿ ಕ್ಷಾರಿಯತೆಯಾಗಲೀ ಪಡೆಯದೆ, ೬.೮ ಪಿ.ಎಚ್ ಪ್ರಮಾಣದಲ್ಲಿ ತಟಸ್ಥ ಮಟ್ಟದಲ್ಲಿ ಉಳಿದಿದೆ.

ಮಳೆ

ನೀಲಗಿರಿ ಮತ್ತು ಬಿಳಿಗಿರಿರಂಗನ ಬೆಟ್ಟದ ಶ್ರೇಣಿಯ ಮಳೆಯ ಪ್ರಮಾಣ ಬಹುತೇಕ ಸಾಮಾನ್ಯ ಸ್ಥಿತಿಯಲ್ಲಿದೆ. ಈಶಾನ್ಯ ಹಾಗೂ ನೈಋತ್ಯ ಮಾನ್ಸೂನ್ ಮಾರುತಗಳಿಂದ ಮಳೆ ಪಡೆಯುತ್ತದೆ. ವರ್ಷಕ್ಕೆ ಸರಾಸರಿ ೧೪೦೦-೨೫೦೦ ಮೀ.ಮೀ. ಮಳೆಯಾಗುತ್ತದೆ. ಈ ಬೆಟ್ಟದ ದಕ್ಷಿಣ ಪಾರ್ಶ್ವದಲ್ಲಿ ಅದರಲ್ಲೂ ಹೊನ್ನ ಮೇಟಿ ಮತ್ತು ಬೇಡಗುಳಿಯಂತಹ ಪ್ರದೇಶದಲ್ಲಿ ೨೦೦೦-೨೫೦೦೦ ಮಿ.ಮೀ ಮಳೆಯಾಗುತ್ತದೆ.

ಪಶ್ಚಿಮ ಪಾರ್ಶ್ವದಲ್ಲಿ ಬೆಟ್ಟಗಳ ನಡುವಿನ ಇಳಿಜಾರಿನ ಕೊರಕಲಿನಲ್ಲಿ ಅನೇಕ ಝುರಿಗಳು ಹುಟ್ಟಿ ಹರಿಯುತ್ತವೆ. ಇವು ಉತ್ತರಾಭಿಮುಖವಾಗಿ ಹರಿಯುವಾಗ ಒಟ್ಟು ಗೂಡಿ ದೊಡ್ಡ ಸಂಪಿಗೆ ಹಳ್ಳವಾಗುತ್ತದೆ. ಸುಪ್ರಸಿದ್ಧವಾದ ದೊಡ್ಡ ಸಂಪಿಗೆ ಮರದ ಪಕ್ಕದಲ್ಲಿ ಹರಿಯುವುದರಿಂದ ಸಂಪಿಗೆ ಹಳ್ಳವೆಂಬ ಹೆಸರು ಪ್ರಾಪ್ತವಾಗಿದೆ. ಇದನ್ನು ಆಸ್ತಿಕರು 'ಭಾರ್ಗವಿನದಿ' ಎಂದು ಕರೆಯುತ್ತಾರೆ. ಬೇಡಗುಳಿ ಪ್ರದೇಶದಿಂದ ಹರಿದುಬರುವ ಪಂಗಡಿ ಹಳ್ಳ ದಕ್ಷಿಣಾಭಿಮುಖವಾಗಿ ಹರಿದು ಮುಂದೆ ಸುವಣಾವತಿ ಜಲಾಶಯವನ್ನು ಸೇರುತ್ತದೆ.

ತಾಪಮಾನ

ಬಿಳಿಗಿರಿರಂಗನ ಬೆಟ್ಟವು ಅತಿ ಶೀತವು ಅತಿ ಉಷ್ಣವೂ ಅಲ್ಲದ ಹಿತಕರ ವಾತಾವರಣವಿದೆ. ಬೇಸಿಗೆಯಲ್ಲಿ ಗರಿಷ್ಠ ೨೦ ಸೆಂ. - ೩೦ ಸೆಂ. ತಾಪಮಾನ, ಮಳೆಗಾಲದಲ್ಲಿ ೮೫-೯೫ ತೇವಾಂಶ ಹಾಗೂ ಚಳಿಗಾಲದಲ್ಲಿ ೯ ಸೆ. - ೧೬ ಸೆಂ. ತಾಪಮಾನವಿರುತ್ತದೆ. ಇಲ್ಲಿ ೧೮೦೦ ಸೆಂ.ಸೆಂ. ಆಮ್ಲಜನಕ ದೊರೆಯುತ್ತದೆ.

ಸಸ್ಯವರ್ಗ

ಈ ಬೆಟ್ಟದ ಸಾಲುಗಳು ಭೌಗೋಳಿಕವಾಗಿ ಅತ್ಯುನ್ನತ ಶಿಖರಗಳನ್ನು, ಅನುಕೂಲಕರ ವಾಯುಗುಣದ ವಾತಾವರಣವನ್ನು ಪಡೆದಿರುವ ಕಾರಣದಿಂದ ನೀಲಿಗಿರಿಯ ಮುಖಾಂತರ ಪಶ್ಚಿಮ ಘಟ್ಟದ ಕಡೆಗೆ ವಲಸೆ ಹೊರಟ ಇಂಡೋ-ಮಲೇಶಿಯನ್ ವರ್ಗದ ಸಸ್ಯ ಮತ್ತು ಪ್ರಾಣಿವರ್ಗಗಳು ಇಲ್ಲಿ ತಂಗಿ ಪಶ್ಚಿಮ ಘಟ್ಟಕ್ಕೆ ಹಾಯ್ದು ಹೋಗಲು ಬಿಳಿಗಿರಿರಂಗನ ಬೆಟ್ಟವೇ ಮುಖ್ಯ ಸೇತುವೆಯಾಗಿತ್ತು. ಪಶ್ಚಿಮ ಘಟ್ಟಗಳಲ್ಲಿರುವ ಸಸ್ಯ ಹಾಗೂ ಪ್ರಾಣಿವರ್ಗ ಹಾಗೂ ಪೂರ್ವಘಟ್ಟದ ಸಸ್ಯ ಹಾಗೂ ಪ್ರಾಣಿವರ್ಗಗಳು ಇಲ್ಲಿಗೆ ವಲಸೆ ಬಂದಿರುವುದನ್ನು ಕಾಣಬಹುದು. ಹೀಗಿರುವುದರಿಂದ ಬಿಳಿಗಿರಿರಂಗನ ಬೆಟ್ಟವು ಪಶ್ಚಿಮಘಟ್ಟ,

ಪೂರ್ವಘಟ್ಟ ಹಾಗೂ ಇಂಡೋ-ಮಲೇಶಿಯನ್ ವರ್ಗಕ್ಕೆ ಸೇರಿದ ಸಸ್ಯ ಹಾಗೂ ಪ್ರಾಣಿ ವರ್ಗವನ್ನು ಪಡೆದು ಭೌಗೋಳಿಕವಾಗಿ ತನ್ನದೇಯಾದ ವೈಶಿಷ್ಯವನ್ನು ಪಡೆದಿದೆ. ನೀಲಗಿರಿಗಳೆರಡರ ನಡುವೆ ಬರುವ ವನಕಾಶಿಯ ವೈವಿಧ್ಯತೆಯನ್ನು ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಣಬಹುದು. ಆದರೆ ಈಗ ಕಾಫಿ ತೋಟಗಳೇ ಹೆಚ್ಚಾಗಿರುವುದರಿಂದ ಈ ಅರಣ್ಯದ ವೈಶಿಷ್ಟ್ಯ ನಿಧಾನವಾಗಿ ಕಣ್ಮರೆಯಾಗುತ್ತಿದೆ.

ಈ ಬೆಟ್ಟದ ಎತ್ತರ ಮತ್ತು ಅಲ್ಲಿಯ ವಾತಾವರಣಕ್ಕೆ ತಕ್ಕಂತೆ ಸಸ್ಯ ಪರಿಸರವನ್ನು ನಾಲ್ಕು ಪ್ರಮುಖ ಭಾಗಗಳಾಗಿ ವಿಂಗಡಿಸಲಾಗಿದೆ.

೧. ನಾಡು ಕಾಡು (ಕುರುಚಲು ಮತ್ತು ಮುಳ್ಳುಗಂಟಿಗಳ ಕಾಡು)

೨. ಎಲೆ ಉದುರುವ ಕಾಡುಗಳು

೩. ನಿತ್ಯ ಹರಿದ್ವರ್ಣದ ಕಾಡುಗಳು

೪. ರೈಪೇರಿಯನ ಕಾಡುಗಳು

ಪ್ರಾಣಿವರ್ಗ

ಬಿಳಿಗಿರಿರಂಗನ ಬೆಟ್ಟದ ಕಾಡುಗಳಲ್ಲಿ ಎಳೆನಾಗರ, ನಾಗರಹಾವು, ಗೋಧಿನಾಗರ, ಕೇರೆಹಾವು, ಮಣ್ಣಾವು ಮುಂತಾದವು ಸೇರಿವೆ. ಇಲ್ಲಿ ಮೂರು ರೀತಿಯ ವಿಷಪೂರಿತ ಹಾವುಗಳಿವೆ. ಇಕ್ ತಿಯೋಫಿಸ್ ಎಂಬ ಕಾಲಿಲ್ಲದ ಹಾವಿನಂತಿರುವ ಉಭಯಚರ ಅಥವಾ ಕಪ್ಪೆಜಾತಿಯ ಪ್ರಾಣಿ ಬಿಳಿಗಿರಿ ರಂಗನ ಬೆಟ್ಟವನ್ನು ಬಿಟ್ಟರೆ ಪಶ್ಚಿಮ ಘಟ್ಟಗಳಲ್ಲಿ ಕಾಣಸಿಗುತ್ತದೆ. ೧೧ ಜಾತಿಗೆ ಸೇರಿದ ಉಭಯ ವಾಸಿಗಳಿವೆ. ೫ ಕುಟುಂಬಗಳಿಗೆ ಸೇರಿದ ೧೦೬ ಜಾತಿಯ ಚಿಟ್ಟೆಗಳು, ಭಾರತದಲ್ಲಿ ಸಿಗುವ ಚಿಟ್ಟೆಗಳಲ್ಲಿ ಸುಮಾರು ೧/೩ ಭಾಗದಷ್ಟು ಈ ಬೆಟ್ಟದಲ್ಲಿ ಕಾಣಸಿಗುತ್ತವೆ. ಮೂರು ಜಾತಿಯ ಅಳಿಲುಗಳು, ಎರಡು ಜಾತಿಯ ಕೋಗಿಲೆಗಳಿವೆ. ೪೪ ಕುಟುಂಬಗಳಿಗೆ ಸೇರಿದ ೨೬೦ ಜಾತಿಯ ಪಕ್ಷಿಗಳಿವೆ. ಇದರಲ್ಲಿ ಕೆಲವು ಅಪಾಯದಂಚಿನಲ್ಲಿವೆ. ಆನೆ, ಕಾಡುಕೋಣ, ಕಾಡೆಮ್ಮೆ, ಚಿರತೆ, ಹುಲಿ, ಸೀಳುನಾಯಿ, ಕರಡಿ, ಜಿಂಕೆ, ಕಡವೆ, ಕಾಡುಹಂದಿ ಮೊದಲಾದ ೨೨ ಜಾತಿಗೆ ಸೇರಿದ ಪ್ರಾಣಿಗಳು ಬಿಳಿಗಿರಿರಂಗನ ಬೆಟ್ಟದ ಅರಣ್ಯದಲ್ಲಿವೆ. ಈ ಕಾಡಿನಲ್ಲಿ ನಾಲ್ಕು ಜಾತಿಗೆ ಸೇರಿದ ಜೇನುಗಳಿವೆ. ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತಣ ಕೆರೆಗಳಿಗೆ ಅನೇಕ ನೀರ್ ಹಕ್ಕಿಗಳು ದೇಶ-ವಿದೇಶದಿಂದ ವಲಸೆ ಬರುತ್ತವೆ.

ಪ್ರಾಗಿತಿಹಾಸ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ ಎರಡನೆಯದು ಅಕ್ಷರ ಜ್ಞಾನವಿದ್ದ

ಹಂತ, ರಾಜಮಹಾರಾಜರ ಕಾಲ ಅಥವಾ ಇತಿಹಾಸಕಾಲವೆಂದು ಹೇಳಬಹುದು. ಇವುಗಲ್ಲಿ ಪ್ರಾಗಿತಿಹಾಸದ ಕಾಲಮಾನ ಸುದೀರ್ಘವಾದುದಾಗಿದೆ. ಮಾನವನ ಪ್ರಾಚೀನತೆಯು ಇಂದಿಗೆ ೩.೫ ಮಿಲಿಯನದಿಂದ ೪ ಮಿಲಿಯನ್ ವರ್ಷಗಳಷ್ಟು ಪೂರ್ವಕ್ಕೆ ಹೋಗುತ್ತದೆ.[೭] ಈ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ.

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆಯು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ, ಸೂಕ್ಷ್ಮಶಿಲಾಯುಗ ಮತ್ತು ನೂತನ ಶಿಲಾಯುಗ ಎಂದು ವರ್ಗೀಕರಿಸಲಾಗಿದೆ. ಅಧ್ಯಯನ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗನ್ನು ಗುರುತಿಸಿ ಹೊಸ ಹೊಸ ವಿಷಯಗಳ ಬಗೆಗೆ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಹಳೆಯ ಶಿಲಾಯುಗವನ್ನು ಮೂರು ಉಪಗುಂಪುಗಳಾಗಿ ವಿಭಾಗಿಸಿ, ಆದಿ ಹಳೆಶಿಲಾಯುಗ, ಮಧ್ಯ ಶಿಲಾಯುಗ ಅಂತ್ಯ ಶಿಲಾಯುಗ ಎಂದು ವಿಭಾಗಿಸಲಾಗಿದೆ.[೮]

ಲೋಹಯುಗದ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯೂ ಇದ್ದುದು ತಿಳಿಯುತ್ತದೆ. ಹಾಗಾಗಿ ಮೊದಲ ಹಂತವನ್ನು ಶಿಲಾ-ತಾಮ್ರಯುಗ ಎಂದು, ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದು, ಈ ಹಂತವನ್ನು ಕಬ್ಬಿಣಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಅಥವಾ ಬೃಹತ್ ಶಿಲಾಯುಗ ಎಂದು ಕರೆಯಲಾಗಿದೆ.

ಕಬ್ಬಿಣ-ಬೃಹತ್ ಶಿಲಾ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಎಂದು ಕರೆಯ ಲಾಗುತ್ತದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು. ಕಲ್ಲು ಗೋರಿಗಳು ಈ ಜನರ ಪಾರಂಪರಿಕ ನಂಬಿಕೆಗಳ ತಳಹದಿಯ ಮೇಲೆ ರೂಪಿತವಾದವುಗಳಾಗಿವೆ.

ಈ ಸಂಸ್ಕೃತಿಯ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದು ಹಾಗೂ ಶವ ಸಂಸ್ಕಾರದ ಕೇಂದ್ರಗಳನ್ನು ಗೋರಿ ನೆಲೆಗಳೆಂದೂ ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ. ದೇಶಿಯ ಮತ್ತು ವಿದೇಶಿಯಾ ಪುರಾತತ್ವಜ್ಞರಿಂದ ಸಾಕಷ್ಟು ಅಧ್ಯಯನ ನಡೆದು ಹಲವು ಹೊಸ ಹೊಸ ವಿವರಗಳು ಬಳಕೆಗೆ ಬಂದಿವೆ.

ಈ ಸಂಸ್ಕೃತಿಯನ್ನು ಅದರಲ್ಲಿಯೂ ಮುಖ್ಯವಾಗಿ ಕಲ್ಗೋರಿಗಳ ವಿನ್ಯಾಸವನ್ನು ಗುರುತಿಸುವಲ್ಲಿ ಪ್ರಾದೇಶಿಕ ಭೌಗೋಳಿಕ ಸನ್ನಿವೇಶ, ಅಲ್ಲಿ ದೊರೆಯುವ ಶಿಲಾ ಮಾದರಿಗಳು, ಲೋಹದ ನಿಕ್ಷೇಪಗಳು

ಹೇಗೆ ಪಾತ್ರವಹಿಸುತ್ತವೆ ಎಂಬುದನ್ನು ವಿವರಿಸಿದ್ದಾರೆ. ಕಲ್ಗೋರಿಯ ಪ್ರಮುಖ ಮಾದರಿಗಳನ್ನು ೧. ಕೋಣೆ ಕಲ್ಗೋರಿ ಹಾದಿಕೋಣೆ, ಕಂಡಿಕೋಣೆ, ಆಯಾಕಾರದ ಅಂತರ್ಗತ ಶವಪೆಟ್ಟಿಗೆ, ೨. ಕೋಣೆಯಾಕೃತಿಯಲ್ಲಿಲ್ಲದ ಕಲ್ಗೋರಿ ಕಲ್ಲುಗುಪ್ಪೆ, ಕುಣಿಧಪನ, ಶಿಲಾವೃತ್ತ, ಶವಕುಳಿ, ದಫನದಿನ್ನೆ, ಅಸ್ತಿಪಾತ್ರೆ ದಫನ, ೩. ಸಮಾಧಿ ಪ್ರಕ್ರಿಯೆಗೆ ಸಂಬಂಧಪಡದ ನಿಲಸುಗಲ್ಲು ಮುಂತಾದವುಗಳೆಂದು ವಿಂಗಡಿಸಲಾಗಿದೆ.

ಬೃಹತ್ ಶಿಲಾಯುಗದ ನೆಲೆಗಳು ಯಳಂದೂರು ತಾಲ್ಲೂಕಿನ ಮತ್ತು ಬಿಳಿಗಿರಿರಂಗನಬೆಟ್ಟದ ಕೆಲವು ಪ್ರದೇಶಗಳಲ್ಲಿ ಹರಡಿದೆ. ಬಿಳಿಗಿರಿರಂಗನಬೆಟ್ಟದ ಸಮೀಪದ ಕೋಮಾರನಪುರ, ಗೌಡಹಳ್ಳಿ, ಹೊನ್ನೂರು ಮುಂತಾದ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

ಬೃಹತ್‌ಶಿಲಾ ಸಮಾಧಿಗಳು

ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ನಡೆಸಿದ ಉತ್ಖನನಗಳಲ್ಲಿ ಬಿಳಿಗಿರಿರಂಗನ ಬೆಟ್ಟದ ಶ್ರೇಣಿಯಲ್ಲಿ ಬೃಹತ್‌ಶಿಲಾ ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ. ಈ ಬೆಟ್ಟದಲ್ಲಿ ಕಂಡುಬರುವ ಪ್ರಮುಖ ಬೃಹತ್‌ಶಿಲಾ ಸಮಾಧಿಗಳ ಸ್ಥಳಗಳೆಂದರೆ ಮುತ್ತುಗದ ಗದ್ದೆ, ಕನ್ನೇರಿ ಕಾಲೋನಿ, ಪುರಾಣಿ ಪೋಡುಗಳ ಹಾಗೂ ಕೆರೆಯ ಕೆಳಗಿರುವ ಸ್ಥಳಗಳಲ್ಲಿ ನಡೆಸಿದ ಭೂ ಸಂಶೋಧನೆಯಿಂದ ಡೋಲ್ಮನ ಮತ್ತು ಸಿಸ್ಟ ಮಾದರಿಯ ಶಿಲಾ ಸಮಾಧಿಗಳನ್ನು ಗುರುತಿಸಲಾಯಿತು. ಇವುಗಳ ಕಾಲಮಾನ ಕ್ರಿ.ಪೂ. ೧೦೦೦-೮೦೦ ವರ್ಷಗಳಷ್ಟು ಪ್ರಾಚೀನವಾದದ್ದು. ಆದರೆ ಈ ಸಮಾಧಿಗಳು ಸೋಲಿಗರದ್ದೇ ಎನ್ನುವುದು ಖಚಿತಪಡಿಸಿ ಕೊಳ್ಳಲು ಸಾಧ್ಯವಾಗಿಲ್ಲ.

ಡೋಲ್ಮನ ಸಮಾಧಿಯನ್ನು ವಿಶಾಲವಾದ ಸ್ಥಳದಲ್ಲಿ ವೃತ್ತಾಕಾರದಲ್ಲಿರಿಸಿದ ೨೪ ಬೃಹತ್ ಬಂಡೆಗಳನ್ನು ಇರಿಸಿ ಅದರ ಮಧ್ಯದಲ್ಲಿ ಸ್ವಸ್ತಿಕದ ಮಾದರಿಯಲ್ಲಿ ಶಿಲಾ ಚಪ್ಪಡಿಗಳನ್ನು ಭೂಮಿಯಲ್ಲಿ ಹೂತು ಹಾಕಲಾಗಿದೆ. ಪೂರ್ವಾಭಿಮುಖವಾಗಿರುವ ಚಪ್ಪಡಿಯಲ್ಲಿ ವೃತ್ತಾಕಾರದ ರಂಧ್ರವಿರುತ್ತದೆ. ಮೇಲಿನ ಭಾಗವನ್ನು ಚಪ್ಪಡಿಯಿಂದ ಮುಚ್ಚಲಾಗಿದೆ. ಈ ವಿನ್ಯಾಸದ ಶಿಲಾ ಸಮಾಧಿಯು ಮರಣ ಹೊಂದಿದ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಪ್ರತಿನಿಧಿಸುವ ಸಂಕೇತವಾಗಿರುತ್ತದೆ. ಇವು ಆಗಿನ ಕಾಲದಲ್ಲಿ ಅಲ್ಲಿದ್ದ ಸಮುದಾಯದ ಗಣ್ಯ ವ್ಯಕ್ತಿಗಳ ಶಿಲಾ ಸಮಾದಿ ಆಗಿದ್ದಿರಬಹುದು. "ಬಹುಶಃ ಮೃತನ ಆತ್ಮದ ಸಂಚಾರಕ್ಕಾಗಿಯೂ, ಕೆಲ ನಿರ್ದಿಷ್ಟ ಸಮಯಗಳಲ್ಲಿ ಬಲಿ ಸಮರ್ಪಣೆಗಾಗಿಯೂ ಈ ರಂಧ್ರವನ್ನು ಉಪಯೋಗಿಸುತ್ತಿದ್ದಿರಬಹುದು.[೯] ಈ ರಂಧ್ರಗಳಿಂದ ವರ್ಷಕ್ಕೊಮ್ಮೆ ಸತ್ತವರಿಗೆ ಆಹಾರವನ್ನು ಇಡಲಾಗುತ್ತಿತ್ತು. ಸಿಸ್ಟ್ ಮಾದರಿಯ ಸಮಾಧಿಗಳನ್ನು ಕಡಿಮೆ ಜಾಗದಲ್ಲಿ ಸಣ್ಣದಾಗಿ ನಿರ್ಮಿಸಲಾಗಿದೆ. ಬಳಸಿದ ಕಲ್ಲುಗಳು ಕೂಡ ಚಿಕ್ಕದಾಗಿವೆ.

ಬಿಳಿಗಿರಿರಂಗನ ಬೆಟ್ಟದಲ್ಲಿ ಸಂಶೋಧಿಸಲಾದ ಎಲ್ಲಾ ಬೃಹತ್ ಸಮಾಧಿಗಳೂ ದ್ವಿತೀಯ ಹಂತದ ಶವಕುಳಿಗಳೇಯಾಗಿವೆ. ಈ ಯುಗದ ಜನರಿಗೆ ಮರಣಾ ನಂತರದ ಜೀವನದ ಬಗ್ಗೆ ಹಲವಾರು ನಂಬಿಕೆಗಳಿದ್ದವು. ಆದ್ದರಿಂದಲೇ ಆ ಶವಕುಳಿಯಲ್ಲಿ ಮೃತವ್ಯಕ್ತಿ ಉಪಯೋಗಿಸುತ್ತಿದ್ದ ವಸ್ತುಗಳನ್ನು ಇರಿಸಲಾಗುತ್ತಿತ್ತು. ಬಿಳಿಗಿರಿ ರಂಗನ ಬೆಟ್ಟದ ಬುಡಕಟ್ಟು ಸಮುದಾಯದ ಸೋಲಿಗರಲ್ಲೂ ಇಂತಹ ಕೆಲವು ಆಚರಣೆಗಳು ಅಸ್ತಿತ್ವದಲ್ಲಿತ್ತು. ಮರಣ ಹೊಂದಿದ ಗರ್ಭಿಣಿಯ ಶವವನ್ನು ಶಿಶು ಸಮೇತವಾಗಿ ಹೂಳಬಾರದೆಂಬ ಕಾರಣಕ್ಕೆ ನಿಸರ್ಗದಲ್ಲಿ ಹಾಗೆಯೇ ಬಿಟ್ಟು, ಬಳಿಕ ಅದರ ಅಸ್ತಿಗಳನ್ನು ಸಮಾಧಿ ಮಾಡುವ ಕ್ರಮವಿತ್ತು. ಆದರೆ ಈಗ ಕೆಲವು ಸಲ ಗರ್ಭಿಣಿಯ ಗರ್ಭವನ್ನು ಸೀಳಿ ಶಿಶುವನ್ನು ಹೊರತೆಗೆದು ಪಕ್ಕದಲ್ಲಿ ಮಲಗಿಸಿ ಸಂಸ್ಕಾರ ಮಾಡುತ್ತಾರೆ. ಗರ್ಭಿಣಿಯ ಶವವನ್ನು ಶಿಶು ಸಮೇತ ಹೂಳಿದರೆ ಮಾಟಗಾರರು ಮಾಟದ ಕಾರ್ಯಗಳಿಗೆ ಬಳಸಿಕೊಳ್ಳುತ್ತಾರೆ ಎನ್ನುವ ಅಳುಕು ಕೆಲವು ಪಂಗಡಗಳಲ್ಲಿದೆ.

ಈ ಬೆಟ್ಟದಲ್ಲಿ ಕಾಣ ಸಿಗುವ ಬೃಹತ್‌ಶಿಲಾ ಸಮಾಧಿಯನ್ನು ಸ್ಥಳೀಯರು 'ಪಾಂಡವರ ಮನೆ' ಎಂದು ಕರೆಯುತ್ತಾರೆ. ಈ ಬೃಹತ್ ಶಿಲಾ ಸಮಾಧಿಗಳನ್ನು ಹೆಚ್ಚಾಗಿ ಹಳ್ಳಕೊಳ್ಳ ಮತ್ತು ಕೆರೆಯ ಬಳಿಯ ಪ್ರದೇಶಗಳಲ್ಲಿ ಕಾಣಬಹುದು. ಈ ಸ್ಥಳದಲ್ಲಿ ಉತ್ಖನನ ಮಾಡಿದ ಸಮಾಧಿಗಳಲ್ಲಿ ಕಪ್ಪು-ಕೆಂಪು ಮಿಶ್ರಿತ ಮಣ್ಣಿನ ಮಡಿಕೆಗಳಿದ್ದವು. ಕೆಲವು ಶವಕುಳಿಯಲ್ಲಿ ದಪ್ಪಗಿರುವ ಮಣ್ಣಿನ ಪಾತ್ರೆಗಳಿದ್ದರೆ, ಕೆಲವೆಡೆ ಅತ್ಯಂತ ತೆಳುವಾದ ನುಣುಪಾದ ಮಣ್ಣಿನ ಮಡಕೆಗಳಿದ್ದವು. ಆದರೆ ಈ ಮಡಿಕೆಗಳಲ್ಲಿ ಮೂಳೆಗಳು ಲಭ್ಯವಾಗಲಿಲ್ಲ. ಕಲ್ಲು ಬಂಡೆಗಳು ಇರುವ ಕಡೆಗಳಲ್ಲಿ ಸಿಗುವ ಶವಕುಳಿಗಳಲ್ಲಿ ಮಾತ್ರ ಮೂಳೆಗಳು ಸಿಗುತ್ತವೆ. ಈ ಯುಗದ ಜನರು ಅಲಂಕಾರ ಪ್ರಿಯರು ಆಗಿದ್ದಿರಬಹುದು ಎನ್ನುವುದಕ್ಕೆ ಶವಕುಳಿಯೊಂದರಲ್ಲಿ ಸೊಗಸಾಗಿ ತಯಾರಿಸಿದ್ದ ಮಣ್ಣಿನ ಮಣಿಗಳು ಸಿಕ್ಕಿವೆ.[೧೦]

ಬೃಹತ್ ಶಿಲಾಯುಗದ ಜನರಿಗೆ ಮರಣದ ಬಗ್ಗೆ ಅವರದೇಯಾದ ನಂಬಿಕೆಗಳಿದ್ದವು. ಶವಸಂಸ್ಕಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದುದನ್ನು ಈ ಶಿಲಾ ಸಮಾದಿಗಳ ರಚನೆಯಲ್ಲಿಯೇ ಕಾಣಬಹುದು. ಈ ಶಿಲಾ ಸಮಾಧಿಗಳನ್ನು ಗಮನಿಸಿದಾಗ ಒಂದು ಪ್ರದೇಶದಲ್ಲಿ ವಾಸಿಸುತ್ತಿದ್ದ ಜನ ಸಮುದಾಯದ ಅನೇಕರ ಸಹಕಾರ ಈ ನಿರ್ಮಾಣಕ್ಕೆ ಅವಶ್ಯವಿದೆ.

ಈ ಸಮಾದಿಗಳ ಆಧಾರದಿಂದ ಆ ಕಾಲದ ಜನ ಜೀವನದಲ್ಲಿ ಮರಣ ಸಂಸ್ಕಾರಗಳ ಬಗ್ಗೆ ಅತಿಯಾದ ನಂಬಿಕೆ ಹಾಗೂ ಕಾಳಜಿಗಳಿದ್ದುದನ್ನು ಗ್ರಹಿಸಬಹುದು. ಇದರಿಂದ ಮರಣ ಮತ್ತು ಪುನರ್ಜನ್ಮದ ಬಗ್ಗೆ ಅವರಿಗಿದ್ದ ವಿಚಾರಗಳನ್ನು ತಿಳಿಯಲು ನೆರವಾಗುತ್ತವೆ. ಡೋಲ್ಮೆನ ಸಮಾಧಿಗಲ್ಲುಗಳಿಗೆ ರೋಗ ನಿರೋಧಕ ಶಕ್ತಿಯಿತ್ತೆಂದು ಆ ಯುಗದ ಜನರಿಗೆ ನಂಬಿಕೆಗಳಿದ್ದವೆಂದು ಪ್ರಾಕ್ತನ ಶಾಸ್ತ್ರಜ್ಞರು ಅಭಿಪ್ರಾಯಿಸಿದ್ದಾರೆ. "ಸತ್ತವರು ಮತ್ತೆ ತಾಯಿಯ ಗರ್ಭವನ್ನು ಸೇರಿಕೊಳ್ಳುತ್ತಾರೆ ಎಂಬ ನಂಬಿಕೆಯಿಂದಾಗಿ,

ಬಹು ಪ್ರಾಚೀನ ಸಮಾಜಗಳಲ್ಲಿ ಸತ್ತವರ ದೇಹಗಳನ್ನು ತಾಯಿಯ ಗರ್ಭದ ಸಂಕೇತವಾದ ಮಡಕೆಗಳಲ್ಲಿಟ್ಟು ಹೂಳುತ್ತಿದ್ದರು."[೧೧]

ಬಿಳಿಗಿರಿರಂಗನ ಬೆಟ್ಟದಲ್ಲಿನ ಹಲವು ಶಿಲಾಗೋರಿಗಳಲ್ಲಿ ನಿಧಿ ಇರಬಹುದೆನ್ನುವ ಆಸೆಯಿಂದ ಅಗೆದು ಹಾಳುಗೆಡವಲಾಗಿದೆ. ಕೆಲವು ಕಡೆ ಜಮೀನು ಮಾಡುವಾಗ, ಮನೆ ಕಟ್ಟುವಾಗ ಹಾಳಾಗಿವೆ. ಕೆಲವೆಡೆ ಈ ಕಲ್ಲುಗಳನ್ನು ಬಟ್ಟೆ ತೊಳೆಯಲು ಬಳಸಿಕೊಳ್ಳಲಾಗುತ್ತಿದೆ. ಪುರಾತತ್ವ ವಿದ್ವಾಂಸರು ಈ ಕಾರ್ಯವನ್ನು ಬೆಟ್ಟದ ಜನ ಬೆರಗುಗಣ್ಣಿನಿಂದ ನೋಡುತ್ತಿದ್ದರಲ್ಲದೆ, ಇವುಗಳಲ್ಲಿ ಏನು ಸಿಗಬಹುದೆಂಬ ಕುತೂಹಲವೂ ಅವರಲ್ಲಿತ್ತು. ಆದರೆ ಅವರ ದೃಷ್ಟಿಯಿಂದ ಬೆಲೆ ಬಾಳುವಂತಹುದೇನೂ ಅಲ್ಲಿ ಇಲ್ಲದುದರಿಂದ "ಅಯ್ಯೋ ಅದನ್ನು ದುಡ್ಡುಕೊಟ್ಟು ಆಗಿಸುತ್ತಿದ್ದಿರಲ್ಲ ಎಂಬ ಖೇದವಿತ್ತು.[೧೨]

ಮಡಕೆಗಳಲ್ಲಿ ಕೆಲವು ಸಲ ಮೂಳೆಗಳನ್ನು ನೋಡಿರುವ ಸೋಲಿಗರು, ಇದಕ್ಕೆ ಕಾರಣವನ್ನು ತಮ್ಮದೇಯಾದ ರೀತಿಯಲ್ಲಿ ಊಹಿಸಿದ್ದಾರೆ. 'ಬಹಳ ಹಿಂದೆ ತುಂಬೆ ಗಿಡಕ್ಕೆ ಏಣೀ ಹಾಕಿಕೊಂಡು ಹತ್ತುವಷ್ಟು ಕುಳ್ಳ ಜನರಿದ್ದರೆಂದು, ಅವರನ್ನು ಶತ್ರುಗಳು ಅಟ್ಟಿಸಿಕೊಂಡು ಬಂದಾಗ ಹೆದರಿದ ಈ ಕುಳ್ಳರೆಲ್ಲ ಒಂದು ಮಡಕೆಯೊಳಕ್ಕೆ ಹೋದರು. ಆಗ ಯಾರೋ ಅದರ ಮೇಲೆ ಕಲ್ಲು ಮುಚ್ಚಿದ್ದರಿಂದಲೇ ಅವರು ಅದರಲ್ಲೇ ಸತ್ತು ಹೋದರು. ಆದ್ದರಿಂದ ಇಂದಿಗೂ ಇಲ್ಲಿ ಸಿಗುವ ಮಡಕೆಗಳಲ್ಲಿ ಮೂಳೆಗಳಿರುತ್ತವೆಂಬ ನಂಬಿಕೆ ಅವರಲ್ಲಿದೆ.

ಅಡಿಟಿಪ್ಪಣಿಗಳು

೧. ಮಲ್ಲಪ್ಪ ಪಿ., **ಕರ್ನಾಟಕ ಭೂಗೋಳಶಾಸ್ತ್ರ**, ಚೇತನ ಬುಕ್‌ಹೌಸ್, ಮೈಸೂರು, ೨೦೦೧, ಪು.೧೮

೨. **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ ೧, ಪು.೧೨

೩. Ganeshiah K.N., **Biligiri Rangaswamy Temple wild life Sanctury**, P.4-5

೪. **ವಿಶ್ವಕೋಶ, ಸಂಪುಟ ೭**, ಮೈಸೂರು ವಿಶ್ವವಿದ್ಯಾನಿಲಯ, ೧೯೭೫, ಪು.೨೯೯

೫. Dr.Ramesha, B.R. **Every green Forests of B.R.Hills**, P.6

೬. ಡಾ.ಸಿ.ಶ್ರೀಕಂಠಪ್ಪ, **ಶಿಲೆಯ ಬಲೆಯಲ್ಲಿ ಹುಡುಕಾಟ, ಚಿತ್ರಗುಪ್ತ, ಮೈಸೂರು ಮಿತ್ರ**, ೬.೦೨.೨೦೦೦

೭. ಅ.ಸುಂದರ, **ಕರ್ನಾಟಕ ಚರಿತ್ರೆ ಸಂಪುಟ ೧**, ಪು.೯೫

೮. ಡಾ.ಕೆ.ಬಿ.ಶಿವತಾರಕ, **ಕರ್ನಾಟಕದ ಪುರಾತತ್ವ ನೆಲೆಗಳು**, ಪು.೩

೯. ಗುರುರಾಜರಾವ್, **ಕರ್ನಾಟಕದ ಲೋಹಯುಗ ಸಂಸ್ಕೃತಿಗಳು**, ಪು.೩೧

೧೦. ಅದೇ, ಪು.೩೮-೩೯

೧೧. ಬಾಲಗೋಪಾಲ ಕೆ., **ಪ್ರಾಚೀನ ಭಾರತ ಚರಿತ್ರೆ, ಕೊಸಾಂಬಿಯವರ ಚಿಂತನೆಗಳು**, ಪು.೨೭೬

೧೨. ಶಿವಕುಮಾರ ಎಂ.ಪಿ., **ಬಿಳಿಗಿರಿರಂಗನಬೆಟ್ಟ, ಸಂದರ್ಶನ**

ಅಧ್ಯಾಯ ೩

ಐತಿಹಾಸಿಕ ಹಿನ್ನೆಲೆ

೩

ಐತಿಹಾಸಿಕ ಹಿನ್ನೆಲೆ

೩.೧. ಸ್ಥಳನಾಮ

ಮಾನವ ಅಲೆಮಾರಿ ಜೀವನವನ್ನು ಕೈ ಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಜೀವನಕ್ಕೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಯಾವಾಗ ಮನಗಂಡನೋ ಆಗ ಊರು ಹಳ್ಳಿಗಳ ಉಗಮವಾಯಿತು ಎನ್ನಬಹುದು. ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿತ್ತ. ಆ ಸ್ಥಳ ಅವನ ಜೀವನದಲ್ಲಿ ಹಾದು ಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇಲ್ಲದಿರಲಿ ಒಂದು ಜನಾಂಗದ ಸ್ಮೃತಿಯ ಕುರುಹಾಗಿ ಆ ಗುರುತು ಶಾಶ್ವತವಾಗಿ ಬಳಕೆಯಾಗುತ್ತಿತ್ತು. ಹಾಗೆಯೇ ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಸೆಯುವ ಸಂಸ್ಕೃತಿಯ ಒಂದು ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ.[೧] ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಅಧ್ಯನದಲ್ಲಿ ಅವಶ್ಯಕವಾಗಿ ಗಮನಿಸಬೇಕಾದ ಅಂಶಗಳಲ್ಲಿ ಸ್ಥಳನಾಮವೂ ಒಂದು. ಬದಲಾದ ಭೌಗೋಳಿಕ ಸ್ವರೂಪದ ಚರಿತ್ರೆಗೆ ಇದು ಸುಳುಹನ್ನು ಕೊಡಬಲ್ಲದು. ಅಲ್ಲದೇ ಐತಿಹಾಸಿಕ ಘಟನೆಗೆ ಪುಷ್ಟಿಯನ್ನು ನೀಡಬಲ್ಲದು.[೨] ಹೀಗೆ ಒಂದು ಪ್ರದೇಶದ ಇತಿಹಾಸ ರಚನೆಯಲ್ಲಿ ಅಲ್ಲಿನ ಸ್ಥಳನಾಮವು ಅತ್ಯಂತ ಮಹತ್ವವಾಗಿದ್ದು, ಆ ಪ್ರದೇಶದ ಐತಿಹಾಸಿಕ ಹಿನ್ನೆಯನ್ನು ಕುರಿತು ಹೇಳುತ್ತದೆ.

ಬಿಳಿಗಿರಿರಂಗನಬೆಟ್ಟದ ಹೆಸರು ರೂಪುಗೊಂಡಿರುವ ಬಗೆಯನ್ನು ಅದರ ಐತಿಹಾಸಿಕ ಆಧಾರಗಳ ಸಹಿತ ಇಲ್ಲಿ ಗುರುತಿಸಲಾಗಿದೆ. ತಿರುಮಕೂಡಲ ನರಸೀಪುರ ತಾಲೂಕಿನ ಸಂಸ್ಕೃತ ಹಾಗೂ ಕನ್ನಡದಲ್ಲಿರುವ ತಾಮ್ರಶಾಸನದಲ್ಲಿ ಕ್ಷೇತ್ರದ ಹೆಸರನ್ನು "ಬಿಳೀಕಲ್ಲು ಬೆಟ್ಟ" ಎಂದು ನಮೂದಿಸಿದೆ. ೧೮ ಏಪ್ರಿಲ್ ೧೭೪೫ಕ್ಕೆ ಸೇರಿದ ಈ ಶಾಸನವನ್ನು ದಳವಾಯಿ ಅಗ್ರಹಾರ ದಾನ ಶಾಸನ ಎಂದು ಕರೆಯಲಾಗಿದೆ.[೩] ೧೬೬೭ರ ಮುದ್ದರಾಜನ ಶಾಸನದಲ್ಲಿ 'ಬಿಳಿಕಲ' ಎಂದು ಹೆಸರಿಸಲಾಗಿದೆ. ಆದರೆ ಅದೇ ಶಾಸನದ ಕೊನೆಯಲ್ಲಿ ಶ್ರೀ ಬಿಳಿಗಿರಿ ಸಾ ಎಂದು ಸೂಚಿಸಿದೆ. ದೇವಚಂದ್ರನ ರಾಜಾವಳೀ ಕಥಾಸಾರದಲ್ಲಿ ಶಿಖಿಯಂ ಪಿಡಿದೆತ್ತಿಕೊಂಡು ಪೋಗಿ ಬೆಳುಗಿರಿರಂಗನ ಬೆಟ್ಟದ ಬಿದುರ ಮೆಳೆಯೊಳ್ನಟ್ಟಿದೊಡಾ ರಾತ್ರಿ ಬೆಳಗು

ಪರ್ಯಂತ ನೇಲುತ್ತುಂ ಮಂತ್ರಮಂ ಜಪಿಸುತ್ತಿರೆ ಮೆಚ್ಚಿ ಏನು ಬೇಕು ಬೇಡಿಕೋ ಎಂಬುದುಂ ವೆಚ್ಚಕ್ಕೆ ಪಣಮಂ ಬೇಡಲೊಂದು ಹಣಮಂ ಕೊಟ್ಟು... ಎಂದಿದೆ.[೪]

ಶ್ರೀನಿವಾಸರಂಗಾಚಾರ್ಯರು ರಚಿಸಿದ ಮೈಸೂರು ಮೆಯ್ಸಿರಿ ಅಥವಾ ನಾಲ್ವಡಿ ಕೃಷ್ಣರಾಜೇಂದ್ರ ಮಹಿಮೆ ಎಂಬ ಗ್ರಂಥದಲ್ಲಿ ಊರುಗಳ - ಸ್ಥಳಗಳ ಮಹಿಮೆಯನ್ನು ವರ್ಣಿಸುವ ಸಂದರ್ಭದಲ್ಲಿ ಪ್ರಥಮ ಅಧ್ಯಾಯದ ೭ನೆಯ ಪದ್ಯದಲ್ಲಿ ''ನಲಿದೇಂ ನಿಲ್ಲದೆ ರಂಗನೆಂದು ಮಾಲಿದಂ ಶ್ವೇತಾದ್ರಿಯೊಳ್ನಾರಣಂ'' ಎಂದಿದ್ದಾರೆ.[೫] ಶಾಸನ ಗ್ರಂಥಗಳಲ್ಲಿ ಹಲವು ರೂಪಗಳಲ್ಲಿ ಗುರುತಿಸಲ್ಪಟ್ಟಿರುವ ಬಿಳಿಗಿರಿರಂಗನ ಬೆಟ್ಟ ಹೆಸರಿನಲ್ಲಿ ಎರಡೆರಡು ಶಬ್ದಗಳು ಒಂದೇ ಅರ್ಥದಲ್ಲಿ ಸೇರಿಕೊಂಡಿರುವುದು ಗಮನಾರ್ಹ. ''ಗಿರಿ'' ಎನ್ನುವ ಸಂಸ್ಕೃತ ಶಬ್ದದ ಜೊತೆಗೆ ''ಬೆಟ್ಟ'' ಎನ್ನುವ ಅದೇ ಅರ್ಥದ ಕನ್ನಡ ಶಬ್ದ ಒಡಗೂಡಿದೆ. ಶಾಸನಗಳಲ್ಲಿ 'ಬಿಳಿಕಲ್' ಎಂಬ ಶಬ್ದವನ್ನು ಬಳಸಲಾಗಿದೆ. ಬಿಳಿಕಲ್ ಇರುವ ಬೆಟ್ಟವೇ 'ಬಿಳಿಕಲ್ಲು ಬೆಟ್ಟ' ಎಂದು ಹೆಸರಿಸಲಾಗಿದೆ.

ಇಲ್ಲೆಲ್ಲೂ 'ರಂಗ' ಸೇರಿಲ್ಲದಿರುವುದನ್ನು ಕಾಣಬಹುದು. ಒಂದು ಶಾಸನದಲ್ಲಿ ಮಾತ್ರ 'ಬೆಳಗಿರಿ ರಂಗಸ್ವಾಮಿ' ಎಂಬ ಹೆಸರಿದೆ. ಬೆಟ್ಟವನ್ನು ಸೂಚಿಸುವಾಗ 'ಬಿಳಿಕಲ್ ' ಎಂದರೂ ''ರಂಗ'' ಎಂದು ಸೇರಿಸಿದಾಗ ''ಬಿಳಿಗಿರಿ'' 'ಬೆಳಗಿರಿ' ''ಬೆಳುಗಿರಿ'' ಮುಂತಾದ ರೀತಿ ಪ್ರಯೋಗವಾಗಿವೆ. ಮುದ್ದುರಾಜನ ಶಾಸನದವರೆಗೂ 'ಶ್ವೇತಾದ್ರಿ' ಪದ ಪ್ರಯೋಗ ಕಂಡುಬಂದಿಲ್ಲ. ಮುದ್ದರಾಜನ ಯಳಂದೂರಿನ ಗೌರೀಶ್ವರ ದೇವಾಲಯದ ಕ್ರಿ.ಶ. ೧೬೫೪-೫೫ರ ಶಾಸನದಲ್ಲಿ ಪೂರ್ವದಿಕ್ಕಿನಲ್ಲಿ ಗಂಗಾಧರಯುತ ಶ್ವೇತಶಿಲಾದ್ರಿ ಎಂದಿದೆ.[೬] ಸುಮಾರು ೧೭೫೦ರಲ್ಲಿದ್ದ ಮರುಳ ಸಿದ್ಧ ಕವಿಯ ''ಗುರುಲಿಂಗ ಜಂಗಮ ಚಾರಿತ್ರದಲ್ಲಿ ಪತ್ತು ನಾಡಿಗೆ ಮೂಡುಗಡೆಯು ಉತ್ತಮ ಶ್ವೇತಪರ್ವತದಿ ಗಂಗಾಧರ'' ಮತ್ತು ''ಶ್ವೇತಾದ್ರಿಯೊಳಗೆ ನೀ ನಿಂದೊಡೆ ಕೇಳು| ಭೂತಳದಿಂದಲಿ ಜನರೆಲ್ಲ''[೭] ಶ್ವೇತಶಿಲಾದ್ರಿ, ಶ್ವೇತ ಪರ್ವತ ಶ್ವೇತಾದ್ರಿ ಎಂದು ಅನೇಕ ರೀತಿಯಲ್ಲಿ ಪ್ರಯೋಗವಾಗಿರುವ ಈ ಹೆಸರಿನಲ್ಲಿ ರಂಗನಾಥನ ಪ್ರಸ್ತಾಪವಾಗಿಲ್ಲ. ಆದರೆ ದೇವಚಂದ್ರನು ಬೆಳುಗಿರಿರಂಗನ ಬೆಟ್ಟ ಎಂದು ಕರೆದಿದ್ದಾನೆ.

ಬಿಳಿ(ಕನ್ನಡ), ಗಿರಿ(ಸಂಸ್ಕೃತ), ರಂಗ(ಸಂಸ್ಕೃತ), ಬೆಟ್ಟ(ಕನ್ನಡ) ಇವಿಷ್ಟು ಶಬ್ದಗಳು, ಷಷ್ಠಿಯ ''ಅ'' ಪ್ರತ್ಯಯವನ್ನು ಸೇರಿಸಿಕೊಂಡು ಬಿಳಿ+ಗಿರಿ+ರಂಗಅ+ಬೆಟ್ಟ -> ಬಿಳಿಗಿರಿರಂಗನ ಬೆಟ್ಟ ಎಂದಾಗಿದೆ. ಇದನ್ನು ಶಿಷ್ಟ ರೂಪದಲ್ಲಿ ಶ್ವೇತಾದ್ರಿ ಎಂದೂ, ಇಲ್ಲಿಯ ರಂಗನಾಥ ಸ್ವಾಮಿಯನ್ನು 'ಶ್ವೇತಾದ್ರೀಶ' ಎಂದೂ ಕರೆಯಲಾಗಿದೆ. ಯಳಂದೂರು ತಾಲ್ಲೂಕಿನ ಭಾಗದಲ್ಲಿ ಇರುವ ಬೆಟ್ಟದಲ್ಲಿ ರಂಗನಾಥಸ್ವಾಮಿಯ ದೇವಾಲಯ ಇದ್ದರೂ, ಒಟ್ಟಾರೆ ಬೆಟ್ಟ ಶ್ರೇಣಿಗೆ ಬಿಳಿಗಿರಿರಂಗನ ಬೆಟ್ಟ ಎಂದೂ ಕರೆಯಲಾಗುತ್ತಿದೆ.

೩.೨. ಶಾಸನಗಳು

ಕರ್ನಾಟಕದ ಇತಿಹಾಸ ಬರೆಯುವವರಿಗೆ ಶಾಸನಗಳ ಪ್ರಥಮ ಆಕರವಾಗಿದೆ. ಕರ್ನಾಟಕದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಇತಿಹಾಸವನ್ನು ತಿಳಿಯಲು ಪ್ರಥಮ ದರ್ಜೆ ಆಕರಗಳಾದ ಶಾಸನಗಳ ಮುಖಾಂತರ ಹಲವು ನೆಲೆಗಳ ಶ್ರೇಣಿಯಲ್ಲಿ ಸಾಂಸ್ಕೃತಿಕ ಅಧ್ಯಯನಕ್ಕೆ ಬರುವ ಬಿಗುವು ಅಗತ್ಯವಾದ ಸತ್ಯ ವಿವರಗಳು ಸಿಗುತ್ತವೆ. ಇನ್ನುಳಿದ ಐತಿಹ್ಯ ಮತ್ತು ಕಥೆ, ಕಾವ್ಯಗಳಿಂದ ಪಡೆಯುವ ಸಾಮಗ್ರಿಗಳಿಗಿಂತ ಶಾಸನಗಳು ಭಿನ್ನವಾದ ಆಕರಗಳಾಗುತ್ತವೆ. ಸುಮಾರು ೬-೧೭ನೆಯ ಶತಮಾನದವರೆಗಿನ ಶಾಸನಾಧಾರಗಳು ಇಲ್ಲಿ ಲಭ್ಯವಾಗುತ್ತವೆ. ಗಂಗವಂಶಕ್ಕೆ ಸೇರಿದವರಲ್ಲಿ ೮ನೆಯ ಶತಮಾನದ ಶ್ರೀ ಪುರುಷ, ಕ್ರಿ.ಶ. ೯೦೦ರ ಸತ್ಯವಾಕ್ಯ ಮೊದಲಾದವರ ಶಾಸನಗಳು ಸಿಕ್ಕಿವೆ.

ಕ್ರಿ.ಶ. ೧೨-೧೪ನೆಯ ಶತಮಾನದ ಅವಧಿಯಲ್ಲಿ ಹೊಯ್ಸಳ ದೊರೆಗಳಾದ ವಿಷ್ಣುವರ್ಧನ, ಸೋಮೇಶ್ವರ, ವೀರಬಲ್ಲಾಳ ಮುಂತಾದವರು ತಮ್ಮ ಆಳ್ವಿಕೆಯ ಕಾಲದಲ್ಲಿ ನೀಡಿರುವ ದಾನ-ದತ್ತಿಗಳ ಬಗ್ಗೆ ಯಳಂದೂರಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅನೇಕ ಶಾಸನಗಳು ದೊರೆತಿವೆ. ಹೊಯ್ಸಳರ ಬಹುತೇಕ ಶಾಸನಗಳು ತಮಿಳು ಭಾಷೆಯಲ್ಲಿವೆ. ಕ್ರಿ.ಶ. ೧೨೭೩ರ ಚಾಮರಾಜನಗರದ ಕಟ್ನವಾಡಿ ಶಾಸನ ಪ್ರಕಾರ ಹದಿನಾಡು ಪ್ರಾಂತ್ಯವು ಕುಮಾರುನಾಡು, ಹಿರಿಯನಾಡು, ತೊರೆನಾಡು ಎಂಬ ಮೂರು ಉಪನಾಡುಗಳನ್ನು ಹೊಂದಿತ್ತೆಂದಿದೆ.[೮] ಆದರೆ ೧೨೬೮ರ ಕೊಳ್ಳೆಗಾಲದ ಶಾಸನ ಪ್ರಕಾರ ಕುಮಾರ ನಾಡು ಮತ್ತು ತೊರೆನಾಡು ಒಂದೇ ಆಗಿದ್ದಂತೆ ತೋರುತ್ತದೆ.[೯] ಮುಮ್ಮಡಿ ವೀರಬಲ್ಲಾಳನ ಚಾಮರಾಜನಗರ ಶಾಸನದಂತೆ ತೊರೆನಾಡು, ತಗಡೂರು ಮತ್ತು ಮೂಗೂರುಗಳನ್ನು ಕುಮಾರನಾಡಿನ ಭಾಗಗಳೆಂದು ಗುರುತಿಸಲಾಗಿದೆ.[೧೦] ಕ್ರಿ.ಶ. ೧೪೩೦ರ ವೇಳೆಗೆ ಹದಿನಾಡು ಮನೆತನ ಅಧಿಕಾರರೂಢವಾಗಿತ್ತಾದರೂ ಅದರ ಆಡಳಿತ ವ್ಯಾಪ್ತಿ ಯಳಂದೂರು ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು.[೧೧]

ಹೊಯ್ಸಳರ ಬಳಿಕ ಈ ಪ್ರದೇಶ, ವಿಜಯನಗರದ ಅರಸರ ಆಡಳಿತಕ್ಕೆ ಒಳಪಟ್ಟಿತ್ತು ಎನ್ನುವುದಕ್ಕೆ ಆಧಾರವಾಗಿ ಈ ಪ್ರದೇಶದ ಹಲವು ಕಡೆ ವಿಜಯನಗರದ ಅರಸರ ಕಾಲದ ಕೆಲವು ಶಾಸನಗಳು ಸಿಕ್ಕಿವೆ. ಮೊದಲನೆಯ ಬುಕ್ಕ, ಎರಡನೆಯ ಹರಿಹರ, ಮಲ್ಲಿಕಾರ್ಜುನ, ವಿರೂಪಾಕ್ಷ, ಕೃಷ್ಣದೇವರಾಯ, ಅಚ್ಚುತರಾಯ, ಸದಾಶಿವ, ಮೊದಲನೆಯ ಶ್ರೀರಂಗರಾಮ, ೨ನೆಯ ಶ್ರೀರಂಗರಾಯರಿಗೆ ಸೇರಿದ ಶಾಸನಗಳು ದೊರೆತಿವೆ. ಬಿಳಿಗಿರಿರಂಗನಬೆಟ್ಟದ ಸುತ್ತಮುತ್ತಣ ಪ್ರದೇಶಗಳಲ್ಲಿ ವಿಜಯನಗರ ಕಾಲದ ಶಾಸನಗಳು ದೊರೆತಿವೆ. ವಿಜಯನಗರದ ದೊರೆಯಾದ ಎರಡನೆಯ ಶ್ರೀರಂಗರಾಯನ ಕ್ರಿ.ಶ. ೧೫೮೨ರ ಶಾಸನವೊಂದು ಬಿಳಿಗಿರಿರಂಗಯನ ಬೆಟ್ಟದ ಸಮೀಪದಲ್ಲಿರುವ ವಡಗೆರೆ ಆಂಜನೇಯನ ದೇವಸ್ಥಾನದ ಬಳಿ ಸಿಕ್ಕಿದೆ. ಕೃಷ್ಣದೇವರಾಯನ ಮಂತ್ರಿಯಾಗಿದ್ದ ಸಾಳುವ ಗೋವಿಂದರಾಜಯ್ಯ ೧೫೧೯ರಲ್ಲಿ

ಅಲಕೆರೆಯಲ್ಲಿ ವೃತ್ತಿ ಸಮೇತ ದಾನ ನೀಡಿದ ಶಾಸನವಿದೆ. ಮಲಾರಪಾಳ್ಯದಲ್ಲಿ ಅಚ್ಯುತರಾಯನ ಕಾಲದ ಹಾಗೂ ಶ್ರೀರಂಗರಾಯನ ಕಾಲದ ಶಾಸನಗಳು ದೊರೆತಿವೆ. ೧೬೪೭ರ ಶ್ರೀರಂಗರಾಯನ ಕಾಲದ ಶಾಸನ ಹದಿನಾಡು ದೊರೆ ತಿರುಮಲನಾಯಕನ ಮಗ ಲಿಂಗರಾಜಯ್ಯ, ಕಳಲೆಯ ದೊರೆ ಮಲ್ಲಿರಾಜಯ್ಯನ ಮಗಳು ಮಲ್ಲಾಜಮ್ಮ ಸ್ಥಾಪಿಸಿದ ಕಲ್ಲು ಮಠವೊಂದಕ್ಕೆ ಮಾವಿನಹಳ್ಳಿ ಮತ್ತು ಕರಿಸಿದ್ಧನಪುರ ಎಂಬ ಎರಡು ಗ್ರಾಮಗಳನ್ನು ದತ್ತಿ ಬಿಟ್ಟ ವಿವರವಿದೆ.[೧೨]

ಉಮತ್ತೂರಿನ ರಾಜ ಮನೆತನದವರು ನೀಡಿರುವ ಕೆಲವು ಶಾಸನಗಳು ಈ ಪ್ರದೇಶದಲ್ಲಿ ಸಿಕ್ಕಿರುವುದರಿಂದ ಯಳಂದೂರಿನ ಹಲವು ಪ್ರದೇಶಗಳು ಉಮ್ಮತ್ತೂರು ದೊರೆಗಳ ಆಳ್ವಿಕೆಯಲ್ಲಿದ್ದವು ಎನ್ನಲು ಆಧಾರಗಳಾಗಿವೆ. ಯಳಂದೂರಿನ ಗೌರೀಶ್ವರ ದೇವಾಲಯಕ್ಕೆ ಹದಿನಾಡಿನ ದೊರೆಗಳು ಕಾಲಕಾಲಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ಕ್ರಿ.ಶ. ೧೫೬೮-೬೯ರಲ್ಲಿ ರಾಮನೃಪಾಲ ಗಣಿಗನೂರನ್ನು ಕೊಡುಗೆಯಾಗಿ ನೀಡಿದ್ದ. ಕ್ರಿ.ಶ. ೧೬೫೪-೫೫ರಲ್ಲಿ ಮುದ್ದು ಭೂಪಾಲ (ಕ್ರಿ.ಶ.೧೬೫೪-೬೭) ಅನೇಕ ಕೊಡುಗೆಗಳನ್ನು ಕೊಟ್ಟಿದ್ದಲ್ಲದೆ ಈ ದೇವಸ್ಥಾನಕ್ಕೆ ಮಂಟಪವನ್ನು ಕಟ್ಟಿಸಿದ. ದೇವಸ್ಥಾನದ ಯಾವ್ಯಾವ ಸೇವಾ ವರ್ಗದವರಿಗೆ ಎಷ್ಟೆಲ್ಲ ಸಲ್ಲಬೇಕೆಂದು ನಿಗದಿಪಡಿಸಿದ ದಾನದ ವಿವರವಿದೆ. ಮುದ್ದುಭೂಪಾಲ ಬಿಳಿಗಿರಿರಂಗನ ಬೆಟ್ಟದಲ್ಲಿ ಕೊಡುಗೆ ನೀಡುವಾಗ ನವರಾತ್ರಿ ಉತ್ಸವದ ಸಂದರ್ಭಕ್ಕೆ ಎಂದು ಮೂವತ್ತು ವರಹಗಳನ್ನು ದತ್ತಿಯಾಗಿ ಬಿಟ್ಟಿದ್ದಾನೆ.[೧೩]

ಬಿಳಿಗಿರಿರಂಗನಬೆಟ್ಟ

ಬಿಳಿಗಿರಿರಂಗನಬೆಟ್ಟವನ್ನು ಉಲ್ಲೇಖಿಸುವಂತಹ ಚಾರಿತ್ರಿಕ ಅಂಶಗಳು ವಿರಳ. ಯಳಂದೂರು ತಾಲೂಕಿನ ಅಗರ ಗ್ರಾಮಾದಲ್ಲಿರುವ ಶ್ರೀ ನರಸಿಂಹದೇವಸ್ಥಾನದ ಶಾಸನವೊಂದರ ಪ್ರಕಾರ ಬಿಳಿಗಿರಿರಂಗನ ಬೆಟ್ಟದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ ಪಾಳೇಗಾರರನ್ನು "ಗಣಪತಿ ಪ್ರಭು" ಎಂದು ಹೇಳಿದ್ದಾರೆ.[೧೪] ಆದರೆ ಎಫಿಗ್ರಾಫಿಯಾ ಕರ್ನಾಟಕದ ಸಂಪುಟಗಳಲ್ಲಿ, ಅಗರಕ್ಕೆ ಸಂಬಂಧಿಸಿದ ಶಾಸನಗಳನ್ನು ಈ ಹೆಸರಿನ ವ್ಯಕ್ತಿಯ ಉಲ್ಲೇಖ ಕಂಡುಬಂದಿಲ್ಲ. ಜೀರ್ಣೋದ್ಧಾರ ಮಾಡಿದ ಪಾಳೇಗಾರ, ಅವನ ಹೆಸರು ಗಣಪತಿ ಪ್ರಭು, ಆತನೆ ಬಿಳಿಗಿರಿರಂಗನಬೆಟ್ಟದ ದೇವಸ್ಥಾನವನ್ನು ಸಹ ಜೀರ್ಣೋದ್ಧಾರ ಮಾಡಿದನು ಎನ್ನುವುದಕ್ಕೆ ಯಾವ ಶಾಸನಾಧಾರವೂ ಇಲ್ಲ. ಹೊಯ್ಸಳ ದೊರೆ ವಿಷ್ಣುವರ್ಧನ ಈ ದೇವಾಲಯವನ್ನು ಜೀಣೋದ್ಧಾರ ಮಾಡಿಸಿದನೆಂಬ ಪ್ರತೀತಿಯಿದ್ದರೂ ಅದಕ್ಕೆ ಶಾಸನಾಧಾರಗಳಿಲ್ಲ.

ಬಿಳಿಗಿರಿರಂಗನ ಬೆಟ್ಟದ ಸಾಲುಗಳಲ್ಲಿರುವ ಶ್ರವಣನ ಅರೆಯಲ್ಲಿ ದೊರೆತ ಶಾಸನ ಹೊಯ್ಸಳ ದೊರೆ ವೀರಬಲ್ಲಾಳನ ಕಾಲಕ್ಕೆ ಸೇರಿದೆ. ಶಾಸನದ ಪೂರ್ಣಪಾಠವನ್ನು ಗಮನಿಸಿದಾಗ, ಜಿನಮುನಿಯೊಬ್ಬರಿಗೆ ದಾನವಿತ್ತ ವಿಷಯ ಸ್ಪಷ್ಟವಾಗುತ್ತದೆ. ಬಿಳಿಗಿರಿರಂಗನಬೆಟ್ಟ ಶ್ರವಣದ ಅರೆಯಲ್ಲಿ ಬಿದ್ದಿರುವ ಶಾಸನದಲ್ಲಿ

ಶುಭಮಸ್ತು ಶ್ರೀ ಮತ್ಸರಮ ಗಂಭೀರ ಸ್ಯಾಧ್ಯಾದಾಮೋಘುಲಾಂಛನಂ ಜೀಯಾತ್ರೈಲೋಕ್ಯನಾತಸ್ಯ ಸಾಸನಂ ಜಿನಶಾಸನಂ| ಸ್ವಸ್ತಿಶ್ರೀ ಪ್ರತಾಪ ಚಕ್ರವರ್ತಿ ಹೊಯಿಸಳ ಶ್ರೀವೀರಬಲ್ಲಾಳದೇವರಸರು ಪೃಥುವಿ ರಾಜ್ಯಂಗೆಯ್ಯುತ್ತಿಲು ಸಕವರುಷ ೧೧೧೨(೨) ಸಾಧಾರಣ ಸಂವತ್ಸರದ ವೈಸಾಕ ಶುದ್ಧ ಪಂಚಮಿ ಬ್ರಿಹ.....[೧೫]ಎಂದಿದೆ.

ಇಲ್ಲಿ ರಂಗಸ್ವಾಮಿ ದೇವಸ್ಥಾನಕ್ಕೆ ಸೇರಿದ ತಾಮ್ರ ಶಾಸನವೇ ಬಿಳಿಗಿರಿರಂಗನ ಬೆಟ್ಟವನ್ನು ಕುರಿತ ಮೊದಲ ಐತಿಹಾಸಿಕ ದಾಖಲೆ.[೧೬] ಕ್ರಿ.ಶ.೧೬೬೭ ಸೆಪ್ಟೆಂಬರ್ ೧೨ರ ತಾಮ್ರ ಶಾಸನದ ಹದಿನಾಡು ತಿರುಮಲೆ ರಾಜನಾಯಕರ ಮಗ ಮುದ್ದುರಾಜ ಅಮ್ಮನವರು ಮೂವತ್ತು ವರಹವನ್ನು ಕೊಟ್ಟು ಅದರ ಬಡ್ಡಿಯಲ್ಲಿ ನವರಾತ್ರಿ ಉತ್ಸವಗಳನ್ನು ನಡೆಸಿಕೊಂಡು ಬರಬೇಕೆಂದು ಸೂಚಿಸಲಾಗಿದೆ. ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೫೪೯ ವರುಷ ಸಂದ ವರ್ತಮಾನವಾದ ಪ್ಲವಂಗ ಸಂವತ್ಸರದ ಅಶ್ವಯಜ ಶುದ್ಧ ೫ಯಲ್ಲು ಶ್ರೀ ದೇವದೇವೊತ್ತಮ ದೇವತಾ ಸಾರ್ವಭೌಮ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಬಿಳಿಕಲ ತಿರುವೆಂಗಳನಾಥ ಸ್ವಾಮಿಯವರಿಗೆ ಮಹಾನವಮಿ ನವರಾತ್ರಿ ಸೇವೆಗೆ ಹದಿನಾಡು ತಿರುಮಲೆ ರಾಜನಾಯಕ ಕೊಮರ ಮುದ್ದುರಾಜ ಅಯ್ಯನವರು ಕೊಟ್ಟ ಪುದಿವಟ್ಟು ಕಂಗ ಮೂವತ್ತು ವರಹಾ ಯೀ ಹಣವಿನ ಬಡ್ಡಿಯಲ್ಲಿ ಮಹಾನವಮಿಯ ಹತ್ತು ದಿನದ ಸೇವೆಯನ್ನು ನಡೆಸಿಕೊಂಡು ಬರಲುಳ್ಳವರೂ| ಶ್ರೀ ಬಿಳಿಗಿರಿ ಸಾ....

ಗಂಗರು ತಮ್ಮ ಆನೆಗಳಿಗೆ ಬಿಳಿಗಿರಿರಂಗನಬೆಟ್ಟದಲ್ಲಿ ಹುಲುಸೊಪ್ಪು ಹುಡುಕುತ್ತಿದ್ದಾಗ, ಬಿಳಿಗಿರಿ ರಂಗಸ್ವಾಮಿ ಗೋಚರಿಸಿದನೆಂದೂ ಆಗ ಅವರು ದೇವರಿಗೆ ಒಂದು ದೇವಸ್ಥಾನ ಕಟ್ಟಿಸಿದರೆಂದೂ ಇನ್ನೊಂದು ಕಥೆ.[೧೭] ಬಿಳಿಗಿರಿರಂಗನಬೆಟ್ಟದಲ್ಲಿ ರಂಗಯ್ಯನಾಯಕ ಎಂಬ ಪಾಳೆಗಾರ ಆಳ್ವಿಕೆ ನಡೆಸುತ್ತಿದ್ದ ಎಂದು ಕೆಲವರು ಹೇಳಿದರೂ ಅದಕ್ಕೆ ಐತಿಹಾಸಿಕ ದಾಖಲೆಗಳಿಲ್ಲ.[೧೮]

ಬಿಳಿಗಿರಿರಂಗನಬೆಟ್ಟದ ಈಶಾನ್ಯ ದಿಕ್ಕಿನಲ್ಲಿ ೧೯ ಕಿ.ಮೀ. ದೂರದಲ್ಲಿ ಕಂಚಿನ ಬೋಳಿ ಎಂಬ ಬೆಟ್ಟದಲ್ಲಿ ಕೋಟೆಯ ಅವಶೇಷಗಳಿವೆ. ಕೊಳ್ಳೇಗಾಲ ತಾಲೂಕಿನ ಅಂಚಿನಲ್ಲಿರುವ ಈ ಬೆಟ್ಟದ ಮೇಲೆ ಕೋಟೆ, ಸಂತೆಮಾಳ, ಕಂಚಿನ ತೇರು ಮುಂತಾದವನ್ನು ಸೋಲಿಗರು ತೋರಿಸುತ್ತಾರೆ. ಉಮ್ಮತ್ತೂರಿನ ಕೊನೆಯ ದೊರೆ ಗಂಗರಸನಿಗೆ ಸಂಬಂಧಿಸಿದಂತೆ ಐತಿಹ್ಯವೊಂದು ಪ್ರಚಲಿತದಲ್ಲಿದ್ದು, ಈ ದೊರೆ ತನ್ನ ಅಳಿಯನಿಗಾಗಿ ಕಟ್ಟಿದ ಕೋಟೆ ಇದು ಎನ್ನುತ್ತಾರೆ. ಶಿವನ ಸಮುದ್ರದಲ್ಲಿ ನಿಂತು ಚಪ್ಪಾಳೆ ಹೊಡೆದರೆ ಈ ಕೋಟೆಗೆ ಕೇಳಿಸುತ್ತಿತ್ತು. ಶತ್ರುಗಳು ಬಂದಾಗ ಈ ಸೂಚನೆಗಳನ್ನು ಕೊಡಲಾಗುತ್ತಿತ್ತೆಂಬ ಪ್ರತೀತಿ. ಈ ಗಂಗರಸನನ್ನು ಸೋಲಿಸಲು ಕೃಷ್ಣದೇವರಾಯ ಉಮ್ಮತ್ತೂರು ಪ್ರಾಂತ್ಯಕ್ಕೆ ಹೊರಟನೆಂದು ಫಾದರ್ ಲೂಯಿಸ್ ಬರೆದಿದ್ದಾರೆ.[೧೯] ಸುದೀರ್ಘವಾಗಿ ನಡೆದ ಯುದ್ಧದಲ್ಲಿ ಉಮ್ಮತ್ತೂರು ಹಾಗೂ ಶಿವನ ಸಮುದ್ರಗಳಲ್ಲಿನ ಯುದ್ದ ಶಿಬಿರಗಳನ್ನು ಕೃಷ್ಣದೇವರಾಯನಿಂದ ಕೆಡವಿದೆ ಎನ್ನಲಾಗಿದೆ. ಅಂತಿಮವಾಗಿ

ಪ್ರತಿರೋಧವನ್ನು ತಡೆಯಲಾರದೆ, ಗಂಗರಾಜನು ಶತ್ರುಸೈನ್ಯದಿಂದ ತಪ್ಪಿಸಿಕೊಂಡು ಪಲಾಯನ ಗೈಯುವಾಗ ಗಗನ ಚುಕ್ಕಿಯ ಬಳಿ ಕಾವೇರಿ ನದಿಯಲ್ಲಿ ಮುಳುಗಿ ಮರಣ ಹೊಂದಿದನೆಂಬ ವಿಚಾರ ತಿಳಿದುಬರುತ್ತವೆ.

ಬಿಳಿಗಿರಿರಂಗನಬೆಟ್ಟದ ಸಾಲುಗಳು ಯಳಂದೂರು ಕೊಳ್ಳೇಗಾಲ ಹಾಗೂ ಚಾಮರಾಜನಗರ ತಾಲೂಕುಗಳಲ್ಲಿ ತನ್ನ ಎಲ್ಲೆಗಳನ್ನು ಚಾಚಿಕೊಂಡ ಆಡಳಿತಾತ್ಮಕವಾಗಿ ಕೆಲವು ಕಾಲ ಹಂಚಿ ಹೋಗಿತ್ತು. ಮೈಸೂರು ರಾಜ್ಯದ ಭಾಗದಲ್ಲಿ ಚಾಮರಾಜನಗರ ಮತ್ತು ಯಳಂದೂರು ತಾಲೂಕುಗಳಿದ್ದವು. ಕೊಳ್ಳೆಗಾಲ ತಾಲೂಕು ಬ್ರಿಟೀಷರ ಆಡಳಿತದ ಮದ್ರಾಸ್ ಪ್ರಾಂತ್ಯದಲ್ಲಿತ್ತು. ಅನಂತರ ಯಳಂದೂರು ತಾಲ್ಲೂಕನ್ನು ಬ್ರಿಟಿಷರು ಮುಮ್ಮಡಿ ಕೃಷ್ಣರಾಜರ ಮೂಲಕ ದಿವಾನ್ ಪೂರ್ಣಯ್ಯನಿಗೆ ಜಹಗೀರಾಗಿ ಕೊಡಿಸಿದ್ದರಿಂದ ಚಾಮರಾಜನಗರ ತಾಲೂಕು ಮಾತ್ರ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಉಳಿಯಿತು. ಹೀಗಾಗಿ ಬೆಟ್ಟ ಸಾಲುಗಳು ಇವರ ಆಡಳಿತದಲ್ಲಿ ಸೇರಿಹೋಗಿದ್ದವು. ಸೋಲಿಗರು ಗುರುತಿಸುವಂತೆ ಚಾಮರಾಜನಗರ ಕಾಡನ್ನು "ರಾಜಾಕಾಡು" ಯಳಂದೂರು ಭಾಗದ ಕಾಡು "ಜಾಗೀರಿಕಾಡು" ಮತ್ತು ಕೊಳ್ಳೇಗಾಲಕಾಡು "ಕುಪನಿ(ಕಂಪನ) ಕಾಡು"ಗಳಾಗಿವೆ.

ಹೀಗೆ ವಿವಿಧ ಅರಸರ ಆಡಳಿತ ವ್ಯವಸ್ಥೆಯಲ್ಲಿ ಸೇರಿ ಹೋಗಿದ್ದ ಬಿಳಿಗಿರಿರಂಗನ ಬೆಟ್ಟದ ಯಳಂದೂರು ಭಾಗದ ಅರಣ್ಯ ಪ್ರದೇಶ ಪೂರ್ಣಯ್ಯನ ಜಹಗೀರನಲ್ಲಿದ್ದರೂ, ಅರಣ್ಯವನ್ನು ಈ ದೇವಾಲಯಕ್ಕೆ ಸರ್ವಸಾಮಾನ್ಯವಾಗಿ ಬಿಟ್ಟು ಕೊಡಲಾಗಿತ್ತು.

ಕಪ್ಪು ಕಡತಗಳು

ಚರಿತ್ರೆಯ ಹಲವು ಮಾಹಿತಿಗಳನ್ನು ನೀಡುವಲ್ಲಿ, ದಾಖಲೂ ಸಾಹಿತ್ಯವಾದ ಕಡತಗಳೂ ಸ್ವಲ್ಪಮಟ್ಟಿಗೆ ಆಕರಗಳಾಗಿ ನೆರವಾಗುತ್ತವೆ. ಬಟ್ಟೆಯ ಎರಡೂ ಬದಿಗಳಿಗೆ ಹುಣಸೆ ಬೀಜದ ಚರಿ ಮತ್ತು ಇದ್ದಿಲು ಪುಡಿಗಳ ಮಿಶ್ರಣವನ್ನು ಸವರಿ ತಯಾರಿಸಿದ ಒಂದು ನಿರ್ದಿಷ್ಟ ಅಳತೆಯ ಮಡಿಕೆಗಳುಳ್ಳ ಪುಸ್ತಕಗಳ ಕಪ್ಪು ಕಡತಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಎಡಕೊಮ್ಮೆ ಬಲಕ್ಕೊಮ್ಮೆ ಪುಸ್ತಕದಂತೆ ಮಡಿಕೆ ಮಾಡಬಹುದಾಗಿದ್ದ ಈ ಕಡತಗಳಲ್ಲಿ, ಬಳಪದ ಕಲ್ಲಿನಿಂದ ಬರೆದು ಅಳಿಸಬಲ್ಲ ತಾತ್ಕಾಲಿಕ ಬರವಣಿಗೆಯ ಸಾಧನವಾಗಿತ್ತು. ದಿನನಿತ್ಯದ ವ್ಯವಹಾರಗಳ ಜಮಾ-ಖರ್ಚನ್ನು ದಾಖಲಿಸುವ ಇಂತಹ ದಿನಚರ ಪುಸ್ತಕಗಳು ಅರಮನೆ, ಗುರುಮನೆ, ದೇವಸ್ಥಾನ ಹಾಗೂ ಅಪರೂಪಕ್ಕೆ ಕಾವ್ಯಗಳನ್ನೂ ಬರೆದಿಟ್ಟ ದಾಖಲೆ ಪುಸ್ತಕಗಳಾಗಿವೆ. ಕೆಲವೊಮ್ಮೆ ಮೂಲ ದಾಖಲೆಗಳ ಪ್ರತಿಗಳನ್ನು ಇದರಲ್ಲಿ ನಮೂದಿಸಲಾಗುತ್ತಿತ್ತು.

ಮೈಸೂರಿನ ವಿಭಾಗೀಯ ಪತ್ರಗಾರದಲ್ಲಿ ಯಳಂದೂರು ಜಹಗೀರುದಾರರ ಆಡಳಿತದ ಕಾಲಕ್ಕೆ ಸಂಬಂಧಿಸಿದ ನೂರಾರು ಕಡತಗಳಿವೆ. ಯಳಂದೂರು ತಾಲೂಕು ಕಛೇರಿಯಲ್ಲಿದ್ದ ಕಪ್ಪುಕಡತಗಳನ್ನು ಉತ್ಸಾಹಿ ತಹಶೀಲ್ದಾರೊಬ್ಬರು ಪತ್ರಾಗಾರದ ವಶಕ್ಕೊಪ್ಪಿಸಿದ್ದರು. ಅವುಗಳಲ್ಲಿ ಸಾಕಷ್ಟು ಸುಸ್ಥಿತಿಯಲ್ಲಿರುವ ಕಡತಗಳನ್ನು ಮೈಕ್ರೊಫಿಲ್ಮ್ ಮಾಡಿ ಸಂರಕ್ಷಿಸಲಾಗಿದೆ. ಯಳಂದೂರಿನ ಕಪ್ಪು ಕಡತಗಳನ್ನು ಎಡಿನ್

ಬರೋ ವಿಶ್ವವಿದ್ಯಾಲಯದ ಡಾ. ನೀಲಾಂಬರ ಹಟ್ಟಿ ಮತ್ತು ಡಾ. ಜೇಮ್ಸ್ ಹೈಮನ್ ಅದರ ಅಧ್ಯಯನ ಮಾಡಿ ಜಹಗೀರ ಆಡಳಿತದಲ್ಲಿನ ಆರ್ಥಿಕ, ಸಾಮಾಜಿಕ ಸ್ವರೂಪವನ್ನು ಸಾದ್ಯಂತವಾಗಿ ವಿಶ್ಲೇಷಿಸಿದ್ದಾರೆ. "ದ ರಿಟರ್ನ್ ಆಫ್ ದಿ ಬ್ಲಾಕ್ ಬುಕ್ಸ್" ಮತ್ತು ದ ಸ್ಟೇಟ್ ಆ್ಯಂಡ್ ಲೋಕಲ್ ರೆವಿನ್ಯೂ ಆಡ್ಮಿನಿಸ್ಟ್ರೇಷನ್ ಇನ್ ಸೌತ್ ಇಂಡಿಯನ್ ಹಿಸ್ಟರಿ ಮುಂತಾದ ಲೇಖನಗಳಲ್ಲಿ ಯಳಂದೂರಿನ ಕಡತಗಳನ್ನು ಕುರಿತ ವಿಶ್ಲೇಷಣೆಗಳಿವೆ.

ಯಳಂದೂರಿನ ಕಡತಗಳ ಅಧ್ಯಯನ ಸಂದರ್ಭದಲ್ಲಿ ಬಿಳಗಿರಿರಂಗನ ಬೆಟ್ಟದ ದೇವಸ್ಥಾನಕ್ಕೆ ಸಂಬಂಧಿಸಿದ ಕಡತಗಳನ್ನು ವಿಶ್ಲೇಷಣೆಯ ಪರಿಧಿಯಿಂದ ಹೊರಗಿಡಲಾಗಿತ್ತು. ಪ್ರಸ್ತುತ ಸಂಶೋಧನಾಧ್ಯಯಕ್ಕೆಂದು ಅದನ್ನು ಮೊತ್ತ ಮೊದಲ ಬಾರಿಗೆ ಓದಿ ಬಿಳಿಗಿರಿ ಬಿಳಿಗಿರಿರಂಗನಬೆಟ್ಟ ಹಾಗೂ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ೧೮೮೯-೧೮೫೪ರ ನಡುವಣ ಅವಧಿಗೆ ಸೇರಿದ ಬಿಳಿಗಿರಿರಂಗನ ದೇವಸ್ಥಾನದ ಲೆಕ್ಕ ಪತ್ರಗಳ ದಾಖಲೆಗಳಿರುವ ಹದಿನೈದು ಕಡತಗಳಿವೆ.

ಈ ಕಡತಗಳು ರಂಗನಾಥಸ್ವಾಮಿ ದೇವಸ್ಥಾನದ ಆಡಳಿತಕ್ಕೆ ಹಾಗೂ ಸೋಲಿಗರ ಹಳ್ಳಿಗೆ ಸಂಬಂಧಿಸಿದ ಕಂದಾಯ ವ್ಯವಹಾರಗಳ ಬರಹಗಳಾದರೂ ಇಡೀ ಬಿಳಿಗಿರಿರಂಗನಬೆಟ್ಟಕ್ಕೆ ಅನ್ವಯವಾಗುವ ಹಲವು ವಿಚಾರಗಳು ಇವುಗಳಲ್ಲಿವೆ. ದೇವಸ್ಥಾನವೊಂದು ಕೇವಲ ಧಾರ್ಮಿಕವಾಗಿ ಜನರನ್ನು ಬೆಸೆಯುವ ಸಂಸ್ಥೆಯಾಗಿ ಭಾರತದ ಸಂದರ್ಭದಲ್ಲಿ ರೂಪುಗೊಂಡಿಲ್ಲ. ಅದು ಜನರ ಬದುಕಿನೊಳಗೆ ನಾನಾಮುಖಗಳಲ್ಲಿ ಪ್ರತ್ಯೇಕ್ಷ ಹಾಗೂ ಪರೋಕ್ಷವಾಗಿ ಪ್ರವೇಶ ಮಾಡುತ್ತದೆ. ಈ ದೇವಸ್ಥಾನ ಹಾಗೂ ಅದನ್ನು ಹೊಂದಿದ ಅರಣ್ಯದ ಆವರಣ ಎರಡೂ ಏಕತ್ವಗೊಳಿಸಿದ ಆಡಳಿತ ವ್ಯವಸ್ಥೆಯಲ್ಲಿ ಇದ್ದುದರಿಂದ, ಈ ಕಡತಗಳು ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತವೆ. ಆಗಿನ ವ್ಯವಸ್ಥೆಗಳ ಅಂತರ್ಯವನ್ನು ತೆರೆದು ತೋರಿಸುತ್ತವೆ. ಈ ಕಡತಗಳ ಮೂಲಕ ಒಂದು ಕಾಲಘಟ್ಟದಲ್ಲಿ ಬಿಳಿಗಿರಿರಂಗನಬೆಟ್ಟದಲ್ಲಿದ್ದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ.

೩.೩. ಇತಿಹಾಸ

ಪ್ರಾಚೀನ ಕಾಲದಿಂದಲೂ ಮಾನವನ ಜೀವನದಲ್ಲಿ ಸಾಂಸ್ಕೃತಿಕ ಇತಿಹಾಸ ಪ್ರಮುಖ ಪಾತ್ರವನ್ನು ವಹಿಸಿದೆ. ಆದ್ದರಿಂದ ಮಾನವರಿಗಿರುವಷ್ಟೇ ಇತಿಹಾಸ ಅವನ ಸಂಸ್ಕೃತಿಗೂ ಇರುತ್ತದೆ. ಈ ಇತಿಹಾಸಕ್ಕೆ ತಕ್ಕಂತೆ ಮಾನವನ ಸಂಸ್ಕೃತಿ ಹಂತ ಹಂತವಾಗಿ ವಿಕಾಸ ಹೊಂದಿದೆ. ಇತಿಹಾಸ, ಸಮಾಜ ಮತ್ತು ಸಂಸ್ಕೃತಿಯ ನಡುವೆ ಸಂಬಂಧವಿದೆ. ಆದ್ದರಿಂದ ಕಾಲದ ಅನಂತ ಪ್ರವಾಹದಲ್ಲಿ ಒಂದು ಪ್ರದೇಶದಲ್ಲಿದ್ದ ಸಾಂಸ್ಕೃತಿಕ ಘಟನೆಗಳನ್ನು ತಿಳಿಸಬಲ್ಲ ಐತಿಹಾಸಿಕ ನೆಲೆಯ ನೋಟವು ಅಗತ್ಯ. ಕಾಲಮಾನವನ್ನು ಭೂತ, ವರ್ತಮಾನ ಮತ್ತು ಭವಿಷ್ಯತ್ ಎಂದು ಅಳೆದುಗೊಂಡಿದ್ದರೂ ಭೂತಕಾಲಕ್ಕೆ ಸೇರಿದ ಚರಿತ್ರೆ ವರ್ತಮಾನ

ಕಾಲದೊಡನೆ ಗಟ್ಟಿಯಾದ ಸಂಬಂಧಗಳ ಎಳೆಗಳಿಂದ ಕೂಡಿಕೊಂಡಿರುವುತ್ತದೆ. ಚರಿತ್ರೆ ಕೇವಲ ಹಿಂದಿನದು ಮಾತ್ರವಲ್ಲ, ಅದು ತಕ್ಷಣದ ವಿಷಯವನ್ನು ಒಳಗೊಳ್ಳುತ್ತದೆ.

ಇತಿಹಾಸವನ್ನು ಸಂಶೋಧಿಸುವ ಆಧಾರದ ಮೇಲೆ ನಾವು ೨ ವಿಧಗಳಾಗಿ ವಿಂಗಡಿಸುತ್ತೇವೆ. ಒಂದು ಸಾಹಿತ್ಯಾಧಾರಗಳು ಮತ್ತೊಂದು ಪುರಾತತ್ವದ ಆಧಾರಗಳು. ಪುರಾತತ್ವದ ಆಧಾರಗಳಲ್ಲಿ ಗತಕಾಲದ ನೆಲೆಗಳು, ದೇವಸ್ಥಾನಗಳು ಮೊದಲಾದ ಸಂಬಂಧಿಸಿದ ಪರಿಕರಗಳನ್ನು, ಮೊದಲಾದವನ್ನು ಅವಲಂಬಿಸಿ ಚರಿತ್ರೆಯ ಕಟ್ಟಡವನ್ನು ಪುನರ ನಿರ್ಮಿಸುವ ಕೆಲಸ ಮಾಡುತ್ತಾರೆ.[೨೦] ಭೌತಿಕ ರೂಪದಲ್ಲಿರುವ ಪುರಾತತ್ವ ಅವಶೇಷಗಳಲ್ಲಿ ಗತ ಜೀವನದ ಬದುಕಿನ ಆಧಾರಗಳು ದೊರೆಯುತ್ತದೆ. ಆದರೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಶೇಷಗಳು ಸಮಾಜದ ಸ್ತರಗಳಲ್ಲಿ ಭದ್ರವಾಗಿ ಸೇರಿಕೊಂಡಿವೆ.

ಒಂದು ಸ್ಥಳದ ಸಂಸ್ಕೃತಿಯನ್ನು ಅಧ್ಯಯನ ಮಾಡಬೇಕಾದರೆ ಅಲ್ಲಿನ ನದಿ, ಬೆಟ್ಟ, ದೇವಸ್ಥಾನ, ಪುರಾಣ, ಊರು, ಜನರು, ಭಾಷೆಗಳು ಬಹಳ ಪ್ರಮುಖವಾಗಿರುತ್ತವೆ. ಹಿಂದಿನ ಕಾಲದ ಸಂಬಂಧವನ್ನು ಪ್ರಸ್ತುತ ಸಮಾಜದಲ್ಲಿ ನಿಂತು ನೋಡಿ, ಹೊಂದಿಕೆ ಮತ್ತು ಬಿಡುವಿಕೆಗಳನ್ನು ಗಮನಿಸುತ್ತಾ, ಭವಿಷ್ಯತ್‌ನ ಜೊತೆ ಆ ಸಂಬಂಧ ಉಳಿಯುವ ಬಗೆಯನ್ನು ಕುರಿತು ಆಲೋಚನೆಯನ್ನು ಮಾಡುವಂತಾಗಿದೆ. ಬಿಳಿಗಿರಿರಂಗನ ಬೆಟ್ಟವಿರುವ ಯಳಂದೂರನ್ನು ಹಂತ ಹಂತವಾಗಿ ಆಳ್ವಿಕೆ ಮಾಡಿದವರಲ್ಲಿ ಸುಪ್ರಸಿದ್ಧ ರಾಜಮನೆತನಗಳಾದ ಗಂಗ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಅರಸರು ಮತ್ತು ಮೈಸೂರು ಅರಸರು ಸೇರಿದ್ದಾರೆ. ಈ ಎಲ್ಲಾ ರಾಜ ಮನೆತನಗಳು ಯಳಂದೂರನ್ನು ಪ್ರತ್ಯೇಕ್ಷವಾಗಿ ಅಥವಾ ಪರೋಕ್ಷವಾಗಿ ಆಳಿದ್ದಾರೆ. ಪ್ರಖ್ಯಾತ ರಾಜವಂಶಗಳು ಆಳ್ವಿಕೆ ನಡೆಸುವಾಗ ಅವರ ಸಾಮಂತರು ಅಥವಾ ಪಾಳೆಗಾರರು ಈ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದರು.

ಕರ್ನಾಟಕ ಇತಿಹಾಸದ ಆರಂಭದಲ್ಲಿ ಮೌರ್ಯರು ಆಳ್ವಿಕೆ ನಡೆಸಿದರು. ಉತ್ತರ ಕರ್ನಾಟಕದ ಭಾಗದಲ್ಲಿ ಶಾತವಾಹನರು ಆಳುತ್ತಿದ್ದರು. ನಂತರ ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು, ಪಲ್ಲವರು, ಬನವಾಸಿಯ ಕದಂಬರು ಕರ್ನಾಟಕವನ್ನು ಆಳಿದರು. ಪಲ್ಲವರ ನೆರವಿನಿಂದ ಆಳುತ್ತಿದ್ದ ಗಂಗರು ಕೊನೆಗೆ ಅವರ ತೆಕ್ಕೆಯಿಂದ ಬಿಡಿಸಿಕೊಂಡು ಕರ್ನಾಟಕದ ರಾಜಮನೆತನಗಳ ಜೊತೆ ನಿಕಟ ಬಾಂಧವ್ಯವನ್ನು ಬೆಳೆಸಿಕೊಂಡು ಆಳತೊಡಗಿದರು. ಗಂಗರ ಮೊದಲ ರಾಜಧಾನಿ ಸ್ಕಂದಪುರ ಆಗಿದ್ದರೂ ಅನಂತರ ತಲಕಾಡಿಗೆ ಸ್ಥಳಾಂತರ ಮಾಡಿ ದಕ್ಷಿಣ ಕರ್ನಾಟಕದ ಬಹುಭಾಗವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಗಂಗರು ಮತಧರ್ಮಗಳ ವಿಷಯದಲ್ಲಿ ಉದಾರಿಗಳಾಗಿದ್ದುದರಿಂದ ಸುಮಾರು ೫ ಶತಮಾನಗಳ ಕಾಲ ಆತಂಕ ರಹಿತವಾಗಿ ಆಳಲು ಸಾಧ್ಯವಾಯಿತು.

ಕ್ರಿ.ಶ. ೧೦೦೪ರಲ್ಲಿ ಚೋಳರು ಗಂಗವಾಡಿಯನ್ನು ಆಕ್ರಮಿಸಿಕೊಂಡಾಗ, ಇದು ಗಂಗರ ಅವನತಿಗೆ ಕಾರಣವಾಯಿತು. ಚೋಳರು ಗಂಗರನ್ನು ಸೋಲಿಸಿ, ಗಂಗರ ಪ್ರದೇಶಗಳನ್ನು ವಶಪಡಿಸಿಕೊಂಡು ಕೆಲವು

ವರ್ಷಗಳ ಕಾಲ ತಮ್ಮ ಹಿಡಿತದಲ್ಲಿಟ್ಟುಕೊಂಡು ಆಡಳಿತ ನಡೆಸಿದರು. ಚೋಳರ ಕಾಲದಲ್ಲಿ ಎಳಂದೂರಿನ್ನು - 'ಇಳಮರದೂರು' ಎಂದು ಕರೆಯಲಾಗಿದೆ. ಮುಂದೆ ಹೊಯ್ಸಳ ವಿಷ್ಣುವರ್ಧನ ಚೋಳರಿಂದ ಈ ರಾಜ್ಯವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

ಉಮತ್ತೂರು ಪಾಳೇಗಾರರು

ಯಳಂದೂರಿಗೆ ೧೪ ಕಿ.ಮೀ. ದೂರದ ಉಮ್ಮತ್ತೂರ ನೆಲೆಯಾಗಿರಿಸಿಕೊಂಡು ಆಳಿದ ಉಮ್ಮತ್ತೂರು ಪಾಳೆಗಾರರು ವಿಜಯನಗರ ಸಾಮ್ರಾಜ್ಯದ ನೇರ ಆಡಳಿತಕ್ಕೆ ಒಳಪಟ್ಟಿದ್ದರೂ ಕೊನೆಯಲ್ಲಿ ಸ್ವಾತಂತ್ರವಾಗಲೂ ಪ್ರಯತ್ನಿಸಿದರು. ಮೈಸೂರು ಒಡೆಯರ ಮೊದಲಾದ ಸಮಕಾಲೀನ ಪಾಳೆಗಾರರನ್ನು ಅಧೀನದಲ್ಲಿರಿಸಕೊಂಡಿದ್ದ ಉಮ್ಮತ್ತೂರಿನ ಪಾಳೆಗಾರ ಹಾಗೂ ಅವನ ಬೆಂಬಲಿಗರನ್ನು ಕ್ರಿ.ಶ. ೧೬೧೫ರಲ್ಲಿ ಮೈಸೂರು ಹಾಗೂ ಕಳಲೆ ಮನೆತನದವರು ಸಂಪೂರ್ಣವಾಗಿ ಸೋಲಿಸಿ ಅವರ ಪ್ರದೇಶವನ್ನು ವಶಪಡಿಸಿಕೊಂಡಿದ್ದರಿಂದ ಉಮತ್ತೂರು ಪಾಳೆಪಟ್ಟು ಮೈಸೂರ ಸಂಸ್ಥಾನದಲ್ಲಿ ಸೇರಿಕೊಂಡಿತು.

ಮೈಸೂರು ಒಡೆಯರು

ವಿಜಯನಗರ ನಂತರ ಕೆಲವು ಪಾಳೆಯಗಾರರು ಸ್ವತಂತ್ರರಾದರು. ಅದರಲ್ಲಿ ಮೈಸೂರು ಒಡೆಯರ ಮನೆತನ ಪ್ರಮುಖವಾದುದು. ಮೈಸೂರಿನ ಒಡೆಯರ ವಂಶದ ರಾಜ ಒಡೆಯರು ಬಹುದೊಡ್ಡ ಅರಸ. ಅವನು ಕ್ರಿ.ಶ. ೧೫೭೮ರಲ್ಲಿ ಅಧಿಕಾರಕ್ಕೆ ಬಂದ ಆರಂಭದಲ್ಲಿ ಕೇವಲ ೩೩ ಹಳ್ಳಿ ಹಾಗೂ ೩೦೦ ಸೈನಿಕರಿಂದ ಕೂಡಿದ ಒಂದು ರಾಜ ಮನೆತನ. ರಾಜ ಒಡೆಯರ ಕಾವೇರಿ ಬಯಲಿನ ಪಾಳೆಗಾರರನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. "ಕ್ರಿ.ಶ. ೧೬೦೮ರಲ್ಲಿ ಇಮ್ಮಡಿ ರಾಮರಾಜನಾಯಕನಿಂದ ಯಳಂದೂರನ್ನು, ಕ್ರಿ.ಶ. ೧೬೧೪ರಲ್ಲಿ ಹದಿನಾಡು ನಂಜರಾಜಯ್ಯನಿಂದ ತೆರಕಣಾಂಬಿ, ಉಮ್ಮತ್ತೂರುಗಳನ್ನು ವಶಪಡಿಸಿಕೊಂಡನು.[೨೧] ಈ ವಂಶದ ಅನೇಕ ಅರಸರು ಯಳಂದೂರಿನ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದರು. ಮೈಸೂರು ಅರಸು ಮನೆತನದವರು ಬಿಳಿಗಿರಿರಂಗನ ಬೆಟ್ಟದೊಡನೆ ನೇರ ಸಂಪರ್ಕ ಇಟ್ಟುಕೊಂಡಿದ್ದರು. ತಾವು ಬೆಟ್ಟಕ್ಕೆ ಬಂದಾಗ ಉಳಿದುಕೊಳ್ಳಲೆಂದು ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೯೧೦ರಲ್ಲಿ ಕೇತೆ ದೇವರ ಗುಡಿಯ ಬಳಿ ವಿಶ್ರಾಂತಿ ಗೃಹವನ್ನು ಕಟ್ಟಿಸಿಕೊಂಡದ್ದರು. ಬೇಟೆಗಾಗಿ ದೇವರ ಆರಾಧನೆಗಾಗಿ ಅನೇಕ ಸಲ ಈ ವಂಶದ ಅರಸರು ಬೆಟ್ಟಕ್ಕೆ ಬಂದ ದಾಖಲೆಗಳಿವೆ.

ಪದಿನಾಡು

ಒಂದು ನಾಡು ಎಂದರೆ ೧೨,೦೦೦ ವರಹಗಳ ಹುಟ್ಟುವಳಿ ಇರುವ ಪ್ರದೇಶವಾಗಿರಬೇಕು. ಇದಕ್ಕೆ ಆಧಾರವಾಗಿ "ತೋಟೆನಾಡು ಪನ್ನಿಸರ್ಸಾಸಿರ" ಮತ್ತು ಪೂರ್ಣಯ್ಯಂ... ಯಳಂದೂರ ೧೨,೦೦೦ ಸಾವಿರ ವರಹದ ಗಡಿಯಂ ಕುಂಪಾಣೆ ಅಪ್ಪನೆಯಂ ಜಹಗೀರು ಪಡೆದು" ಎಂಬ ಮಾತುಗಳನ್ನು ಗಮನಿಸಬಹುದು.[೨೨]

೧೮೧೦ರಲ್ಲಿ ಕರ್ನಾಟಕ ಚರಿತ್ರೆಯನ್ನು ಪ್ರಕಟಿದ ಕರ್ನಲ್ ಮಾರ್ಕ್ಸ್‌ವಿಲ್ಸ್ ಪ್ರಕಾರ ಮೊದಲು ತಾಲೂಕುಗಳನ್ನು ಪರಗಣಗಳೆಂದು ಕರೆಯುತ್ತಿದ್ದರು. ಚಿಕ್ಕದೇವರಾಮನ ಕಾಲದಲ್ಲಿದ್ದ ಈ ಪರಗಣ ವ್ಯವಸ್ಥೆಯಲ್ಲಿ ಯಳಂದೂರು ಕೂಡಾ ಒಂದು ಪರಗಣವಾಗಿತ್ತು. ವರ್ಷಕ್ಕೆ ಹತ್ತು ಸಾವಿರ ಕಂಠಿರಾಯ ಪಗೋಡ ಆದಾಯ ಇದರಿಂದ ಬರುತ್ತಿತ್ತು.

ಗಂಗ-ಚೋಳರ ಶಾಸನಗಳಲ್ಲಿ ಹದಿನಾರು ಎಂದೂ, ಹೊಯ್ಸಳ ಹಾಗೂ ವಿಜಯನಗರ ಕಾಲದ ಶಾಸನಗಳಲ್ಲಿ ಹದಿನಾಡೆಂದೂ ಉಕ್ತವಾಗಿದೆ. ಈ ಪ್ರದೇಶ ಬಹುಶಃ ಪ್ರಾಚೀನ ಕಾಲದ ಪುನ್ನಾಡು-೧೦೦೦೦ ಎಂಬ ಹೇಳಿಕೆಯಿದೆ. ಈ ಹದಿನಾಡು ಬೇರೆ ಬೇರೆ ರಾಜವಂಶಾವಳಿಗಳ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೦೧೮ರ ಒಂದನೆಯ ರಾಜೇಂದ್ರಚೋಳನ ಕಾಲದ ಶಾಸನದಲ್ಲಿ ಹದಿನಾರು ೧೨ ಪ್ರಾಂತವನ್ನು ಕಲ್ನಾಡಾಗಿ ಕೊಟ್ಟಿದ್ದ ವಿಷಯವಿದೆ.[೨೩] ಹೊಯ್ಸಳರ ಕಾಲದಲ್ಲಿ ಇದನ್ನು ಹದಿನಾಡುವೇಂಟೆ ಎಂದು ಕರೆಯಲ್ಪಡುತ್ತಿತ್ತು.[೨೪]

ಪದಿನಾಡಿನ ಮೂಲವನ್ನು ಪದಿನಾಲ್ಕು ನಾಡಿನಿಂದ ಗುರುತಿಸಿಕೊಳ್ಳಬೇಕು. ಹದಿನಾಲ್ಕು ನಾಡುಗಳು ಸೇರಿ ಆದ ಪದಿನಾಡು ಎಂದು ಗುರುತಿಸಿಕೊಳ್ಳುತ್ತಿದ್ದವು. ಪ್ರತಿಯೊಂದು ನಾಡೂ ಪ್ರತ್ಯೇಕವಾದ ಆಡಳಿತ ಕೇಂದ್ರವಾಗಿದ್ದು, ಒಟ್ಟು ಜವಾಬ್ದಾರಿ ಕುಡುಗುನಾಡಿನ ತೆರಕಣಾಂಬಿಯ ರಾಜಧಾನಿಯಲ್ಲಿ ಆಳುತ್ತಿದ್ದ ದೊರೆಗಳ ಮೇಲಿರುತ್ತಿತ್ತು.[೨೫] ಆದರೆ ನಿಧಾನವಾಗಿ ಈ ವ್ಯವಸ್ಥೆ ಕರಗಿಹೋಗಿ ಸುಮಾರು ಕ್ರಿ.ಶ. ೧೪೦೦ ಬಳಿಕ ಪದಿನಾಡು ಮನೆತನದ ಆಡಳಿತ ವ್ಯಾಪ್ತಿ ಯಳಂದೂರು ಪ್ರದೇಶಕ್ಕೆ ಸೀಮಿತವಾಗಿತ್ತು. ಇಂದಿನ ಚಾಮರಾಜನಗರ ಹಾಗೂ ಕೊಳ್ಳೆಗಾಲ ತಾಲೂಕುಗಳ ನಡುವೆ ಇರುವ ಪ್ರದೇಶವೇ ಅಂದಿನ ಹದಿನಾಡಾಗಿತ್ತು.

ವಿಜಯನಗರದ ಅರಸರ ಸಾರ್ವಭೌಮತ್ವವನ್ನು ಹದಿನಾಡು ಪಾಳೆಗಾರರು ಒಪ್ಪಿಕೊಂಡಿದ್ದರು. ಈ ವಂಶದ ಹಲವು ರಾಜರು ವಿಜಯನಗರದ ಅರಸರ ಹೆಸರನ್ನೇ ಪಡೆದುಕೊಂಡಿದ್ದರು. ಇದಕ್ಕೆ ವಿಜಯನಗರದ ಅರಸರ ಅನುಮತಿಯೂ ಇತ್ತು. ವಿಜಯನಗರ ಅರಸ ವೆಂಕಟಪತಿರಾಯನ ಆಳ್ವಿಕೆಯ ಕಾಲದಲ್ಲಿ "ರಾಮರಾಜು ತಿರುಮಲರಾಜ ಜಯದೇವ ಮಹಾ ಅರಸುಗಳವರು ಹದಿನಾಡ ರಾಮಾ ರಾಜನಾಯಕನ ಮಗ ತಿರುಮಲನಾಯಕನಿಗೆ "ಮೂಗೂರು ಗ್ರಾಮ ಹಾಗೂ ಇತರ ೧೪ ಹಳ್ಳಿಗಳನ್ನು ಉಂಬಳಿಯಾಗಿ ಕೊಟ್ಟ ವಿಚಾರವನ್ನು ನಂಜನಗೂಡು ತಾಲ್ಲೂಕಿನ ಕ್ರಿ.ಶ. ೧೫೮೬ರ ಶಾಸನ ತಿಳಿಸುತ್ತದೆ. ಇದರಲ್ಲಿ 'ನೀನು ನಿನ್ನ ಮಗನನ್ನು ನಮ್ಮ ಹೆಸರಿನಿಂದ ಕರೆಯಬಹುದು" ಎಂದು ಹೇಳಿದೆ. ಈ ವಂಶದ ಮೊದಲ ದೊರೆ ಸಿಂದದೊಪ ಎಂದು ಗುರುತಿಸಲಾಗಿದೆ. ಸಿಂಗದೇಪನ ನಂತರ ರಾಮರಾಜನಾಯಕ, ಚನ್ನ, ತಿರುಮಲರಾಜ, ನಂಜರಾಜ ಮುದ್ದುರಾಜ ಮೊದಲಾದವರು, ಈ ಪ್ರಾಂತ್ಯದ ನಾಯಕರಾಗಿದ್ದರು.

ಹದಿನಾಡ ದೊರೆಗಳಿಗೂ ಮತ್ತು ಮೈಸೂರು ಒಡೆಯರರ ವಂಶದವರಿಗೂ ವೈವಾಹಿಕ ಸಂಬಂಧಗಳಿದ್ದವು. ರಣಧೀರ ಕಂಠೀರವ ನರಸರಾಜ ಒಡೆಯರ (ಕ್ರಿ.೧೬೩೮-೫೯) ಪತ್ನಿಯರಲ್ಲಿ ಯಳಂದೂರು ಕೆಂಪರಾಜಯ್ಯನವರ ಕುಮಾರಿ ನಂಜಮ್ಮಣಿಯೂ ಒಬ್ಬಳಾಗಿದ್ದಳು.[೨೬] ದೇವಚಂದ್ರ ಹೇಳಿದಂತೆ "ಎಳಹರಯದಲ್ಲಿಯೇ ಜೈನನಾಗಿದ್ದ ಅರಸನು ಕೆಲ ದಿನಗಳಿಂದ ಜಂಗಮರ ಪ್ರಭಾವದಿಂದ ಶಿವಭಕ್ತನಾಗಿ, ಯಳವಂದೂರ ಚನ್ನರಾಜನ ಪುತ್ರಿಯಾದ ಸದ್ಗುಣಾಭರಣೆ ಅಮೃತಮ್ಮನನ್ನು ದೊಡ್ಡದೇವರಾಜನು ಅರಸಿಯನ್ನಾಗಿ" ಮಾಡಿಕೊಂಡಿದ್ದನು.[೨೭] ದೊಡ್ಡದೇವರಾಜನು ರಾಜ್ಯದಲ್ಲಿ ಸಂಚರಿಸುತ್ತ ಎಳವಂದೂರಿಗೆ ಬಂದನು. ಚಿಕ್ಕದೇವರಾಜನಿಗೆ ಆತನ ಸೋದರಮಾವನು ತನ್ನ ಮಗಳಾದ ದೇವಾಜಮ್ಮಣಿಯನ್ನು ಧಾರಾಪೂರ್ವಕವಾಗಿ ಮದುವೆ ಮಾಡಿಕೊಟ್ಟಿದನು.[೨೮] ಚಿಕ್ಕದೇವರಾಜನಿಗೆ ಯಳಂದೂರಿನ ಚಾಮರಾಜಯ್ಯನ ಮಗಳು ಮುದ್ದಮ್ಮಣ್ಣಿ ಎಂಬ ಮತ್ತೊಬ್ಬ ಪತ್ನಿಯೂ ಇದ್ದಳು. ಕಳಲೆಯ ದೊರೆ ಕರಿಕಾಲ ಮಲ್ಲರಾಜನಿಗೂ ಹದಿನಾಡರಸರ ಜೊತೆಗೆ ಬಂಧುತ್ವದ ಸಂಬಂಧವಿತ್ತು. ಮರುಳಸಿದ್ದಕವಿ (ಕ್ರಿ.ಶ.೧೬೫೦) ತನ್ನ 'ಗುರಲಿಂಗ ಜಂಗಮ ಚರಿತ್ರೆ'ಯಲ್ಲಿ ಪದಿನಾಡನ್ನು ಪುಣ್ಯದ ಬೀಡೆಂದು ಹೊಗಳಿದ್ದಾನೆ. "ಪದಿನಾಡ ಪುಣ್ಯದ ಬೀಡೆಂದು ನಂಜರಾಜೇಂದ್ರ ಮುದದಿ ಸಿಂಹಾಸನಗಳ ಮಾಡಿದ" ಎಂದು ಶ್ಲಾಘಿಸಿದ್ದಾನೆ.[೨೯] ಕಂಠೀರವ ಮಹಾರಾಜ ಒಡೆಯರ (ಕ್ರಿ.ಶ.೧೭೦೪-೧೪) ಪತ್ನಿಯರಲ್ಲಿ ಯಳಂದೂರು ಲಿಂಗರಾಜೇ ಅರಸಿನವರ ಕುಮಾರಿ ಚಾಮಮ್ಮಣ್ಣಿಯೂ ಒಬ್ಬಳಾಗಿದ್ದಳು. ಹದಿನೇಳನೆಯ ಶತಮಾನದ ಮಧ್ಯಭಾಗದ ಬಳಿಕ ಯಳಂದೂರು, ಮೈಸೂರು ಒಡೆಯರ ಕೈಸೇರಿತು. ೧೮೦೭ರವರೆಗೂ ಈ ಪ್ರದೇಶ ಅವರ ಅಧೀನದಲ್ಲಿತ್ತು. ಅನಂತರದಲ್ಲಿ ಪೂರ್ಣಯ್ಯನಿಗೆ ಜಹಗೀರಾಗಿ ಕೊಟ್ಟಿದ್ದರಿಂದ ಮೈಸೂರು ಒಡೆಯರು ನೇರವಾಗಿ ಆಳದಿದ್ದರೂ ಅವರ ಅಧೀನದಲ್ಲಿದ್ದ ಪ್ರದೇಶವಾಗಿತ್ತು.

ದಿವಾನ್ ಪೂರ್ಣಯ್ಯ

ಯಳಂದೂರನ್ನು ಜಹಗೀರಾಗಿ ಪಡೆದು, ತನ್ಮೂಲಕ ಬಿಳಿಗಿರಿರಂಗನ ಬೆಟ್ಟದ ಆಡಳಿತವನ್ನು ಸುಮಾರು ೧೫೦ ವರ್ಷಗಳ ಕಾಲ ನಿರ್ವಹಿಸಿದ ದಿವಾನ ಪೂರ್ಣಯ್ಯ ಮತ್ತು ಅವರ ವಂಶಸ್ಥರನ್ನು ಕುರಿತು ಕೆಲವು ವಿಚಾರಗಳನ್ನು ಗಮನಿಸಬಹುದು. ಕೊಯಮತ್ತೂರು ಜಿಲ್ಲೆಯ ತಿರಕಂಬೂರು ಗ್ರಾಮದಲ್ಲಿ ಹುಟ್ಟಿದ ಪೂರ್ಣಯ್ಯ ಮಾಧ್ವಬ್ರಾಹ್ಮಣ ಪಂಗಡಕ್ಕೆ ಸೇರಿದವನು. ೧೧ನೆಯ ವಯಸ್ಸಿನಲ್ಲೇ ತಂದೆಯನ್ನು ಕಳೆದಕೊಂಡ ಪೂರ್ಣಯ್ಯ ಬಾಲ್ಯದ ಬದುಕು ಬಡತನದಲ್ಲಿ ಕಳೆದು. ವರ್ತಕನೊಬ್ಬನಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡು, ಯಜಮಾನನ ಜೊತೆ ಶ್ರೀರಂಗ ಪಟ್ಟಣ್ಣಕ್ಕೆ ಆಗಾಗ ಹೋಗಿ ಬರುತ್ತಿದ್ದ ಪೂರ್ಣಯ್ಯ ತೋರಿಸುತ್ತಿದ್ದ ಕುಶಾಗ್ರ ಬುದ್ಧಿಯನ್ನು ಮೆಚ್ಚಿ ಶ್ರೀರಂಗಪಟ್ಟಣದ ಅನ್ನದಾನಶೆಟ್ಟಿ, ತನ್ನಲ್ಲಿಯೇ ಕೆಲಸಕ್ಕೆ ಸೇರಿಸಿಕೊಂಡ, ಕೆಲಕಾಲದ ಬಳಿಕ ಆತ ಖಜಾನೆಯಲ್ಲಿ ಗುಮಾಸ್ತನಾದ.

ಕ್ರಮೇಣ ಹೈದರಾಲಿಯ ವಿಶ್ವಾಸಕ್ಕೂ ಪಾತ್ರನಾದ ಪೂರ್ಣಯ್ಯ, ಹೈದರಾಲಿ ಸಾವನ್ನಪ್ಪಿದಾಗ ಬೇರೆಡೆಯಿದ್ದ ಟಿಪ್ಪುವಿಗೆ ಈ ವಿಷಯವನ್ನು ಮುಟ್ಟಿಸಲು ಪೂರ್ಣಯ್ಯನು ಅನುಸರಿಸಿದ ತಿಳುವಳಿಕೆಯಿಂದ ಟೀಪುವಿಗೂ ಆಪ್ತನಾದನು. ಕ್ರಿ.ಶ. ೧೭೯೯ನೆಯ ಜುಲೈ ೪ ರಂದು ಪರಾಜಿತ ಪ್ರದೇಶದ ಒಂದು ಭಾಗವನ್ನು ಮೈಸೂರಿನ ರಾಜವಂಶೀಯರಿಗೆ ಹಂಚಿ ಉಳಿದ ಭಾಗಗಳಲ್ಲಿ, ಈಶಾನ್ಯ ಪ್ರದೇಶಗಳು ನಿಜಾಮನಿಗಿತ್ತು. ಕೊಳ್ಳೆಗಾಲ ತಾಲೂಕಿನ ಬಿಳಿಗಿರಿರಂಗನ ಬೆಟ್ಟ ಪ್ರದೇಶ ಬ್ರಿಟಿಷರ ಆಳ್ವಿಕೆಗೆ ಸೇರಿಹೋಯಿತು. ಚಾಮರಾಜನಗರ ಹಾಗೂ ಯಳಂದೂರು ತಾಲೂಕುಗಳ ಬೆಟ್ಟದ ಭಾಗ ಮೈಸೂರ ಅರಸರ ಅಧೀನದಲ್ಲಿತ್ತು.

ಬ್ರಿಟಿಷರು, ತಮ್ಮಗೆ ನಿಷ್ಠೆ ತೋರಿಸಿದ ಪೂರ್ಣಯ್ಯನನ್ನೇ ದಿವಾನ ಪದವಿಯಲ್ಲಿರಿಸಿ ರಾಜ್ಯದ ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡಿದರು. ಬ್ರಿಟಿಷರಿಗೆ ಬೇಕಾಗುವ ಅನೂಕುಲಗಳನ್ನು ಒದಗಿಸಿ ಕೊಡುತ್ತಾ ರಾಜ್ಯದ ಆದಾಯವನ್ನು ಹೆಚ್ಚಿಸಿದ ಪೂರ್ಣಯ್ಯನು ಆಡಳಿತದಲ್ಲಿ ದಕ್ಷತೆಯನ್ನು ತರಲು ಪ್ರಯತ್ನಿಸಿದನು. ದಿವಾನ್ ಗಿರಿಯನ್ನು ವಂಶಪಾರಂಪರ್ಯ ಹಕ್ಕಾಗಿ ತಮಗೆ ಕೊಡಬೇಕೆಂದು ಪೂರ್ಣಯ್ಯನು ಸಲ್ಲಿಸಿದ ಮನವಿಯನ್ನು, ಬ್ರಿಟಿಷರು ನಿರಾಕರಿಸಿ ಈ ಬೇಡಿಕೆಗೆ ಬದಲಾಗಿ ಜಹಗೀರಾಗಿ ತಾಲೂಕೊಂದನ್ನು ಕೊಡಲು ಒಪ್ಪಿ, ಅವರ ಆಯ್ಕೆಗೆ ಬಿಟ್ಟರು. ಅಲ್ಲದೆ ಈ ಬಳುವಳಿಯನ್ನು ಕೊಡಬೇಕೆಂದು ಮೈಸೂರಿನ ಮಹಾರಾಜರಿಗೆ ಸೂಚಿಸಿದರು. ಪೂರ್ಣಯ್ಯನ ಸ್ವಂತ ಆಯ್ಕೆಯಾದ ಯಳಂದೂರನ್ನು ೧೮೦೭ ಡಿಸೆಂಬರ್ ೨೭ರಂದು ವಿಶೇಷ ದರ್ಬಾರಿನಲ್ಲಿ ಕೊಡಲಾಯಿತು. ಮಹಾರಾಜರೇ ಸನ್ನದನ್ನು ಸ್ವಹಸ್ತದಿಂದ ನೀಡಿದ್ದರೂ ಅದರ ಹಿಂದೆ ಇದ್ದ ಒತ್ತಾಯ ಬ್ರಿಟಿಷರದ್ದೇ ಆಗಿದ್ದರಿಂದ ಯಳಂದೂರನ್ನು ಜಹಗೀರಿಯಾಗಿ ಕಂಪನಿ ಸರ್ಕಾರವೇ ನೀಡಿತೆನ್ನುವುದು ಖಚಿತ. ಆದರೆ ಬ್ರಿಟಿಷ್ ಸರ್ಕಾರವು ಈ ರೀತಿಯಲ್ಲಿ ಬೇರೆಯವರಿಗೆ ಜಹಗೀರನ್ನು ಕೊಡದ ಹಾಗೆ ರಾಜಮನೆತನವನ್ನು ನಿಯಂತ್ರಿಸಿತ್ತು.

ಮುಮ್ಮಡಿ ಕೃಷ್ಣರಾಜರು ಪ್ರಾಪ್ತ ವಯಸ್ಕನಾಗಿ ಪಟ್ಟಕ್ಕೇರಿದ ಕೆಲವು ತಿಂಗಳಲ್ಲಿ ಅವರ ಹಾಗೂ ಪೂರ್ಣಯ್ಯನ ನಡುವೆ ಹೆಚ್ಚಿನ ಭಿನ್ನಾಭಿಪ್ರಾಯವಿತ್ತು. ಹೀಗಾಗಿ ಪೂರ್ಣಯ್ಯನನ್ನು ೧೮೧೧ರ ಡಿಸೆಂಬರ್ ನಲ್ಲಿ ನಿವೃತ್ತಿಗೊಳಿಸಲಾಯಿತು.[೩೦]

ಯಳಂದೂರು ಜಹಗೀರನ್ನು ಐದು ವಿಭಾಗಗಳನ್ನಾಗಿ ಮಾಡಿ ಅದರ ಆದಾಯವನ್ನು ಪೂರ್ಣಯ್ಯನ ಇಬ್ಬರು ಹೆಂಡತಿಯರ ಎಲ್ಲಾ ಮಕ್ಕಳಿಗೂ ಬರುವಂತೆ ವ್ಯವಸ್ಥೆ ಮಾಡಲಾಗಿತ್ತು. ಜಹಗೀರುದಾರನಾದವನಿಗೆ ಸ್ವಲ್ಪ ಹೆಚ್ಚಿನ ಆದಾಯ ಸೇರುತ್ತಿತ್ತು. ಕ್ರಿ.ಶ. ೧೮೯೨-೯೩ರ ದಾಖಲೆಗಳ ಪ್ರಕಾರ ಇವರೆಲ್ಲರಿಗೂ ಸೇರಿ ಬರುತ್ತಿದ್ದ ಆದಾಯ ೩೯೯೨೫ ರೂಪಾಯಿಗಳಷ್ಟಿತ್ತು. ಜಹಗೀರಿಯ ಆದಾಯ ಮತ್ತು ವೆಚ್ಚಗಳನ್ನು ಕಾಲಕಾಲಕ್ಕೆ ರಾಜ್ಯದ ಲೆಕ್ಕಪತ್ರ ತನಿಖಾಧಿಕಾರಿಗಳಿಂದ ತನಿಖೆ ಮಾಡಿಸಬೇಕಾಗಿತ್ತು. ಪೂರ್ಣಯ್ಯನ ವಂಶಸ್ಥರಿಗೆ ಶ್ರೀರಂಗಪಟ್ಟಣ, ನಗುವನಹಳ್ಳಿ ತಿಪ್ಪೂರುಗಳಲ್ಲಿ ತೋಟಗಳಿದ್ದವು. ಸೇಲಂ ಜಿಲ್ಲೆಯ

ವೆಂಗರೈ, ಅಗರ ಮುಂತಾದ ಕೆರೆ ಭತ್ತದ ಗದ್ದೆಗಳಿದ್ದವು.[೩೧] ಯಳಂದೂರು ಜಹಗೀರುದಾರರಿಗೆ ಮೈಸೂರಿನಲ್ಲಿ ಬಂಗಲೆಯಿದ್ದು ಅವರ ಮನೆ ಇದ್ದ ರಸ್ತೆಗೆ ಆ ಕಾಲದಲ್ಲಿ ಯಳಂದೂರು ಜಾಗೀರುದಾರರ ರಸ್ತೆ ಎಂದು ಕರೆಯುತ್ತಿದ್ದರು.

ಅಡಿಟಿಪ್ಪಣಿಗಳು

೧. ರಘುಪತಿ ಕೆಮ್ತೂರ, ಸ್ಥಳನಾಮಾಧ್ಯಯನ ಇತ್ತೀಚಿನ ಒಲವುಗಳು ಒಂದು ಸ್ಥೂಲ ಚಿತ್ರ, ಹರತಿಸಿರಿ, ೧೯೮೭, ಪು.೪೦೮

೨. ಶಾಲಿನಿ ರಘುನಾಥ, ಸ್ಥಳನಾಮ, ಸ್ಥಳೀಯ ಚರಿತ್ರೆ ಪುರಾತತ್ವ ಮಾಲೆ, ಹಾನಗಲ್ಲು, ೨೦೦೮, ಪು.೨೬

೩. ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೫, ಶಾ.ಸಂ.೧೬, ಟಿ.ನರಸೀಪುರ, ಪು.೬೩

೪. ಮಲೆಯೂರು ದೇವಚಂದ್ರ ರಾಜಾವಳಿ ಕಥಾಸಾರ, ಪು.೨೪೭

೫. ಶ್ರೀನಿವಾಸ ರಂಗಚಾರ್ಯ ಟಿ., ಮೈಸೂರು ಮೆಯ್ಸಿರಿ ಅಥವಾ ನಾಲ್ವಡಿ ಕೃಷ್ಣರಾಜೇಂದ್ರ ಮಹಿಮೆ, ೧೯೩೩, ಪು.೭

೬. ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೪, ಪು.೨೭೦

೭. ಗುರುಲಿಂಗ ಜಂಗಮ ಚಾರಿತ್ರ, ೪ನೇ ಸಂಪುಟ, ಪು.೬೨

೮. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೪, ಚಾಮರಾಜನಗರ ೩೧೦, ಪು.೨೦೩

೯. ಅದೇ, ಸಂಪುಟ ೪, ಕೊಳ್ಳೇಗಾಲ, ೧೧೨, ಪು.೯೩

೧೦. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೪, ಚಾಮರಾಜನಗರ ೧೪೯, ಪು.೯೩

೧೧. ಮಂಜುಳ ಎಚ್.ಪಿ., ನಂಜನಗೂಡು ಸಾಂಸ್ಕೃತಿಕ ಅಧ್ಯಯನ, ಪು.೬೫

೧೨. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೪, ಯಳಂದೂರು, ಪು.೩೭೩

೧೩. ಅದೇ, ಪು.೩೮೨

೧೪. ನಾಗರಾಜ ಮೈ.ನಾ., ಬಿಳಿಗಿರಿರಂಗನಬೆಟ್ಟ, ಪು.೪೩-೪೪

೧೫. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೪, ಯಳಂದೂರು ೧೯೮, ಪು.೩೮೭

೧೬. ಅದೇ, ಪು.೩೮೭

೧೭. ನಾಗರಾಜ ಮೈ.ನಾ., ಬಿಳಿಗಿರಿರಂಗನಬೆಟ್ಟ, ಪು.೪೪

೧೮. ಅನ್ನಪೂರ್ಣ ಎಂ. ನಾಯಕ್, ರಾಜಪರಿವಾರದವರು, ಸಂಚಿಕೆ ೧, ಪು.೧೫

೧೯. ನಿರ್ಮಲರಾಜ, ಉಮ್ಮತ್ತೂರು ಪಾಳೇಗಾರರು ದಕ್ಷಿಣ ಕರ್ನಾಟಕದ ಅರಸುಮನೆತನಗಳು, ಪು.೪೧೮

೨೦. ಬಾಲಗೋಪಾಲ ಕೆ., ಪ್ರಾಚೀನ ಭಾರತ ಚರಿತ್ರೆ, ಕೊಸಂಬಿಯವರ ಚಿಂತನೆಗಳು, ಪು.೭

೨೧. ಶ್ರೀ ಮನ್ಮಹರಾಜರ ವಂಶಾವಳಿ, ಸರ್ಕಾರಿ ಮುದ್ರಣಾಲಯ, ಮೈಸೂರು, ೧೯೪೬, ಪು.೪೪

೨೨. ಸಣ್ಣಯ್ಯ ಬಿ.ಎಸ್., **ದೇವಚಂದ್ರ ರಾಜಾವಳಿ ಕಥಾಸಾರ**, ಸಂಪುಟ ೧, ಪು.೩೧೧

೨೩. **ಎಪಿಗ್ರಾಫಿಯಾ ಕರ್ನಾಟಿಕಾ** ಸಂಪುಟ ೪, ಪು.೧೪೬

೨೪. ಕೃಷ್ಣವೇಣಿ, **ಸ್ಕಂದಗಿರಿ**, ಪು.೪೫

೨೫. ಮಂಜುಳಾ ಎಚ್.ಪಿ., **ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ**, ಪು.೬೩

೨೬. **ಶ್ರೀ ಮನ್ಮಹಾರಾಜರ ವಂಶಾವಳಿ**, ಸರ್ಕಾರಿ ಮುದ್ರಣಾಲಯ, ಮೈಸೂರು, ೧೯೧೬, ಪು.೬೩

೨೭. ಸಣ್ಣಯ್ಯ ಬಿ.ಎಸ್.(ಅನು), **ದೇವಚಂದ್ರ, ರಾಜಾವಳಿ ಕಥಾಸಾರ**, ಪು.೩೩೫

೨೮. ಅದೇ, ಪು.೩೩೭

೨೯. ಮರುಳಸಿದ್ದ, **ಗುರುಲಿಂಗ ಜಂಗಮ ಚಾರಿತ್ರಿಕ**, ಪು.೬೩

೩೦. ತಿಪ್ಪೇರುದ್ರಸ್ವಾಮಿ ಎಸ್., **ಕರ್ನಾಟಕ ಸಂಸ್ಕೃತಿ**, ೧೯೭೪, ಪು.೧೭೧

೩೧. ಮಾಹಿತಿ ಮೂಲ ಸಾಮಾನ್ಯ ೩೪೮/೧೮೬೩ ೬೪ ದಿನಾಂಕ ೨೩.೧೦.೧೮೬೩ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಅಧ್ಯಾಯ ೪

ದೇವಾಲಯ ಮತ್ತು ಮೂರ್ತಿಶಿಲ್ಪ ಕಲೆ

೪

ದೇವಾಲಯ ಮತ್ತು ಮೂರ್ತಿಶಿಲ್ಪಕಲೆ

ಧರ್ಮ ಕಾರ್ಯಗಳಿಗೆ ಒದಗಬಹುದಾದ ಕಟ್ಟಡ ವಿನ್ಯಾಸವನ್ನು ಧಾರ್ಮಿಕ ವಾಸ್ತುಶಿಲ್ಪ ಎಂದು ಗುರುತಿಸಬಹುದು. ಧರ್ಮಕ್ಕೆ ವಾಸ್ತವವಾಗಿ ಇಂತಹ ವಾಸ್ತುಶಿಲ್ಪದ ಅಗತ್ಯವಿರುವುದಿಲ್ಲ. ಆದರೆ ಧಾರ್ಮಿಕ ಕಾರ್ಯಗಳನ್ನು ಆಚರಿಸುವ ಸಲುವಾಗಿ ಪ್ರತಿಯೊಂದು ಧರ್ಮದವರೂ ತಮ್ಮದೇಯಾದ ಕಟ್ಟಡಗಳನ್ನು ಕಟ್ಟಿಕೊಂಡಿರುತ್ತಾರೆ. ಅದು ಆ ಜನರ ದೈವ ಹಾಗೂ ಧರ್ಮದ ತಿಳುವಳಿಕೆ ನೀಡುತ್ತದೆ. ದೈವಕಲ್ಪನೆ ಪೂಜಾವಿಧಾನದ ತಂತ್ರ ಬೆಳೆದಂತೆಲ್ಲಾ ವಾಸ್ತುಶಿಲ್ಪವೂ ವಿಕಾಸಗೊಳ್ಳುತ್ತದೆ. ಒಂದು ಪ್ರದೇಶದ ವಾಸ್ತುಕಲೆಯು, ಆ ವಾಸ್ತು ನಿರ್ಮಾಣಕ್ಕೆ ಕಾರಣವಾದ ಜನತೆಯ ಮನೋ ಧರ್ಮಗಳನ್ನು, ಮನೋವಿಲಾಸಗಳನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ ಸಾಮಾಜಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ವಾಸ್ತು ನಿರ್ಮಿತಿಯು ಮೈ ತಳೆಯುತ್ತವೆ. ಆದ್ದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ವಾಸ್ತುಕಲೆಯ ಮಹತ್ವದ ಪಾತ್ರವಹಿಸುತ್ತದೆ.

ರಂಗನಾಥಸ್ವಾಮಿ ಆಲಯದ ಕಾಲವನ್ನು ತಿಳಿಯಲು ದೇವಾಲಯದಲ್ಲಿ ನವರಾತ್ರಿ ಸಮಯದಲ್ಲಿ ಸೇವೆ ನಡೆಸಲು ಹದಿನಾಡಿನ ಮುದ್ದುರಾಜನಿತ್ತ ಪದುವಟ್ಟಿನ ವಿವರಗಳಿರುವ ೧೬೬೭ರ ತಾಮ್ರಶಾಸನ ಮಾತ್ರ ಆಧಾರವಾಗಿದೆ. ಈ ದೇವಾಲಯದ ನಿರ್ಮಾಣ ಕಾಲವನ್ನು, ಅದರ ವಾಸ್ತು ಮತ್ತು ಮೂರ್ತಿ ಶಿಲ್ಪದ ಆಧಾರದಿಂದ ಮಾತ್ರ ಗುರುತಿಸಬೇಕಾಗಿದೆ.

ರಂಗನಾಥಸ್ವಾಮಿ ದೇವಾಲಯ

ಪೂರ್ವಾಭಿಮುಖವಾದ ರಂಗನಾಥಸ್ವಾಮಿ ದೇವಾಲಯದ ಮೂಲನಕ್ಷೆಯ ಪ್ರಕಾರ, ಗರ್ಭಗೃಹ ಮತ್ತು ಸುಖನಾಸಿಗಳನ್ನು ತಳಪಾಯದಲ್ಲಿ ವಿನ್ಯಾಸಗೊಳಿಸಲಾಗಿದೆ. ಆ ವಿನ್ಯಾಸಕ್ಕೆ ದೇವಾಲಯ ನಿರ್ಮಾಣದಲ್ಲಿ ಧಕ್ಕೆ ಬಂದಿಲ್ಲ. ದೇವಾಲಯದ ಮೂಲ ವಾಸ್ತುವಿನಲ್ಲಿ, ನವರಂಗವಾಗಲಿ, ಮುಖಮಂಟಪವಾಗಲಿ ಇರಲಿಲ್ಲ. ಕಲ್ಯಾಣ ಚಾಲುಕ್ಯ ಹೊಯ್ಸಳ ಮತ್ತು ವಿಜಯನಗರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ನವರಂಗ ಮತ್ತು ಮುಖ ಮಂಟಪಗಳಿವೆ. ಆದರೆ ಆರಂಭದಲ್ಲಿ ರಂಗನಾಥಸ್ವಾಮಿ ದೇವಾಲಯದಲ್ಲಿ ನೇರವಾಗಿ ಸುಖನಾಸಿಗೆ ಪ್ರವೇಶ ಮಾಡುವ ವ್ಯವಸ್ಥೆಯಿತ್ತು.

ಮುಖಮಂಟಪ

ರಂಗನಾಥಸ್ವಾಮಿ ದೇವಾಲಯದ ಮೂಲನಕ್ಷೆಯಲ್ಲಿಲ್ಲದ ತೆರೆದ ಮುಖಮಂಟಪವನ್ನು ತದನಂತರದ ಕಾಲದಲ್ಲಿ ಕಟ್ಟಲಾಗಿದೆ. ಆಲಯದ ನವರಂಗವನ್ನು ವಿಸ್ತರಿಸಿದ ಬಳಿಕ ಮುಖಮಂಟಪದ ನಿರ್ಮಾಣವಾಗಿದೆ ಎನ್ನುವುದು ನವರಂಗದ ಅಧಿಷ್ಠಾನದ ವ್ಯತ್ಯಾಸದಿಂದ ಗೊತ್ತಾಗುತ್ತದೆ. ನವರಂಗದ ಹೊರೆಗೋಡೆಯ ಅರೆಗಂಭಗಳನ್ನು ಬಳಸಿಕೊಂಡು ಮುಂದೆ ನಾಲ್ಕು ಕಂಬಗಳನ್ನಿರಿಸಿ ೨೪ ಅಡಿ ಅಗಲ ೮ ೧/೨ ಅಡಿ ಉದ್ದವಿರುವ ಮುಖಮಂಟಪವನ್ನು ನಿರ್ಮಿಸಲಾಗಿದೆ. ಒಂದು ಕಾಲದಲ್ಲಿ ತೆರೆದ ಮುಖಮಂಟಪವಾಗಿದ್ದರೂ ತರುವಾಯ ೨ ಪಾಶ್ವಗಳನ್ನು ಮುಚ್ಚಲಾಗಿದೆ. ಇಲ್ಲಿರುವ ಕಂಬಗಳು ಚೌಕಾಕಾರ, ಅಷ್ಟಕೋನ, ಚೌಕಾಕಾರ-ಅಷ್ಟಕೋನಾಕಾರಗಳಲ್ಲಿದ್ದು, ಮೇಲ್ಭಾಗದಲ್ಲಿ ಚೌಕಾಕಾರವಾಗಿದೆ. ಮುಂಭಾಗದ ಮೂರು ಕಂಬಗಳ ಕೆಳ ಚೌಕಾಕಾರದಲ್ಲಿ ಕೆಲವು ಉಬ್ಬು ಕೆತ್ತನೆಗಳಿವೆ. ಹಂಸ, ಯಾಳಿ, ಆಂಜನೇಯ, ವೀರಾಸನದಲ್ಲಿರುವ ಗರುಡ ವಾದ್ಯನುಡಿಸುತ್ತಿರುವ ಸ್ತ್ರೀಯರ ಉಬ್ಬುಕೆತ್ತನೆ ಶಿಲ್ಪಗಳಿವೆ. ಈ ಎಲ್ಲಾ ಕಂಬಗಳಿಗೂ ತೈಲವರ್ಣವನ್ನು ಲೇಪಿಸಿರುವುದರಿಂದ ಶಿಲ್ಪದ ಮುಖಭಾವಗಳು ಅಸ್ಪಷ್ಟವಾಗಿವೆ.

ದೇವಾಲಯದ ಮುಖಮಂಟಪ ದ್ವಾರದ ಇಕ್ಕೆಲಗಳಲ್ಲಿ ಕ್ರಿ.ಶ. ೨೦೦೧ರಲ್ಲಿ ಮಾಡಿಸಿದ ದ್ವಾರಪಾಲಕರ ಗಾರೆಶಿಲ್ಪಗಳಿವೆ. ನವರಂಗದಲ್ಲಿ ದ್ವಾರಪಾಲಕರ ಶಿಲಾವಿಗ್ರಹಗಳಿದ್ದರೂ ಹೊರಭಾಗದಲ್ಲಿಯೂ ದ್ವಾರ ಪಾಲಕರ ವರ್ಣರಂಜಿತ ಗಾರೆಶಿಲ್ಪಗಳನ್ನು ಅಳವಡಿಸಿದ್ದಾರೆ. ಮುಖಮಂಟಪದ ಎರಡು ಪಾರ್ಶ್ವಗಳ ಭಿತ್ತಿಗಳಲ್ಲಿ ಒಂದೆಡೆ ಗರುಡು, ಮತ್ತೊಂದೆಡೆ ಹನುಮಂತನ ವರ್ಣಚಿತ್ರಗಳಿವೆ.

ರಂಗನಾಥಸ್ವಾಮಿ ಆಲಯದ ಹೊರದ್ವಾರದ ಚೌಕಟ್ಟಿಗಿರುವ ಹಿತ್ತಾಳೆಯ ಕವಚಕ್ಕೆ ಬೆಳ್ಳಿಬಣ್ಣ ಲೇಪಿಸಿರುವುದರಿಂದ ಹಿತ್ತಾಳೆಯ ಸೊಬಗೂ ಮರೆಯಾಗಿದೆ. ಇಕ್ಕೆಲಗಳಲ್ಲಿ ಮಾನವಾಕೃತಿಗಳುಳ್ಳ ತಗಡುಗಳನ್ನು ಹಾಕಲಾಗಿದೆ. ಕೆಳಭಾಗದಲ್ಲಿ ದ್ವಾರಪಾಲಕರ ಕೆತ್ತನೆಯಿದೆ. ದ್ವಾರದ ಚೌಕಟ್ಟಿನ ಇಕ್ಕೆಲದಲ್ಲಿ ಚಿಕ್ಕದಾಗಿ ನಾಮಗಳನ್ನು ಕೆತ್ತಿದೆ. ದ್ವಾರದ ಹೊಸ್ತಿಲನ್ನು ಬೇರೆಡೆಯಿಂದ ತಂದು ಹಾಕಿದಂತಿದೆ. ಇದು ನವರಂಗವನ್ನು ವಿಸ್ತರಿಸುವ ಪೂರ್ವದ ದ್ವಾರದಲ್ಲಿದ್ದ ಶಿಲೆ ಆಗಿರಬಹುದು. ಕೆಲವು ಆಲಂಕಾರಿಕ ಕೆತ್ತನೆಗಳುಳ್ಳ ಅಸಮವಾಗಿರುವ ಹೊಸ್ತಿಲ ಶಿಲೆಗೆ ಮರದ ಹೊಸ್ತಿಲನ್ನು ಸೇರಿಸಿದ್ದಾರೆ.

ನವರಂಗ

ಭಗವಂತನಿಗಾಗಿ ಸಂಗೀತವನ್ನು ಹಾಡಲು ಮತ್ತು ನೃತ್ಯವನ್ನು ಮಾಡಲೆಂದು ನಿರ್ಮಿಸಿದ್ದರಿಂದ ನೃತ್ಯ ಮಂಟಪ ಎಂದು ನವರಂಗವನ್ನು ಗುರುತಿಸಿದ್ದಾರೆ.[೧] ಈ ದೇವಾಲಯವು ಆಯತಾಕಾರವಾಗಿದ್ದು, ಅನೇಕ ಕಂಬಗಳಿಂದ ಕೂಡಿರುವ ನವರಂಗವನ್ನು ಕಾಲಘಟ್ಟಗಳಲ್ಲಿ ವಿಸ್ತರಿಸಲಾಗಿದೆ. ಇಲ್ಲಿನ ಕಂಬಗಳನ್ನು

ಸೂಕ್ಷ್ಮವಾಗಿ ಅವಲೋಕಿಸಿದಾಗ, ಮೊದಲಿನ ಮೂರು ಕಂಬಗಳು ಇನ್ನುಳಿದ ಕಂಬಗಳಿಗಿಂತ ಪುರಾತನವಾಗಿದ್ದು, ಅವುಗಳ ಸ್ವರೂಪದಲ್ಲಿಯೂ ವ್ಯತ್ಯಾಸಗಳಿವೆ. ಮೂರನೆಯ ಕಂಬದ ಬಳಿ ಮಧ್ಯೆ ಗಾರೆಹಾಕಿ ಇನ್ನೊಂದು ಕಂಬವನ್ನಿರಿಸಿ, ಅಗಲ ಮಾಡಿಕೊಂಡು ಮುಂದಕ್ಕೆ ಇನ್ನು ಎರಡು ಕಂಬಗಳನ್ನು ನಿಲ್ಲಿಸಿ ನವರಂಗವನ್ನು ವಿಸ್ತರಿಸಲಾಗಿದೆ. ಮೂರನೆಯ ಕಂಬಗಳ ಬಳಿ ಮೇಲ್ಭಾಗದಲ್ಲಿ ಮೊದಲಿಗೆ ಬಾಗಿಲನ್ನು ನಿಲ್ಲಿಸಲು ಮಾಡಿರುವ ರಂಧ್ರಗಳಿವೆ. ನೆಲದ ಭಾಗವನ್ನು ಅಮೃತಶಿಲೆಯ ಹಾಸುಗಲ್ಲುಗಳಿಂದ ಮುಚ್ಚಿರುವುದರಿಂದ ಅಲ್ಲಿ ಬಾಗಿಲು ನಿಲ್ಲಿಸಿದ್ದ ಗುರುತುಗಳು ಕಾಣದಿದ್ದರು, ಈ ಮೂರನೇ ಕಂಬದವರೆಗೆ ಇದ್ದ ನವರಂಗವನ್ನು ಅನಂತರದಲ್ಲಿ ವಿಸ್ತರಿಸುವುದು ಕಂಡುಬರುತ್ತದೆ.

ಸುಖನಾಸಿಯಿಂದ ಮೂರನೆಯ ಕಂಬದವರೆಗೆ ಸುಮಾರು ೧೮ ಅಡಿಯಿದ್ದುದನ್ನು ನಂತರ ಮುಂದಕ್ಕೆ ೨೬ ಅಡಿ ಅಗಲಕ್ಕೆ ವಿಸ್ತರಿಸಲಾಗಿದೆ. ಈ ನವರಂಗದ ಎಡ ಬಲಪಾರ್ಶ್ವಗಳಲ್ಲಿರುವ ಅರೆಗಂಬಗಳು ಒಂದು ಕಾಲದಲ್ಲಿ ತೆರೆದ ಕಂಬಗಳಾಗಿದ್ದವು. ಅನಂತರದಲ್ಲಿ ಅದನ್ನು ಮುಚ್ಚಿ, ಮೇಲ್ಛಾಣಿಯನ್ನು ಸಹ ಮುಂದಕ್ಕೆ ಚಾಚಿಕೊಂಡು ದೇವಾಲಯವನ್ನು ಭದ್ರವಾಗಿರುವಂತೆ ಸಂಪೂರ್ಣವಾಗಿ ಮುಚ್ಚಲಾಗಿದೆ. ಕಂಬಗಳ ಮೇಲ್ಭಾಗದಲ್ಲಿ, ಬೋದಿಗೆಯಲ್ಲಿ ಎರಡು ಕಡೆಯೂ ಸಣ್ಣ ಅಲಂಕಾರಿಕ ಗುರುತುಗಳಿವೆ.

ನವರಂಗದಲ್ಲಿ ಪ್ರತಿಸಾಲಿನ ಐದೈದು ಕಂಬಗಳಿಂದಾಗಿ ಮೂರು ಅಂಕಣಗಳಾಗಿ ವಿಭಜಿತಗೊಂಡಿದೆ. ನವರಂಗದ ಮೊದಲ ಮೂರು ಕಂಬಗಳು ಕೊನೆಗೊಳ್ಳುವ ಎಡ, ಬಲಪಾರ್ಶ್ವಗಳಲ್ಲಿ ಒಂದೊಂದು ಸಣ್ಣ ದೇವಕೋಷ್ಠಕಗಳಿವೆ. ಅವುಗಳಲ್ಲಿ ಗರುಡ ಹಾಗೂ ಅಂಜನೇಯರ ಸಾಧಾರಣವಾದ ಉಬ್ಬುಶಿಲ್ಪಗಳಿವೆ. ನವರಂಗದ ಎಡಪಾರ್ಶ್ವದಲ್ಲಿ ಎರಡನೆ ಕಂಬದ ನೇರಕ್ಕೆ, ದೇವಿ ಆಲಯಕ್ಕೆ ಹೋಗಲು ದ್ವಾರವಿದೆ. ರಂಗನಾಥ ದೇವಾಲಯದ ಒಳಭಾಗದ ನೆಲಮಟ್ಟವು, ದೇವಿ ಆಲಯದ ಒಳಭಾಗದ ನೆಲಮಟ್ಟಕ್ಕಿಂತ ಎತ್ತರದಲ್ಲಿದೆ. ಆದ್ದರಿಂದ ರಂಗನಾಥ ಆಲಯದ ನವರಂಗದಿಂದ ದೇವಿ ಆಲಯದ ನವರಂಗಕ್ಕೆ ಮೂರು ಮೆಟ್ಟಿಲು ಇಳಿದು ಬರಬೇಕಾಗುತ್ತದೆ. ಇಲ್ಲಿಗೂ ಸಾಧಾರಣವಾದ ಕಾಷ್ಠಶಿಲ್ಪದ ಬಾಗಿಲನ್ನು ಹಾಕಲಾಗಿದೆ, ಈ ಬಾಗಿಲುವಾಡದ ಮೇಲ್ಭಾಗದಲ್ಲಿ ಅಂಬೆಗಾಲು ಕೃಷ್ಣನ ಉಬ್ಬುಕೆತ್ತನೆಯ ಶಿಲ್ಪವಿದೆ. ರಂಗನಾಥಸ್ವಾಮಿ ಆಲಯಕ್ಕೆ ಬಂದ ಭಕ್ತರು ದರ್ಶನಾಂತರ ಈ ದ್ವಾರದ ಮುಖಾಂತರ ದೇವಿ ಆಲಯಕ್ಕೆ ತೆರಳಲು ಹಾಗೂ ದೇವಾಲಯದ ನೌಕರರ ಓಡಾಟಕ್ಕೂ ಇದು ಅನುಕೂಲವಾಗಿದೆ. ನವರಂಗದ ಮೊದಲನೆಯ ಹಾಗೂ ಎರಡನೆಯ ಕಂಬಗಳ ನಡುವಣ ಎಡ ಮತ್ತು ಬಲ ಪಾರ್ಶ್ವಗಳ ಭಿತ್ತಿಯಲ್ಲಿರುವ ಸಣ್ಣಗೂಡುಗಳಲ್ಲಿ ವಿಷ್ಣುವಿನ ಪರಿವಾರ ದೇವತೆಯಾದ ಹನುಮಂತನ ಬೇರೆ ಬೇರೆ ಭಂಗಿಯ ಉಬ್ಬು ಕೆತ್ತನೆಯ ಶಿಲ್ಪಗಳಿವೆ. ನವರಂಗದ ಎಲ್ಲಾ ಕಂಬಗಳಿಗೂ ತೈಲ ವರ್ಣವನ್ನು ಲೇಪಿಸಲಾಗಿದೆ.

ಸುಖನಾಸಿ

ಸಾಮಾನ್ಯವಾಗಿ ನವರಂಗ ಹಾಗು ಗರ್ಭಗುಡಿಯ ನಡುವೆ, ಸುಖನಾಸಿ ಅಥವಾ ಅರ್ಧಮಂಟಪವಿರುತ್ತದೆ. ರಂಗನಾಥಸ್ವಾಮಿಯ ಆಲಯದ ಸುಖವಾಸಿಯಲ್ಲಿ ಎರಡು ಭಾಗಗಳಿವೆ. ಗರ್ಭಗುಡಿಗಿಂತ ಚಿಕ್ಕದಾಗಿರುವ ಈ ಸುಖನಾಸಿಗಳ ನೆಲ ಹಾಗೂ ಒಳಭಿತ್ತಿಯ ಭಾಗವನ್ನು ಅಮೃತಶಿಲೆಯಿಂದ ನವೀಕರಿಸಿರುವುದರಿಂದ ಒಳಗೋಡೆಯ ಮೂಲಸ್ವರೂಪವನ್ನು ಗುರುತಿಸಲು ಸಾಧ್ಯವಾಗದು. ದ್ವಾರದ ಮೇಲೆ ಹಾಗೂ ಛಾವಣಿಯ ನಡುವೆ ಅಂತರ ಕಡಿಮೆ ಇರುವುದರಿಂದ ಮೂಲ ವಾಸ್ತುವಿನಲ್ಲಿ ಸುಖನಾಸಿ ಮತ್ತು ಗರ್ಭಗುಡಿಯ ಲಲಾಟ ಬಿಂಬಗಳಲ್ಲಿ ಕೆತ್ತನೆಗಳಿಗೆ ಅಕವಾಶ ಮಾಡಿಕೊಳ್ಳಲಾಗಿತ್ತೋ ಅಥವಾ ಸರಳವಾಗಿತ್ತೇ ಎನ್ನುವುದು ಈಗಿನ ಸ್ವರೂಪದಿಂದ ತಿಳಿಯುವುದು ಕಷ್ಟ.

ಗರ್ಭಗೃಹ ಮತ್ತು ಮೂಲ ವಿಗ್ರಹ

ರಂಗನಾಥಸ್ವಾಮಿ ದೇವಾಲಯದ ಮುಖ್ಯ ಭಾಗದಿಂದ ಗರ್ಭಗೃಹ ಚಿಕ್ಕದಾಗಿ ಚೌಕಾಕಾರದಲ್ಲಿದ್ದು, ಸರಳವಾದ ರಚನೆಯಿಂದ ಕೂಡಿದೆ. ಅದರ ಮೇಲಿನ ಭುವನೇಶ್ವರಿಯೂ ತುಂಬಾ ಸರಳವಾಗಿದೆ. ಗರ್ಭಗುಡಿಯ ಗ್ರಾನೈಟ್ ಶಿಲೆಯ ದ್ವಾರದಲ್ಲಿ ಯಾವ ಕೆತ್ತನೆಯೂ ಇಲ್ಲ. ಗರ್ಭಗೃಹದ ನೆಲಭಾಗ ಹಾಗೂ ಅಂತರ್ಭಿತ್ತಿಗಳನ್ನು ಅಮೃತಶಿಲೆಯಿಂದ ನವೀಕರಿಸಿರುವುದರಿಂದ ಮೂಲವಾಸ್ತುವಿನ ಯಾವ ಸ್ವರೂಪವೂ ಗೋಚರವಾಗುವುದಿಲ್ಲ. ಬಿಳಿಗಿರಿರಂಗನಬೆಟ್ಟ ಮತ್ತು ಅದರ ಸುತ್ತಮುತ್ತ ಈ ರೀತಿಯ ಶಿಲೆ ಸಿಗುವುದರಿಂದ, ಈ ಪರಿಸರದ ಶಿಲೆಯನ್ನೇ ಶಿಲ್ಪ ಕೆತ್ತನೆಗೆ ಬಳಸಿಕೊಂಡಿದ್ದಾರೆ ಎನ್ನಬಹುದು.

ಸಮಭಂಗದಲ್ಲಿ ನಿಂತಿರುವ ಸೌಮ್ಯ ಶಾಂತ ಮೂರ್ತಿಯಾದ ರಂಗನಾಥಸ್ವಾಮಿಯ ಮೂಲ ವಿಗ್ರಹದ ಮುಖದ ಭಾವ, ಕಣ್ಣು, ಮೂಗು, ಬಾಯಿ, ಕೆನ್ನೆ ಗಲ್ಲಗಳನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಸ್ಥಾನಿಕ ಮೂರ್ತಿಯ ಮೇಲುಗೈಗಳಲ್ಲಿ ಶಂಖ, ಚಕ್ರಗಳಿದ್ದು, ಅವುಗಳನ್ನು ಕೈಗಳಲ್ಲಿರಿಸಿದ ಭಂಗಿ ಸಮರ್ಪಕವಾಗಿಲ್ಲ. ವರದ ಹಸ್ತವಾಗಿರುವ ಮುಂದಿನ ಬಲಗೈಯ ಹೆಬ್ಬೆರಳು ಬಹಳ ದಪ್ಪವಾಗಿದ್ದು, ಅಂಗೈನ ಭಾಗ ಸೀಳಿಕೊಂಡಂತೆ ಕೆತ್ತಲಾಗಿದೆ. ಉಳಿದ ನಾಲ್ಕು ಬೆರಳುಗಳು ಸರಿಯಾದ ಪ್ರಮಾಣದಲ್ಲಿವೆ. ಆದರೆ ಅಂಗೈಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನುರಿತ ಶಿಲ್ಪಿಯ ಕೆತ್ತನೆಯಂತೆ ಕಾಣುವುದಿಲ್ಲ. ಅದೇ ರೀತಿ ಎಡಗೈಯನ್ನು ತೊಡೆಯ ಮೇಲಿರುವಂತೆ ಅಥವಾ ಕಟಹಸ್ತದಂತೆ ಕೆತ್ತಲಾಗಿದ್ದರೂ, ಇದರ ಮುಂಗೈ ಹಾಗೂ ಬೆರಳುಗಳು ಅಸಮ ಪ್ರಮಾಣದಲ್ಲಿವೆ. ಮುಂಗೈ ಭಾಗವನ್ನು ಅಸಹಜವಾಗಿ ತೊಡೆಯ ಮೇಲಿರಿಸಿದಂತಿದೆ. ಈ ಕೈ ಹೆಬ್ಬೆರಳು ಹಾಗೂ ಉಳಿದ ಬೆರಳುಗಳು ನೀಳವಾಗಿದ್ದು, ಮೇಲಿನ ಎರಡು ಕೈಗಳಿಗೆ ಹೋಲಿಸಿದರೆ, ಕೆಳಗಿನ ಈ ಎರಡು ಕೈಗಳ ಕೆತ್ತನೆಗಳು ಅಸಮ ಪ್ರಮಾಣದಲ್ಲಿವೆ. ಕಣ್ಣಿನ ನೇರಕ್ಕೆ ಮೇಲ್ಭಾಗದಿಂದ ಪ್ರಭಾವಳಿಯಂತೆ ಕಾಣಬೇಕಾಗಿದ್ದ ಕೆತ್ತನೆ ಮೂಲ ವಿಗ್ರಹದಲ್ಲಿಲ್ಲ. ಮೇಲಿನೆರಡು

ಕೈಗಳ ನಡುವಿನ ಭಾಗ ಮತ್ತು ತಲೆಯ ಭಾಗವನ್ನು ಸೇರಿಸಿದಂತೆ ಇನ್ನೊಂದು ಕೆತ್ತನೆಯಿದೆ. ಭುಜದ ಭಾಗದಲ್ಲಿ ಗುಂಗುರು ಕೂದಲಿನ ಉಂಗುರಗಳು ಎರಡು ಭುಜಗಳಿಂದಲೂ ಇಳಿ ಬಿದ್ದಿರುವಂತೆ ಕಾಣುವ ವಿಶೇಷ ಕೆತ್ತನೆಯಿದೆ.

ರಂಗನಾಥಸ್ವಾಮಿಯ ನೇರಕ್ಕೆ ಮೊಣಕಾಲಿನ ಶಿಲ್ಪವನ್ನು ಕೆತ್ತಿರುವ ಕಲ್ಲಿನಲ್ಲಿಯೇ ಆತನ ಎಡ, ಬಲಗಳಲ್ಲಿ ಅರ್ಧಭಾಗದಷ್ಟು ಉಬ್ಬು ಕೆತ್ತನೆಯಲ್ಲಿ ಶ್ರೀದೇವಿ, ಭೂದೇವಿಯರ ಶಿಲ್ಪಗಳಿವೆ. ಇವುಗಳಿಗೂ ಉದ್ದವಾದ ಕಿರೀಟವಿದ್ದು ಎರಡೆರಡು ಕೈಗಳು ಮಾತ್ರ ಸ್ಪಷ್ಟವಾಗಿ ಕಾಣುತ್ತವೆ. ಒಂದು ಕೈಯನ್ನು ಇಳಿಬಿಟ್ಟು ಮತ್ತೊಂದು ಕೈಯನ್ನು ಅರ್ಧಕ್ಕೆ ಮಡಿಚಿದಂತೆ ಕೆತ್ತಲಾಗಿದೆ. ಆದರೆ ಈ ಸ್ತ್ರೀ ವಿಗ್ರಹಗಳ ಮುಖಭಾವ, ಅಂಗಾಂಗಗಳಲ್ಲಿ ಸ್ಫುಟತೆಯಿಲ್ಲ.

ಹೊಯ್ಸಳರ ಕಾಲದಲ್ಲಿ ಶ್ರೀವೈಷ್ಣವ ಧರ್ಮಕ್ಕೆ ಸಿಕ್ಕ ಪ್ರೋತ್ಸಾಹದಿಂದ ಕಟ್ಟಿದ ದೇವಾಲಯ ಎನ್ನಲು ಈ ಮೂಲವಿಗ್ರಹದಲ್ಲಿ, ಹೊಯ್ಸಳ ಶಿಲ್ಪಕ್ಕೆ ಇರಬೇಕಾದ ಸಾಂಪ್ರದಾಯಿಕ ಶೈಲಿಯನ್ನು ಆಧರಿಸಿದ ಕೆತ್ತನೆಗಳು ಮೂಡಿಲ್ಲ. ಹೊಯ್ಸಳ ಶಿಲ್ಪಗಳ ಮುಖ್ಯಲಕ್ಷಣಗಳನ್ನು ಗಮನದಲ್ಲಿಯಿಟ್ಟುಕೊಂಡು ನೋಡಿದರೆ, ಅವುಗಳಲ್ಲಿ ಪ್ರಮಾಣಬದ್ಧವಾದ ಮೂಗು, ಮೂಗಿನ ಕೆಳ ಅಳತೆ ಹಣೆಯ ಅಳತೆಗಳು ರಂಗನಾಥಸ್ವಾಮಿಯ ಶಿಲ್ಪದಲ್ಲಿ ಕಂಡುಬರುವುದಿಲ್ಲ.[೨]

ದೇವಾಲಯದ ಭಿತ್ತಿ

ಈ ದೇವಾಲಯದ ಬಾಹ್ಯಭಿತ್ತಿಯನ್ನು ಬೇರೆ ಬೇರೆ ಕಾಲಕ್ಕೆ ೩-೪ ಹಂತಗಳಲ್ಲಿ ವಿಸ್ತರಿಸಲಾಗಿದೆ. ಇದರ ಗರ್ಭಗುಡಿ ಹಾಗೂ ಸುಖನಾಸಿಗಳ ಬಾಹ್ಯ ಭಿತ್ತಿ ಉಳಿದ ಭಾಗಗಳಿಗಿಂತ ಪುರಾತನವಾಗಿದೆ. ಸುಖನಾಸಿಯನ್ನು ಸುಮಾರು ಎರಡಡಿಯಷ್ಟು ಮುಂದಕ್ಕೆ ಹೆಚ್ಚಿಸಿ, ದ್ವಾರಪಾಲಕರನ್ನು ನಿಲ್ಲಿಸಲು ಅನುವಾಗುವಂತೆ ಸುಮಾರು ೬ ಅಡಿಗಳಷ್ಟು ಅಗಲವಾಗಿ ವಿಸ್ತರಿಸಲಾಗಿದೆ. ದೇವಾಲಯದ ಮೂಲಭಾಗವನ್ನು ಮೊದಲು ವಿಸ್ತರಿಸಿದ ಕಾಲದಲ್ಲಿ ಈ ದ್ವಾರಪಾಲಕರನ್ನು ನಿಲ್ಲಿಸಿರುವ ಸಾಧ್ಯತೆಯಿದೆ. ದ್ವಾರಪಾಲಕರ ಶಿಲ್ಪಗಳಾದ ಮೇಲೆ ಸುಮಾರು ೨೨ ಅಡಿಗಳಷ್ಟು ಉದ್ದಕ್ಕೆ ಕಟ್ಟಿ, ಪುನಃ ಮೂರು ಅಡಿಗಳಷ್ಟು ಅಗಲ ಮಾಡಿಕೊಂಡು ನವರಂಗವನ್ನು ವಿಸ್ತರಿಸಲಾಗಿದೆ.

ಅಧಿಷ್ಠಾನವು ದೇವಾಲಯದ ಭಾರವನ್ನು ಹೊರುವ ಶಕ್ತಿಯನ್ನು ಪಡೆದಿರಬೇಕಾಗಿರುವುದರಿಂದ ಅದನ್ನು ಭದ್ರವಾಗಿ ರಚಿಸಬೇಕು. ಗರ್ಭಗುಡಿ ಮತ್ತು ಸುಖನಾಸಿಗಳ ಪಾದಬಂಧ ಅಧಿಷ್ಠಾನವು ದೇವಾಲಯದ ವಾಸ್ತುಶಾಸ್ತ್ರಕ್ಕನುಗುಣವಾಗಿ ಕ್ರಮವಾಗಿ ಜಗತಿ, ಪಟ್ಟಿ, ಮಧ್ಯಪಟ್ಟಿಗಳ, ಕಂಪಗಳನ್ನು ಹೊಂದಿದೆ. ಈ ಅಂಗಗಳಿಂದ ಅಧಿಷ್ಠಾನವು ಎತ್ತರವಾಗಿದ್ದು, ಮೇಲ್ಭಾಗದಲ್ಲಿ ಅಲಂಕಾರಿಕ ಕಂಬ ಇತ್ಯಾದಿಗಳನ್ನು ಹೊಂದಲು ಅನುವಾಗಿದೆ. ನವರಂಗದ ಅದಿಷ್ಠಾನ ಜಗತಿ, ಕಂಪ, ಗಳ, ಪಟ್ಟಿಕೆ ಹಾಗೂ ಊರ್ಧ್ವಕಂಪಗಳನ್ನು ಪಡೆದಿದ್ದು, ಅವುಗಳ ಮೇಲೆ ಯಾವ ಅಲಂಕಾರಿಕ ಕೆತ್ತನೆಗಳಿಲ್ಲ

ದೇವಾಲಯಗಳ ಮೇಲ್ಭಾಗದಲ್ಲಿ ಸಾಮಾನ್ಯವಾಗಿ ದ್ರಾವಿಡ, ನಾಗರ, ವೇಸರಶೈಲಿಯ ಶಿಖರಗಳ ಕೆತ್ತನೆಗಳಿರುತ್ತವೆ. ಆದರೆ ಇಲ್ಲಿ ಈ ಮೂರು ಮಾದರಿಗಳ ಬದಲಿಗೆ ಸರಳವಾದ ಶಿಖರವನ್ನು ಕೆತ್ತಲಾಗಿದೆ. ಇದು ಚೋಳ, ಹೊಯ್ಸಳ ಅಥವಾ ವಿಜಯನಗರದ ಕಾಲದ ಕೆತ್ತನೆಯಾಗಿರದೆ, ವಿಜಯನಗರದ ನಂತರದ ಕಾಲದ ನಿರ್ಮಾಣ ಎನ್ನಬಹುದು.

ಅಲಮೇಲಮ್ಮ ರಂಗನಾಯಕಿ ದೇವಾಲಯದ ಮುಖಮಂಟಪ

ದೇವಿ ದೇವಾಲಯದ ದ್ವಾರದ ಮುಂಭಾಗದಲ್ಲಿ ಎತ್ತರವಾದ ಜಗತಿಯುಳ್ಳ ತೆರೆದ ಮುಖಮಂಟಪವಿದೆ. ಇದನ್ನು ಇತ್ತೀಚಿನ ಕಾಲದಲ್ಲಿ ಗೂಳಿಪುರದ ಶ್ಯಾನುಭೋಗರಾದ ರಂಗಣ್ಣನವರು ಕಟ್ಟಿಸಿದ್ದಾರೆ.[೩] ಈ ಮುಖಮಂಟಪದ ಎಡಪಾರ್ಶ್ವದಲ್ಲಿ ಸುಮಾರು ೭ ಅಡಿ, ಬಲಭಾಗದಲ್ಲಿ ಸುಮಾರು ೧೧ ಅಡಿಗಳಷ್ಟಿದ್ದು, ಅಸಮ ಪ್ರಮಾಣದಲ್ಲಿದೆ. ಎಡಪಾರ್ಶ್ವದ ಮಂಟಪವನ್ನು ಪ್ರಸಾದ ಮಾರಾಟ ಸ್ಥಳವನ್ನಾಗಿ ಮಾಡಿಕೊಂಡಿದ್ದರೆ, ಬಲಭಾಗದಲ್ಲಿ ಜನಸಂದಣಿಯಿರುವ ದಿನ ಪೂಜಾಕೈಂಕರ್ಯಗಳಿಗಾಗಿ ರಸೀದಿಗಳನ್ನು ಕೊಡುತ್ತಾರೆ.

ದೇವಿ ಗುಡಿಯ ದ್ವಾರ

ಸುಮಾರು ೯ ಅಡಿಗೂ ಹೆಚ್ಚು ಅಗಲವಾಗಿರುವ ಮುಖ್ಯದ್ವಾರಕ್ಕೆ ಅಲಂಕಾರಿಕ ಕಾಷ್ಠಶಿಲ್ಪವಿರುವ ಬಾಗಿಲುಗಳಿವೆ. ಈ ಬಾಗಿಲಿನ ಕೆಳಸಾಲಿನಲ್ಲಿ ಹಂಸಗಳು, ಅದರ ಮೇಲಿನ ಎರಡು ಸಾಲುಗಳಲ್ಲಿ ನಾನಾಭಂಗಿಗಳ ಮಿಥುನ ಶಿಲ್ಪಗಳಿವೆ. ಮೇಲ್ಭಾಗದ ಪಟ್ಟಿಕೆಗಳಲ್ಲಿ ವಿಷ್ಣುವಿನ ಅನೇಕ ಅವತಾರಗಳ ಕೆತ್ತನೆಗಳಿವೆ. ಬಾಗಿಲಿನಲ್ಲಿ ಬೀಗದ ಬಳಿ ಗಣೇಶನ ಕೆತ್ತನೆಯಿದೆ. ಐದು ಸಾಲುಗಳಲ್ಲಿರುವ ಪಟ್ಟಿಕೆಗಳಲ್ಲಿ ಪ್ರತಿ ಸಾಲಿನಲ್ಲಿ ನಾಲ್ಕು ಚಿತ್ರಪಟ್ಟಿಕೆಗಳಿವೆ. ಅವುಗಳನ್ನು ಸೇರಿಸಿರುವ ಅಡ್ಡ, ಉದ್ದಪಟ್ಟಿಗಳಲ್ಲಿಯೂ ಕಾಷ್ಟಶಿಲ್ಪಗಳಿವೆ. ಎತ್ತರದಲ್ಲಿ ಕಿರಿದಾದ ರಂಗನಾಥಸ್ವಾಮಿಯ ಆಲಯ ಹಾಗೂ ದ್ವಾರವನ್ನು ಲಕ್ಷ್ಯದಲ್ಲಿಟ್ಟುಕೊಂಡು ನೋಡಿದರೆ, ಈ ಎರಡು ಆಲಯಗಳ ಒಟ್ಟು ನಿರ್ಮಾಣಗಳಲ್ಲಿ ದೇವಿಗುಡಿಯ ನವರಂಗದ ನಿರ್ಮಾಣ ಅನಂತರದ ಕಾಲದ್ದೆನ್ನುವುದು ಸುಸ್ಪಷ್ಟ.

ನವರಂಗ ಮತ್ತು ಅದರಲ್ಲಿರುವ ಇತರ ಗುಡಿಗಳು

ರಂಗನಾಥಸ್ವಾಮಿಯ ಆಲಯದ ತೆರೆದ ಮುಖಮಂಟಪಕ್ಕೆ ಎರಡು ಮೆಟ್ಟಿಲು ಹತ್ತಿ ಹೋದರೆ, ದೇವಿ ಆಲಯದ ತೆರದ ಮುಖಮಂಟಪದಿಂದ ನವರಂಗಕ್ಕೆ ಇಳಿದುಬರಬೇಕಾಗಿದೆ. ಮೂಲವರ (ಶ್ರೀಯವರ) ಗುಡಿ ಆವರಣಕ್ಕಿಂತ ದೇವಿ ಗುಡಿಯ ನೆಲ ಸುಮಾರು ಒಂದು ಮುಕ್ಕಾಲು$(೧^{೩}/_{೪})$ ಅಡಿ ಕೆಳಗಿದೆ. ಇದರಿಂದಾಗಿ ದೇವಿ ಆಲಯದ ನವರಂಗದ ಒಳಭಾಗ ರಂಗನಾಥಸ್ವಾಮಿ ಆಲಯಕ್ಕಿಂತ ಎತ್ತರವಿದೆ. ದೇವಿ ಆಲಯದಲ್ಲಿರುವ ವಿಶಾಲವಾದ ಆಯತಾಕಾರದ ನವರಂಗವು ೨೯ ಅಡಿಗಳಷ್ಟು

ಅಗಲ ಹಾಗೂ ೬ಳ ಅಡಿಗಳಷ್ಟು ಉದ್ದವಾಗಿದೆ. ಒಂದೊಂದು ಸಾಲಿನಲ್ಲಿರುವ ಆರಾರು ಕಂಬಗಳಿಂದಾಗಿ ಉದ್ದವಾದ ನವರಂಗವನ್ನು ಮೂರು ಭಾಗಗಳಾಗಿಸಿವೆ. ದೇವಿ ಆಲಯದ ಗರ್ಭಗುಡಿ ಮತ್ತು ಸುಖನಾಸಿಗಳ ನಿರ್ಮಾಣದ ತರುವಾಯದ ಕಾಲದಲ್ಲಿ ನವರಂಗ ನಿರ್ಮಾಣವಾಗಿದೆ.

ನವರಂಗದ ಕಂಬಗಳು ಕೆಳಭಾಗದಲ್ಲಿ ಅಸಮ ಚೌಕಾಕಾರವಿದ್ದು, ಅನಂತರ ಅಷ್ಟಕೋನ- **ಚೌಕಾಕಾರ** - ಅಷ್ಟಕೋನ - ಚೌಕಾಕಾರದಲ್ಲಿವೆ. ಈ ಕಂಬಗಳ ಮಾದರಿಯನ್ನು ಗಮನಿಸಿದರೆ, ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣವಾಗಿರುವ ಮೈಸೂರಿನ ಕೋಟೆ ಆಂಜನೇಯ ದೇವಾಲಯದ ಕಂಬಗಳ ಮಾದರಿಯಂತಿವೆ. ನವರಂಗದ ಕೆಲವು ಕಂಬಗಳ ಕೆಳಭಾಗದಲ್ಲಿ ರಂಗನಾಥ, ಹನುಮಂತ ಹಾಗೂ ಗರುಡನ ಉಬ್ಬುಕೆತ್ತನೆಯ ಮೂರ್ತಿಗಳಿದ್ದು, ಅದಕ್ಕೆ ತೈಲವರ್ಣ ಲೇಪಿಸಲಾಗಿದೆ. ಇಲ್ಲಿರುವ ಕಂಬಗಳ ಮೇಲಿನ ಬೋಧಿಗೆಯಲ್ಲಿ ಯಾವ ಕೆತ್ತನೆಯೂ ಇಲ್ಲ. ಕಂಬ ಮತ್ತು ಮೇಲ್ಚಾವಣಿಯ ಭಾಗವನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಮುಖ್ಯದ್ವಾರ ಬಳಿಯ ನವರಂಗದ ಕಂಬಗಳನ್ನು ಒಂದು ಕಡೆ ವೇದಾಂತ ದೇಶಿಕಾಚಾರರ ಪ್ರತ್ಯೇಕ ಗುಡಿ ನಿರ್ಮಾಣಕ್ಕೆ, ಇನ್ನೊಂದು ಕಡೆ ಕಾರ್ಯಾಲಯಕ್ಕೆ ಬಳಸಿಕೊಳ್ಳಲಾಗಿದೆ. ನವರಂಗದ ಕಂಬಗಳಿಗೂ ವೇದಾಂತ ದೇಶಿಕರ ಗುಡಿಗೆ ಬಳಸಿರುವ ಕಂಬಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ. ಚಚ್ಚೌಕದ ಕೋಣೆಯಲ್ಲಿ ಚತುರಶ್ರ ಪೀಠದ ಮೇಲೆ ವೇದಾಂತ ದೇಶಿಕರ ವಿಗ್ರಹವನ್ನು ಇರಿಸಲಾಗಿದೆ.

ವೇದಾಂತ ದೇಶಿಕರ ಗುಡಿಯ ಎದುರಿನ ಕಂಬದ ಬಳಿ ಗಾಜಿನ ಪಟ್ಟಿಗೆಯಲ್ಲಿ ರಂಗನಾಥಸ್ವಾಮಿಯ ಪಾದುಕೆಗಳನ್ನು ಇಟ್ಟಿದ್ದಾರೆ. ಸುಖನಾಸಿಯ ಎದುರಿಗೆ ನೇರವಾಗಿ ನವರಂಗದಲ್ಲಿ ಬೆಳ್ಳಿಕವಚದಿಂದ ಆವೃತ ವಾದ ನಂಜನಗೂಡಿನ ರಾಮಸ್ವಾಮಯ್ಯನವರು ಮಾಡಿಸಿಕೊಟ್ಟ ದೊಡ್ಡ ಮಂಟಪವಿದೆ.[೪] ಸಾಮಾನ್ಯವಾಗಿ ದೇವಸ್ಥಾನದ ಒಳಗೆ ನಡೆಯುವ ಬಹುಪಾಲು ಉತ್ಸವಗಳನ್ನು ಈ ಮಂಟಪದಲ್ಲಿ ಮಾಡುತ್ತಾರೆ. ದೇವರಿಗೆ ಕಲ್ಯಾಣೋತ್ಸವ, ಶಯನೋತ್ಸವ ಮುಂತಾದ ಉತ್ಸವಗಳನ್ನು ಮಾಡಲು ದೇವಿಗುಡಿಯ ನವರಂಗದ ಆವರಣ ವಿಶಾಲವಾಗಿದೆ. ಸಾಮಾನ್ಯವಾಗಿ ದೇವಸ್ಥಾನದ ಒಳಗೆ ನಡೆಯುವ ಬಹುಪಾಲ ಉತ್ಸವಗಳನ್ನು ಈ ಮಂಟಪದಲ್ಲಿ ಮಾಡುತ್ತಾರೆ. ಇದರಿಂದಾಗಿ ಮೂಲತಃ ರಂಗನಾಥಸ್ವಾಮಿಯ ಗುಡಿಯ ನಿರ್ಮಾಣ ಮೊದಲಿಗೆ ಆಗಿದ್ದು, ಅನಂತರ ದೇವಿಗುಡಿಯ ನಿರ್ಮಾಣವಾಗಿದೆ ಎನ್ನುವುದು ಖಚಿತ. ನವರಂಗದ ಬಲಪಾರ್ಶ್ವದ ಮೊದಲ ಸಾಲಿನ ಕಂಬಗಳನ್ನು ಅರೆಗಂಭಗಳನ್ನಾಗಿ ಮಾಡಿಕೊಂಡು ಒಂದೊಂದು ಅಂಕರಣ ಸಣ್ಣ ಸಣ್ಣ ಕೋಣೆಗಳನ್ನಾಗಿ ವಿಭಾಗಿಸಿ, ಒಂದರಲ್ಲಿ ಜೀಯರ್ ಮತ್ತು 'ರಾಮಾನುಜ' ವಿಗ್ರಹಗಳಿವೆ. ಇನ್ನುಳಿದ ಗೂಡುಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಕೆಲವು ಸಾಮಗ್ರಿಗಳನ್ನಿರಿಸಿದ್ದಾರೆ. ರಂಗನಾಥನ ಗರ್ಭಗುಡಿಯ ಹಿಂಭಾಗದ ಗೋಡೆಯನ್ನು ವಿಸ್ತರಿಸಿ, ದೇವಿಗುಡಿಯ ಬಲಪಾರ್ಶ್ವದಲ್ಲಿ ಸಂಕ್ರಾಂತಿಯಂದು ಬಳಸುವ ಸ್ವರ್ಗದ ಬಾಗಿಲಿಗೆ ಅವಕಾಶ ಮಾಡಿಕೊಳ್ಳಲಾಗಿದೆ.

ಸುಖನಾಸಿ

ದೇವಿ ದೇವಾಲಯದ ಸುಖನಾಸಿಯ ದ್ವಾರದ ಮೇಲ್ಭಾಗದಲ್ಲಿ ಅಲಂಕಾರಿಕ ಕೆತ್ತನೆಯ ಪ್ರಭಾವಳಿಯನ್ನು ಇತ್ತೀಚಿನ ದಿನಗಳಲ್ಲಿ ಮಾಡಲಾಗಿದೆ. ಪ್ರಭಾವಳಿಯ ಮಧ್ಯಭಾಗದಲ್ಲಿರುವ ಕೀರ್ತಿಮುಖದ ಬಾಯಿಯಿಂದ ಹೊರಬಂದಿರುವಂತೆ ಹೂಬಳ್ಳಿಯನ್ನು ಸುಂದರವಾಗಿ ಕೆತ್ತಲಾಗಿದೆ. ಕೆಳಭಾಗದಲ್ಲಿ ಇತ್ತೀಚಿಗೆ ಕೆತ್ತಿರುವ ಕಂಬಗಳ ಮೇಲೆ ಈ ಅಲಂಕಾರಿಕ ಕೆತ್ತನೆಯನ್ನು ಕೂರಿಸಿರುವುದು ಕಂಡುಬರುತ್ತದೆ. ಕಿರಿದಾದ ಸುಖನಾಸಿಯ ಬಾಗಿಲ ಹೊರಚೌಕಟ್ಟಿಗೆ ಇದ್ದಿರಬಹುದಾದ ಕೆತ್ತನೆಗಳು ಕಾಣದಂತೆ ತಗಡಿನ ಹೊದಿಕೆಯಿದ್ದು, ಅದಕ್ಕೆ ಬೆಳ್ಳಿ ಬಣ್ಣ ಬಳಿದಿದ್ದಾರೆ. ಎರಡೂ ಕಡೆ ಕೆಳಗೆ ಸ್ತ್ರೀ ಶಿಲ್ಪಗಳಿವೆ. ಲಲಾಟ ಬಿಂಬದಲ್ಲಿರುವ ಗಜಲಕ್ಷ್ಮಿಗೆ, ಎರಡು ಪಾರ್ಶ್ವಗಳಲ್ಲಿ ಅಭಿಷೇಕಗೈಯುತ್ತಿರುವ ಆನೆಗಳಿವೆ. ಬಹುಶಃ ಲಲಾಟಬಿಂಬದ ಮೂಲಕೆತ್ತನೆಯಲ್ಲಿ ಗಜಲಕ್ಷ್ಮಿಯ ಶಿಲ್ಪವಿದ್ದು, ಅದನ್ನೇ ಹೊರಗೆ ತಗಡಿನಲ್ಲಿಯೂ ಮಾಡಿ ಮುಚ್ಚಿರುವಂತಿದೆ.

ಸುಖನಾಸಿಯ ದ್ವಾರದ ಒಳಚೌಕಟ್ಟಿಗೆ ಅಳವಡಿಸಿರುವ ಬಾಗಿಲಿನ ವಾಸ್ತುಶಿಲ್ಪ, ದೇವಿಗುಡಿಯ ಮೂಲ ಕಾಲವನ್ನು ಹೋಲುವಂತಿದೆ. ಇದರ ಮೇಲ್ಭಾಗದಲ್ಲಿ ಸಿಕ್ಕಿಸಲು ಇರುವ ಎರಡು ದೊಡ್ಡ ರಂಧ್ರಗಳು, ಬಾಗಿಲಿನ ದಪ್ಪ, ಅದಕ್ಕಿರುವ ಚೌಕಟ್ಟು ಹಾಗೂ ಕೆತ್ತನೆಗಳನ್ನು ಗಮನಿಸಿದಾಗ, ಇದನ್ನು ಸುಮಾರು ೨೫೦ ವರ್ಷಗಳಷ್ಟು ಹಿಂದೆ ಮಾಡಿರಬಹುದು. ಸುಖನಾಸಿಯ ಉದ್ದ, ಅಗಲಗಳು ಹೆಚ್ಚು ಕಡಿಮೆ ಗರ್ಭಗೃಹದಷ್ಟೆ ಇದೆ. ನವರಂಗದಿಂದ ಸುಖನಾಸಿಗೆ ಎರಡು ಮೆಟ್ಟಿಲಗಳನ್ನು ಹತ್ತಿ ಹೋಗಬೇಕಾದಷ್ಟು ಎತ್ತರದಲ್ಲಿದೆ. ಇದನ್ನು ಗಮನಿಸಿದಾಗ ಗರ್ಭಗುಡಿ ಮತ್ತು ಸುಖನಾಸಿಗಳ ನಿರ್ಮಾಣದ ತರುವಾಯ ನವರಂಗವನ್ನು ನಿರ್ಮಿಸಿಕೊಂಡಿರುವುದು ಇನ್ನಷ್ಟು ಸ್ಪಷ್ಟವಾಗುತ್ತದೆ. ಗರ್ಭಗೃಹಕ್ಕೆ ಯಾವ ಕೆತ್ತನೆಗಳುಯಿಲ್ಲದ ಗ್ರಾನೈಟ್ ಶಿಲೆಯ ದ್ವಾರಬಂಧವನ್ನು ಮಾಡಿದ್ದಾರೆ. ಬಾದಾಮಿ ಚಾಲುಕ್ಯ, ಕಲ್ಯಾಣಚಾಲುಕ್ಯ, ಚೋಳ, ಹೊಯ್ಸಳ ಹಾಗೂ ವಿಜಯನಗರ ಕಾಲದ ದೇವಸ್ಥಾನಗಳ ದ್ವಾರ ಮಂಟಪದಲ್ಲಿ ಅಲಂಕಾರಿಕ ಕೆತ್ತನೆಗಳಿರುತ್ತವೆ. ಬಹುಶಃ ಸ್ಥಳೀಯವಾಗಿಯೇ ಲಭ್ಯವಾದ ಗ್ರಾನೈಟ್ ಶಿಲೆ, ಮುಖ್ಯ ದೇವಾಲಯದ ಮೂಲನಕ್ಷೆ ಮತ್ತು ಮೂಲಮೂರ್ತಿಗೆ ಹೆಚ್ಚು ಮಹತ್ವಕೊಟ್ಟಿರುವುದರಿಂದ, ಕೆಲವು ಕೆತ್ತನೆಗಳು ಈ ದೇವಾಲಯದಲ್ಲಿ ಕಡಿಮೆಯಾಗಿವೆ.

ದೇವಿ ಗರ್ಭಗುಡಿಯ ಅಕ್ಕಪಕ್ಕದಲ್ಲಿರುವ ಎರಡು ಕೋಣೆಗಳಲ್ಲಿ, ಎಡಭಾಗದ ಕೋಣೆಯಲ್ಲಿ ಜಗುಲಿಯ ಮೇಲೆ ಪೀಠ ಸಹಿತವಾಗಿರುವ ಪೆರೆಯಾಳ್ವಾರ ಹಾಗೂ ನಮ್ಮಾಳ್ವಾರ್‌ರ ವಿಗ್ರಹಗಳಿವೆ. ಬಲಭಾಗದ ಕೊಠಡಿಯಲ್ಲಿ ಉತ್ಸವ ಮೂರ್ತಿ, ಅದರ ಅಲಂಕಾರದ ಸಾಮಾಗ್ರಿಗಳನ್ನು ಇರಿಸಲಾಗಿದೆ. ರಂಗನಾಥಸ್ವಾಮಿಯ ದೇವಾಲಯದಲ್ಲಿ ಹಲವಾರು ಉತ್ಸವಗಳು, ಬೇರೆ ಬೇರೆ ಶ್ರಾಯಗಳಲ್ಲಿ ನಡೆಯುತ್ತಿದ್ದುದರಿಂದ ನಿತ್ಯದ ಆರಾಧನಾಮೂರ್ತಿ ಕಲ್ಲಿನದ್ದೇ ಆದರೂ ಉತ್ಸವಗಳ ವೇಳೆಯಲ್ಲಿ ಮೆರವಣಿಗೆ ಮಾಡಲು ಲೋಹದ ಮೂರ್ತಿಗಳಿವೆ.

ಗರ್ಭಗೃಹ ಮತ್ತು ದೇವಿ ವಿಗ್ರಹ

ದೇವಿ ಆಲಯದ ಚೌಕಾಕಾರ ಗರ್ಭಗೃಹದಲ್ಲಿ ಸಮಭಂಗದಲ್ಲಿ ಅಸೀನವಾದ ಚತುರ್ಬಾಹು ಆಲಮೇಲು ರಂಗನಾಯಕಿಯ ಮೂರ್ತಿಗೆ ಚಿಕ್ಕ ಕಿರೀಟ ಮತ್ತು ಅಗಲವಾದ ಕರ್ಣ ಕುಂಡಲಗಳಿವೆ. ಹಿಂದಿನ ಹಸ್ತಗಳಲ್ಲಿ ಕಮಲಗಳಿದ್ದರೆ ಮುಂದಿನ ಕೈಗಳಲ್ಲಿ ಒಂದು ವರದಹಸ್ತ ಮತ್ತೊಂದು ಅಭಯಹಸ್ತವಾಗಿದೆ. ಮೂಲವಿಗ್ರಹದಲ್ಲಿ ಕೆಲವು ಕಂಠಾಭರಣ ಹಾಗೂ ಕೈಗಳಲ್ಲಿ ಅಭರಣಗಳನ್ನು ಕೆತ್ತಲಾಗಿದೆ. ನಡುಪಟ್ಟಿ ಹಾಗೂ ಕೆಲವು ಆಭರಣಗಳ ಸಹಿತ ಅಧೋವಸ್ತ್ರವನ್ನು ಶಿಲ್ಪಕ್ಕೆ ತೋಡಿಸಿದಂತೆ ನಿರಿಗೆಗಳೊಡನೆ ಕೆತ್ತಲಾಗಿದೆ. ಒಂದು ಕಾಲನ್ನು ಅರೆಮಡಿಸಿ ಮತ್ತೊಂದನ್ನು ಕೆಳಗೆ ಇಳಿಬಿಟ್ಟಂತೆ ಕೆತ್ತಲಾಗಿದೆ.

ಮೂಲ ಮೂರ್ತಿಯನ್ನು ಪೀಠ ಸಹಿತ ಮತ್ತೊಂದು ಪೀಠದ ಮೇಲೆ ಕೂರಿಸಲಾಗಿದೆ. ಈ ಪೀಠದ ಮೇಲ್ಭಾಗದಲ್ಲಿ ಸೊಗಸಾದ ಅಲಂಕಾರಿಕ ಕೆತ್ತನೆಗಳಿರುವ ಬೆಳ್ಳಿ ಪ್ರಭಾವಳಿಯಲ್ಲಿ ಮೇಲ್ಭಾಗ ಕೀರ್ತಿಮುಖ ಮಧ್ಯದಲ್ಲಿ ಹಂಸ, ಕೆಳಗೆ ವಿರುದ್ಧ ದಿಕ್ಕಿನಲ್ಲಿ ಕಾಲನ್ನು ಮೇಲೆತ್ತಿ ನಿಂತ ಸಿಂಹಗಳಿವೆ. ಮೂಲಮೂರ್ತಿಯ ಬಳಿಯಲ್ಲಿರುವ ಪಂಚಲೋಹದ ಮೂರ್ತಿಯ ಮುಖಭಾವ ಮುದ್ದಾಗಿದೆ.

ಧ್ವಜಸ್ತಂಭ

ಮೊದಲಿಗೆ ಧ್ವಜಸ್ತಂಭವು ದೇವಸ್ಥಾನದ ಶಾಶ್ವತ ವ್ಯವಸ್ಥೆಯಾಗಿರಲಿಲ್ಲ. ಧ್ವಜವನ್ನು ಏರಿಸಲು ಅಗತ್ಯವಾದಾಗ ತಾತ್ಕಲಿಕ ಕಂಬವನ್ನು ನಿಲ್ಲಿಸುತ್ತಿದ್ದರು. ಆದರೆ ಕಾಲಕ್ರಮೇಣ ಅದು ದೇವಸ್ಥಾನದ ಅಗತ್ಯಗಳಲ್ಲಿ ಸೇರಿ ಹೋಯಿತು. ರಂಗನಾಥಸ್ವಾಮಿ ದೇವಸ್ಥಾನದ ನವರಂಗವನ್ನು ವಿಸ್ತರಿಸಿದ ಬಳಿಕ ಧ್ವಜಸ್ತಂಭವನ್ನು ನಿರ್ಮಿಸಿಕೊಳ್ಳಲಾಗಿದೆ. ದೇವರ ವಾಹನವನ್ನು ಇಡಲು, ದೀಪ ಹಚ್ಚಲು ಧ್ವಜವನ್ನು ಹಾಕುವ ಸಲುವಾಗಿ ಹೀಗೆ ಅನೇಕ ಉದ್ದೇಶಗಳಿಗಾಗಿ ಸ್ತಂಭವನ್ನು ನಿಲ್ಲಿಸುತ್ತಿದ್ದರು. ರಂಗನಾಥಸ್ವಾಮಿಯ ಗರ್ಭಗೃಹಕ್ಕೆ ಅಭಿಮುಖವಾಗಿ, ಧ್ವಜವನ್ನು ಕಟ್ಟಲು ಬಳಸುವ ಲೋಹದ ಹೊದಿಕೆಯುಳ್ಳ ಧ್ವಜಸ್ತಂಭ ಹಾಗೂ ಬಲಪೀಠಗಳಿವೆ. ಈ ಬಲಿಪೀಠಗಳು ಪ್ರಾಚೀನ ವೈದಿಕ ಯಜ್ಞದ ಯೂಪದ (ಯಜ್ಞ ಪಶುವನ್ನು ಕಟ್ಟುವ ಕಂಬ) ಅವಶೇಷವಾಗಿದೆ. ಸಾಮಾನ್ಯವಾಗಿ ಧ್ವಜಸ್ತಂಭ, ಬಲಿಪೀಠ ಗರ್ಭಗೃಹಕ್ಕೂ ನಡುವೆ ಇರುತ್ತದೆ.[31]

ವೈಷ್ಣವ ದೇವಾಲಯದಲ್ಲಿ ನೈವೇದ್ಯವಾದ ಬಳಿಕ ಬಲಿ ಪೀಠದಲ್ಲಿ ಎಡೆ ಇರುತ್ತಾರೆ. ಗರುಡ ಶಿಲ್ಪ, ನಾಗರ ಪ್ರತಿಷ್ಠೆಗಳು ಬಳಿಯಲ್ಲಿಯೇ ನಿವೇದನದ ತೆಂಗಿನಕಾಯಿ ಒಡೆಯಲು ತೊಟ್ಟಿಯಿದೆ. ಗರುಡನ ಶಿಲ್ಪದ ಮುಂದೆ ಇತ್ತೀಚಿಗೆ ಇರಿಸಲಾಗಿದೆ. ರಂಗನಾಥಸ್ವಾಮಿ ದೇವಾಲಯದ ಮುಂದಿನ ಧ್ವಜಸ್ತಂಭ ಹಾಗೂ ದೇವಿ ದೇವಾಲಯದ ಮುಂಭಾಗದಲ್ಲಿ ನೆರಳಿಗಾಗಿ ಇತ್ತೀಚಿಗೆ ಛಾವಣಿಯನ್ನು

ಹಾಕಲಾಗಿದೆ. ಗರುಡಗಂಭ, ಬಲಿಪೀಠ ಮುಂತಾದವೆಲ್ಲಾ ಸೇರಿದಂತೆ ೧½ ಅಡಿ ಎತ್ತರದ ಅಗಲವಾದ ಕಟ್ಟೆಯನ್ನು ರಂಗನಾಥಸ್ವಾಮಿ ದೇವಾಲಯದ ಮುಖಮಂಟಪಕ್ಕೆ ಸೇರಿಸಿಕೊಂಡೇ ಕಟ್ಟಲಾಗಿದೆ. ಈ ಕಾರಣದಿಂದ ರಂಗನಾಥಸ್ವಾಮಿ ದೇವಸ್ಥಾನದ ಮುಂಬಾಗಿಲಿಗೆ ನೇರವಾಗಿ ಹೋಗಲು ಸಾಧ್ಯವಿಲ್ಲದೇ, ಮುಖಮಂಟಪದ ಪಾರ್ಶ್ವಗಳಿಂದ ಹೋಗಬೇಕಾಗುತ್ತದೆ.

ಶಿಖರಗಳು

ಈ ದೇವಾಲಯಗಳ ಗರ್ಭಗುಡಿಗಳ ಮೇಲಿನ ಶಿಖರಗಳನ್ನು ಬಿಟ್ಟು ಉಳಿದ ಭಾಗ ಸಮತಟ್ಟಾಗಿದೆ. ಎರಡೂ ದೇವಾಲಯಗಳು ಬೇರ ಬೇರೆ ಕಾಲಗಳಲ್ಲಿ ನಿರ್ಮಾಣಗೊಂಡಿವೆ. ರಂಗನಾಥಸ್ವಾಮಿ ಹಾಗೂ ಅಲಮೇಲಮ್ಮನ ಗರ್ಭಗುಡಿಗಳ ಮೇಲೆ ದ್ರಾವಿಡಶೈಲಿಯ ಗಾರೆಯ ಶಿಖರಗಳಿವೆ. ಅಗ್ರಭಾಗದಲ್ಲಿ ಲೋಹದ ಕಳಶವಿದೆ. ಅದರ ಕೆಳಭಾಗದಲ್ಲಿರುವ ಸ್ತೂಫಿ, ಮಹಾಪದ್ಮ, ಶಿಖರ, ಮಹಾನಾಸಿಗಳನ್ನು ಅಲಂಕಾರಿಕ ಕೆತ್ತನೆಗಳಿಂದ ಶೃಂಗರಿಸಿದೆ. ನಾಲ್ಕು ಭಾಗಗಳಲ್ಲಿಯೂ ಕೀರ್ತಿ ಮುಖಗಳಿದ್ದು, ಅದರ ಒಳಭಾಗದ ಕೋಷ್ಮಕಗಳಲ್ಲಿ ಶಿಲ್ಪಗಳನ್ನು ಮಾಡಲಾಗಿದೆ. ಎರಡು ಕೀರ್ತಿಮುಖಗಳ ಮಧ್ಯದ ಭಾಗದಲ್ಲಿ ಮನುಷ್ಯರ ಶಿರಗಳ ಶಿಲ್ಪ, ಹೂಬಳ್ಳಿಗಳು ಹಾಗೂ ಹೂಬಳ್ಳಿಗಳನ್ನು ಸುತ್ತಿಕೊಂಡಿರುವ ಆಲಂಕಾರಿಕ ಕೆತ್ತನೆಗಳಿವೆ. ಅದರ ಕೆಳಗೆ ನಾಲ್ಕು ಕೋನಗಳಲ್ಲಿರುವ ಸಿಂಹ ಶಿಲ್ಪಗಳ ಮಧ್ಯ ಭಾಗದ ಕೋಷ್ಮಕಗಳಲ್ಲಿ ಒಂದೊಂದು ಗ್ರೀವ ದೇವತಾ ಶಿಲ್ಪಗಳಿವೆ. ಅದರ ಕೆಳಗೆ ಕಳಶಗಳ ಮಧ್ಯಭಾಗದಲ್ಲಿನ ಕೋಷ್ಮಕಗಳಲ್ಲೂ ಕೆತ್ತನೆಯಿದೆ. ರಂಗನಾಥ ಸ್ವಾಮಿ ಗುಡಿಯ ಶಿಖರವನ್ನು ನೇರವಾಗಿ ಛಾವಣಿಯ ಮೇಲೆ ಕಟ್ಟಿದ್ದರೂ ದೇವಿಗುಡಿಯ ಶಿಖರವನ್ನು ಮಾತ್ರ ಸ್ವಲ್ಪ ಎತ್ತರಿಸಿದ ವೇದಿಕೆಯ ಮೇಲೆ ಕಟ್ಟಿದ್ದಾರೆ.

ಮಹಾದ್ವಾರ

ರಂಗನಾಥ ಸ್ವಾಮಿಯ ದೇವಾಲಯದ ಮಹಾದ್ವಾರವು ಸಾಂಪ್ರದಾಯಿಕವಾಗಿ ಇರಬೇಕಾದ ದಿಕ್ಕಿನಲ್ಲಿಲ್ಲ. ಸಾಮಾನ್ಯವಾಗಿ ದೇವಾಲಯದ ಮುಂಭಾಗದಲ್ಲಿ, ಗರ್ಭಗೃಹಕ್ಕೆ ಅಭಿಮುಖವಾಗಿ ಮಹಾದ್ವಾರ ಇರಬೇಕಿದ್ದರೂ ಈ ದೇವಾಲಯವನ್ನು ಕಟ್ಟಿರುವ ಬಂಡೆಯ ಮೇಲೆ ಪೂರ್ವ ದಿಕ್ಕಿನಲ್ಲಿ ಮಹಾದ್ವಾರ ನಿರ್ಮಿಸಿದರೆ, ಹತ್ತಿ ಬರುವ ಮೆಟ್ಟಿಲ ಮಾರ್ಗಕ್ಕೆ ಇಕ್ಕಟ್ಟಾಗುತ್ತದೆಂದು ಮಹಾದ್ವಾರದ ದಿಕ್ಕನ್ನು ಬದಲಾಯಿಸಿದೆ. ಈ ದ್ವಾರವನ್ನು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಮಹಾದ್ವಾರದ ವಿನ್ಯಾಸ ಮತ್ತು ರಚನೆ ಅತ್ಯಂತ ಸಾಂಪ್ರದಾಯಿಕ ಹಾಗೂ ಸುಂದರ ಶೈಲಿಯಲ್ಲಿದ್ದು ವ್ಯವಸ್ಥಿತವಾಗಿ ಕಟ್ಟಲಾಗಿದೆ.

ಮಹಾದ್ವಾರದ ಒಳಮುಖದ ಪ್ರವೇಶದ ಆರಂಭದಲ್ಲಿ, ಎರಡು ಪಾರ್ಶ್ವಗಳಲ್ಲಿ ವೇದಿಕೆಯಲ್ಲಿ ಕಲ್ಲುಗಳನ್ನು ಜೋಡಿಸಿ ಮೇಲೆ ಚೌಕಾಕಾರವಾಗಿ ಬರುವಂತೆ ಮಾಡಿ, ಅದರ ಮೇಲೆ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ವೇದಿಕೆಯ ಬಲಭಾಗದ ಕಂಬವೊಂದರ ಕೆಳ ಚೌಕಾಕಾರದ ಮುಮ್ಮುಖದಲ್ಲಿರುವ ಶೇಷಶಾಯಿ ರಂಗನಾಥಸ್ವಾಮಿ, ಲಕ್ಷ್ಮೀ ಸಮೇತನಾದ ವಿಷ್ಣುವಿನ ಉಬ್ಬುಶಿಲ್ಪಗಳ ಕೆಳಗೆ ಕೈಮುಗಿದು ನಿಂತಿರುವ ಭಕ್ತವಿಗ್ರಹವಿದೆ. ಸ್ಥಳೀಯರ ಹೇಳಿಕೆಯಂತೆ ಇದು ಮಹಾದ್ವಾರವನ್ನು ಕಟ್ಟಿಸಿದ ಮೂಗೂರು ಪಾಳೆಗಾರನೊಬ್ಬನ ಶಿಲ್ಪವಾಗಿದೆ.

ಸಾಕಷ್ಟು ಎತ್ತರವಿರುವ ಈ ಮಹಾದ್ವಾರದ ಮೇಲ್ಭಾಗದಲ್ಲಿ ಸಾಮಾನ್ಯವಾಗಿ ಇರಬೇಕಾದ ರಾಜಗೋಪುರ ಇಲ್ಲ. ಮಹಾದ್ವಾರವನ್ನು ನಿರ್ಮಿಸಿರುವ ತಳಹದಿ ಹಾಗೂ ಮಹಾದ್ವಾರದ ರಚನೆಯನ್ನು ಗಮನಿಸಿದರೆ, ರಾಜಗೋಪುರ ನಿರ್ಮಾಣದ ಉದ್ದೇಶವಿದ್ದುದು ಸುಸ್ಪಷ್ಟ. ಕಾರಣಾಂತರದಿಂದ ಗೋಪುರ ನಿರ್ಮಾಣವಾಗಿಲ್ಲ. ಈ ನಿರ್ಮಾಣ, ಮಹಾದ್ವಾರಕ್ಕೆ ನಿಂತು ಹೋಗಿರುವುದಕ್ಕೆ ಸ್ಥಳೀಯರ ಹೇಳುವ ಐತಿಹ್ಯ ಪ್ರಕಾರ "ಈ ಮಹಾದ್ವಾರ ಕಟ್ಟಿಸಿದ ಪಾಳೆಗಾರನ ಕನಸಿನಲ್ಲಿ ದೇವರು ಒಂದು ಗೋಪುರದ ನಿರ್ಮಾಣ ಮಾಡಿಸುವುದು ಬೇಡ" ಎಂದಿದ್ದರಿಂದ ಸ್ಥಗಿತಗೊಂಡಿತು.[೬] ಆದರೆ ಗೋಪುರವನ್ನು ಕಟ್ಟದಿರಲು ಬೇರೆ ಕಾರಣಗಳಿದ್ದಿರಬಹುದು. ಎಲ್ಲಾ ಕಡೆಯಿಂದ ಜೋರಾಗಿ ಗಾಳಿ ಬೀಸುವ ಬೆಟ್ಟದ ಮೇಲಿನ ತಾಣದಲ್ಲಿ ದೇವಾಲಯವಿರುವುದರಿಂದ ಗೋಪುರ ಎತ್ತರವಾದಷ್ಟು ಅದಕ್ಕೆ ಭದ್ರತೆ ಇರುವುದಿಲ್ಲವೆಂದು ಕಟ್ಟಿರಲಿಕ್ಕಿಲ್ಲ.[೭] ಇದರ ಜೊತೆಗೆ ದೇವಸ್ಥಾನದ ಮಹಾದ್ವಾರವಿರುವ ದಿಕ್ಕು ಸರಿಯಾಗಿಲ್ಲ ಎನ್ನುವ ಆಕ್ಷೇಪಣೆ ಬಂದದ್ದರಿಂದ ಆಗ ಕೈಬಿಟ್ಟಿರುವ ಸಾಧ್ಯತೆಯೂ ಇದೆ. ಈಗ ಮತ್ತೇ ಮಹಾದ್ವಾರವನ್ನು ಕಟ್ಟಬೇಕೆಂಬ ವಿಷಯಕ್ಕೆ ಮರುಚಾಲನೆ ಬಂದಿದೆ. ಆದರೆ ದಿಕ್ಕಿನ ಕಾರಣದಿಂದ ಪೂರ್ವಕ್ಕೆ ಮಹಾದ್ವಾರ ನಿರ್ಮಾಣ ಮಾಡಿ ಗೋಪುರವನ್ನು ಕಟ್ಟುವ ಆಲೋಚನೆಯಿದೆ.

ಪ್ರಾಕಾರ

ದ್ವಾರ ಮಂಟಪವನ್ನು ಬಳಸಿಕೊಂಡು ಅನಂತರ ಕಾಲದಲ್ಲಿ ಸುತ್ತಲೂ ಪ್ರಾಕಾರವನ್ನು ಕಟ್ಟಲಾಗಿದೆ. ಪ್ರಾಕಾರದ ಮುಖ್ಯ ಉದ್ದೇಶ. ಆಲಯದ ಸ್ಥಿರಚರ ಸ್ವತ್ತನ್ನು ಕಾಪಾಡುವುದು. ಭಕ್ತರು ದೇವಾಲಯದ ಸುತ್ತ ಪ್ರದಕ್ಷಿಣೆ ಬರಲು ಮತ್ತು ಉತ್ಸವ ಮೂರ್ತಿಗಳ ಮೆರವಣಿಗೆ ಮಾಡಲು ಪ್ರಾಕಾರ ಅನುಕೂಲವಾಗಿದೆ. ಆದರೆ ಈ ಪ್ರಾಕಾರವನ್ನು ಉಪಯೋಗಿಸಿಕೊಂಡು ದೇವಾಲಯಕ್ಕೆ ಬೇಕಾದ ಹಲವು ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ರಂಗನಾಥಸ್ವಾಮಿ ದೇವಾಲಯದ ಪ್ರಾಕಾರದ ಗೋಡೆಯನ್ನು ಬಳಸಿಕೊಂಡು ಕೆಲವು ಕಟ್ಟಡಗಳು ನಿರ್ಮಾಣವಾಗಿವೆ. ಮಹಾದ್ವಾರದ ಒಂದು ಪಾರ್ಶ್ವದಲ್ಲಿ ಪಾಕ ಶಾಲೆಯಿದ್ದರೆ, ಇನ್ನೊಂದು ಪಾರ್ಶ್ವದಲ್ಲಿ ಭಕ್ತರು ಕೆಲವು ಮಂಟಪಗಳನ್ನು ಕಟ್ಟಿಸಿದ್ದಾರೆ. ಅವುಗಳಲ್ಲಿ ಕೆಲವು ಮುಚ್ಚಿದ ಕಟ್ಟಡಗಳಾಗಿದ್ದು, ಅದರಲ್ಲೊಂದನ್ನು ದಾಸೋಹದ ಕಾರ್ಯಾಲಯವಾಗಿ ಬಳಸುತ್ತಿದ್ದಾರೆ. ಇಲ್ಲಿರುವ ಮೂರಂಕಣ ಮಂಟಪದ, ಭುವನೇಶ್ವರಿಯಲ್ಲಿ ಅಲಂಕಾರಿಕ ಕೆತ್ತನೆಗಳಿವೆ. ಅದರಲ್ಲಿ ದೇವರ ಸೇವೆಗೆ ಬಳಸುವ ಪಲ್ಲಕ್ಕಿ

ಮತ್ತು ತೊಟ್ಟಿಲುಗಳಿವೆ. ದೇವಾಲಯದ ಎಡ ಪಾರ್ಶ್ವದಲ್ಲಿ ಹೋಮಕಾರ್ಯಕ್ಕೆ ಹಾಗೂ ಉಗ್ರಾಣಕ್ಕಾಗಿ ಕಟ್ಟಿದ ಕಟ್ಟಡಗಳಿವೆ.

ಕಮರಿಯ ಕಡೆಗೆ ಹೋಗಲು ದ್ವಾರವೊಂದನ್ನು ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ದೇವಾಲಯಗಳ ಪ್ರಾಕಾರದಲ್ಲಿ ಪರಿವಾರ ದೇವತೆಗಳ ಸಣ್ಣ ಸಣ್ಣ ಗುಡಿಗಳು ಇರುತ್ತವೆ. ಆದರೆ ಈ ದೇವಸ್ಥಾನದ ಪ್ರಾಕಾರದಲ್ಲಿ ಬೃಂದಾವನವನ್ನು ಬಿಟ್ಟರೆ ಯಾವುದೇ ಪರಿವಾರ ದೇವತೆಗಳ ಗುಡಿಗಳಿಲ್ಲ. ದೇವಾಲಯದ ಪ್ರಾಕಾರದೊಳಗೆ ನೆಲಹಾಸುಗಳನ್ನು ಹಾಸಲಾಗಿದ್ದು, ಅವುಗಳ ಮೇಲೆ ಭಕ್ತರ ಚಿತ್ರ, ಹೆಸರುಗಳಿವೆ. ಇವು ಮೈಮೇಲೆ ಭೂತ ಬಂದವರು ರಂಗನಾಥಸ್ವಾಮಿಗೆ ಹರಿಸಿಕೊಂಡು ಗುಣಮುಖರಾದ ಬಳಿಕ ಕೆತ್ತಿಸಿದ್ದಾರೆ.

ಉತ್ಸವ ವಾಹನಗಳು

ದೇವಸ್ಥಾನದ ದೈನಂದಿನ ಹಾಗೂ ವಿಶೇಷ ದಿನದ ಉತ್ಸವಾದಿಗಳು ಸುಗಮವಾಗಿ ನಡೆಯಲು ಬೇಕಾದ ವೆಚ್ಚಗಳಿಗಾಗಿ ದೇವಾಲಯದ ಆದಾಯಗಳನ್ನು ಬಿಡುವ ವಾಡಿಕೆಯಿತ್ತು. ರಂಗನಾಥ ಸ್ವಾಮಿಗೆಂದೇ ಅನೇಕ ಕಡೆ ದಾನ-ದತ್ತಿಗಳನ್ನು ಬಿಟ್ಟುದ್ದರಿಂದ ಅವುಗಳಿಂದ ದೇವಸ್ಥಾನಕ್ಕೆ ಆದಾಯ ಬರುತ್ತಿತ್ತು. ಎರಡೂ ದೇವಾಲಯಗಳ ನವರಂಗದ ಎಡಪಾರ್ಶ್ವದಲ್ಲಿ ಹಲವಾರು ರೀತಿಯ ಉತ್ಸವ ವಾಹನಗಳಿವೆ. ಉತ್ಸವಮೂರ್ತಿಯನ್ನು ಕೂರಿಸಲು ಸಾಧ್ಯವಾಗುವಂತೆ ನಿರ್ಮಿಸಿರುವ ಕಾಷ್ಟ ರಚನೆಗಳ ಮೇಲೆ ಹಿತ್ತಾಳೆ ಲೋಹದ ತಗಡನ್ನು ಹೊಡಿಸಲಾಗಿದೆ. ಬೃಂದಾವನ, ಕುದುರೆ ವಾಹನ, ವೀರಾಸದಲ್ಲಿರುವ ಬಣ್ಣದ ದೊಡ್ಡ ಗರುಡ, ಹಂಸವಾಹನ, ಕೂರ್ಮದ ಮೇಲೆರಿದ ಏಳು ಹೆಡೆಗಳ ಸುರುಳಿ ಪೀಠದ ಶೇಷ ಎರಡು ಪಾರ್ಶ್ವಗಳಲ್ಲಿ ಆನೆಗಳಿರುವ ಶೇಷ ಹಾಗೂ ಗಜವಾಹನಗಳಿವೆ. ವೀರಸನದಲ್ಲಿರುವ ಗರುಡ ವಾಹನಕ್ಕೆ ಬೆಳ್ಳಿಯ ತಗಡನ್ನು ಹೊದಿಸಿದೆ. ಈ ದೇವಾಲಯದಲ್ಲಿ ಕಾಲಕಾಲಕ್ಕೆ ನಡೆಯುವ ಉತ್ಸವಗಳಲ್ಲಿ ಈ ವಾಹನಗಳ ಮೇಲೆ ದೇವರನ್ನು ಮರೆಸುವ ಪರಿಪಾಠವಿದೆ.

ಆಲಯದ ಕಾಲ ಕುರಿತ ವಿಚಾರಗಳು

ಹೊಯ್ಸಳರ ದೇವಾಲಯಗಳನ್ನು ಕುರಿತು ತಲಸ್ಪರ್ಶಿ ಅಧ್ಯಯನ ಮಾಡಿರುವ ಡಾ. ಎನ್.ಎಸ್. ರಂಗರಾಜು ಅವರು ಈ ದೇವಾಲಯ ಹಾಗೂ ವಿಗ್ರಹಗಳು ಹೊಯ್ಸಳ ಕಾಲಕ್ಕೆ ಸೇರಿದವಲ್ಲ ಎನ್ನುವುದನ್ನು ವಿವರಿಸುತ್ತಾರೆ. "ಹೊಯ್ಸಳರ ಕಾಲದ ಬಹುತೇಕ ಶಿಲ್ಪಗಳು ಸೋಪುಗಲ್ಲಿನ ನಿರ್ಮಾಣಗಳಾಗಿವೆ. ಹೊಯ್ಸಳ ದೇವಾಲಯಗಳು ಎಲ್ಲೊ ನಿರ್ಮಾಣವಾಗಿರಲಿ ೯೦%ರಷ್ಟು ಸೋಪುಗಲ್ಲಿಗೆ ಆದ್ಯತೆಯನ್ನು ನೀಡಿಲಾಗಿದೆ. ಈ ರೀತಿಯ ಕಲ್ಲು ದ್ವಾರಸಮುದ್ರದ ಅಂದರೆ ಈಗಿನ ಹಳೇಬೀಡಿನ ಸಮೀಪ ದಲ್ಲೇ ಹೆಚ್ಚಾಗಿ ಸಿಗುತ್ತಿತ್ತು. ಅಂತಹ ಕಲ್ಲನ್ನು ಆ ಕಾಲದ ಶಿಲ್ಪಿಗಳು ನಾಡಿನ ಎಲ್ಲಾ ಭಾಗ ಗಳಲ್ಲಿಯೂ ಬಳಸಿದ್ದಾರೆ. ಅಂದರೆ ಕರ್ನಾಟಕದ ಒಳಗೆ ಮಾತ್ರವಲ್ಲದೆ, ಕರ್ನಾಟಕದಾಚೆಗಿನ ಹೊಯ್ಸಳರ

ಕಾಲದ ದೇವಾಲಯಗಳಲ್ಲಿ ಇಡೀ ದೇವಾಲಯಕ್ಕೆ ಸಾಧ್ಯವಾಗದಿದ್ದಾಗ ನವರಂಗದ ನಾಲ್ಕು ಕಂಬಗಳಿಗಾದರೂ ಸೋಪುಗಲ್ಲನ್ನು ಬಳಸಿರುತ್ತಾರೆ. ಹೊಯ್ಸಳರ ಕಾಲದ ಶಿಲ್ಪಗಳಲ್ಲಿ ಅಲಂಕಾರಿಕ ಕುಸುರಿಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಆಭರಣಗಳ ತೊಡಿಸುವಿಕೆಗೆ ಮಿತಿಯೇ ಇಲ್ಲವೆನ್ನಬಹುದು. ರಂಗನಾಥ ಸ್ವಾಮಿಯ ವಿಗ್ರಹಕ್ಕಾಗಲೀ ದೇವಿಯ ಮೂರ್ತಿಗಾಗಲಿ ಹೆಚ್ಚಿನ ಆಭರಣಗಳ ಅಲಂಕಾರವಾಗಲಿ ಕುಸುರಿ ಕೆತ್ತನೆಯಾಗಲಿ ಕಾಣುವುದಿಲ್ಲ.

ಈ ದೇವಾಲಯದ ವಾಸ್ತು ಮತ್ತು ಮೂರ್ತಿ ಶಿಲ್ಪವನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಿದಾಗ ಸಂಪನ್ಮೂಲ ಲಭ್ಯವಾದಂತೆ ಕಾಲಕಾಲಕ್ಕೆ ಕಟ್ಟಿಕೊಂಡು ಹೋಗಿರುವುದು ಸ್ಪಷ್ಟವಾಗುತ್ತದೆ. ಕೆಲವೆಡೆ ಅಸಮ ಪ್ರಮಾಣದ ವಿಸ್ತರಣವಿದೆ. ರಂಗನಾಥ ಸ್ವಾಮಿಯ ಗರ್ಭಗುಡಿ ಸುಖನಾಸಿ, ಅತ್ಯಂತ ಪ್ರಾಚೀನ ಕಾಲದಲ್ಲಿ ನಿರ್ಮಾಣವಾಗಿದೆ. ನವರಂಗವನ್ನು ವಿಸ್ತರಿಸಿ ಕಾಲಕ್ಕೆ ಆಲಮೇಲು ರಂಗನಾಯಕಿಯಮ್ಮನ ಆಲಯವನ್ನು ಕಟ್ಟಿರುವ ಸಾಧ್ಯತೆಯಿದೆ. ಅನಂತರ ದೇವಿಗುಡಿಯ ಪಕ್ಕದ ಎರಡು ಕೋಣೆಗಳನ್ನು ಕಟ್ಟಲಾಗಿದೆ. ಕೊನೆಯ ದೇವಿ ಗುಡಿಯ ನವರಂಗವನ್ನು ನಿರ್ಮಿಸಲಾಗಿದೆ. ಬೇರೆ ಬೇರೆ ಕಾಲಗಳಲ್ಲಿ ನಿರ್ಮಾಣವಾಗಿರುವುದರಿಂದ ದೇವಾಲಯಗಳ ಒಳ ಹಾಗೂ ಹೊರಭಾಗದಲ್ಲಿ ಗಮನಾರ್ಹ ವ್ಯತ್ಯಾಸಗಳಿವೆ. ಒಟ್ಟಾರೆಯಾಗಿ ವಿಜಯನಗರ ಅರಸರ ನಂತರ ಕಾಲದಲ್ಲಿ ನಿರ್ಮಾಣವಾಗಿದ್ದು, ಮೈಸೂರು ಒಡೆಯರ ಕಾಲದಲ್ಲಿ ಆಗಾಗ್ಗೆ ವಿಸ್ತರಿಸಲಾಗಿದೆ.

ದೇವಾಲಯ ಬೆಳಕಿಗೆ ಬಂದ ಬಗೆ

ಸುಮಾರು ಐನೂರು ವರ್ಷಗಳಷ್ಟು ಪ್ರಾಚೀನವಾದ ದೇವಾಲಯ ಕಳೆದ ನೂರಾರು ವರ್ಷಗಳ ಹಿಂದೆ ಬೆಳಕಿಗೆ ಬಂದಿತ್ತೆನ್ನುತ್ತಾರೆ. ಆದರೆ ಕಳೆದ ಇನ್ನೂರು ವರ್ಷಗಳಿಂದ ಈ ಆಲಯದಲ್ಲಿ ನಿತ್ಯ ಹಾಗೂ ವಿಶೇಷ ಕಟ್ಟೆಯ ಸೇವೆಗಳು ನಡೆಯುತ್ತಿವೆ. ಇದಕ್ಕೆ ಸಂಬಂಧಿಸಿದ ವಿವರಗಳು ಅಂದಿನಿಂದಲೂ ಸಿಗುತ್ತವೆ. ಆದರೆ ಹಿಂದೆ ಈ ಪೂಜೆ ಪುನಸ್ಕಾರಗಳಿಲ್ಲದೆ ಪೊದೆ ಬೆಳೆದು ಮುಚ್ಚಿ ಹೋಗಿತ್ತೆನ್ನುವುದು ಸ್ಪಷ್ಟವಾಗುವುದಿಲ್ಲ.

ದೇವಾಲಯದ ಸುತ್ತ ಹಳೆಯದೆನ್ನಬಹುದಾದ ಹಳ್ಳಿಯ ಬೆಳವಣಿಗೆ ಆಗಿದ್ದುದರ ಗುರುತುಗಳು ಸಿಕ್ಕಿಲ್ಲ. ಸಾಮಾನ್ಯವಾಗಿ ದೇವಾಲಯವನ್ನು ಬೆಟ್ಟದ ಮೇಲೆ ಕಟ್ಟಿದ ಬಳಿಕ, ಅದರ ಪೂಜೆ ಪುನಸ್ಕಾರ ಗಳಿಗಾಗಿ ಸೂಕ್ತವಾದ ಏರ್ಪಾಡು ಮಾಡುತ್ತಾರೆ. ಹಾಗಾಗಿ ಈ ದೇವಾಲಯಕ್ಕೂ ಅಂತಹದ್ದೊಂದು ವ್ಯವಸ್ಥೆ ಇದ್ದು ಕೊನೆಗೆ ಏನೋ ಕಾರಣಗಳಿಂದ ನಾಶವಾಗಿ ಅಲ್ಲಿ ಕಾಡು ಬೆಳೆದಿತ್ತೆಂದು ಹೇಳುತ್ತಾರೆ. ಆದರೆ ದೇವಾಲಯದ ಸುತ್ತಮುತ್ತಣ ಸ್ಥಳದ ಲಭ್ಯತೆಯನ್ನು ಗಮನಿಸಿದಾಗ, ದೇವಾಲಯ ಕಟ್ಟಿ, ಹತ್ತಿ ಬರುವ ದಾರಿಯನ್ನು ನಿರ್ಮಿಸಿಕೊಂಡ ಬಳಿಕ ಕಾಡು ಬೆಳೆಯುವಷ್ಟು ಕಾಲ ಈ ಆಲಯವಿರುವ ಸ್ಥಳಕ್ಕೆ ಯಾರೂ ಬರಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ.

ಮೂರ್ತಿಶಿಲ್ಪ

ಮೂರ್ತಿಶಿಲ್ಪದ ಕಲ್ಪನೆಗಳು ಭಾರತದಲ್ಲಿ ಸಿಂಧೂ ನದಿಯ ನಾಗರಿಕತೆಯಿಂದಲೂ ಕಾಣಬಹುದಾಗಿದೆ. ಮೊದಲು ರಚನೆಯಾಗಿರುವ ಗೂಳಿ, ಲಿಂಗ, ಪಶುಪತಿ, ಶಿವ, ನೃತ್ಯ ಮಾಡುವ ಸ್ತ್ರೀ ಮುಂತಾದ ಪ್ರಮುಖ ಶಿಲ್ಪಗಳು ಇಂದಿಗೂ ಚರ್ಚಿತ ವಿಷಯಗಳಾಗಿವೆ. ಸಾಮಾನ್ಯವಾಗಿ ಮೂರ್ತಿಶಿಲ್ಪಗಳನ್ನು ದೇವಾಲಯದ ಗರ್ಭಗೃಹ, ನವರಂಗ, ದೇವಕೋಷ್ಠ, ಶಿಖರ ಭಾಗ, ದೇವಾಲಯ ಹೊರಭಾಗ, ಹೀಗೆ ಹಲವು ಹತ್ತು ಕಡೆ ಸ್ಥಾಪಿಸಿರುವುದು ಕಂಡುಬರುತ್ತದೆ. ಇದರಲ್ಲಿ ಶಿಲ್ಪಿಯ ಕೈಚಳಕವೇ ಪ್ರಧಾನ ಪಾತ್ರವಹಿಸುತ್ತಿತ್ತು. ಇಂತಹ ಶಿಲ್ಪಗಳನ್ನು ಕೆತ್ತುವ ಉದ್ದೇಶವಾದರೂ ಏನು? ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಸಾಮಾನ್ಯವಾಗಿ ದೇವಾಲಯದ ಗರ್ಭಗುಡಿಯಲ್ಲಿರುವ ಮೂಲ ದೇವತೆಗೆ ಸಂಬಂಧಿಸಿದಂತೆ ಉಪದೇವತೆಗಳನ್ನು ಕೆತ್ತುತ್ತಿದ್ದರು. ದೇವಾಲಯಕ್ಕೆ ಹೆಚ್ಚಿನ ಸೌಂದರ್ಯ ಬರಲಿ ಎಂಬ ಕಾರಣಕ್ಕೂ ಇಂತಹ ಮೂರ್ತಿಶಿಲ್ಪಗಳನ್ನು ರಚಿಸಿರುವುದುಂಟು.

೧. ರಂಗನಾಥ ಸ್ವಾಮಿ : ದೇವಾಲಯದ ಗರ್ಭಗೃಹದಲ್ಲಿ ೪ ೧/೨ ಅಡಿ ಎತ್ತರದ ರಂಗನಾಥಸ್ವಾಮಿ ವಿಗ್ರಹವನ್ನು ಕಪ್ಪು ಕಡುಶಿಲೆಯಿಂದ ಕೆತ್ತಲಾಗಿದೆ. ಸಮಭಂಗದಲ್ಲಿ ನಿಂತಿರುವ ಸೌಮ್ಯಶಾಂತ ಮೂರ್ತಿ, ವಿಗ್ರಹದ ಮುಖದ ಭಾವ, ಕಣ್ಣು, ಮೂಗು, ಬಾಯಿ, ಕೆನ್ನೆಗಲ್ಲಗಳನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಮೂರ್ತಿಯ ಮೇಲುಗೈಗಳಲ್ಲಿ ಶಂಖ, ಚಕ್ರಗಳಿದ್ದು, ಅವನ್ನು ಕೈಗಳಲ್ಲಿರಿಸಿದ ಭಂಗಿ ಸಮರ್ಪಕವಾಗಿಲ್ಲ. ಮೇಲಿನ ಎರಡು ಕೈಗಳಿಗೆ ಹೋಲಿಸಿದರೆ, ಕೆಳಗಿನ ಕೆತ್ತನೆಗಳು ಅಸಮ ಪ್ರಮಾಣದಲ್ಲಿದೆ. ಭುಜದ ಭಾಗದಲ್ಲಿ ಗುಂಗುರು ಕೂದಲಿನ ಉಂಗುರಗಳು ಎರಡು ಭುಜಗಳಿಂದಲೂ ಇಳಿ ಬಿದ್ದಿರುವಂತೆ ಕಾಣುವ ವಿಶೇಷ ಕೆತ್ತನೆಯಿದೆ.

೨. ಶ್ರೀದೇವಿ, ಭೂದೇವಿ : ರಂಗನಾಥ ಸ್ವಾಮಿಯ ಮೊಣಕಾಲಿನ ನೇರಕ್ಕಿರುವ ಮೂಲಶಿಲ್ಪವನ್ನು ಕೆತ್ತಿರುವ ಕಲ್ಲಿನಲ್ಲಿಯೇ ಎಡ, ಬಲಗಳಲ್ಲಿ ಅರ್ಧಭಾಗದಷ್ಟು ಉಬ್ಬು ಕೆತ್ತನೆಯಲ್ಲಿರುವ ಎರಡು ಸ್ತ್ರೀ ಶಿಲ್ಪಗಳಿದ್ದು, ಅವು ಶ್ರೀದೇವಿ, ಭೂದೇವಿ ಆಗಿದ್ದಿರಬಹುದು. ಇವುಗಳಿಗೂ ಉದ್ದವಾದ ಕಿರೀಟವಿದ್ದು, ಎರಡೆರಡು ಕೈಗಳು ಮಾತ್ರ ಸ್ಪಷ್ಟವಾಗಿ ಕಾಣುತ್ತದೆ. ಒಂದು ಕೈಯನ್ನು ಇಳಿಬಿಟ್ಟ ಮತ್ತೊಂದು ಕೈಯನ್ನು ಅರ್ಧಕ್ಕೆ ಮಡಿಸಿದಂತೆ ಕೆತ್ತಲಾಗಿದೆ. ಆದರೆ ಈ ಸ್ತ್ರೀ ವಿಗ್ರಹಗಳ ಮೂಖಭಾವ, ಅಂಗಾಂಗಗಳಲ್ಲಿ ಸ್ಫುಟತೆಯಿಲ್ಲ.

೩. ದ್ವಾರಪಾಲಕರು : ಸುಖನಾಸಿಯ ದ್ವಾರದ ಎಡ ಮತ್ತು ಬಲ ಪಾರ್ಶ್ವಗಳ ನವರಂಗದ ಭಾಗವನ್ನು ಸುಮಾರು ೫ ಅಡಿ ಅಗಲಕ್ಕೆ ವಿಸ್ತರಿಸಿಕೊಳ್ಳಲಾಗಿದೆ. ದ್ವಾರದ ಇಕ್ಕೆಲಗಳಿರುವ ಎರಡು ಕೋಷ್ಠಕಗಳಲ್ಲಿ, ತ್ರಿಭಂಗದಲ್ಲಿರುವ ಸುಮಾರು ೪ ಅಡಿಗಳಷ್ಟು ಎತ್ತರದ ವೈಷ್ಣವ ದ್ವಾರಪಾಲಕರ ಉಬ್ಬು ಕೆತ್ತನೆ

ವಿಗ್ರಹಗಳಿವೆ. ಕೋರೆಹಲ್ಲುಗಳಿಂದ ಕೂಡಿದ ಈ ದ್ವಾರಪಾಲಕರು ಅಗಲವಾಗಿ ಅರಳಿಸಿದ ಕಣ್ಣುಗಳಿಗೆ ಬಿಳಿ ಬಣ್ಣ ಲೇಪಿಸಿರುವುದರಿಂದ ಅದು ಮತ್ತಷ್ಟು ರೌದ್ರವಾಗಿ ಕಾಣುತ್ತದೆ. ದ್ವಾರ ಪಾಲಕರ ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಕೆಳಗೈಗಳಲ್ಲಿ ಒಂದರಲ್ಲಿ ಗದೆಯಿದ್ದರೆ, ಮತ್ತೊಂದು ಕೈ ವರದ ಹಸ್ತವಾಗಿದೆ. ವಸ್ತ್ರಾಭರಣಗಳನ್ನು ಶಿಲ್ಪದಲ್ಲಿಯೇ ಕಂಡರಿಸಲಾಗಿದೆ.

೪. ದೇವಿ ವಿಗ್ರಹ : ದೇವಿ ಆಲಯದಲ್ಲಿ ಚೌಕಾಕಾರದ ಗರ್ಭಗೃಹದಲ್ಲಿ ಸಮಭಂಗಿಯಲ್ಲಿ ಆಸೀನವಾದ ಚತುರ್ಬಾಹು, ಆಲಮೇಲ ರಂಗನಾಯಕಿಯ ಮೂರ್ತಿಗೆ ಚಿಕ್ಕ ಕಿರೀಟ ಮತ್ತು ಅಗಲವಾದ ಕರ್ಣ ಕುಂಡಲಗಳಿವೆ. ಹಿಂದಿನ ಹಸ್ತಗಳಲ್ಲಿ ಕಮಲಗಳಿದ್ದರೆ, ಮುಂದಿನ ಕೈಗಳಲ್ಲಿ ಒಂದು ವರದ ಹಸ್ತ ಮತ್ತೊಂದು ಅಭಯ ಹಸ್ತವಾಗಿದೆ. ಮೂಲ ವಿಗ್ರಹದಲ್ಲಿ ಕೆಲವು ಕಂಠಾಭರಣ ಹಾಗೂ ಕೈಗಳಲ್ಲಿ ಆಭರಣಗಳ ಸಹಿತ ಅಧೋವಸ್ತ್ರವನ್ನು ಶಿಲ್ಪಕ್ಕೆ ತೋಡಿಸಿದಂತೆ ನಿರಿಗೆಗಳೊಡನೆ ಕೆತ್ತಲಾಗಿದೆ. ಒಂದು ಕಾಲನ್ನು ಅರೆ ಮಡಿಸಿ ಮತ್ತೊಂದನ್ನು ಕೆಳಗೆ ಇಳಿಬಿಟ್ಟಂತೆ ಕೆತ್ತಲಾಗಿದೆ.

೫. ಗಜೇಂದ್ರ ವರದಸ್ವಾಮಿ : ಕಲ್ಯಾಣಿಯ ಸನಿಹದಲ್ಲಿ ಗಜೇಂದ್ರ ವರದಸ್ವಾಮಿ ಪುಟ್ಟ ಗುಡಿಯಿದೆ. ಶಂಖು ಚಕ್ರ ಗದಾ ಹಸ್ತಾಂಕಿತನಾಗಿ ಇನ್ನೊಂದು ಹಸ್ತವನ್ನು ಆನೆಯ ಮೇಲೆ ಇರಿಸಿರುವ ಮೂರ್ತಿಗೆ ಹೂ ಬಳ್ಳಿಗಳ ಕೆತ್ತನೆಯುಳ್ಳ ಕೀರ್ತಿಮುಖ ಸಹಿತವಾದ ಪ್ರಭಾವಳಿಯನ್ನು ಮೂಲ ವಿಗ್ರಹದ ಶಿಲೆಯಲ್ಲಿಯೇ ಕೆತ್ತಲಾಗಿದೆ. ಸುಮಾರು ಮೂರಡಿ ಎತ್ತರದ ವಿಗ್ರಹವನ್ನು ಪೀಠದ ಮೇಲಿರಿಸಿದೆ. ಅಷ್ಟೇನೂ ಆಕರ್ಷಕವಲ್ಲದ ಮುಖಭಾವವುಳ್ಳ ಮೂರ್ತಿಗೆ ನಾಮವನ್ನು ಧಾರಾಳವಾಗಿ ಹಚ್ಚಲಾಗಿದೆ. ಮೂರ್ತಿಯ ಮೈಮೇಲೆ ಕೆಲವು ಆಭರಣಗಳನ್ನು ಕೆತ್ತಲಾಗಿದೆ. ದೇವರಿಗೆ ನಿತ್ಯ ಯಾವ ಆಭರಣಗಳನ್ನು ಹಾಕಿ ಅಲಂಕರಿಸುವುದಿಲ್ಲ. ನಿತ್ಯವು ಪೂಜೆ ನಡೆಯುವುದಿಲ್ಲ. ಸಾಧಾರಣವಾದ ಕಟ್ಟಡವನ್ನು ಇತ್ತೀಚಿಗೆ ನವೀಕರಿಸಲಾಗಿದೆ. ಜಾತ್ರೆಗಳ ಸಂದರ್ಭದಲ್ಲಿ ಗಜೇಂದ್ರ ಮೋಕ್ಷ ಆಚರಣೆಯನ್ನು ನಡೆಸುತ್ತಾರೆ.

೬. ಹನುಮಂತರಾಮ : ರಂಗನಾಥಸ್ವಾಮಿಯ ಮೆಟ್ಟಲ ದಾರಿಯಲ್ಲಿ ಹನುಮಂತನ ಪುಟ್ಟಗುಡಿ ಇದೆ. ಬಂಡೆಗಲ್ಲಿನ ಉಬ್ಬು ಶಿಲ್ಪವಾಗಿ ಸಂಕೋಲೆ ಹನುವಂತನನ್ನು ಕೆತ್ತಲಾಗಿದೆ. ಆಗಾಗ್ಗೆ ಹನುವಂತನಿಗೆ ಪೂಜೆಯ ಭಾಗ್ಯ ಸಿಗುತ್ತದೆ. ವಿಗ್ರಹದಲ್ಲಿಯೇ ಕೆಲವು ಅಲಂಕರಣಗಳಿವೆ ವಿನಾ ಬೇರೆ ಆಭರಣಗಳಲ್ಲಿ. ಹನುಮಂತನ ನಡುವಿಗೊಂದು ವಸ್ತ್ರವನ್ನುಳಿದಂತೆ ಬೇರೆ ವಸ್ತುಗಳಿಲ್ಲ. ತೇರು, ಉತ್ಸವಗಳಲ್ಲಿ ಮಾತ್ರ ಸಂಭ್ರಮವಿರುತ್ತದೆ. ಬೆಟ್ಟದಲ್ಲಿ ಹನುಮಂತನನ್ನು ಆರಾಧಿಸುವ ಹಲವು ಸ್ಥಳಗಳಿದ್ದರೂ ಗುಡಿ ಕಟ್ಟಿರುವುದು ಇಲ್ಲಿ ಮಾತ್ರ.

೭. ಗಂಗಾಧರೇಶ್ವರ ಸ್ವಾಮಿ : ಬೆಟ್ಟದ ಸೋಮೇಶ್ವರನ ಕೆರೆಯ ಬಳಿ ಗಂಗಾಧರೇಶ್ವರ ಸ್ವಾಮಿಯ ಆಲಯವಿದೆ. ಈ ದೇವಾಲಯದ ಗರ್ಭಗುಡಿ ಸುಖನಾಸಿಗಳಿಂದ ಮುಂದೆ ತೆರೆದ ಮಂಟಪ ಕೂಡಿದೆ.

ದೇವರ ಅಲಂಕಾರಕ್ಕೆ, ಉತ್ಸವಕ್ಕೆ ಬೇಕಾದ ವಸ್ತುಗಳನ್ನು ಇಡಲಾಗಿದೆ. ಲಿಂಗದ ಮುಂದೆ ಇರುವ ನಂದಿ ವಿಗ್ರಹ ಮುದ್ದಾಗಿದೆ. ನಂದಿಯ ಮೈಯನ್ನು ಅನೇಕ ಸರ್ಪಗಳು ಬಳಸಿರುವ ಕೆತ್ತನೆಯಿದೆ. ಆದರೆ ಗುಡಿಯ ಮುಂಭಾಗದಲ್ಲಿ ಇರುವ ನಂದಿ ಸಾಧಾರಣ ಕೆತ್ತನೆಯದಾಗಿದೆ. ಸಣ್ಣಕಲ್ಲಿನ ಪೀಠದ ಮೇಲೆ, ಪ್ರತ್ಯೇಕವಾಗಿ ಇರಿಸಿರುವ ನಂದಿಗೆ ಶಿಲೆಯಲ್ಲಿಯೇ ಕೆಲವು ಅಲಂಕಾರಿಕ ಕೆತ್ತನೆಗಳಿವೆ.

ಅಡಿಟಿಪ್ಪಣಿಗಳು

೧. **ಅಪರ್ಣ ಕೂ.ಸ, ದೇವಾಲಯ ವಾಸ್ತುಶಿಲ್ಪ ಪರಿಚಯ, ಪು.೯೫**

೨. ರಂಗರಾಜು ಎನ್.ಎಸ್., ಸಂದರ್ಶನ, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩. **ಬಂಗಾರು ನಾಯಕ, ಬಿಳಿಗಿರಿರಂಗನಬೆಟ್ಟ, ಸಂದರ್ಶನ**

೪. ಸಾಧ್ವಿ ದಿನಪತ್ರಿಕೆ, ೨೬.೪.೧೯೩೭

೫. **ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು.೯೫**

೬. **ಬಂಗಾರು ನಾಯಕ, ಬಿಳಿಗಿರಿರಂಗನ ಬೆಟ್ಟ, ಸಂದರ್ಶನ**

೭. **ಸುಂದರರಾಜಯ್ಯಂಗಾರ, ಬಿಳಿಗಿರಿರಂಗನಬೆಟ್ಟ, ಸಂದರ್ಶನ**

ಅಧ್ಯಾಯ ೫

ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ

೫

ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ

ಬಿಳಿಗಿರಿರಂಗನಬೆಟ್ಟ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿ ಬೆಳವಣಿಗೆಯಾದಂತೆ ಅನೇಕ ಸಮುದಾಯಗಳು ರಂಗನಾಥಸ್ವಾಮಿಯನ್ನು ಅವಲಂಬಿಸುವಂತಾಯಿತು. ಈ ಪರಿಸರದ ಸಮುದಾಯಗಳಲ್ಲಿ ಕೆಲವರು ಈ ಕ್ಷೇತ್ರದ ಭಕ್ತರಾಗಿ, ಇನ್ನೂ ಕೆಲವರು ಇಲ್ಲಿಯ ವ್ಯವಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಟ್ಟು ಜನ ಸಮುದಾಯದ ಧಾರ್ಮಿಕ, ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳು ಸಂಸ್ಕೃತಿಯಲ್ಲಿ ಸಮಾವೇಶಗೊಂಡಿದೆ. ಈ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇಲ್ಲಿಯ ಪ್ರಾದೇಶಿಕ ಭಿನ್ನತೆಯೂ ವ್ಯಕ್ತವಾಗುತ್ತದೆ.

ಧಾರ್ಮಿಕ ವ್ಯವಸ್ಥೆ

ಮಾನವ ತನ್ನ ಮಾನಸಿಕ ಪ್ರಪಂಚದ ಬೇಡಿಕೆಗಳನ್ನೆಲ್ಲ ಈಡೇರಿಸಿಕೊಳ್ಳಲು ರೂಪಿಸಿಕೊಂಡ ಸಂಸ್ಥೆಯೇ ಧರ್ಮ. ಧರ್ಮವೆಂಬುದು ಮೂಲಭೂತವಾಗಿ ಒಂದು ನಂಬಿಕೆ ಹಾಗೂ ಭರವಸೆಯ ವ್ಯವಸ್ಥೆ. ಧರ್ಮವು ಒಂದು ಸಮಾಜದ ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಯಲ್ಲಿನ ವಿಧಿ ನಿಷೇಧಗಳನ್ನು ವ್ಯಾಖ್ಯಾನಿಸುವ ಪುರಾಣಗಳನ್ನು ಒಳಗೊಂಡಿರುತ್ತದೆ. ಇವುಗಳ ನೆರವಿನಿಂದ ಧಾರ್ಮಿಕತೆಯನ್ನು ಸಮಾಜವು ಅಗೋಚರಿತ ರೂಪದ ತನ್ನ ನಂಬಿಕೆಗಳಿಗೆ ಒಂದು ಸಾಕಾರ ರೂಪಕೊಟ್ಟು ಅವನ್ನು ಗಟ್ಟಿಗೊಳಿಸುತ್ತದೆ.[೧]

ಬಿಳಿಗಿರಿ ರಂಗನ ಬೆಟ್ಟದ ಧಾರ್ಮಿಕ ಸಂಸ್ಕೃತಿಯ ಪರಂಪರೆಯನ್ನು ಪರಿಶೀಲಿಸುವಾಗ ವಿಭಿನ್ನ ರೀತಿಯ ಚಿತ್ರಗಳು ಕಾಣಸಿಗುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಇಂದು ಚಾಲ್ತಿಯಲ್ಲಿರುವ ಧರ್ಮದ ಸ್ವರೂಪ ಅನೇಕ ಮಜಲುಗಳನ್ನು ದಾಟಿ ಬಂದಿದೆ. ಬೆಟ್ಟದ ದೈವಸ್ವರೂಪವನ್ನು ಹುಡುಕುತ್ತ ಹೋದಂತೆ ಕಾಲ ಬಹಳ ದೂರಕ್ಕೆ ಸೆಳೆದೊಯ್ಯುತ್ತದೆ. ಸುಮಾರು ೨೫೦೦ ವರ್ಷಗಳ ಮಾನವ ವಸತಿಯ ಇತಿಹಾಸವಿರುವ ಬೆಟ್ಟದ ಧಾರ್ಮಿಕ ವ್ಯವಸ್ಥೆಯ ಮೂಲಸ್ವರೂಪ ಸ್ಪಷ್ಟವಾಗಿರದಿದ್ದರೂ ಅದು ಈಗಿನಂತೆ ರಂಗನಾಥಸ್ವಾಮಿಯ ವೈದಿಕ ಮೂಲದಿಂದ ಗುರುತಿಸುವಂತೆ ಇರಲಿಲ್ಲ ಎನ್ನುವುದು ಖಚಿತ. ಈ ಸ್ಥಳದ

ಮೂಲ ನಿವಾಸಿಗಳೆಂದು ಸೋಲಿಗರನ್ನು ಗುರುತಿಸಿಕೊಂಡರೆ, ಅವರು ಸರ್ವ ಚೇತನವಾದಿ ಧರ್ಮ, ಬೆಟ್ಟಕ್ಕೆ ಅತ್ಯಂತ ಪ್ರಾಚೀನ ಧರ್ಮ ಎಂದು ಹೇಳಬಹುದು.

ಈ ಅಧ್ಯಯನದಲ್ಲಿ ಬಿಳಿಗಿರಿರಂಗನ ಬೆಟ್ಟದ ರಂಗನಾಥ ಸ್ವಾಮಿಯ ಹಿನ್ನಲೆಯನ್ನು ವಿಷ್ಣು, ರಂಗನಾಥ, ವೆಂಕಟೇಶ್ವರ ಇವರ ಜೊತೆಗಿಟ್ಟು ನೋಡಲಾಗಿದೆ. ರಂಗನಾಥ ಸ್ವಾಮಿಗೆ ಒಂದೆಡೆ ಶಿಷ್ಟ ಆಚರಣೆಗಳ ಆರಾಧನಾ ಸ್ವರೂಪವನ್ನು ಗುರುತಿಸಿದಂತೆ ಇನ್ನೊಂದೆಡೆ ಅಸ್ತಿತ್ವದಲ್ಲಿರುವ ಜನಪದ ಆಚರಣೆಗಳನ್ನು ಗುರುತಿಸಲಾಗಿದೆ. ಬೆಟ್ಟವನ್ನು ಆವರಿಸಿಕೊಂಡ ವೈದಿಕ ಧರ್ಮ ಇಲ್ಲಿ ಹುಟ್ಟು ಹಾಕಿದ ಪೌರಾಣಿಕ ಹಾಗೂ ಧಾರ್ಮಿಕ ಆವರಣದಲ್ಲಿ ಬೆಳೆದ ವ್ಯವಸ್ಥೆಗಳೆಲ್ಲವನ್ನು ವಿಸ್ತೃತವಾಗಿ ಪರಿಭಾವಿಸುವಂತೆಯೇ ಇದಕ್ಕೆ ಸಮಾನಾಂತರವಾಗಿ ಸೋಲಿಗರ ಬದುಕಿನಲ್ಲಿ ಧರ್ಮ-ದೇವರು ಅನಾವರಣಗೊಂಡಿರುವ ಬಗೆಯನ್ನು ದಾರ್ಮಿಕಾಚರಣೆಗಳನ್ನು ಇಲ್ಲಿ ಅವಲೋಕಿಸಲಾಗಿದೆ. ಬಿಳಿಕಲ್ ಬೆಟ್ಟ, ಬಿಳಿಗಿರಿರಂಗನ ಬೆಟ್ಟವೆಂದು ಪರಿವರ್ತನೆಯಾಗಲು ರಂಗನಾಥಸ್ವಾಮಿಯ ಪ್ರಭಾವವೇ ಕಾರಣವಾಗಿದೆ ಎನ್ನುವ ಅಂಶವನ್ನು ಪೂರಕವಾದ ಎಲ್ಲಾ ವಿವರಗಳನ್ನು ಅವಲೋಕಿಸಲಾಗಿದೆ. ಬಿಳಿಗಿರಿರಂಗನ ಬೆಟ್ಟದ ಜನರಲ್ಲಿರುವ ನಂಬಿಕೆ, ಆಚರಣೆ, ಸಂಪ್ರಾದಾಯ, ಮಾಂತ್ರಿಕತೆ ಮುಂತಾದವನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ದೊಡ್ಡ ಸಂಪಿಗೆ ಮರ

ಸುಮಾರು ೭೦ ಅಡಿಗಳ ಸುತ್ತಳತೆಯನ್ನು ಪಡೆದ, ನೂರಾರು ಅಡಿ ಎತ್ತರವಾದ ದೊಡ್ಡಸಂಪಿಗೆ ಮರವೊಂದು ಬಿಳಿಗಿರಿರಂಗನ ಬೆಟ್ಟದ ಗುಂಡಾಲ್ ಕಣಿವೆಯಲ್ಲಿದೆ. ಬಿಳಿಗಿರಿರಂಗನ ಬೆಟ್ಟದ ನಿತ್ಯಹರಿದ್ವರ್ಣ ವನಗಳಲ್ಲಿ ಸಂಪಿಗೆ ಮರಗಳು ಗಮನಾರ್ಹ ಸಂಖ್ಯೆಯಲ್ಲಿವೆ. ಸುಮಾರು ೩೦೦-೪೦೦ ವರ್ಷಗಳಷ್ಟು ವಯಸ್ಸಾದ ಈ ಸಂಪಿಗೆ ಮರವನ್ನು ಶ್ವೇತಾಚಲ ಮಹಾತ್ಮೆಯಲ್ಲಿ ಬಹಳ ಪುರಾತನ ಎಂದಿದ್ದರೂ, ಅದು ವೈಜ್ಞಾನಿಕವಾಗಿ ಸರಿಯಲ್ಲ. ಬಿಳಿಗಿರಿರಂಗನ ಬೆಟ್ಟವನ್ನು ಋಷಿಮುನಿಗಳು ಅಡ್ಡಾಡಿದ ಸ್ಥಳವೆಂದು ಪ್ರಚಾರಪಡಿಸಿರುವುದರಿಂದ, ದೊಡ್ಡ ಸಂಪಿಗೆಯ ಬಳಿಯೇ ವಾಲಬಿಲ್ಯಾದಿ ಋಷಿಗಳು ತಪಸ್ಸು ಮಾಡುತ್ತಿದ್ದರೆಂದು ಸ್ಥಳ ಪುರಾಣವಾದಿಸುತ್ತದೆ. ದೊಡ್ಡ ಸಂಪಿಗೆಯ ಮರದ ಅಗಾಧತೆ ಅದಕ್ಕೊಂದು ಪೌರಾಣಿಕ ಪರಿವೇಷವನ್ನು ಕಟ್ಟಿಕೊಳ್ಳಲು ನೆರವಾಗಿದೆ. ಆ ಮರದ ಮೂರು ರೆಂಬೆಗಳಲ್ಲಿ ಮೂರು ದೇವತೆಗಳಾದ ಬ್ರಹ್ಮ ವಿಷ್ಣು, ಮಹೇಶ್ವರರು ನೆಲೆಸಿದ್ದಾರೆಂದು ಸ್ಥಾಪಿಸುವ ಪ್ರಯತ್ನವೂ ಸ್ಥಳ ಪುರಾಣದಲ್ಲಿ ನಡೆಯಿತು.

ಆದರೆ ಸ್ಥಳ ಮಹಾತ್ಮೆಯಂತೆ ಈ ವೃಕ್ಷದಲ್ಲಿ ಇರುವವರು ಶಿವ ಪಾರ್ವತಿಯರು ಮಾತ್ರ. ಮರದ ಬುಡದಲ್ಲಿ ಜೋಡಿಸಿಟ್ಟಿರುವ ಶಿಲೆಗಳು ಸೋಲಿಗರಿಗೆ ಶಿವಲಿಂಗಗಳಾಗಿ ಕಾಣುತ್ತವೆ. ಬೆಟ್ಟದಲ್ಲಿ ಶೈವಧರ್ಮವನ್ನು ಯಶಸ್ವಿಯಾಗಿ ತಂದು ಸೇರಿಸಿದ ಮನಸ್ಸುಗಳು ಪ್ರತಿಯೊಂದರಲ್ಲೂ ಶೈವಾಂಶಗಳನ್ನು

ಕಂಡುಕೊಳ್ಳುತ್ತದೆ. ಸಂಪಿಗೆ ಮರ ಇಲ್ಲಿ ಬೆಳೆದದ್ದಕ್ಕೊಂದು ಪೂರಕವಾದ ಕಥೆಯು ಇವರಲ್ಲಿದೆ. ಶಿವ-ಪಾರ್ವತಿ ಕುಕ್ಕೆಯಲ್ಲಿ ಸಂಪಿಗೆ ಸಸಿಯನ್ನಿಟ್ಟು, ಊಟ ಮಾಡಿದ ಬಳಿಕ, ಅದನ್ನು ಜೊತೆಯಲ್ಲಿ ಕೊಂಡುಹೋಗಲು ಮರೆತು ಹೋದರು. ಅದು ಅಲ್ಲಿಯೇ ಉಳಿದು ಬೆಳೆದು ದೊಡ್ಡ ಸಂಪಿಗೆಯಾಗಿದೆ. ಶಿವ-ಪಾರ್ವತಿಯರು ತಮ್ಮಂತೆ ಊಟ ಮಾಡುವವರೆಂದು ಕಲ್ಪಿಸಿಕೊಳ್ಳುವ ಮನಸ್ಸುಗಳಿಗೆ ಆ ದೇವರು ಸಹ ತಮ್ಮಂತೆಯೇ ಮರೆವಿನ ಗುಣವನ್ನು ಪಡೆದಿದ್ದಾರೆನ್ನುವುದು ಸೋಜಿಗವೆನಿಸುವುದಿಲ್ಲ. ಇನ್ನೊಂದು ಮೂಲದವರು ಮಹಾದೇಶ್ವರನು ನೆಟ್ಟು ಹೋದದ್ದರಿಂದ ಬೆಳೆದ ಮರವಿದೆಂದು ಸಮರ್ಥಿಸುತ್ತಾರೆ. ಮಹಾದೇಶ್ವರರ ಮಕ್ಕಳೇ ಈ ಸೋಲಿಗರು ಎನ್ನುತ್ತಾ ಇತಿಹಾಸದೊಳಗೆ ಐತಿಹ್ಯ ಬೆರೆಸಿದ ಮನಸ್ಸುಗಳು ಈ ಮರವನ್ನು ಸಾಕ್ಷಾತ್ ಮಹಾದೇಶ್ವರನಿಗೆ ತಳುಕು ಹಾಕಿ ಕತೆಯೊಂದನ್ನು ಹೆಣೆಯಲಾಗಿದೆ.

ಆದರೆ ಇವರ ಕಥೆಯನ್ನು ಒಪ್ಪಿಕೊಳ್ಳದ ವೈಷ್ಣವ ಮನಸ್ಸುಗಳು ಈ ಮರದ ಕೆಳಗೆ ಸಾಲಿಗ್ರಾಮಗಳಿವೆ ಎಂದು ಇಡಿಯಾಗಿ ಆವರಣವನ್ನು ವೈಷ್ಣವ ಪಕ್ಷಪಾತಿಯಾಗಿ ಪರಿವರ್ತಿಸುವ ಕಾರ್ಯ ಮಾಡುತ್ತವೆ. ಇದು ಶೈವಕ್ಷೇತ್ರ. ಇದು ವೈಷ್ಣಣ ಕ್ಷೇತ್ರವೆಂದು ಪ್ರತಿಪಾದಿಸುವ ಆಯಾ ಮತಧರ್ಮಗಳ ಅನುಯಾಯಿಗಳು, ತನ್ನಷ್ಟಕ್ಕೆ ವಿಶಾಲವಾಗಿ ಬೆಳೆದು ಮೌನದಲ್ಲಿ ನಿಂತು ಪ್ರಕೃತಿಯ ಸೃಷ್ಟಿಯಲ್ಲಿರುವ ರಹಸ್ಯವನ್ನು ಸಾರುವಂತೆ ನಿಂತ ಮರವೊಂದನ್ನು, ತಮ್ಮ ಮತಧರ್ಮ ಸೇರಿಸುವ ಪ್ರಯತ್ನ ಮಾಡಿದ್ದಾರೆ. ಇಂದಿಗೂ ಸಂಪಿಗೆ ಮರವನ್ನು ಸುತ್ತಲೂ ಆವರಿಸಿರುವ ಶಿಲಾರಾಶಿಯ ಸ್ವರೂಪವನ್ನು ಗಮನಿಸಿದರೆ, ಅವು ಲಿಂಗಗಳಾಗಿ ಆರಾಧಿಸಲ್ಪಡುತ್ತಿರುವುದು ಕಂಡುಬರುತ್ತದೆ. ಅವಕ್ಕೆ ವಿಭೂತಿಯನ್ನು ಲೇಪಿಸಿದ್ದಾರೆ.

ಸಂಪಿಗೆ ಮರದ ಬುಡದಲ್ಲಿ ಭಕ್ತರು ತಂದು ಜೋಡಿಸಿದ ನುಣ್ಣನೆಯ ಶಿಲೆಗಳಿಂದ ಭಕ್ತಿಯ ಆವರಣವನ್ನು ಸೃಷ್ಟಿ ಮಾಡಿಕೊಡಲಾಗಿದೆ. ಸೋಲಿಗರು ವರ್ಷಕ್ಕೊಮ್ಮೆ ಅಲ್ಲಿಗೆ ಹೋಗಿ ರೊಟ್ಟಿಪರ ಮಾಡಿ, ಹಾಡುಕೆ ಮತ್ತು ಗೋರುಕೆಗಳಿಂದ ತಮ್ಮ ಭಕ್ತಿ ಮತ್ತು ಪ್ರೀತಿಯನ್ನು ಸಮರ್ಪಿಸುತ್ತಾರೆ. ಒಮ್ಮೆ ಸೋಲಿಗ ಹೆಣ್ಣುಮಗಳು ತನ್ನನ್ನು ಒಲಿದ ಹುಡುಗನಿಗೆ ಮರ ಹತ್ತಿ ಸಂಪಿಗೆ ತಂದರೆ ನಾನೂ ನಿನ್ನನ್ನು ಮದುವೆಯಾಗುತ್ತೇನೆಂದು ಅಸಾಧುವಾದ ಸವಾಲನ್ನು ಎಳೆದಳು. ತಾನೂ ಮನಸಾರೆ ಮೆಚ್ಚಿದ ತರುಣಿಯ ಬಗೆಗಿನ ಪ್ರೀತಿಯನ್ನು ಕಳೆದುಕೊಳ್ಳಲಿಚ್ಛಿಸದ ತರುಣ ಈ ಸವಾಲನ್ನು ಸ್ವೀಕರಿಸಿ ಮರವನ್ನೇರಿ ಸಂಪಿಗೆ ಕಿತ್ತು ತಂದದ್ದೇ ಕತೆಯಾಗಿದೆ.

ಇಲ್ಲಿರುವ ಲಿಂಗಗಳನ್ನು ಅಲ್ಲಿಯೇ ಪೂಜಿಸಬೇಕು. ಅವುಗಳನ್ನು ಬೇರೆಡೆಗೆ ಕೊಂಡೊಯ್ಯದಂತೆ ಹಾಗೂ ಕದಲಿಸದಂತೆ ಬಿಗಿ ಹಾಕುತ್ತಾರೆ. ಅವುಗಳನ್ನು ಬೇರೆಡೆಗೆ ತಂದರೆ, ದೊಡ್ಡಸಂಪಿಗೆ ಮರವನ್ನು ಹತ್ತಿದರೆ, ಮರಕ್ಕೆ ಚಪ್ಪಲಿ ತಾಗಿಸಿದರೆ ಮರದಲ್ಲೇ ಇರುವ ಸರ್ಪ ಸುಮ್ಮನೆ ಬಿಡುವುದಿಲ್ಲವೆಂಬ ನಂಬಿಕೆ. ಒಬ್ಬನು ಈ ಹೇಳಿಕೆಯನ್ನು ಪರೀಕ್ಷಿಸಲೆಂದು ಚಪ್ಪಲಿ ಹಾಕಿಕೊಂಡು ಮರ ಹತ್ತಿದ್ದಾಗ ಸರ್ಪ ಅಟ್ಟಿಸಿಕೊಂಡು ಬಂದಿತೆಂದೂ, ಆತ ರಕ್ತಕಾರಿ ಕೆಳಗೆ ಬಿದ್ದು ತಾನೂ ಮಾಡಿದ್ದು ತಪ್ಪಾಯ್ತು ಎಂದು

ಕ್ಷಮೆಕೋರಿ ಪಾರಾದನೆಂಬ ಕತೆ ಹೇಳಿ ಮರದ ಬಗ್ಗೆ ಭಯದ ಅಂಕೆ ಇಟ್ಟಿದ್ದಾರೆ. ಮರಕ್ಕೆ ದೈವತ್ವವನ್ನು ಆವಾಹಿಸಿಕೊಟ್ಟವರು ಅದರ ದೈವತ್ವವನ್ನು ಉಳಿಸಿಕೊಳ್ಳುವ ಸಲುವಾಗಿ, ಈ ಬಗೆಯ ಸಾಕಷ್ಟು ಕತೆಗಳನ್ನು ಚಾಲ್ತಿಯಲ್ಲಿಟ್ಟಿದ್ದಾರೆ.

ಸೋಲಿಗರು ಆರಾಧ್ಯ ಕ್ಷೇತ್ರವಾದ ದೊಡ್ಡ ಸಂಪಿಗೆಗೆ, ಆಧುನಿಕ ಯುಗದಲ್ಲೂ, ಧ್ಯಾನ ಮಾಡಲು ಬಂದ ಒಬ್ಬೊಬ್ಬರು ಕೆಲವು ದಿನಗಳ ಮಾತ್ರ ಇದ್ದು ಹೋರಟು ಹೋದರೆನ್ನುತ್ತಾರೆ. ಈ ಮರದ ಸುತ್ತಲಿರುವ ಪ್ರಶಾಂತತೆಯ ವಾತಾವರಣಕ್ಕೆ ಆಕರ್ಷಿತರಾಗಿದ್ದ ಮೈಸೂರಿನ ರಾಜರಾಗಿದ್ದ ಜಯಚಾಮರಾಜ ಒಡೆಯರು ಸೂರ್ಯಗ್ರಹಣದ ದಿನ ಬಂದು ಪೂಜಿಸಿದ್ದನ್ನು, ಜೊತೆಯಲ್ಲಿ ಬಂದಿದ್ದ ಸುತ್ತೂರ ಮಠದ ಶಿವರಾತ್ರಿ ರಾಜೇಂದ್ರಸ್ವಾಮಿಗಳು ದಾಖಲಿಸಿದ್ದಾರೆ. ದೊಡ್ಡ ಸಂಪಿಗೆಗೆ ಹೋಗುವಾಗ "ಅಲ್ಲಿ ಆನೆಗಳ ಕಾಟ, ತೋಣಚಿಗಳ ಕಾಟವೂ ಇತ್ತು. ದೊಡ್ಡ ಸಂಪಿಗೆಮರದ ಸಮೀಪದಲ್ಲಿಯೇ ಭಾರ್ಗವಿ ನದಿ ಹರಿಯುತ್ತಿದೆ. ಆ ನದಿಯಲ್ಲಿ ಮಹರಾಜರು ಸ್ನಾನ ಮಾಡಿ ಒಂದು ಗಂಟೆಯ ಕಾಲ ಒದ್ದೆ ಬಟ್ಟೆಯಲ್ಲಿ ಜಪತಪಗಳನ್ನು ಮಾಡಿದ್ದರು.[೨]

ಕಲ್ಯಾಣಿ ಕೊಳ

ಪವಿತ್ರ ಕ್ಷೇತ್ರಗಳೆನಿಸಿಕೊಂಡ ಎಲ್ಲಾ ಸ್ಥಳಗಳಲ್ಲಿ ತೀರ್ಥಕ್ಕೆ ವಿಶೇಷ ಅವಕಾಶ ಕಲ್ಪಿಸುತ್ತಾರೆ. ನದಿಯ ದಡಗಳಲ್ಲಿ ಕಟ್ಟಿದ ದೇವಾಲಯಗಳಾದರೆ ಪ್ರತ್ಯೇಕ ಕಲ್ಯಾಣಿಯ ಅವಶ್ಯಕತೆ ಇಲ್ಲದಿರುವುದರಿಂದ ಆ ನದಿಗಳಿಗೆ ಪಾವಿತ್ರವನ್ನು ಆರೋಪಿಸಲಾಗುತ್ತದೆ. ಬೇರೆಡೆಗಳಲ್ಲಿ ದೇವಸ್ಥಾನದ ಅಗತ್ಯಗಳಿಗಾಗಿ ಅಥವಾ ದೇವಾಲಯಕ್ಕೆ ಬರುವವರ ಅಗತ್ಯಗಳಿಗಾಗಿ ಕಲ್ಯಾಣಿಯನ್ನು ನಿರ್ಮಿಸಿರುತ್ತಾರೆ. ದಾರಿಯ ಮೈಲಿಗೆಯನ್ನು ಕಳೆದುಕೊಳ್ಳಲು ಕಲ್ಯಾಣಿಯಲ್ಲಿ ಅಥವಾ ಅಲ್ಲಿರುವ ಇತರ ಪಾಪನಾಶಿನಿ, ಅಘುನಾಶಿನಿಗಳಲ್ಲಿ ಮಿಂದು ಪರಿಶುದ್ಧರಾಗಿ ಆಲಯಕ್ಕೆ ಬರಲೆಂಬ ಉದ್ದೇಶದಿಂದ ಅವನ್ನು ನಿರ್ಮಿಸಿ, ಅವಕ್ಕೂ ಒಂದು ಪಾವಿತ್ರ್ಯವನ್ನು ಕಲ್ಪಿಸಿಕೊಡುತ್ತಾರೆ.

ತೀರ್ಥಕ್ಷೇತ್ರದ ಪ್ರತಿಯೊಂದು ಸ್ಥಳವೂ ಪವಿತ್ರವೇ ಎನ್ನುವುದಕ್ಕೂ ಪೂರಕವಾದ ಕತೆಗಳಿರುತ್ತವೆ. ದೇವಸ್ಥಾನಗಳ ಕಲ್ಯಾಣಿ ಕೊಳದ ನಿರ್ಮಾಣ ಸಹಜ. ಬಿಳಿಗಿರಿಯ ಕಲ್ಯಾಣಿಯೂ ಅತಿಶಯ ಮಹಿಮೆಯಿಂದ ಕೂಡಿದೆಯೆಂದು ಕೊಂಡಾಡಿ ಅದನ್ನು "ಗಜಪುಷ್ಕರಣಿ" ಎಂದಿದ್ದಾರೆ. ಗಜೇಂದ್ರ ಮೋಕ್ಷದ ಪ್ರಸಂಗ ಇಲ್ಲಿಯೇ ನಡೆದದ್ದೆಂದೂ, ಕಲ್ಯಾಣಿಯ ದಡದಲ್ಲಿ ಗಜೇಂದ್ರ ವರದಸ್ವಾಮಿಯ ಆಲಯವನ್ನು ಕಟ್ಟಿದ್ದಾರೆ. ಅಲ್ಲಿ ಗಜೇಂದ್ರ ಮೋಕ್ಷದ ಉತ್ಸವನ್ನು ನಡೆಸುತ್ತಾರೆ. ಕಲ್ಯಾಣಿಯಲ್ಲಿ ಸ್ವಯಂ ಗಂಗೆಯೇ ಬಂದು ನೆಲೆಸಿದ್ದಾಳೆನ್ನಲು ಪೂರಕವಾದ ಪೌರಾಣಿಕ ಕಥೆಯನ್ನು ಕಟ್ಟಿದ್ದಾರೆ. ಪಾಪಿಗಳ ಸ್ಪರ್ಶದ ಮೈಲಿಗೆಯನ್ನು ನಿವಾರಿಸಿಕೊಳ್ಳಲು ಬಯಸಿದ ಗಂಗೆ ವಿಷ್ಣುವನ್ನು ಕುರಿತು ತಪಸ್ಸು ಮಾಡಿ, ವಿಷ್ಣು

ಹೇಳಿದಂತೆ, ಅವನ ಪಾದ ಮೂಲದಿಂದ ಹುಟ್ಟಿದ ಗಜ ಪುಷ್ಕರಿಣಿಯಲ್ಲಿ ನಾಲ್ಕರಲೊಂದು ಅಂಶವಾಗಿ ನೆಲೆಸಿ ಪಾಪದೂರಳಾಗಲೂ ಇಲ್ಲಿಗೆ ಬಂದು ನೆಲೆಸಿದ್ದಾಳೆಂಬ ಪೌರಾಣಿಕ ಹಿನ್ನೆಲೆ ಕೊಟ್ಟಿದ್ದಾರೆ. ಈ ನೀರಿಗೆ ಅಂತಹ ಪವಿತ್ರ ಆವರಣವನ್ನು ಸೃಷ್ಟಿಸಿಕೊಂಡ ಕಾರಣದಿಂದ ಇಂದಿಗೂ ದಿನವೂ ದೇವರ ಅಭಿಷೇಕಾಧಿಗಳೆಂದು ಇಲ್ಲಿಂದಲೇ ನೀರು ಸಾಂಪ್ರಾದಾಯಿಕವಾಗಿ, ವಾದ್ಯಸಹಿತಿ ಹೋಗುತ್ತದೆ.

ಬೆಟ್ಟದ ದೇವಸ್ಥಾನದ ಬಳಿಯಲ್ಲಿ ಬೇರೆ ಯಾವ ನೀರಿನ ವ್ಯವಸ್ಥೆ ಇಲ್ಲದಿದ್ದಾಗ ದೇವಸ್ಥಾನಕ್ಕೆ, ಆಲಯದ ಸೇವೆಯವರಿಗೆ, ಬಂದ ಭಕ್ತರಿಗೆ ಕಲ್ಯಾಣಿಯೊಂದೇ ಜಲಾಶ್ರಯವಾಗಿತ್ತು. ವನಸ್ಪತಿಗಳ ನಡುವಿಂದ ಹರಿದು ಬಂದ ನೀರಿಗೆ ತೈಲಾಂಶಗಳು ಸೇರ್ಪಡೆಯಾಗುತ್ತಿದ್ದುದರಿಂದ ಬೇಗ ಕೆಡುತ್ತಿರಲಿಲ್ಲ. ಪೂರ್ಣಯ್ಯನವರ ಛತ್ರದಲ್ಲಿ ಶೇಖರಿಸಿಟ್ಟದ್ದ ನೀರು ತಿಂಗಳುಗಟ್ಟಲೇ ಕೆಡದೆ ತುಂಬಾ ಶುದ್ಧವಾಗಿತ್ತೆನ್ನುವ ನಿದರ್ಶನವನ್ನು ನೀಡುತ್ತಾರೆ.[೩] ಬೆಟ್ಟದ ಮೇಲೆ ಇದ್ದವರು ನೀರಿರಾಗಿ ಕಲ್ಯಾಣಿಗೆ ಬರಬೇಕಾಗಿತ್ತು. ಬರಲಾಗದ ವಯಸ್ಸಿನ ಮಡಿಯವರಿಗೆ ನೀರನ್ನು ಬಿಂದಿಗೆಯಲ್ಲಿ ತುಂಬಿ ಮಡಿಬಟ್ಟೆ ಹಾಕಿದ ಬುಟ್ಟಿಯಲ್ಲಿ ಹೊರೆಸಿಕೊಂಡು ಹೋಗಬೇಕಾಗಿತ್ತು. ರೆಡ್ಡಿಯಾರ್ ಕಾಲದಲ್ಲಿ ಬಲಿಷ್ಠವಾದ ಎತ್ತುಗಳ ಮೇಲೆ ನೀರು ತುಂಬಿದ ಕೊಡಗಳನ್ನು ದೇವಾಲಯಕ್ಕೆ ಹಾಗೂ ದೇವಾಲಯದ ಬಳಿ ವಾಸವಾಗಿರುವವರಿಗೆಂದು ತಲುಪಿಸುವ ವ್ಯವಸ್ಥೆಯಿತ್ತು. ದೇವಾಲಯಕ್ಕೆಂದು ಕಟ್ಟಿದ ಕಲ್ಯಾಣಿಗಳಲ್ಲಿ ನಿರ್ಮಲತ್ವವನ್ನು ಸದಾ ಇಟ್ಟುಕೊಂಡಿರದಿದ್ದರೂ ಅದಕ್ಕೆ ಪಾವಿತ್ರತೆಯನ್ನು ಕಲ್ಪಿಸಲು ಮಾತ್ರ ಭಕ್ತರು ಮರೆಯುವುದಿಲ್ಲ. ''ಗಾಂಧಿ ದಕ್ಷಿಣ ಆಫ್ರಿಕಾದಿಂದ ಇಂಡಿಯಾಕ್ಕೆ ಹಿಂದಿರುಗಿದ ಬಳಿಕ ಪವಿತ್ರಕ್ಷೇತ್ರ ಎನಿಸಿಕೊಂಡಿದ್ದ ಕಾಶಿಗೆ ಹೋಗಿ ಅಲ್ಲಿ ತುಂಬಿದ್ದ ಕೊಳಕಿಗೆ ದಿಗ್ಭ್ರಾಂತರಾಗಿ ಇದು ಶುದ್ಧ ಕೊಳಕು. ಆ ಬೀದಿಗಳು, ಆ ಹೆಣಗಳು, ಆ ರೊಚ್ಚೆ, ಇದು ಪವಿತ್ರ ಇರಲಿಕ್ಕೆ ಸಾಧ್ಯವೇ ಇಲ್ಲ. ಪವಿತ್ರ ಎಂದು ಹೇಳುತ್ತಲೇ ಇದನ್ನು ಇಷ್ಟು ಕೊಳಕು ಮಾಡಿದ್ದೇವಲ್ಲ. ಯಾವ ತರಹದ ಜನ ನಾವು? ಎಂದು ಕಾಶಿ ಮತ್ತು ಗಂಗೆಯ ಬಗ್ಗೆ ಹೇಳಿದರು.[೪]

ಕಲ್ಯಾಣಿಯ ಬಳಿಯಲ್ಲಿಯೇ ಹರಕೆಯ ಮುಡಿ ಒಪ್ಪಿಸುವ ಕಾರ್ಯಗಳಾಗುತ್ತವೆ. ಇಂದಿಗೂ ಕಲ್ಯಾಣಿಯಿಂದ ನೀರು ಎತ್ತಿಕೊಂಡು ಬಲಿಯ ಕಟ್ಟೆಯ ಮೇಲೆ ಸ್ನಾನ ಮಾಡುತ್ತಾರೆ. ಕಟ್ಟೆಯ ಮೇಲೆ ಬಟ್ಟೆ ಒಗೆದು ಕೊಳ್ಳುತ್ತಾರೆ. ಕಟ್ಟೆಯ ಬಳಿಗೆ ಸ್ನಾನ ಮಾಡದಂತೆ ನೋಡಿಕೊಳ್ಳಲೆಂದು ದೇವಸ್ಥಾನದಿಂದ ಕಾವಲುಗಾರರನ್ನು ನೇಮಿಸಿದ್ದಾರೆ. ಕಲ್ಯಾಣಿಯ ಸುತ್ತಲೂ ಸ್ನಾನಕ್ಕಾಗಿ ಕೆಲವು ಬಚ್ಚಲುಗಳನ್ನು ಕಟ್ಟಿದ್ದಾರೆ. ಜೀವನವೇ ಭಾರವೆಂದು ಭಾವಿಸಿದ ಕೆಲವರು ಕಲ್ಯಾಣಿಯಲ್ಲಿ ಮುಳುಗಿ ಸತ್ತಿದ್ದಾರೆ.

ರಂಗನಾಥಸ್ವಾಮಿ ಮತ್ತು ಗರುಡ

ವಿಷ್ಣುವಿನ ವಾಹನವಾಗಿರುವ ಗರುಡ, ವಿಷ್ಣುಕ್ಷೇತ್ರಗಳಿದ್ದ ಕಡೆ ಇದ್ದೇ ಇರುತ್ತಾನೆ. ಕಶ್ಯಪ-ವಿನುತೆಯರ ಮಗನಾದ ಸೂರ್ಯನ ಪ್ರತಿರೂಪವಾದ ಗರುಡ ಸೌರದೇವತೆಯಾದ ವಿಷ್ಣುವಿನೊಂದಿಗೆ

ಸಂಬಂಧ ಹೊಂದಿದ್ದಾನೆ. ವಿಷ್ಣು ದೇವಾಲಯಗಳ ಮುಂಭಾಗದಲ್ಲಿ ಸಾಧಾರಣವಾಗಿ ಗರುಡ ಮೂರ್ತಿ ಇರುತ್ತದೆ "ಬಿಳಿಗಿರಿರಂಗನ ಬೆಟ್ಟದಲ್ಲಿ ಗರುಡೋತ್ಸವಕ್ಕೆ ಬಹಳ ಮಹತ್ವವಿದೆ. ಭಾರ್ಗವನಾದ ಪರಶುರಾಮನ ಅಪೇಕ್ಷೆಯಂತೆ ಬಿಳಿಗಿರಿರಂಗನ ಬೆಟ್ಟದ ಮೇಲೆ ವಿರಿಜಾ ನದಿಯನ್ನು ತಂದವನು ಗರುಡ. ರಂಗನಾಥ ಸ್ವಾಮಿಯು ವಿಷ್ಣುದೇವರಾದ್ದರಿಂದ ಗರುಡನಿಗೆ ಈ ದೇವರ ಮೇಲೆ ಭಕ್ತಿ, ರಥೋತ್ಸವದ ಸಂದರ್ಭದಲ್ಲಿ ರಥವನ್ನು ಎಳೆಯುವುದಕ್ಕೆ ಮುಂಚೆ ಆಕಾಶದಲ್ಲಿ ಗರುಡನು ಕಾಣಿಸಿಕೊಂಡು ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕುತ್ತಾನೆಂದು ನಂಬುತ್ತಾರೆ."[8] ಶಿಷ್ಟರ ಪ್ರಕಾರ ವಿಷ್ಣುವಿನ ವಾಹನವಾದ ಗರುಡ ಬಂದರೆ ಮಾತ್ರ ತೇರು ಮುಂದಕ್ಕೆ ಚಲಿಸುತ್ತದೆ. ಜಾತ್ರೆಯ ದಿನ ತೇರನ್ನು ಎಳೆಯುವ ಮುನ್ನು ಕೃಷ್ಣಪಕ್ಷಿ ಪ್ರದಕ್ಷಿಣೆ ಮಾಡಿದ ಮೇಲೆ ರಥವು ಚಲಿಸುತ್ತದೆಂದು ಜನಪದರ ನಂಬಿಕೆ. ಅಂದು ಗರುಡ ಬಂದು ಪ್ರದಕ್ಷಿಣೆ ಹಾಕುವುದನ್ನು "ಬಿಜ್ಜು ಹೊಡೆಯುವುದು" ಎನ್ನುತ್ತಾರೆ. ಗರುಡ ಬಂದು ಬಿಜ್ಜು ಹೊಡೆಯದಿದ್ದರೆ ಏನಾದರೂ ಅನಾಹುತ ಆಗುತ್ತದೆಂಬ ಆತಂಕ ಜನರಲ್ಲಿ ತುಂಬಿರುತ್ತದೆ. ಆದರೆ ಕ್ಷೇತ್ರಕಾರ್ಯದ ಅವಧಿಯಲ್ಲಿ ನಡೆದ ರಥೋತ್ಸವದಲ್ಲಿ ಗರುಡ ಬರಲಿಲ್ಲ. ತೇರಿನ ಚಲನೆ ಮುಗಿದು ಮರಳಿ ಬಂದರೂ ಜನರ ಕಣ್ಣು ಆಕಾಶದತ್ತಲೇ ನಾಟಿತ್ತು. ಆದರೆ ಜಾತ್ರೆ ಸುಮುಖವಾಗಿ ಸಾಗಿ ಎಲ್ಲರೂ ಅವರವರ ಊರಿಗೆ ಹೋದರೂ ಯಾವ ಅನಾಹುತವೂ ಆಗಲಿಲ್ಲ.

ರಂಗನಾಥಸ್ವಾಮಿ ದೇವಾಲಯದಲ್ಲಿ ಯಾವುದೇ ಉತ್ಸವವಾಗಲೀ ಅದನ್ನು ಹೊರುವವರು ಸೋಲಿಗರೇ, ಆದರೂ ಅವರು ಹೊರುವ ರಂಗನಾಥನನ್ನು ಕೂರಿಸುವುದು ವೀರಾಸನದಲ್ಲಿರುವ ಗರುಡವಾಹನದಲ್ಲಿ, ಬೆಳ್ಳಿಯ ಗುರಡನಲ್ಲದೆ, ಬಣ್ಣದ ದೊಡ್ಡ ಗರುಡನ ವಾಹನವೂ ಇಲ್ಲಿದೆ. ಪ್ರತಿಯೊಂದು ಉತ್ಸವದಲ್ಲಿಯೂ ಗರುಡ ಸೇವೆ ಮಾಡಿಸುವ ಭಕ್ತರಿರುತ್ತಾರೆ. ಹಿತ್ತಾಳೆ ಅಥವಾ ಬೆಳ್ಳಿಯ ಕೈಗರಡುಗಳನ್ನು ಹಿಡಿದು ದೇವಸ್ಥಾನದ ಸುತ್ತ, ಉತ್ಸವದ ದೇವರ ಹಿಂದೆ ಸುತ್ತಿ ಬರುವಂತಹುದೇ ಗರುಡ ಸೇವೆ. ತೆಪ್ಪ-ತೇರುಗಳಲ್ಲಿ, ಶ್ರಾವಣದ ಶನಿವಾರಗಳಲ್ಲಿ ಗರುಡನ ಸೇವೆ ಮಾಡಿಸುವ ಅಸಂಖ್ಯ ಭಕ್ತರನ್ನು ಕಾಣಬಹುದು. ಇದರಿಂದ ದೇವಸ್ಥಾನಕ್ಕೆ ನಿಶ್ಚಿತವಾದ ಆದಾಯವೂ ಬರುತ್ತದೆ. ದೇವಾಲಯದ ಒಳಗೆ ಹೊರಗೆ ಅಲ್ಲಲ್ಲಿ ಗರುಡನ ಮೂರ್ತಿಗಳಿವೆ. ವೈಷ್ಣವ ದೇವರಾದ ರಂಗನಾಥಸ್ವಾಮಿ ಆಲಯದ ಮುಖಮಂಟಪಕ್ಕೆದುರಾಗಿ ಗರುಡಗಂಬವಿದೆ.

ರಂಗನಾಥಸ್ವಾಮಿ ಮತ್ತು ಪಾದರಕ್ಷೆ

ಬಿಳಿಗಿರಿರಂಗನಾಥ ಸ್ವಾಮಿ, ರಾತ್ರಿಯಲ್ಲಿ ಅರಣ್ಯ ಸಂಚಾರಕ್ಕೆ ಹೋಗುವುದರಿಂದ ಆತನಿಗೆ ಈ ಪಾದರಕ್ಷೆ ಬೇಕಾಗುತ್ತದೆಂದು ಬೆಟ್ಟದ ಸಮೀಪದಲ್ಲಿರುವ ಬೂದಿತಿಟ್ಟಿನ ಮಾದಿಗರು ಪಾದರಕ್ಷೆಯನ್ನು

ಸಿದ್ಧಪಡಿಸಿ ತರುತ್ತಾರೆ. ಶ್ರದ್ಧಾನಿಷ್ಠೆಯಿಂದ ನಿರಂತರ ಹತ್ತು ದಿನಗಳ ಕಾಲ ಹತ್ತಾರು ಜನ ಒಟ್ಟಾಗಿ ದುಡಿದು ಈ ಪಾದರಕ್ಷೆಯನ್ನು ಸಿದ್ಧಪಡಿಸುತ್ತಾರೆ. ಒಂದು ಅಡಿ ಒಂಬತ್ತು ಅಂಗುಲ ಪ್ರಮಾಣದ ಉದ್ದ ಅಗಲ ಮತ್ತು ಎತ್ತರವುಳ್ಳ ಬೃಹದಾಕಾರದ ಪಾದರಕ್ಷೆ ಕುರಿತು ಅವರಲ್ಲೂ ಒಂದು ಐತಿಹ್ಯವಿದೆ. ಇದು ಅವರು ತಯಾರಿಸುವ ಪಾದರಕ್ಷೆಗಿಂತ ಬಹಳ ಚೆನ್ನಾಗಿ ಶ್ರದ್ಧೆ ಭಕ್ತಿಯಿಂದ ಮಾಡುತ್ತಾರೆ. ರಂಗನಾಥ ಸ್ವಾಮಿಯ ಕಥಾ ಸರಣಿಯಲ್ಲಿ ಹೊಂದಿಕೊಳ್ಳುವಂತೆ, ವೆಂಕಟೇಶ್ವರ ತಿರುಪತಿಯಿಂದ ಬಿಳಿಗಿರಿಬೆಟ್ಟಕ್ಕೆ ಬರುವಾಗ, ಅವನ ಜತೆ ಬಂದವನೇ ಸಿದ್ಧಾಂತ ದಾಸಯ್ಯ.

ರಂಗನಾಥಸ್ವಾಮಿ ತಿರುಪತಿಯಿಂದ ಬಂದು ಬಿಳಿಗಿರಿ ಬೆಟ್ಟದಲ್ಲಿ ನೆಲೆಗೊಂಡ ಮೇಲೆ ತನಗೆ ಬೆಟ್ಟದಗಲದ ಪಾದರಕ್ಷೆಬೇಕೆಂದು ಸಿದ್ಧಾಂತ ದಾಸಯ್ಯನನ್ನು ಕೇಳಿದ. ಒಂದು ಹಸುವಿನ ಚರ್ಮದಿಂದ ಸಿದ್ಧಪಡಿಸಿದ ಪಾದುಕೆಯೇ ಬೇಕೆಂದು ಅಪ್ಪಣೆಯನ್ನೂ ನೀಡಿದ. ಆದರೆ ಒಂದೇ ಹಸುವಿನಲ್ಲಿ ಅಷ್ಟಗಲದ ಪಾದುಕೆ ತಯಾರಿಸಲು ಸಾಧ್ಯವೇ ಇಲ್ಲವೆಂಬುದನ್ನು ತಿಳಿದ ಸಿದ್ಧಾಂತ ದಾಸಯ್ಯ ಉಪಾಯದಿಂದ ರಂಗನಾಥಸ್ವಾಮಿಯ ಕಾಲಿನ ಅಳತೆಗೆ ಹೊಂದಿಕೊಳ್ಳುವ ಹಾಗೆ ಮಾದಿಗರಿಂದ ಈ ಪಾದರಕ್ಷೆಯನ್ನು ತಯಾರಿಸಿಕೊಟ್ಟನೆನ್ನುತ್ತಾರೆ. ಇದು ಯಾವ ಕಾಲದಲ್ಲಿ ನಡೆಯಿತೆಂಬುವುದು ಸ್ಪಷ್ಟವಿಲ್ಲ. ಆದರೆ ಸಿದ್ಧಾಂತ ದಾಸಯ್ಯನ ಮೂಲವಂಶಜರು ಮಾತ್ರ ತಾವು ಇಲ್ಲಿಯವರಲ್ಲ ಎನ್ನುವುದನ್ನು ಈ ಕತೆಯ ಮೂಲಕ ಸ್ಪಷ್ಟಪಡಿಸಿ, ತಾವು ಮೂಲತಃ ಸ್ವಾಮಿ ಜೊತೆ ಬಂದವರಾದ್ದರಿಂದ ತಮ್ಮ ವಂಶ ಶ್ರೇಷ್ಠವೆಂದು ಅವರ ಭಾವನೆ.[೬] ಆದರಲ್ಲೂ ಈ ಪಾದರಕ್ಷೆಯನ್ನು ಮಾಡಿಸಿಕೊಳ್ಳುವಾಗಲೂ ಗೋವಿನ ಚರ್ಮದಿಂದಲೇ ಮಾಡಬೇಕೆಂಬ ಒತ್ತಡ ಹೇರಿರುವುದು ಚರ್ಮದಲ್ಲೂ ಶ್ರೇಷ್ಠತೆಯ ಕಡೆಗೆ ಕಣ್ಣು ಹಾಯಿಸಿರುವುದರ ಸಂಕೇತ.

ಈಗೀಗ ಈ ಪಾದರಕ್ಷೆಯನ್ನು ಎಷ್ಟೇ ಶ್ರದ್ಧೆ, ಭಕ್ತಿಯಿಂದ ನಾವು ತಯಾರಿಸಿದರೂ ತಮಗಾಗುತ್ತಿರುವ ಖರ್ಚನ್ನು ನಿಭಾಯಿಸಿಲು ಸಾಧ್ಯವಾಗುತ್ತಿಲ್ಲ. ಯಾರಿಂದಲೂ ತಮಗೆ ಸಹಾಯವು ಸಿಕ್ಕುತ್ತಿಲ್ಲವೆಂದು ಅಸಮಾಧಾನ ಬೂದಿತಿಟ್ಟಿನ ಪಾದರಕ್ಷೆಯ ತಯಾರಕರಲ್ಲಿದೆ. ಅದನ್ನು ಮಾಡಲು ಬಲ್ಲವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಊರಿನವರೆಲ್ಲಾ ಸೇರಿ ಖರ್ಚು ಹಾಕಿಕೊಂಡು ತಯಾರಿಸಿ ಕೊಡುತ್ತಾರೆ. ಅದಕ್ಕೆ ಬೇಕಾದ ಚರ್ಮ ಮತ್ತಿತರ ಸಾಮಾಗ್ರಿಗಳು ಎಲ್ಲವೂ ಈಗ ದುಬಾರಿ ಆಗುತ್ತಿರುವುದರಿಂದ ಸಹಾಯ ಸಿಕ್ಕರೆ ಮಾತ್ರ ನಾವು ಈ ಕೆಲಸ ಸಾಂಗೀಕವಾಗಿ ಮಾಡಲು ಸಾಧ್ಯ ಎನ್ನುತ್ತಾರೆ. ಹಿಂದೆ ಸಿದ್ಧಪಡಿಸಿದ ಪಾದರಕ್ಷೆಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮೂಲಕ ಬೆಟ್ಟಕ್ಕೆ ತರುತ್ತಿದ್ದರು. ಹಾಗೆ ತರುವಾಗ ದಾರಿಯುದ್ದಕ್ಕೂ ಎಲ್ಲ ಊರಿನವರು ಅವುಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ಬೆಟ್ಟದ ದಾರಿಗೆ ಹೆಗಲು ಬದಲಾಯಿಸಿಕೊಂಡು ಹೊತ್ತುತರುತ್ತಿದ್ದರು. ಇಂದು ಬರುವ ದಾರಿಯೂ ಸರಿಯಾಗಿಲ್ಲ. ಹೊರಲೂ ತಯಾರಿಲ್ಲದಂತೆ ಊರಿನ ಜನರ ಮನಸ್ಸು ಹಾಗೂ ಪರಿಸ್ಥಿತಿ ಬದಲಾಗಿದೆ. ಪಾದರಕ್ಷೆಯನ್ನು ವಾಹನ

ಸೌಕರ್ಯ ಏರ್ಪಡಿಸಿಕೊಂಡು ಬೆಟ್ಟಕ್ಕೆ ತರುತ್ತಾರೆ.[೭] ಅದರ ವೆಚ್ಚಕ್ಕೂ ದೇವಸ್ಥಾನದ ಆಡಳಿತ ಯಾವ ನೆರವನ್ನು ಕೊಡದಿದ್ದರೂ ಪಾದರಕ್ಷೆಯ ತುಣುಕುಗಳನ್ನು ಬಯಸಿದ ಭಕ್ತರಿಗೆ ಕತ್ತರಿಸಿ ಕೊಡುವ ಆಲಯದ ನೌಕರರಿಗೆ ಮತ್ತು ದೇವಾಲಯದಲ್ಲಿ ಪಾದದೇಟು ತಿನ್ನಲು ಇಂತಿಷ್ಟು ಹಣವೆಂದು ನಿಗದಿ ಮಾಡಿದೆ. ಎಲ್ಲಕ್ಕಿಂತ ಮಿಗಿಲಾಗಿ ಇದೊಂದು ಆದಾಯದ ದಾರಿಯಾಗಿದೆ. ಮುತ್ತೆತ್ತಿಯ ಮುತ್ತೆತ್ತಿ ರಾಯನಿಗೂ ಮಾದಿಗರು ಪಾದುಕೆಯನ್ನು ಅರ್ಪಿಸುತ್ತಾರೆ. ಸ್ವಾಮಿಯೇ ಅಪ್ಪಣೆ ಮಾಡಿದುದರಿಂದ ಮಾದಿಗರು ನಿಯಮವಾಗಿ ಕಲ್ಲು ನೀರು ಕರಗುವ ಹೊತ್ತಿನಲ್ಲಿ ಹೊಲಿದು ತಂದೊಪ್ಪಿಸುತ್ತಾರೆ. ಅದಕ್ಕೆ ಹುಲಿ ಮುಟ್ಟಿದ ಹಸುವಿನ ಚರ್ಮವೇ ಆಗಬೇಕೆಂಬ ಪ್ರತೀತಿಯನ್ನು ಮೀರಿ ಬೇರೆ ಚರ್ಮವನ್ನು ಕೊಂಡುಕೊಳ್ಳುವರು. ಪಾದುಕೆಗಳನ್ನು ತಂದೊಪ್ಪಿಸಿದ ರಾತ್ರಿಯಂದು ರಂಗನಾಥಸ್ವಾಮಿ ಅವುಗಳನ್ನು ಮೆಟ್ಟಿ ಸಂಚಾರ ಮಾಡಿದ ಗುರುತಿಗೆ ಅಂಕೋಲೆ ಮುಳ್ಳು ಅಥವಾ ಅಂಚಿನ ಮುಳ್ಳು ಹತ್ತಿರುತ್ತವೆ. ಅದನ್ನು ಕಂಡಾಗ ಸ್ವಾಮಿ ಅದನ್ನು ಒಪ್ಪಿಸಿಕೊಂಡಿದ್ದಾನೆಂದು ನಂಬುತ್ತಾರೆ.

ಈ ಪಾದರಕ್ಷೆಯನ್ನು ದೇವಿ ಆಲಯದ ನವರಂಗದಲ್ಲಿಟ್ಟಿದ್ದಾರೆ. ಭಯ, ಶಂಕೆ, ಮೂರ್ಛೆ, ಉನ್ಮಾದ ಇತ್ಯಾದಿ ರೋಗ ಪೀಡಿತರನ್ನು ಕರೆತಂದು ಹೆಜ್ಜೆ ನಮಸ್ಕಾರ ಹಾಕಿಸಿಕೊಂಡು ಬಂದು ದೇವಸ್ಥಾನದ ಗರುಡಗಂಭದ ಬಳಿ ನಿಲ್ಲಿಸಿ, ಈ ಪಾದುಕೆಗಳಿಂದ ಹೊಡೆಸಿದರೆ, ಬಂದ ತೊಂದರೆಗಳಿಂದ ಪಾರಾಗಬಹುದೆಂದು ನಂಬಿಕೆ. ಹಳತಾದ ಪಾದುಕೆಯ ತುಣುಕುಗಳನ್ನು ಭಕ್ತರು ರಕ್ಷೆಯಾಗಿ ಕೊಂಡೊಯ್ಯುತ್ತಾರೆ. ಕೆಲವರು ಅದನ್ನು ತಾಯಿತ ಮಾಡಿಸಿಕೊಂಡು ಹಾಕಿಕೊಂಡರೆ, ಇನ್ನೂ ಕೆಲವರು ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಹಾಗೆ ಮಾಡುವುದರಿಂದ ಭೀತಿ, ಭೂತಗಳಿಂದ ಪಾರಾಗಬಹುದೆಂದು ನಂಬಿದ್ದಾರೆ. ಜಾತ್ರೆ ಮತ್ತು ಇತರ ದಿನಗಳಲ್ಲಿ ಈ ಪಾದುಕೆಗಳಿಂದ ಭಕ್ತರು ತಮ್ಮ ತಲೆಯ ಮೇಲೆ ಹೊಡೆಯಿಸಿಕೊಳ್ಳುತ್ತಾರೆ.

ಮೇಲ್ಜಾತಿಯ ಭಕ್ತರು ಗುಡಿಯೊಳಗೆ ಪಾದರಕ್ಷೆಯ ಚಿಹ್ನೆ ಇರುವ ಮುಡಿಯನ್ನು (ಶಠಗೋಪ) ತಲೆಯ ಮೇಲೆ ಇರಿಸಿಕೊಳ್ಳುತ್ತಾರೆ. ಭಗವಂತನಿಗೆ ಸಂಪೂರ್ಣವಾಗಿ ತಾನೂ ಸಮರ್ಪಣೆ ಮಾಡಿಕೊಂಡಿದ್ದೇವೆ ಎಂಬುದರ ಸಂಕೇತವಾಗಿ ಅವನ ಪಾದದ ಚಿಹ್ನೆಗಳಿರುವ ಶಠಗೋಪವನ್ನು ತಲೆಯ ಮೇಲೆ ಹೊರುತ್ತಾರೆ. ಆದರೆ ಉಳಿದವರು ಕಾಣಿಕೆ ಕೊಟ್ಟು ಈ ಪಾದುಕೆಯನ್ನು ತಲೆಯ ಮೇಲಿರಿಸಿಕೊಳ್ಳುತ್ತಾರೆ. ಹೊರಗೆ ದಲಿತರು ತಯಾರಿಸಿದ ನಿಜವಾದ ಬೃಹತ್ ಗಾತ್ರದ ಪಾದುಕೆ, ಒಳಗೆ ದೇವರ ಪಾದದ ಚಿಹ್ನೆಯಿರುವ ಮುಡಿ, ಹೀಗೆ ಶಿಷ್ಟ ಹಾಗೂ ಜನಪದೀಯ ವ್ಯವಸ್ಥೆಗಳು ದೇವಸ್ಥಾನದ ಒಳಗೆ ಮತ್ತು ಹೊರಗೆ ರೂಪುಗೊಂಡಿವೆ. ತಮ್ಮನ್ನು ದೇವಸ್ಥಾನದ ಒಳಗೆ ಎಂದಿಗೂ ಬಿಡುವುದಿಲ್ಲವೆಂದು ದಲಿತರಿಗೆ ಖಚಿತವಾದಾಗ, ದೇವರ ಬಳಿಗೆ ಹೋಗಿಯೇ ಹೋಗಬೇಕೆಂಬ ಹಂಬಲವನ್ನು ಈ ಮೂಲಕ ತೀರಿಸಿಕೊಂಡಿದ್ದಾರೆ. ಯಾವ ದೇವಸ್ಥಾನ ತನ್ನನ್ನು ಒಳಸೇರಿಸಲಿಲ್ಲವೋ ಅದೇ ದೇವಸ್ಥಾನಕ್ಕೆ ತಮ್ಮ

ಶ್ರಮದ ತಮ್ಮ ವೃತ್ತಿಯ ಸೂಚಕವಾದ ಕಾಣಿಕೆಯನ್ನು ಮಾತ್ರ ಸಮರ್ಪಿಸಿ ಅವನ ಸೇವೆಯನ್ನು ಮಾಡುವ ಅವಕಾಶ ಪಡೆದುಕೊಂಡಿದ್ದಾರೆ.

ಪಾದರಕ್ಷೆಯ ಆರಾಧನೆಗೆ ಭರತನ ಕಾಲದಿಂದಲೂ ಪ್ರಾಶಸ್ತ್ಯವಿದೆ. ರಾಮನಿಲ್ಲದ ಹೊತ್ತಿನಲ್ಲಿ, ಅವನ ಪಾದುಕೆಯನ್ನು ಸಿಂಹಾಸನದಲ್ಲಿ ಭಕ್ತಿಯಿಂದ ಇಟ್ಟು, ಅವನ ಹೆಸರಲ್ಲಿ ಭರತ ರಾಜ್ಯವಾಳುತ್ತಿದ್ದ, ಪಾದುಕೆಯನ್ನು ತಲೆಯ ಮೇಲೆ ಇರಿಸಿಕೊಳ್ಳುವುದು ಎಂದರೆ ಸಂಪೂರ್ಣ ಶರಣಾಗತಿ ಎಂದರ್ಥ. ಯಾವ ಮಾದಿಗರನ್ನು ದೇವಸ್ಥಾನದ ಒಳಗೆ ಬಿಡುತ್ತಿಲ್ಲವೋ ಅದೇ ದೇವಸ್ಥಾನದಲ್ಲಿ ಮಾದಿಗರು ಮಾಡಿದ ಪಾದುಕೆಯನ್ನು ರಂಗನಿಗೆಂದು ಒಪ್ಪಿಕೊಳ್ಳುವುದು ಆ ಸಮುದಾಯದ ಶ್ರಮದ ದುಡಿಮೆ ಆಗಿದೆ. ಆದರೆ ಒಂದು ಸಮುದಾಯವನ್ನು ದೇವಸ್ಥಾನದ ತೆಕ್ಕೆಗೆ ತಂದು ಕೊಳ್ಳಬೇಕಾದಾಗ, ಅವರು ಮಾಡಿದ ಪಾದರಕ್ಷೆಯನ್ನು ಒಪ್ಪಿಕೊಳ್ಳಬೇಕಾದುದು ಅನಿವಾರ್ಯ ಸಂದರ್ಭವನ್ನು ಸೂಚಿಸುತ್ತದೆ. ಮಾದಿಗರನ್ನು ಇಂದಿಗೂ ಮಾನಸಿಕವಾಗಿ ದೈಹಿಕವಾಗಿ ದೂರದಲ್ಲಿ ಇರಿಸಿ ಅವರು ತಯಾರಿಸಿದ ಮೆಟ್ಟನ್ನು ಮೆಟ್ಟುವ ಇತರ ಜಾತಿಯ ಜನ, ಮಾದಿಗರು ತಯಾರಿಸಿದ ಪಾದರಕ್ಷೆಯನ್ನು ತಲೆಯ ಮೇಲೆ ಇರಿಸಿಕೊಳ್ಳುವ ಕಾರ್ಯ ಮಾಡುತ್ತಿದ್ದಾರೆ.

ರಂಗನಾಥಸ್ವಾಮಿ ಮೂಲತಃ ಬೇಟೆಯ ದೇವರು. ಸದಾ ಅರಣ್ಯ ಸಂಚಾರಿಯಾಗಿರುವ ರಂಗನಾಥ ಅರಣ್ಯ ಸಂಚಾರಿಗಳಿಗೆ ರಕ್ಷಕನಾಗಿರುವ ದೇವರು. ಅರಣ್ಯದಲ್ಲಿ ಅಡ್ಡಾಡುವ ಸಲುವಾಗಿ ಅವನಿಗೆ ಪಾದರಕ್ಷೆಯ ಅಗತ್ಯವಿದೆ ಎಂದು ಭಕ್ತರು ನಂಬುತ್ತಾರೆ. ಬಹಳ ಹಿಂದಿನ ಕಾಲದಿಂದಲೂ ರಂಗನಾಥಸ್ವಾಮಿಗೆ ಈ ರೀತಿ ಪಾದರಕ್ಷೆಗಳನ್ನೂ ಸಮರ್ಪಿಸುವ ಸಂಪ್ರಾದಾಯವನ್ನು ಬೆಳೆಸಿಕೊಂಡು ಬರಲಾಗಿದೆ. ಆದರೆ ಜಾನಪದ ಸಂಪ್ರಾದಾಯ ಅವನು ಬರೀ ಬೇಟೆಗೆ ಮಾತ್ರ ಹೋಗುತ್ತಾನೆ ಎಂಬುದನ್ನು ಒಪ್ಪದೆ. ಬೇಟೆಗಾಗಿ ತೆರಳುವಾಗ ಈ ಪಾದರಕ್ಷೆಯನ್ನು ಧರಿಸುತ್ತಾನೆಂದು ನಂಬುತ್ತಾರೆ. ಆತ ಇರುಳಿನಲ್ಲಿ ಸೂಳೆಯರ ಮನೆಗೆ ಹೋಗುವಾಗ ಹಾಕಿಕೊಂಡು ಹೋಗುತ್ತಾನೆಂದು ಅವನ ತಿರುಗಾಟದ ಬಗ್ಗೆ ಕಣ್ಣರಳಿಸಿ ಹೇಳುತ್ತಾರೆ. ಕೆಲವರ ಪ್ರಕಾರ ಆತ ವರ್ಷಕ್ಕೊಮ್ಮೆ ತುಳಸಮ್ಮನ ಮನೆಗೆ ಹೋಗುತ್ತಾನೆ ಎಂಬ ನಂಬಿಕೆ. ಪಾದರಕ್ಷೆಯನ್ನು ಎರಡು ವರ್ಷಕ್ಕೊಮ್ಮೆ ಹೊಸದಾಗಿ ಹೊಲೆದು ಸಿದ್ಧಪಡಿಸಿ ತಂದುಕೊಡುತ್ತಾರೆ.

ರಾಘುವೇಂದ್ರ ಮಠ

ಮಾಧ್ವ ಮತದ ಪೂರ್ಣಯ್ಯನ ವಂಶಸ್ಥರು ರಂಗನಾಥಸ್ವಾಮಿ ದೇವಸ್ಥಾನದ ಆಡಳಿತ ನಿರ್ವಹಿಸಲು ಮಾಧ್ವ ಅಧಿಕಾರಿಗಳನ್ನೆ ನೇಮಿಸಿದ್ದರು. ಪೂರ್ಣಯ್ಯನ ವಂಶಸ್ಥರಾದ ದಿವಾನ ಪಿ.ಎನ್.

ಕೃಷ್ಣಮೂರ್ತಿಯವರಿಗೆ ಮಾಧ್ವ ಮತದ ಬಗ್ಗೆ ವಿಶೇಷ ಪ್ರೀತಿಯಿತ್ತು.[6] ಆದರೆ ಈ ವಂಶಸ್ಥರು ಬೆಟ್ಟದಲ್ಲಿ ದೇವಸ್ಥಾನದ ನಿರ್ಮಾಣಕ್ಕೆ ಕೈ ಹಾಕಿರಲಿಲ್ಲ. ರೇಷ್ಮೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದ ಶ್ರೀ ಸುಬ್ಬರಾಯರು ಬೆಟ್ಟಕ್ಕೆ ಬಂದ ಬಳಿಕ, ಸಮಾನ ಮನಸ್ಕರ, ಸ್ವಮತಸ್ಥರ ನೆರವಿನಿಂದ ಬೆಟ್ಟದಲ್ಲಿ ರಾಘವೇಂದ್ರ ಮಠದ ನಿರ್ಮಾಣಕ್ಕಿಳಿದರು. ಸಾಧ್ವಿ ಪತ್ರಿಕೆಯ ಅಗರಂ ರಂಗಯ್ಯನವರು ಇದರಲ್ಲಿ ವಿಶೇಷ ಆಸಕ್ತಿವಹಿಸಿ ತಮ್ಮ ಪತ್ರಿಕೆಯ ಮೂಲಕ ಮನವಿಸಲ್ಲಿಸಿ ಮಠದ ನಿರ್ಮಾಣಕ್ಕೆ ಹಣ ಸಂಗ್ರಹಿಸಿಕೊಟ್ಟರು. ಹಿಂದೆ ಯಜ್ಞಯಗಾದಿಗಳು ನಡೆದ ಸ್ಥಳವೆಂದು ಮೊಹರಿ ರಂಗನಾಯಕರಿಂದ ಕಲ್ಯಾಣಿಯ ಬಳಿ ಸ್ಥಳದಾನ ಪಡೆದರು. ಆದರೆ ರಂಗನಾಯಕರು ಕೊಡದೆ ಇದ್ದರೆ, ಮತ್ತೆಲೋ ಪಡೆಯುತ್ತಿದ್ದ ಸ್ಥಳಕ್ಕೂ ಹೀಗೆ ಪುಣ್ಯವಿಶೇಷದ ಭೂಮಿ ಎಂದು ಆವರಣಕ್ಕೆ ಪಾವಿತ್ರತೆ ಕಲ್ಪಿಸಲು ಆಸ್ತಿಕ ಮನಸ್ಸುಗಳು ಹಿಂದೆಗೆಯುವುದಿಲ್ಲ.

ಸ್ಥಳದ ಪರಸ್ಥಳದ ಭಕ್ತರಿಂದ ಧನಸಂಗ್ರಹಿಸಿ ಹಂತ ಹಂತವಾಗಿ ಮಠವನ್ನು ಕಟ್ಟಲಾಗಿದೆ. ಈ ಕ್ಷೇತ್ರದಲ್ಲಿಯೂ ರಾಘವೇಂದ್ರರ ಮಠವಿರಬೇಕೆನ್ನುವ ಆಸಕ್ತಿಯಿಂದ ಸ್ಥಾಪಿಸಿದ ಟ್ರಸ್ಟ್ ನಿಂದ ಇಂದಿಗೂ ಕೆಲವು ಕೆಲಸಗಳಾಗುತ್ತವೆ. ಮಂತ್ರಾಲಯದಿಂದಲೇ ಮೂಲಮೃತಿಕೆಯನ್ನು ತಂದು ಕಟ್ಟಿದ ಈ ಬೃಂದಾವನಕ್ಕೆ ಗುರುವಾರದಂದು ಅಭಿಷೇಕವಿರುತ್ತದೆ. ರಾಘುವೇಂದ್ರರು, ಪ್ರಹ್ಲಾದದೇವರ ಅಂಶವೆಂಬ ಕಾರಣಕ್ಕೆ ಪ್ರಹ್ಲಾದ ದೇವರ ಪ್ರತಿಮೆಯನ್ನು ಪೂಜಿಸಿ, ಉತ್ಸವಾಚರನೆ ಮಾಡಿ ಮರೆಸುತ್ತಾರೆ. ಶ್ರಾವಣ ಮಾಸದಲ್ಲಿ ಮೂರು ದಿನಗಳ ಕಾಲ ರಾಮನ ಆರಾಧನೆ ಮಾಡುತ್ತಾರೆ. ಮೈಸೂರು, ಯಳಂದೂರು, ಮುಂತಾದ ಕಡೆಯಿಂದ ಭಕ್ತರು ಬರುತ್ತಾರೆ. ಬೆಟ್ಟದಲ್ಲಿಯೂ ನಿರ್ದಿಷ್ಟ ದಿನಗಳಂದು ಮಠಕ್ಕೆ ಬರುವ ಭಕ್ತರಿದ್ದಾರೆ. ಮಠದಲ್ಲಿ ಕೆಲವು ಸಮಾರಂಭಗಳನ್ನು ನಡೆಸಲು ಸಾಧ್ಯವಾಗುವ ಸಭಾಂಗಣವಿದೆ.

ವಿಶ್ವ ಶಾಂತಿನಿಕೇತನ

ಕೇರಳದಲ್ಲಿ ಹುಟ್ಟಿ ಬೆಳೆದ ಬಾಲಕೃಷ್ಣ ಎಂಬುವರು ಸೇನೆಯ ಅಂಚೆ ವಿಭಾಗದಲ್ಲಿ ಕಾರ್ಯನಿರ್ವಹಿಸುವಾಗ, ಮಹಾಯುದ್ಧಗಳಿಂದ ಬೇಸತ್ತು ಶಾಂತಿಯನ್ನರಸುತ್ತಾ ಪ್ರಪಂಚ ಪರ್ಯಟನೆ ಮಾಡಿದರು. ಆಧ್ಯಾತ್ಮದಲ್ಲಿ ಹುಟ್ಟಿದ ಆಸಕ್ತಿಯಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಬಂದು ದೀಕ್ಷೆ ಸ್ವೀಕರಿಸಿ ನಿರ್ಮಲಾನಂದರಾಗಿ, ವಿಶ್ವಶಾಂತಿ ನಿಕೇತನವನ್ನು ಸ್ಥಾಪಿಸಿಕೊಂಡರು. ಏಕಾಂತತೆಯನ್ನು ಬಯಸಿ, ಮೌನವ್ರತಧಾರಿಯಾಗಿ, ಸ್ವಯಂ ಪಾಕಿಗಳಾಗಿದ್ದ ಸ್ವಾಮೀಜಿಯವರ ಉಪದೇಶದಿಂದ ಮನಃಶಾಂತಿ ಬಯಸಿ ದೇಶ ವಿದೇಶಗಳಲ್ಲಿದ್ದ ಅನೇಕ ಶಿಷ್ಯರು ಅವರು ಸಂಪರ್ಕವಿರಿಸಿಕೊಂಡಿದ್ದರು. ಶಿಷ್ಯರಿಗೆ ಸಂದೇಶಗಳನ್ನು ಬರೆದು ರವಾನಿಸುತ್ತಿದ್ದ ಅವರು ಹಲವು ಗ್ರಂಥಗಳನ್ನು ರಚಿಸಿದ್ದರು.

ಸ್ವಾಮೀಜಿಯಾಗಿ ನಿರ್ಮಲವಾದ ಬೇರೆ ಮಾತು, ದೇಶ, ವಿದೇಶದವರೊಡನೆ ಸಾಕಷ್ಟು ಸಂಪರ್ಕ ಇಟ್ಟುಕೊಂಡಿದ್ದ ಅವರು, ಮೂಕ ಸ್ವಾಮೀಜಿಯಾಗಿ ಉಳಿಯುವ ಬದಲು ಸರಳರೂ ಮುಗ್ಧರೂ ಆದ

ಸೋಲಿಗರಿಗೆ ವಿದ್ಯೆಯ ಅರಿವನ್ನಿತ್ತು, ಅವರ ಬದುಕಿನಲ್ಲಿ ಸುಧಾರಣೆಗಳನ್ನು ತರಲು ಮುಕ್ತ ಪ್ರೀತಿಯಿಂದ ಶ್ರಮಿಸಬಹುದಾಗಿತ್ತು.

ವಿಶ್ವಶಾಂತಿ ನಿಕೇತನದ ಜವಾಬ್ದಾರಿಯನ್ನು ತನ್ನ ಉತ್ತರಾಧಿಕಾರಿಯಾದ ಸ್ವಾಮಿ ಬ್ರಹ್ಮದೇವರ ಮಡಿಲಿಗೆ ಹಾಕಿದ್ದರು. ಈಗ ಆಶ್ರಮದ ಸ್ವಾಮಿಜಿಯಾಗಿರುವ ಬ್ರಹ್ಮದೇವರ ಪ್ರಕಾರ ಸಾಮಾನ್ಯ ಮಾನವರು ಎರಡು ಜೊತೆ ಕಣ್ಣುಗಳಿಂದ ವೀಕ್ಷಿಸಿದರೆ, ಸಾಧುಗಳು ಸಾವಿರಾರು ಕಣ್ಣುಗಳು ನಿಟ್ಟಿಸುತ್ತಾ ಸದಾ ಪರೀಕ್ಷೆಯ ಆತಂಕದಲ್ಲಿ ಇರುತ್ತವೆ. ಸನ್ಯಾಸತ್ವಪಡೆದ ತರುವಾಯ ಒಬ್ಬ ಸಂತನಹ ಬದುಕು ಸದಾ ಕತ್ತಿಯಲುಗಿನ ಮೇಲೆ ನಡೆದಂತಿರುತ್ತದೆ. ಹಲವೆಡೆ ಸಾಧಕರಾಗಿ ಅನುಭವ ಪಡೆದೆನೆನ್ನುವ ಸ್ವಾಮಿ ಬ್ರಹ್ಮದೇವ್, ಬೆಟ್ಟದವರ ಜೊತೆ ಇಟ್ಟುಕೊಂಡಿರುವ ಸಂಪರ್ಕವು ಸೀಮಿತ. ಊರು ನೆಲೆಗಳ ಬಗ್ಗೆ ಕೇಳಿದರೆ ''ಹಾರುವ ಹಕ್ಕಿಯ ಊರು ಯಾವುದು'' ಎಂದು ನಿರ್ಲಿಪ್ತತೆಯಲ್ಲಿ ಉತ್ತರಿಸುತ್ತಾರೆ. ಇಂದಿಗೂ ಆಶ್ರಮಕ್ಕೆ ವಿದೇಶಿ ಹಾಗೂ ದೇಶಿ ಶಿಷ್ಯರು ಬರುತ್ತಾರೆ. ಸ್ವಾಮೀಜಿ ಏನೂ ತಿಳಿದ ತತ್ವಗಳನ್ನು ಅವರಿಗೆ ತಿಳಿಸುತ್ತಾರೆ. ಏಕಾಂತದಲ್ಲಿ ಧ್ಯಾನ ಮಾಡಬಯಸುವ ಬ್ರಹ್ಮದೇವರ ದ್ಯಾನಾಧಿಗಳಿಗೆ ಭಂಗ ಬಾರದಂತೆ ನಿಗದಿತ ಅವಧಿಯಲ್ಲಿ ಮಾತ್ರ ಆಶ್ರಮಕ್ಕೆ ಪ್ರವೇಶವಿದೆ.

ಆರ್ಥಿಕ ವ್ಯವಸ್ಥೆ

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆ ಹೇಗಿದೆ ಎನ್ನುವುದು ಬಹುಮುಖ್ಯ. ಅಲ್ಲದೆ ಆ ಪ್ರದೇಶದ ಆರ್ಥಿಕ ಸ್ವರೂಪ ಮುಂದೆಯೂ ಸಧೃಡವಾಗಿದ್ದು ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಬಲ್ಲದು ಎಂಬುದನ್ನು ತಿಳಿಯುವುದು ಮುಖ್ಯ. ಆ ಪ್ರದೇಶ ಕೇವಲ ಪರಾವಲಂಬಿಯಾಗುವ ಆರ್ಥಿಕ ಸಂಪನ್ಮೂಲಗಳನ್ನು ಅನ್ವೇಷಿಸಿಕೊಂಡಿದ್ದರೆ, ಹೆಚ್ಚು ತಾಳಿಕೆ ಬರಲಾರದು. ಒಂದು ಪ್ರದೇಶಕ್ಕೆ ಅವರದ್ದೇ ಆದ ಆರ್ಥಿಕ ಸಂಪನ್ಮೂಲಗಳಿರಬೇಕು. ಆದರೆ ಇದು ಆ ಪ್ರದೇಶದಲ್ಲಿನ ಸಾಮರಸ್ಯದ ಸಮತೋಲನವನ್ನು ಹದಗೆಡಿಸದ ರೀತಿಯಲ್ಲಿ ಇರಬೇಕು. ''ದಕ್ಷಿಣ ಏಷ್ಯಾ ದೇಶಗಳಲ್ಲಿ ಆರ್ಥಿಕ ವ್ಯವಸ್ಥೆಯನ್ನು ಅಲ್ಲಿನ ಸಾಮಾಜಿಕ ವ್ಯವಸ್ಥೆಯಿಂದ ಬೇರ್ಪಡಿಸುವುದು ಸಾಧ್ಯವೇ ಇಲ್ಲ.'' ಇದರಿಂದ ಒಂದು ಪ್ರದೇಶದ ಅರ್ಥವ್ಯವಸ್ಥೆ ಅಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೊಡನೆ ನಿಕಟ ಸಾಹಚರ್ಯವನ್ನು ಪಡೆದಿದೆ ಎಂಬ ಅಂಶ ಮನದಟ್ಟಾಗುತ್ತದೆ.

ಒಬ್ಬ ವ್ಯಕ್ತಿ ಏಳಿಗೆಯಾಗುತ್ತಾನೋ ಇಲ್ಲವೋ ಎನ್ನುವುದು. ಅವನಿಗೆ ಎಷ್ಟು ತರಹದ ಆಯ್ಕೆಯ ಅವಕಾಶಗಳಿವೆ ಎನ್ನುವುದರ ಮೇಲೆ ತೀರ್ಮಾನವಾಗುತ್ತವೆ. ಅಂದರೆ ಅವನಿಗೆ ಆಯ್ಕೆಯು ಸ್ವಾತಂತ್ರ್ಯದ ಹೆಚ್ಚುವ ಸಾಧ್ಯತೆ ಎಷ್ಟಿದೆ ಎಂಬುದರಿಂದ ಅವನ ನಾಳೆಗಳು ನಿರ್ಧಾರಿತವಾಗುತ್ತವೆ. ಮಾನವರ ಆಸೆಗಳೆಲ್ಲವೂ ಆರ್ಥಿಕ ಸ್ಥಿತಿಗತಿಯನ್ನು ಆಧರಿಸಿಯೇ ಈಡೇರಿಸುತ್ತವೆ. ಆದ್ದರಿಂದ ಮಾನವರ ಆರ್ಥಿಕ ಚಟುವಟಿಕೆ. ಆತನ ಸಂಸ್ಕೃತಿಯ ನಿರ್ಮಾಣದಲ್ಲಿ ಮಹತ್ತರ ಪಾತ್ರವಹಿಸುತ್ತದೆ.

ಆದಿ ಕಾಲದಿಂದ ಇಲ್ಲಿಯತನಕ ಅನೇಕ ಆರ್ಥಿಕ ಚಟುವಟಿಕೆಗಳ ಹಂತಗಳನ್ನು ಕಂಡುಕೊಳ್ಳುತ್ತಾ ಬಂದಿರುವ ಮಾನವರಿಗೆ, ಒಂದು ಕಾಲದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಆಹಾರ ಗಳಿಕೆಯೇ ಮುಖ್ಯ ಕಾಳಜಿಯಾಗಿತ್ತು. ಇದಕ್ಕಾಗಿ ಅವರು ಅನುಸರಿಸಿದ ತಂತ್ರ ಮತ್ತು ಸಾಧನಗಳ ಹಿಂದೆ ಅಭೂತಪೂರ್ವವಾದ ಹೋರಾಟದ ಶಕ್ತಿಯುಕ್ತಿಯು ಚರಿತ್ರೆಯಲ್ಲಿ ಅಡಗಿದೆ. ಮಾನವರ ಆರ್ಥಿಕ ಚಟುವಟಿಕೆಗಳು ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ ಮತ್ತು ಕೈಗಾರಿಕೆಗಳ ಹಂತಗಳ ಮೂಲಕ ಸಾಗಿ ಬಂದಿದೆ.

ಬಿಳಿಗಿರಿರಂಗನ ಬೆಟ್ಟದಲ್ಲಿ ಆಹಾರ ಸಂಗ್ರಹಣೆಯ ಹಂತವನ್ನು ಕೈ ಬಿಡದೆ, ಆಹಾರ ಉತ್ಪಾದನೆಯ ಜೊತೆಗೆ ಇನ್ನಿತರ ಮಾರ್ಗಗಳಿಂದ ಆರ್ಥಿಕ ಆದಾಯ ಕಂಡುಕೊಳ್ಳುವ ತೀವ್ರ ಪ್ರಯತ್ನ ನಡೆಯುತ್ತಿದೆ. ಈ ಅಧ್ಯಾಯನದಲ್ಲಿ ಜೀವನ ನಿರ್ವಹಣೆಗಾಗಿ ಕಾಲ ಕಾಲಕ್ಕೆ ಬೆಟ್ಟದ ಜನ ಕೈಗೊಂಡ ಅನೇಕ ವಿಧವಾದ ವೃತ್ತಿ ಉಪವೃತ್ತಿಗಳನ್ನು ಗಮನಿಸುವುದರ ಜೊತೆಗೆ ಸಂಪನ್ಮೂಲಗಳನ್ನು ಸ್ಥಳೀಯರು, ಪರಸ್ಥಳೀಯರ ಬಳಸಿಕೊಳ್ಳಲಾರಂಭಿಸಿದ ಕಾರಣದಿಂದ, ಇಲ್ಲಿನ ಸಾಂಸ್ಕೃತಿಕ ಬದುಕಿನ ಮೇಲಾದ ಪ್ರಭಾವ, ಪರಿಣಾಮಗಳನ್ನು ಗಮನಿಸಿದೆ. ಅರ್ಥಶಾಸ್ತ್ರ ಎಂದರೆ ಅಂಕಿ ಅಂಶಗಳನ್ನು ತೋರಿಸುವ ಅನುಸೂಚಿಯಾಗಿರದೆ, ಅದು ಮನುಷ್ಯರ ಆಯ್ಕೆಯ ಸ್ವಾತಂತ್ರ್ಯವನ್ನು ಹಿಗ್ಗಿಸುವ ಶಾಸ್ತ್ರ ಎಂಬ ನೆಲೆಯಲ್ಲಿ ಬಿಳಿಗಿರಿರಂಗನ ಬೆಟ್ಟ ಆರ್ಥಿಕ ಸ್ಥಿತಿಯನ್ನು, ಅದರ ಹಿನ್ನೆಲೆಯೊಡನೆ ನೋಡಲು ಪ್ರಯತ್ನಿಸಿದೆ.

ವ್ಯವಸಾಯ

ಮಾನವರು ಕೃಷಿಯಲ್ಲಿ ತೊಡಗಿಸಿಕೊಂಡಿರುವುದಕ್ಕೆ ಸುಮಾರು ಹತ್ತು ಸಾವಿರ ವರ್ಷಗಳ ಇತಿಹಾಸವಿದೆ. ಯುಫ್ರಿಟಿಸ ಮತ್ತು ಟೈಗ್ರೀಸ ನದಿಗಳ ನಡುವಣ ಪ್ರದೇಶದಲ್ಲಿ ಮೊದಲ ಬೇಸಾಯ ಮಾಡಿದ್ದನ್ನು ಗುರುತಿಸಲಾಗಿದೆ. ಆದರೆ ದೇಶದ ಜನರೂ ಏಕಕಾಲಕ್ಕೆ ವ್ಯವಸಾಯವನ್ನು ಕೈಗೊಳ್ಳಲಿಲ್ಲ. ಯಾವಾಗ ವ್ಯವಸಾಯ ಪ್ರಾರಂಭಿಸಿದರೋ ಆಗ ಒಂದೆಡೆ ನೆಲೆನಿಂತರೆಂದು ಹೇಳಬಹುದು. ಕೃಷಿಯ ಆರಂಬಿಕ ಪ್ರಯತ್ನಗಳ ಅನಂತರದಲ್ಲಿ ಟ್ರಯಲ್ ಅಂಡ್ ಎರರ್ ಮಾರ್ಗದ ಮೂಲಕ ನೂತನ ವಿಧಾನಗಳನ್ನು ಅನ್ವೇಷಿಸುತ್ತಾ ಮತ್ತಷ್ಟು ಉತ್ತಮಿಕೆಯನ್ನು ಸಾಧಿಸುವ ಆಶಯದಿಂದ ಇಂದಿಗೂ ಅನ್ವೇಷಣೆ ಮುಂದುವರೆಯುತ್ತಲೇ ಇದೆ. ಸಂಸ್ಕೃತಿಯ ವಿಕಾಸದಲ್ಲಿ ನಾಗರಿಕತೆಯನ್ನು ಬೇಗನೆ ಸಾಧಿಸಿಕೊಂಡು ಬಯಲುನಾಡಿನಲ್ಲಿ ನೆಲೆಸಿದ ಜನಾಂಗಗಳು ತಾವು ಕಂಡುಕೊಂಡ ಅನೇಕ ತಂತ್ರಜ್ಞಾನಗಳ ಬಲದಿಂದ ಕೃಷಿಯನ್ನು ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡವು.[1]

ಭೌಗೋಳಿಕ ವಾತಾವರಣದ, ಅನುಕೂಲಗಳ ಅವಲಂಬನೆಯಲ್ಲಿ ಆಹಾರ ಬೆಳೆಗಳನ್ನು ಬೆಳೆಸುತ್ತಾರೆ. ಬಿಳಿರಂಗನ ಬೆಟ್ಟದಲ್ಲಿ ಕೃಷಿ ಮಾಡಲಾರಂಭಿಸಿದ್ದು ಎಂದಿನಿಂದ ಎನ್ನುವುದಕ್ಕೆ ಖಚಿತ ಮಾಹಿತಿಗಳಿಲ್ಲ.

ಅದರ ಸಾಧ್ಯತೆ ಏನಿದ್ದರೂ ಎರಡರಿಂದ ಮೂರು ಸಾವಿರ ವರ್ಷಗಳಿಂದೀಚಿಗೆ ಎನ್ನಬಹುದು. ಬಿಳಿಗಿರಿರಂಗನ ಬೆಟ್ಟ ಪ್ರದೇಶದಲ್ಲಿ ದೊರೆತಿರುವ ಬೃಹತಶಿಲಾ ಸಮಾಧಿಗಳಲ್ಲಿದ್ದ ಕೆಲವು ಮಡಕೆಗಳಲ್ಲಿ ಧಾನ್ಯಗಳನ್ನು ಹಾಕಿದ್ದ ಸಾಧ್ಯತೆಯಿದ್ದರೂ ಅದು ಹಾಳಾಗಿ ಹೋಗಿದೆ. ಆಹಾರ ಪದಾರ್ಥಗಳನ್ನು ಸಂಗ್ರಹಿಸಿಕೊಳ್ಳುವ ಸಲುವಾಗಿ ಮಡಕೆಗಳನ್ನು ತಯಾರಿಸುವುದರಿಂದ ಆಹಾರದ ಸಂಗ್ರಹ ಹಾಗೂ ಉತ್ಪಾದನೆ ಎರಡೂ ಇಲ್ಲಿದ್ದಿರಬಹುದು. ಇಲ್ಲಿಯ ಬೃಹತ್ ಶಿಲಾಸಮಾಧಿಗಳನ್ನು ಹೆಚ್ಚಾಗಿ ಹಳ್ಳಕೊಳ್ಳ ಮತ್ತು ಕೆರೆಯ ಬಳಿಯ ಪ್ರದೇಶಗಳಲ್ಲಿ ಕಾಣಬಹುದು. ಈ ಸಮಾಧಿಗಳ ಪ್ರಾದೇಶಿಕ ವ್ಯವಸ್ಥೆಯಿಂದ, ಈ ಯುಗದ ಜನರು ಕೃಷಿ ಅರ್ಥವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರು ಎಂದು ಊಹಿಸಬಹುದು. ಇದರಿಂದ ಆಹಾರಕ್ಕಾಗಿ ಕೃಷಿಯನ್ನು, ಜೊತೆಗೆ ಬೇಟೆ ಮತ್ತು ಮೀನುಗಾರಿಕೆಯನ್ನು ಉಪವೃತ್ತಿಯಾಗಿ ಸ್ವೀಕರಿಸಿದ್ದ ಸಾಧ್ಯತೆ ಉಂಟು.

ಬುಡಕಟ್ಟು ಜನರ ವ್ಯವಸಾಯವು ಪ್ರಾಕೃತಿಕವಾಗಿ ಮತ್ತು ಕನಿಷ್ಠ ಮಾನವ ಹಸ್ತಕ್ಷೇಪದೊಂದಿಗೆ ನಡೆಯುತ್ತದೆ. ಸಾವಿರಾರು ವರ್ಷಗಳಿಂದಲೂ ಬುಡಕಟ್ಟು ಸಮುದಾಯದವರು ಕುಮರಿ ಬೇಸಾಯ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಕುಮರಿ ಎಂದರೆ "ಅಡವಿಯ ಗಿಡ, ಮರಗಳನ್ನು ಸುಟ್ಟು ಸಾಗುವಳಿಗೆ ಸಿದ್ಧಪಡಿಸಿದ ಭೂಮಿ ಎಂದರ್ಥ.

ಬುಡಕಟ್ಟು ಜನ ಈ ರೀತಿಯ ಸುಡುಕಡಿ ಅಥವಾ ಸ್ಥಳಾಂತರಿ ಬೇಸಾಯವನ್ನು ಭಾರತಾದ್ಯಂತ ಮಾಡುತ್ತಿದ್ದರು. ಇದ್ದರಿಂದ ಅರಣ್ಯನಾಶವಾಗುತ್ತದೆ ಎಂದು ಹಿಂದಿನ ಕಾಲದಿಂದಲೂ ಆಕ್ಷೇಪಣೆಗಳಿವೆ. ಅದರಲ್ಲೂ ಬ್ರಿಟಿಷರ ಕಾಲದಲ್ಲಿ ಈ ಬಗೆಯ ಅಸಮಾಧಾನ ದಟ್ಟವಾಯಿತು. ಸ್ಥಳಾಂತರ ಬೇಸಾಯದಿಂದ ಅರಣ್ಯನಾಶ ಆಗುತ್ತಿರಲಿಲ್ಲ ಎನ್ನುವುದಕ್ಕೆ ಸೋಲಿಗರು ವ್ಯವಸಾಯ ಮಾಡುತ್ತಿದ್ದ ಸ್ಥಳಗಳನ್ನು ಸಮೀಕ್ಷೆ ಮಾಡಲಾಗಿತ್ತು.

ಗಿರಿಜನರು ಸುಡುಕಡಿ ಬೇಸಾಯತ ಮಾಡುತ್ತಿದ್ದ ಬಹಳಷ್ಟು ಭಾಗಗಳಲ್ಲಿ, ಅವರ ಸೇವೆಯನ್ನೇ ಬಳಸಿಕೊಂಡು ಪ್ಲಾಂಟೇಷನ್ಸ್ ಬೆಳೆ ಬೆಳೆಯಲು ಬ್ರಿಟಿಷರು ಅಂಕುರಾರ್ಪಣೆ ಮಾಡಿದರು. ಬ್ರಿಟಿಷರು ವ್ಯಾಪಾರದೃಷ್ಟಿ ಅತ್ಯಂತ ನಿಗೂಢವಾಗಿತ್ತು. ನಿಬಿಡವಾಗಿದ್ದ ಅರಣ್ಯದಲ್ಲಿ ಕಾಫಿ, ಟೀ, ಏಲಕ್ಕಿ ಮೆಣಸುಗಳಿಂದ ವಾಣಿಜ್ಯ ಬೆಳೆಗಳು ತಲೆ ಎತ್ತಿದ್ದವು. ಈ ಬೆಳೆಗಳನ್ನು ಬೆಳೆಯುವ ಕೆಲಸವನ್ನು ಇಂದಿಗೂ ಮುಂದುವರಿಸಿ ಕೊಂಡು ಹೋಗಲಾಗುತ್ತಿದೆ.

ಪೋಡು ವ್ಯವಸಾಯವನ್ನು ಮಾಡಿದರೂ ದೊಡ್ಡಮರಗಳಿಗೆ ಎಂದು ಕೊಡಲಿ ಹಾಕುತ್ತಿರಲಿಲ್ಲ ಎಂದು ಹೇಳುತ್ತಾರೆ. ಬೆಟ್ಟದ ದೇವಸ್ಥಾನದ ನೌಕರರಿಗೆ ದರಖಾಸ್ತಿಯಲ್ಲಿ ಜಮೀನು ಮಾಡಿಕೊಳ್ಳಲು ಹೇಳಿದಾಗ ಸೋಲಿಗರು ಆಗ ತಮಗೆ ಬೇಕಾದ ಜಾಗಗಳನ್ನು ಗುರುತಿಸಿಕೊಂಡರು. ಸೋಲಿಗರು ಮಾತ್ರ ವ್ಯವಸಾಯ ಮಾಡುವ ಭೂಮಿಯಲ್ಲಿನ ಯಾವ ಬಂಡೆಗಲ್ಲನ್ನು ಒಡೆಯಲು ಹೋಗಲಿಲ್ಲ. ತಾವು

ಮಾಡುತ್ತಿದ್ದ ಹೊಲದ ಅಳತೆಯಲ್ಲಿ ಸಣ್ಣಪುಟ್ಟ ಮರಗಳನ್ನು ತೆಗೆಯುತ್ತಿದ್ದರೇ ಹೊರತು, ದೊಡ್ಡ ಮರಗಳ ಸಹವಾಸಕ್ಕೆ ಹೋಗುತ್ತಿರಲಿಲ್ಲ ಎಂದು ಹೇಳುತ್ತಾರೆ. ಸೋಲಿಗರ ಹಾಡುಗಳಲ್ಲಿ ಅವರು ಬೆಳೆದ ರಾಗಿಯ ಬಗ್ಗೆ ಮಾಹಿತಿಯಿದೆ.

ಸೋಲಿಗರ ಹೊಲಗಂದಾಯವನ್ನು ವಸೂಲಿ ಮಾಡುವಾಗ, ಕಂದಾಯವನ್ನು ಗೊತ್ತು ಮಾಡಲು ಅಲ್ಲಿದ್ದ ಮರಗಳ ಹೆಸರಿನಿಂದಲೇ ಬಹುಪಾಲು ಹೊಲಗಳನ್ನು ಗುರುತಿಸಲಾಗುತ್ತಿತ್ತು. ಬೃಹತ್ ಗಾತ್ರದ ಮರಗಳನ್ನು ಹೊಲದಲ್ಲಿ ಉಳಿಸಿಕೊಂಡು ವ್ಯವಸಾಯ ಮಾಡುತ್ತಿದ್ದುದರಿಂದ, ಆ ಮರದ ಬೇರುಗಳು ಆಗಾಧವಾಗಿ ಬೆಳೆದು, ಭೂಮಿಯ ಸತ್ವವನ್ನು ತಾನೇ ಹೀರಿ ಬಳಸಿಕೊಳ್ಳುತ್ತಿತ್ತು. ಆಗ ಸಹಜವಾಗಿಯೇ ಇಳುವರಿ ಕಡಿಮೆಯಾಗುತ್ತಿತ್ತು. ಹೀಗಾಗಿ ಭೂಮಿ ಸೋಡಾಯಿತೆಂದು ಹೊಸ ಜಾಗವನ್ನು ಹುಡುಕಿಕೊಂಡು ಹೋಗುತ್ತಿದ್ದರು.

ಭಾರತದ ಒಟ್ಟು ಕೃಷಿ ಭೂಮಿಯಲ್ಲಿ ೭೦ರಷ್ಟು ಮಳೆಯನ್ನು ಅವಲಂಭಿಸಿಕೊಂಡಿರುವ ಸ್ಥಿತಿ ಇಂದಿಗೂ ಇದೆ. ಬಿಳಿಗಿರಿರಂಗನ ಬೆಟ್ಟವು ಇದಕ್ಕೆ ಹೊರತಲ್ಲ. ಬೆಟ್ಟದಲ್ಲಿನ "ಕಾಡಾರಂಭ"ಕ್ಕೆ ಮಳೆ ನೀರನ್ನ ಆಶ್ರಯಿಸಿಕೊಂಡೇ ಮಾಡಬೇಕು. ಕೆರೆಗಳ ಸಮೀಪದಲ್ಲಿ ಸೋಲಿಗರ ಜಮೀನುಗಳಿಲ್ಲ. ಈರಣ್ಣನ ಕಟ್ಟೆಯ ಬಳಿಯಿರುವ ಐದಾರು ಸೋಲಿಗ ಕುಟುಂಬಗಳು ಮಾತ್ರ ಕೆರೆಯ ನೀರನ್ನು ಬಳಸಿಕೊಂಡು ವ್ಯವಸಾಯ ಮಾಡುತ್ತಿವೆ. ಪುರಾಣಿಯಲ್ಲೂ ಈ ಬಗೆಯ ಪ್ರಯತ್ನಗಳು ನಡೆದಿದ್ದವು. ಹರಿಯುವ ನೀರನ್ನು ಹಾಗೂ ಮಳೆಗಾಲದ ನೀರನ್ನು ಕೆರೆಯಲ್ಲಿ ಸಂಗ್ರಹಿಸುವ ಪ್ರಯತ್ನಗಳು ನಡೆದುವಾದರೂ ಅಷ್ಟಾಗಿ ಯಶಗಳಿಸಲಿಲ್ಲ.

ಬೆಟ್ಟದಲ್ಲಿರುವ ನಾಯಕರು ವ್ಯವಸಾಯವನ್ನು ಅವಲಂಬಿಸಿದ್ದರೂ, ಇಂದಿಗೂ ಆಹಾರ ಬೆಳೆಗಳನ್ನು ಮಾತ್ರ ಬೆಳೆಯುವ ಸ್ಥಿತಿಯಲ್ಲಿಲ್ಲ. ಮೊದಲಿಗೆ ನಾಯಕರು ರಾಗಿಯನ್ನು ಬೆಳೆಯುತ್ತಿದ್ದರು. ಆದರೆ ಹಂದಿಗಳ ಕಾಟದಿಂದಾಗಿ ಕಾವಲು ಕಾಯುವುದು ತುಂಬಾ ಕಷ್ಟವೆನಿಸಿ ರಾಗಿ ಬೆಳೆಯುವುದನ್ನು ನಿಧಾನವಾಗ ಕಡಿಮೆ ಮಾಡಿದರು. ಈಗ ನಿಯತವಾಗಿ ಒಬ್ಬಿಬ್ಬರು ಮಾತ್ರ ಬೆಳೆಯುತ್ತಿದ್ದಾರೆ. ಬೆಟ್ಟದಲ್ಲಿದ್ದ ರೇಷ್ಮೆ ಕೇಂದ್ರದಿಂದ ಮಾರ್ಗದರ್ಶನ ಪಡೆದು ಹಿಪ್ಪನೇರಳೆ ಬೆಳೆದು ರೇಷ್ಮೆ ಹುಳು ಸಾಕುತ್ತಿದ್ದುದು, ಸ್ವಲ್ಪ ಮಟ್ಟಿಗೆ ಆರ್ಥಿಕವಾಗಿಯೂ ಅನುಕೂಲಕರವಾಗಿತ್ತು. ಆದರೆ ಹಿಪ್ಪುನೇರಳೆ ಸೊಪ್ಪಿನ ಗಿಡವನ್ನು ಹಂದಿಗಳು ತಿಂದು ತುಳಿದು ನಾಶಮಾಡುತ್ತಿದ್ದವು. ಮುಂದಿನ ಹಂತದಲ್ಲಿ ಹಿಪ್ಪುನೇರಳೆಗೆ ಬದಲಿ ಬೆಳೆಯಾಗಿ ಕಾಫಿಯನ್ನು ಹಾಕಿದರು. ಹಂದಿಗಳಿಗೆ ಕಾಫಿ ಎಲೆಯ ರುಚಿ ಪ್ರಿಯವಾಗದಿದ್ದರೂ ಕಾಫಿಗಿಡವನ್ನೇ ಬೇರು ಸಮೇತ ಒದರಿ ಹೋಗುತ್ತವೆ.

ಬೆಟ್ಟದಲ್ಲಿ ಬಹಳ ಹಿಂದಿನ ಕಾಲದಿಂದಲೂ ಬ್ರಾಹ್ಮಣರು ಕೃಷಿ ಮಾಡಿಸುತ್ತಿದ್ದುದಕ್ಕೆ ನಿದರ್ಶನಗಳಿವೆ. ಕಪ್ಪುಕಡತಗಳಲ್ಲಿ ಅರ್ಚಕರು, ಪುರಾಣಿಕರು ಕೃಷಿ ಮಾಡಿಸುತ್ತಿದ್ದು, ಅದಕ್ಕೆ ಕಂದಾಯ ವಸೂಲಿ ಮಾಡಿದ

ವಿವರಗಳಿವೆ. ದೇವಾಲಯದ ಸೇವೆಗಳಲ್ಲಿದ್ದವರು ಬೆಟ್ಟದಲ್ಲಿ ಹಲವೆಡೆ ಅನುಮತಿ ಪಡೆದು ವ್ಯವಸಾಯ ಮಾಡುತ್ತಿದ್ದರು. ಆಲಯದ ಸೇವೆಯಲ್ಲಿದ್ದವರಿಗೆ ಜಮೀನು ಹಂಚುವಾಗ, ಅದರಲ್ಲಿ ಹೆಚ್ಚಿನ ಭೂಮಿಯನ್ನು ಪಡೆಯಲು ಶಕ್ತರಾದವರು ಬ್ರಾಹ್ಮಣರು. ಇವರಲ್ಲಿ ಕೆಲವರು ಕಿತ್ತಳೆ, ಕಾಫಿ ಬೆಳೆಯುತ್ತಿದ್ದರು. ರೇಷ್ಮೆ ಕೃಷಿ ಮಾಡುತ್ತಿದ್ದರು. ಕ್ರಮೇಣ ಹವಾಮಾನ ವೈಪರೀತ್ಯದಿಂದ ಹಾಗೂ ಕಾಂಡಕೊರಕಗಳಿಂದ ಬೆಳೆಯುವುದನ್ನು ನಿಲ್ಲಿಸಿದರು. ಹಿಂದೆ ಸೋಲಿಗರ ನೆರವಿನಿಂದ ಕೃಷಿ ಕಾರ್ಯಗಳನ್ನು ಸಲೀಸಾಗಿ ಮಾಡುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ ಮುಂತಾದ ಕಾರಣಗಳಿಂದ ಬೆಟ್ಟ ಬಿಟ್ಟು ಬೇರೆ ಕಡೆಗೆ ಹೋದವರು ತಮ್ಮ ಜಮೀನನ್ನು ಮಾರಿದ್ದಾರೆ.

ಸೋಮೇಶ್ವರ ಕೆರೆ

ಯಳಂದೂರು ಜಹಗೀರ್‌ದಾರರ ಕಾಲದಲ್ಲಿ ಅಂದರೆ ಸುಮಾರು ೧೬೦-೧೭೦ ವರ್ಷಗಳ ಹಿಂದೆಯೂ ಸೋಮೇಶ್ವರನ ಕೆರೆಯ ಬಳಿ ಸೋಲಿಗರು ಪೋಡು ವ್ಯವಸಾಯ ಮಾಡುತ್ತಿದ್ದ ವಿವರ ಕಡತಗಳಲ್ಲಿದೆ. ಪೋಡು ಮಾಡಿದುದಕ್ಕಾಗಿ ಪೋಡು ಕಂದಾಯವನ್ನು ಸಹಾ ಕಟ್ಟುತ್ತಿದ್ದ ದಾಖಲೆಗಳಿವೆ. ೧೮೪೨ರ ಫೆಬ್ರವರಿಯ ಕಡತದಲ್ಲಿ "ಸದರಿ ಹದಿನೇಳನೆಯ ತಾರೀಖು ಶ್ರೀಯವರ ಭಂಡಾರದಿಂದ ಯಳಂದೂರು ರಂಗಾರೆಡ್ಡಿಯವರಿಗೆ ಸೋಮೇಶ್ವರನ ಕೆರೆ ಕೆಳಗಣ ಗಿಡಗಂಟಿ ತರಿಸಿ ಪೋಡು ಮಾಡಿದ ಸಾಗುವಳಿ ಪಟ್ಟಿ ಬರೆದುಕೊಟ್ಟಿರುವ ವಿವರ ಹೀಗಿದೆ. ಸೋಲಿಗರ ಕುಳ ಒಂದಕ್ಕೆ ೦.೫ ಕಂದಾಯ ರಿವಾಜು ಇರುವ ಮೇರೆಗೆ ನಿಮ್ಮ ಮುಖಾಂತರ ಯೇಳು ಕುಳಗಳು ಸೇರಿದಾಗ್ಯೂ ತುಂಡು ವಂದು ಕುಳದ ಮೇಲೆ ತಾಳಕುಳಕ್ಕೆ ರಿವಾಜು ೦.೫ಕ್ಕೆ ನಾಲ್ಕು ವರ್ಷ ಮಾನ್ಯ ವಿಶ್ವಾವಸು ಆರಭ್ಯ ಪರಿಧಾವಿ ಸಂವತ್ಸರದವರೆಗೆ ವರ್ಷವೊಂದಕ್ಕೆ ಶ್ರಯ ೦.೧೧೩/೪ ಹೆಚ್ಚು ಮಾಡಿಶಿ ಬರೆಸಿಯಂಟು ವರ್ಷಕ್ಕೆ ಶ್ರಮ ೦.೫ ಮೇರೆಗೆ ಶ್ರಯ ನಿಗದಿಪಡಿಸಿ"[೧೦] ಎಂದು ಬರೆಯಾಗಿದೆ.

ಸೋಮೇಶ್ವರನ ಕೆರೆಯ ಬಳಿ ಪೋಡೊಂದನ್ನು ಹೊಸದಾಗಿ ನಿರ್ಮಿಸುವ ಬಗ್ಗೆ ರಂಗಾರೆಡ್ಡಿಯವರು ಮುಂದೆ ಬಂದು ವ್ಯವಸ್ಥೆ ಮಾಡಿ ಪಟ್ಟಿ ಬರೆಸಿಕೊಟ್ಟಿದ್ದಾರೆ. ಹೊಸ ಜಾಗವಾದ್ದರಿಂದ ಅಲ್ಲಿದ್ದ ಗಿಡಗಂಟಿಯನ್ನು ತರಿದು ಸಾಗುವಳಿ ಮಾಡಲು ಕನಿಷ್ಠ ದರದ ಕಂದಾಯವನ್ನು ವಿಧಿಸಲಾಗಿದೆ. ಹೊಸ ಜಾಗವನ್ನು ಅಭಿವೃದ್ಧಿಪಡಿಸಲು ಕಡಿಮೆ ಕಂದಾಯ ಕರಾರಿನಿಂದ ಭೂಮಿಯ ಸಾಗುವಳಿಯನ್ನು ಮಾಡುವ ಶ್ರಮ ಕ್ರಮವನ್ನು ಅನುಸರಿಸಿ ಬರೆಸಿ ಕೊಡಲಾಗಿದ್ದರೂ ನಾಲ್ಕು ವರ್ಷಗಳು ಕಳೆದಿರುವುದರಿಂದ ಈಗ ಅದನ್ನು ಹೆಚ್ಚಿಸಲಾಗಿದೆ ಎಂದು ನಿಗದಿ ಮಾಡಿದ ಕಂದಾಯದ ದರವನ್ನು ನಮೂದಿಸಲಾಗಿದೆ. ಸೋಲಿಗರ ಮೂರ್‍ನಾಲ್ಕು ವರ್ಷಕ್ಕೊಮ್ಮೆ ಕಾಡನ್ನು ಕಡಿದು ಪೋಡು ಮಾಡಿಕೊಂಡು ಅಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದು ಅವರ ಅಲೆಮಾರಿ ಪದ್ಧತಿಯ ಬಗ್ಗೆ ಅನೇಕ ಕಡೆ ಪ್ರಸ್ತಾಪಿಸಿದ್ದರೂ, ಬಿಳಿಗಿರಿರಂಗನ ಬೆಟ್ಟದ ಸಂದರ್ಭದಲ್ಲೂ ಅನೇಕ ವರ್ಷಗಳ ಕಾಲ ನಿರಂತರವಾಗಿ ಭೂಮಿ ಸಾಗುವಳಿ ಮಾಡಿದ ನಿದರ್ಶನಗಳಿವೆ.

ಸೋಮೇಶ್ವರ ಕರೆಯ ಬಳಿಯ cleared some years age by the Sholigas hill people for kumari cultivation a crop of ragi.... ಎಂದು ೧೮೬೭ರ ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಪತ್ರದಲ್ಲಿ ಸೂಚಿಸಲಾಗಿದೆ.[೧೧] ಸೋಮೇಶ್ವರನ ಕೆರೆಯ ಬಳಿ ಸಿಂಕೋನಾ ಮರಗಳ ಪ್ಲಾಂಟೇಷನ್ ಮಾಡುವ ಸಲುವಾಗಿ ನಡೆಯುತ್ತಿದ್ದ ಪತ್ರವ್ಯವಹಾರದಲ್ಲಿ "ಈಗಾಗಲೇ ಒಮ್ಮೆ ಇಲ್ಲಿ ಸೋಲಿಗರು ಕುಮರಿ ಬೇಸಾಯಕ್ಕಾಗಿ ಈ ಭೂಮಿಯನ್ನು ಬಳಸಿದ್ದರಿಂದ ಈ ಜಮೀನನ್ನು ಸಿಂಕೋವಾ ಮರಗಳನ್ನು ನೆಡಿಸಲು ಹದಗೊಳಿಸುವ ಕಾರ್ಯ ಸುಲಭವಾಗುತ್ತದೆ" ಎನ್ನುತ್ತಾ ಒಂದು ಪಕ್ಷ ಗಿಡಗಳು ಒಣಗುವುದಾದರೆ "ಹತ್ತಿರದ ಹಳ್ಳಿಗಳಲ್ಲೊ ಸೋಲಿಗರು ಇರುವುದರಿಂದ ಅವರನ್ನು ನೇಮಕ ಮಾಡಿಕೊಂಡು ನೀರು ಹಾಕಿಸಿಕೊಳ್ಳಲು ಸಾಧ್ಯ" ಎಂದು ಸೂಚಿಸಲಾಗಿದೆ. ಅರಣ್ಯದ ಪ್ರಾಣಿಗಳು ನೀರು ಕುಡಿಯಲು ಈ ಕೆರೆಗಳಿಗೆ ಬರುವುದರಿಂದ ಅಲ್ಲಿ ಬೆಳೆ ಬೆಳೆಯುವುದೆಂದರೆ ತೊಂದರೆಗಳನ್ನು ತಾವಾಗಿಯೇ ಕೈ ಬೀಸಿ ಆಹ್ವಾನಿಸಿದಂತೆ.

ಬೆಟ್ಟದಲ್ಲಿ ವ್ಯವಸಾಯ ಮಾಡುವುದು ಕಷ್ಟ ಎಂಬ ಅರಿವಿದ್ದರೂ ಸೋಲಿಗರಿಗೆ ವ್ಯವಸಾಯ ಮಾಡದೆ ವಿಧಿಯಿಲ್ಲ. ರಾಗಿ ಕಾಚಕ್ಕಿ ಕಟ್ಟಿದಾಗ ಹಂದಿಗಳು ನುಗ್ಗಿ ಲೂಟಿ ಮಾಡುತ್ತವೆ. ಆನೆಗಳು ಕೂಡ ಹೊಲಕ್ಕೆ ನುಗ್ಗಿ ಪೈರು ಹಾಳುಮಾಡಿ ಹೋಗುತ್ತವೆ. ಹುಲ್ಲನ್ನು ಕೂಡಾ ನೆಲಮಟ್ಟದಲ್ಲಿ ಮೆದೆ ಹಾಕುವಂತಿಲ್ಲ. ಸ್ವಲ್ಪ ಎತ್ತರದ ಮರದ ಕವಲುಗಳಲ್ಲಿ ಅಟ್ಟಣೆ ಕಟ್ಟಿ ಅದರಲ್ಲಿ ಹುಲ್ಲನ್ನು ಎತ್ತಿಟ್ಟುಕೊಳ್ಳುತ್ತಾರೆ. ಕಾಡುಮೃಗಗಳ ಹಾವಳಿ ಹೆಚ್ಚಾದರೂ ಅರಣ್ಯ ಇಲಾಖೆಯ ಕಾನೂನಿನಂತೆ ಅವುಗಳನ್ನು ಕೊಲ್ಲುವಂತಿಲ್ಲ.

ದೇವಾಲಯದ ಜಮೀನು, ಕೊಡುಗೆ ಜಮೀನು - ಪಣ್ಯದ ತೋಟದಿಂದ ಆದಾಯ

ಬಿಳಿಗಿರಿರಂಗನ ಬೆಟ್ಟವನ್ನು ದೇವಸ್ಥಾನಕ್ಕೆ ಸರ್ವಸಾಮಾನ್ಯ ಮಾಡಿದ್ದರಿಂದ, ಬೆಟ್ಟದ ಸೋಲಿಗರು ಹಾಗೂ ಸೋಲಿಗೇತರರು ಕೃಷಿ ಮಾಡುತ್ತಿದ್ದ ಭೂಮಿಗೆ ಪ್ರತಿವರ್ಷವು ನಿಗದಿತ ಕಂದಾಯವನ್ನು ದೇವಸ್ಥಾನಕ್ಕೆ ಕಟ್ಟಬೇಕಿತ್ತು. ಈ ಕಂದಾಯದ ವಿವರವನ್ನು ಪ್ರತ್ಯೇಕವಾಗಿ ಕಪ್ಪುಕಡತಗಳಲ್ಲಿ ಬರೆದಿಡುವ ಶ್ರಮವಿತ್ತು. ಅದಲ್ಲದೆ ಹೊಗೆ ಹಣ, ಮನೆದಣ, ಯೇದು ಸುಂಕ, ಜೀತಗಾರ ಸುಂಕ ಮುಂತಾದ ತೆರಿಗೆಗಳು ವಸೂಲಾಗುತ್ತಿದ್ದವು. ಸೋಲಿಗರು ರಾಗಿ, ಸಾಸುವೆ, ಕುಂಬಳ ಕಾಯಿಗಳನ್ನು ಕೊಡುತ್ತಿವುದು ಪ್ರತಿಯೊಂದು ಕುಳಕ್ಕೆ ನಿಗದಿಸಿದ ಜೇನು ಮೇಣ ಸಂಗ್ರಹಿಸಿ ಕೊಡಬೇಕಿತ್ತು. ಸೋಲಿಗರು ರಾಗಿ, ಸಾಸುವೆ, ಕುಂಬಳಕಾಯಿಗಳನ್ನು ಕೊಡುತ್ತಿದ್ದರು. ಪ್ರತಿಯೊಂದು ಕುಳಕ್ಕೆ ನಿಗಧಿಸಿದ ಜೇನು ಮೇಣ ಸಂಗ್ರಹಿಸಿ ಕೊಡಬೇಕಿತ್ತು. ಎಷ್ಟೊ ಸಂದರ್ಭಗಳಲ್ಲಿ ಹಣ ಕೊಡಲಾಗದೆ ತಾವು ಬೆಳೆದ ಇಲ್ಲವೆ ಸಂಗ್ರಹಿಸಿದ ಪದಾರ್ಥಗಳನ್ನು ತಲುಪಿಸುತ್ತಿದ್ದರು. ಕೆಲವು ಸಲ ಅವರು ಬೆಳೆದ ಬೆಳೆಯನ್ನು ಆನೆಗಳು ನಾಶಮಾಡಿದ್ದರೆ

ಕಂದಾಯವನ್ನು ಮಾಫಿ ಮಾಡಲಾಗಿದೆ. ಜಹಗೀರ ಆಳ್ವಿಕೆಯ ಪರವಾಗಿ "ಶ್ಯಾನುಭೋಗರು ಪೋಡಿಂದ ಪೋಡಿಗೆ ಹೋಗಿ ಕಂದಾಯ ವಸೂಲಿ ಮಾಡುತ್ತಿದ್ದುಂಟು. ಇದು ನಂತರದ ಕಾಲದಲ್ಲಿಯೂ ಮುಂದುವರೆಸಲಾಗಿತ್ತು."[೨] ಸೋಲಿಗ ಕುಳಗಳ ಸ್ಥಳಾಂತರ ಮಾಡುತ್ತಿದ್ದ ಸಂದರ್ಭಗಳಲ್ಲಿ ಮಾತ್ರ ಕಂದಾಯ ವಸೂಲಾಗುತ್ತಿರಲಿಲ್ಲ.

ದೇವಸ್ಥಾನಕ್ಕೆ ಅನೇಕ ಕಡೆಗಳಲ್ಲಿದ್ದ ಕೊಡುಗೆ ಜಮೀನುಗಳಿಂದ ಆಹಾರ ಪದಾರ್ಥಗಳು ಬರುತ್ತಿದ್ದವು. ಸಂಖ್ಯೆ ೨೧೯ರ ಕಡತದಲ್ಲಿ ಯರಗಂಬಳ್ಳಿಯಿಂದ ೧೬೦೦ ವೀಳ್ಯದೆಲೆ, ಹಾಲು, ಇಪ್ಪತ್ತು ಶೇರು ಉದ್ದು, ಗಣಗನೂರಿನಿಂದ ಹತ್ತು ಅಚ್ಚು ಬೆಲ್ಲ, ಆಲೂರು ತೋಟದಿಂದ ನಲ್ವತ್ತು ತೆಂಗಿನಕಾಯಿ, ೨೦ ಯಳನೀರು, ಗುಂಬ್ಬಳ್ಳಿಯಿಂದ ಒಂದು ಮಣ ವಳ್ಳೆಣ್ಣೆ, ಬೆಲ್ಲದಚ್ಚು, ಅರ್ಧಖಂಡುಗ ಹುರುಳಿ ಇತ್ಯಾದಿ ಪದಾರ್ಥಗಳು ಬಂದು ಸೇರಿವೆ. ಆಲಯಕ್ಕೆ ಸರ್ವಮಾನ್ಯವಾಗಿದ್ದ ಗೌಡನಹಳ್ಳಿಯಿಂದ ಭತ್ತ ಮೊದಲ್ಗೊಂಡು ಹಾಲು ಮೊಸರಿನವರೆಗೂ ಸರಬರಾಜಾಗುತ್ತಿತ್ತು. ದೇವಸ್ಥಾನಕ್ಕೆ ಸೇರಿದ ಜಮೀನುಗಳನ್ನು ಬೀಳುಗುತ್ತಿಗೆ, ಅಂಡೆನಾಳಿಗುತ್ತಿಗೆ ಮುಂತಾದ ರೀತಿಯ ಗುತ್ತಿಗೆಗಳಿಗೆ ಕೊಡುತ್ತಿದ್ದರು. ಕೋಮಾರನಪುರದ ಹೊಲೆಯರಿಗೆ ಬೀಳುಗುತ್ತಿಗೆ ಸಾಗುವಳಿ ಮಾಡಲು ಕೊಡಲಾಗುತ್ತಿತ್ತು. ಯರಗಂಬಳ್ಳಿಯ ಮಾದಿಗರು ಅಂಡೇನಾಳಿ ಗುತ್ತಿಗೆ ಮಾಡುತ್ತಿದ್ದರು.

ದೇವಸ್ಥಾನಕ್ಕೆ ಪಣ್ಯದ ತೋಟದಿಂದ ಬಾಳೆಹಣ್ಣು ಬರುತ್ತಿತ್ತು. ಪ್ರತಿ ತಿಂಗಳು ಬಂದ ಹಣ್ಣಿನ ಲೆಕ್ಕ, ಅದನ್ನು ಮಾರಿದ ವಿವರಗಳಿವೆ. ಕೆಲವೊಮ್ಮೆ ಕ್ರಯಕ್ಕೆ ಕೂಡಾ ಕೊಂಡು ಅದನ್ನು ಹೆಚ್ಚಿನ ಬೆಲೆಗೆ ಮಾರಿದ್ದಾರೆ. ಹೀಗೆ ಪ್ರತಿವರ್ಷವು ತೋಟಗಳಿಂದ ಬಂದ ಹಣವನ್ನು ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿತ್ತು.

ಅರಣ್ಯದಿಂದ ಆದಾಯ : ಈ ಪ್ರದೇಶದ ೨೨೭೫೦ ಎಕರೆಯಷ್ಟೇ ವಿಸ್ತಾರವಾದ ಕಾಡು ಸರ್ವಮಾನ್ಯವಾಗಿ ದೇವಸ್ಥಾನಕ್ಕೆ ಸೇರುತ್ತು. ಆದರೆ ಈ ಕಡತಗಳಲ್ಲಿ ಎಲ್ಲಿಯೂ ಕಾಡಿನ ಮರಮುಟ್ಟು ಮಾರಾಟ ಮಾಡಿ ಬಂದ ಹಣವನ್ನು ದೇವಸ್ಥಾನದ ಲೆಕ್ಕಕ್ಕೆ ಜಮಾ ಆದ ಮಾಹಿತಿಯಿಲ್ಲ. ಅದನ್ನು ಮಾರಾಟ ಮಾಡಿ ಬಂದ ಹಣ ಯಳಂದೂರ ಕಚೇರಿಯಿಂದ ನೇರವಾಗಿ ಜಾಗೀದಾರರಿಗೆ ಸಲ್ಲುತ್ತಿದ್ದ ಬಗೆಗಾಗಲಿ ಅಥವಾ ಮಾರಾಟ ಮಾಡಿಸಿ ಬೆಟ್ಟದ ದೇವಸ್ತಾನದ ಲೆಕ್ಕಕ್ಕೆ ಯಳಂದೂರ ಕಛೇರಿಯವರೆ ಇಡುತ್ತಿದ್ದ ಲೆಕ್ಕಕ್ಕೆ ಸೇರುತ್ತಿದ್ದ ಬಗೆಗಾಗಲಿ ಯಾವ ಮಾಹಿತಿಯೂ ದೊರೆತಿಲ್ಲ. ಬೆಟ್ಟದಲ್ಲಿದ್ದ ಅಮೂಲ್ಯವಾದ ಶ್ರೀಗಂಧ ಮುಂತಾದ ಮರಗಳನ್ನು ಯಾರ ಲೆಕ್ಕಕ್ಕೆ ತೆಗೆದು ಕೊಳ್ಳಲಾಗುತ್ತಿತ್ತು ಎನ್ನುವುದರ ಬಗ್ಗೆ ಕಡತಗಳು ಮೌನವಹಿಸಿವೆ.

ಒಟ್ಟಾರೆ ದೇವಾಲಯಕ್ಕೆ ಅರಣ್ಯದಿಂದ ಕೊಡುಗೆ ಜಮೀನುಗಳಿಂದ ದಾನ-ದತ್ತಿಗಳಿಂದ ಬರುತ್ತಿದ್ದ ಆದಾಯದ ಜೊತೆಗೆ, ಭಕ್ತರು ಸಲ್ಲಿಸುತ್ತಿದ್ದ ಕಾಣಿಕೆಯೂ ಸಾಕಷ್ಟಿತ್ತು. ಈ ದೇವಸ್ಥಾನ ಹಿಂದೆ ಯಳಂದೂರು ಜಹಗೀರುದಾರರ ಸುಪರ್ದಿನಲ್ಲಿತ್ತು. ಪ್ರಪಂಚದಲ್ಲೇ ಶ್ರೀಮಂತ ದೇವರೆಂದು

ಗುರುತಿಸಲಾಗಿತ್ತು. ೨೨ ಚದರ ಮೈಲಿ ವಿಸ್ತೀರ್ಣವುಳ್ಳ ಬಹು ಬೆಲೆಯುಳ್ಳ ಕಾಡು ಈ ದೇವಸ್ಥಾನಕ್ಕೆ ಸೇರಿದ್ದರಿಂದ ಇದರ ಉತ್ಪತ್ತಿಯನ್ನೆಲ್ಲ ಹಿಂದೆ ಜಹಗೀರುದಾರರೇ ಪಡೆಯುತ್ತಿದ್ದರು. ಈಗ ಇದು ಸರ್ಕಾರದ ಸುಪರ್ದಿಗೆ ಬಂದಿದೆ. ಈ ದೇವಸ್ಥಾನಕ್ಕೆ ಸೇರಿದ ನಾಲ್ಕು ಲಕ್ಷ ರೂಪಾಯಿಗಳ ಒಡವೆಗಳು ಟ್ರೈಜರಿಯಲ್ಲಿರುತ್ತವೆ. ಆದರೆ ಇನಾಂ ರದ್ಧತಿಯ ಅನಂತರ ಆಲಯಕ್ಕೆ ಅರಣ್ಯದಿಂದ ಬರುತ್ತಿದ್ದ ಆದಾಯ ಕಡಿತಗೊಂಡಿತ್ತು. ಇಂದು ಬರುತ್ತಿರುವ ಭಕ್ತರ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ. ನಿತ್ಯದ ಹಾಗೂ ವಿಶೇಷ ದಿನಗಳ ಆದಾಯ ಮೊದಲಿಗಿಂತ ಹೆಚ್ಚಿದೆ. ಈಗಲು ಜಾತ್ರೆ ಮುಂತಾದ ಸಂದರ್ಭದಲ್ಲಿ ಲಕ್ಷಗಳಷ್ಟು ಹಣ ಹುಂಡಿಯಲ್ಲಿ ಬಿದ್ದಿರುತ್ತದೆ. ಇದನ್ನು ಬಳಸಿಕೊಂಡು ಸರಕಾರವೇ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕೈಹಾಕಬೇಕಾಗಿದೆ.

ದೇವಾಲಯ ಮತ್ತು ಅರ್ಥವ್ಯವಸ್ಥೆ

ರಂಗನಾಥ ಸ್ವಾಮಿಯ ದೇವಾಲಯಕ್ಕೆ ಹದಿನಾಡಿನ ಮುದ್ದುರಾಜ ಪುರುವಟ್ಟಾಗಿ ಕೊಟ್ಟ ಮೂವತ್ತು ವರಹದ ವಿವರವೇ ದೇವಾಲಯದ ಅರ್ಥಮೂಲದ ಮೊದಲ ದಾಖಲೆಯಾಗಿದೆ. ಅದಾದ ತರುವಾಯ ಸುಮಾರು ಇನ್ನೂರು ವರ್ಷಗಳ ಹಿಂದೆ, ಅಂದರೆ ೧೭೯೯-೧೮೦೦ರ ಅವಧಿಯಲ್ಲಿ ದೇವಸ್ಥಾನಕ್ಕೆ ಬಿಳಿಗಿರಿರಂಗನ ಬೆಟ್ಟದ ಕಾಡು ಹಾಗೂ ಗೌಡಹಳ್ಳಿಯನ್ನು ಸರ್ವಮಾನ್ಯವಾಗಿ ಕೊಡಲಾಯಿತು ಎನ್ನಲಾಗಿದೆ.[೧೩] ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖೆಯ ದಾಖಲೆಯಂತೆ ಅರಣ್ಯದಿಂದ ಬರುತ್ತಿದ್ದ Items of land Revehue, Amajai, Hulbani Excise and all income from the forest including sandal wood are being enjoyed.[೧೪]

ಬೆಟ್ಟದಲ್ಲಿ ಹಣ, ಅಥವಾ ಪದಾರ್ಥಗಳ ರೂಪದಲ್ಲಿ ಸಂಗ್ರಹವಾಗುತ್ತಿದ್ದ ಕಂದಾಯ ವಿವರಗಳು ಕಡತಗಳಲ್ಲಿವೆ. ಬೆಟ್ಟದಲ್ಲಿ ಸಂಗ್ರಹಿಸಿದ ಜೇನುತುಪ್ಪವನ್ನು ದೇವಸ್ಥಾನದ ಲೆಕ್ಕಕ್ಕೆ ಸೇರಿಸಿ, ಯಳಂದೂರಿನ ಕಛೇರಿಗೆ ಕಳುಹಿಸುತ್ತಿದ್ದರು. ದೇವಾಲಯಕ್ಕೆ ಅಗತ್ಯವಾದದ್ದನ್ನು ಕಛೇರಿಯಿಂದ ಕಳುಹಿಸುವ ಅಗತ್ಯವಿದ್ದಾಗ ಯಳಂದೂರಿನ ಅರಮನೆಗೆ ದೇವಾಲಯದ ಉಗ್ರಾಣದಿಂದ ಸಾಮಗ್ರಿಗಳನ್ನು ತರಿಸಿಕೊಳ್ಳುತ್ತಿದ್ದರು. ಇವುಗಳ ಲೆಕ್ಕದ ದಾಖಲೆ ಯಳಂದೂರಿನ ಕಛೇರಿಯಲ್ಲಿ ಇದ್ದಂತೆ, ರಂಗನಾಥಸ್ವಾಮಿ ಆಲಯದಲ್ಲಿಯೂ ಇರುತ್ತಿತ್ತು. ಆಗ ಈ ಪ್ರದೇಶದಲ್ಲಿ ಚಾಲ್ತಿಯಲ್ಲಿದ್ದ ಅಳತೆಯ ಮಾಪನಗಳಿಂದ ನಿರ್ಧರಿಸುತ್ತಿದ್ದರು. ತಗ್ಗುಶೇರು, ಯಿಬ್ಬಳ್ಳಿ, ಶೇರು, ಅರೆಶೇರು, ಮಾನ, ಮಣ ಖಂಡುಗ ಗ್ರಾಮಖಂಡುಗ ತೋಲ, ಪಡಿ, ದುಡ್ಡು ಬಳ್ಳ ಗುಂಬ ಮುಂತಾದವು ಅಳತೆಯ ಮಾಪನಗಳಾಗಿದ್ದವು.

ಕಡತಗಳ ಮಾಹಿತಿಯಂತೆ, ಬೆಟ್ಟದ ದೇವಸ್ಥಾನದಲ್ಲಿ ದೇವರ ಸೇವೆಗೆ ಹಾಗೂ ಬೇರೆ ಕಾರ್ಯಗಳಿಗೆ ಅಗತ್ಯವಾಗಿದ್ದ ವಸ್ತುಗಳನ್ನು, ಪದಾರ್ಥ ವಿನಿಮಯ ಪದ್ಧತಿಯಲ್ಲಿ ಕೆಲವು ಸಲ ಕೊಂಡುಕೊಳ್ಳುತ್ತಿದ್ದರು.

ಉದಾ : ದೇವಸ್ಥಾನಕ್ಕೆ ಬೇಕಾಗಿದ್ದ ಎಲೆಯನ್ನು ಕೊಳ್ಳುವಾಗ ಅಕ್ಕಿಗೆ ವಿನಿಮಯ ಮಾಡಿಕೊಂಡಿದ್ದಾರೆ. ೫ ಕಟ್ಟು ವೀಳ್ಯದೆಲೆಗೆ ಒಂದು ಶೇರು ಅಕ್ಕಿಯನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೇ ಬೆಟ್ಟಕ್ಕೆ ಬಂದ ಸೇವಾರ್ಥಿಗಳಿಗೆ ಬೇಕಾದ ಪದಾರ್ಥಗಳನ್ನು ಬೇಕಾಗಿದ್ದರೆ ಅವರು ದೇವಸ್ಥಾನದ ಉಗ್ರಾಣದಿಂದಲೇ ಕೊಂಡುಕೊಳ್ಳಬೇಕಾಗಿತ್ತು. ತೆಂಗಿನಕಾಯಿ, ಮೆಣಸಿಕಾಯಿ, ಅಕ್ಕಿ, ತುಪ್ಪ ಮುಂತಾದವನ್ನು ಮಾರಾಟ ಮಾಡಿ ಬಂದ ಹಣವನ್ನು ದೇವಸ್ತಾನದ ಲೆಕ್ಕಕ್ಕೆ ಜಮಾ ಮಾಡುತ್ತಿದ್ದರು. ಆಲಯದ ನೌಕರರಿಗೆ ಅಗತ್ಯವಿದ್ದಾಗ ಪದಾರ್ಥಗಳನ್ನು ಕೊಟ್ಟು, ವಸೂಲು ಮಾಡುವ ಪದ್ಧತಿಯಿತ್ತು. ಛತ್ರಕ್ಕೆ ಬೇಕಾದಾಗ ದೇವಸ್ಥಾನದ ಉಗ್ರಾಣದಿಂದ ಕಡಪಡೆದಂತೆ. ದೇವಸ್ಥಾನಕ್ಕೆ ಬೇಕಾದಾಗ ಛತ್ರದ ಲೆಕ್ಕದಿಂದ ಪದಾರ್ಥಗಳನ್ನು ಕಡ ಪಡೆಯಲಾಗುತ್ತಿತ್ತು. ಇದಕ್ಕೆ 'ಕಡವೆಚ್ಚ' ಮತ್ತು 'ಕಡನಾದಾಯ' ಎಂದು ಹೆಸರಿಸಲಾಗಿತ್ತು. ದೇವಸ್ಥಾನದ ಹಾಗೂ ಛತ್ರದ ಲೆಕ್ಕಗಳನ್ನು ಪ್ರತ್ಯೇಕವಾಗಿ ಲೆಕ್ಕ ಬರೆದಿಡುವ ವ್ಯವಸ್ಥೆಯಿತ್ತು.

ಸೋಲಿಗರ ಕಿರು ಅರಣ್ಯ ಸಂಗ್ರಹದ ಆರ್ಥಿಕ ಮೂಲಗಳು

ಸೋಲಿಗರು ಹಿಂದಿನ ಕಾಲದಲ್ಲಿ, ತಮ್ಮ ಬದುಕಿಗೆ ಬೇಕಾದ ಬಹುತೇಕ ವಸ್ತುಗಳನ್ನು ಕಾಡಿನಿಂದ ಪಡೆಯುತ್ತಿದ್ದರು. ಇನ್ನುಳಿದವನ್ನು, ಕಾಡಿನ ಉತ್ಪನ್ನಗಳನ್ನು ಮತ್ತು ತಾವು ಬೆಳೆದ ಪದಾರ್ಥಗಳನ್ನು ವಿನಿಮಯಿಸುವುದರ ಮೂಲಕ ಕೊಳ್ಳುತ್ತಿದ್ದರು. ಆದರೆ ಇಂದು ಏನೇ ಬೇಕಿದ್ದರೂ ಹಣ ಕೊಟ್ಟೇ ತೆಗೆದುಕೊಳ್ಳಬೇಕು. ಅದಕ್ಕಾಗಿ ಹಣ ಸಂಪಾದಿಸಲು ಇರುವ ಸ್ವಲ್ಪ ಭೂಮಿಯಲ್ಲಿ ವ್ಯವಸಾಯ ಅಥವಾ ಕೆಲವು ಅರಣ್ಯೋತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ಅಥವಾ ಇನ್ನುಳಿದವರ ಭೂಮಿಗಳಲ್ಲಿ, ಇತರ ವ್ಯವಸ್ಥೆಗಳಲ್ಲಿ ಕೂಲಿ ಮಾಡಿ ಗಳಿಸಬೇಕಾಗಿದೆ. ಸ್ವಂತಕ್ಕೆ ಭೂಮಿ ಇರುವವನು ಸಹ ಅರಣ್ಯ ಉತ್ಪನ್ನಗಳನ್ನು ಸಂಗ್ರಹ ಮಾಡಿ ಹಣ ಗಳಿಸಬೇಕಾಗಿದೆ.

ಸೋಲಿಗರು ಬೆಟ್ಟದ ಕೆಳಗಿನ "ನಾಗವಳ್ಳಿ, ರಾಮಸಮುದ್ರ, ದೊಡ್ಡರಾಮನ ಪೇಟೆ, ಜ್ಯೋತಿಗೌಡನ ಪುರ, ಯರಗಂಬಳ್ಳಿ, ಗುಂಬಳ್ಳಿ ಮೊದಲಾದ ಊರುಗಳಿಗೆ ತಾವು ಸಂಗ್ರಹಿಸಿದ ಜೇನು, ಮಾಕಳಿಬೇರು, ನಿಂಬೆ, ಅಳಲೆಕಾಯಿ ಮುಂತಾದ ಪದಾರ್ಥಗಳನ್ನು ಹೊತ್ತು ತರುತ್ತಿದ್ದರು. ಅವರಲ್ಲಿ ಕೆಲವರು ಚಾಮರಾಜನಗರದವರೆಗೂ ಹೋಗುತ್ತಿದ್ದರು. ಈ ಹಳ್ಳಿಗಳಿಗೆ ಬಂದಾಗ ತಮಗೆ ಅಗತ್ಯವಾಗಿರುವ ಹಗ್ಗ, ಬಟ್ಟೆ, ಉಪ್ಪು, ಮೆಣಸಿನಕಾಯಿ, ಕೊತ್ತಂಬರಿ ಮುಂತಾದವನ್ನು ತೆಗೆದಿಡಲು ಗ್ರಾಮದವರಿಗೆ ಹೇಳಿರುತ್ತಿದ್ದರು. ಬಹಳ ದೂರದ ಊರುಗಳಿಗಾದರೆ ಎರಡು ಮೂರು ದಿನದ ಪ್ರಮಾಣವಾಗಿರುತ್ತಿತ್ತು. ಬೆಳಗಿನ ಜಾವದಲ್ಲೇ ಹೊರಟ ಮಾರಾಟ ಮಾಡಿ, ಬಹಳ ದೂರವಾದರೆ, ಆ ಊರುಗಳವರ ಮನೆ ಜಗುಲಿಗಳಲ್ಲಿ ಮಲಗಿ ಬೆಳಗ್ಗೆದ್ದು ಪ್ರಯಾಣ ಮುಂದುವರೆಸಿ ಮಾರಾಟ ಮುಗಿಸಿ ಕಾಡಿಗೆ ಮರಳುತ್ತಿದ್ದರು.

ಸೋಲಿಗರಿಗಾಗಿ ಸರ್ಕಾರವೇ LAMPS- Large Scale Adivasi(tribal) Multi purpose Soceity ಸೊಸೈಟಿ (ಲಾರ್ಜ್ ಸ್ಕೇಲ್ ಆದಿವಾಸಿ ಮಲ್ಟಿಪರ್ಪಸ್ ಸೊಸೈಟಿ)ಯಂತಹ ಸಹಕಾರ

ಸಂಘಗಳನ್ನು ಸ್ಥಾಪಿಸಿದ ನಂತರ, ಅವರು ಸಂಗ್ರಹಿಸಿದ ವಸ್ತುಗಳನ್ನು ಸಂಘಕ್ಕೆ ಕೊಟ್ಟು, ಆಯಾ ವರ್ಷಕ್ಕೆ ನಿಗದಿಪಡಿಸಿದಂತೆ ಹಣ ಪಡೆಯಲಾರಂಭಿಸಿದರು. ಇಂದಿಗೂ ಅಳಲೆಕಾಯಿ, ಅಂಟುವಾಳಕಾಯಿ, ಜೇನು, ಸೀಗೆಕಾಯಿ, ನೆಲ್ಲಿಕಾಯಿ, ಪಾಚಿ ಮುಂತಾದ ವಸ್ತುಗಳನ್ನು ಸೋಲಿಗರು ಸಂಗ್ರಹಿಸಿ ಸೊಸೈಟಿಗೆ ಕೊಡುತ್ತಿದ್ದಾರೆ.

ಸೋಲಿಗರಿಗೆ ಶೇ.೫೦ರಷ್ಟು ಆದಾಯ ಕಿರು ಅರಣ್ಯ ಉತ್ಪಾದನೆಯಿಂದ ಬರುತ್ತದೆ. ಇದರಿಂದ ಆರು ತಿಂಗಳ ಕಾಲ ಜೀವನ ನಿರ್ವಹಿಸಲು ಸಾಧ್ಯ. ಇನ್ನಾರು ತಿಂಗಳಲ್ಲಿ ಇನ್ನಿತರ ವೃತ್ತಿಗಳ ಅವಲಂಬಿಸಿ ಆದಾಯವನ್ನು ಕಾಣಬೇಕು. ಸಾಂಪ್ರದಾಯಿಕ ಉದ್ಯೋಗಗಳು, ಜೀವನಾವಶ್ಯಕತೆಯನ್ನು ಪೂರ್ಣವಾಗಿ ಪೂರೈಸುತ್ತಿಲ್ಲ. ವೃತ್ತಿಪರ ಶಿಕ್ಷಣ ಕೊಟ್ಟಿದ್ದರಿಂದ ಕೆಲವರಿಗೆ ಆದಾಯ ಬರುತ್ತಿದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಕೆಲವರಿಗೆ ನಿಗಧಿತ ಮಾನಸಿಕ ವೇತನವಿದ್ದರೆ, ಇನ್ನುಳಿದವರಿಗೆ ತಾವು ಕೆಲಸ ಮಾಡಿದ ದಿನಗಳಿಗೆ ಮಾತ್ರ ಕೂಲಿ ಸಿಗುತ್ತದೆ. ಸೋಲಿಗರು ತಮ್ಮ ಹೊಲದ ಕೆಲಸ ಮುಗಿದ ಬಳಿಕ ಬಿಡುವಿನ ವೇಳೆಯಲ್ಲಿ ದಿನಗೂಲಿಗಳಾಗಿ ದುಡಿಯುತ್ತಾರೆ. ಈ ಕೆಲಸಗಳ ಜೊತೆಗೆ ದನ, ಕೋಳಿ, ಕುರಿ, ಸಾಕಾಣಿಕ ಮುಂತಾದ ಉಪವೃತ್ತಿಗಳನ್ನು ಅವಲಂಬಿಸಿದ್ದಾರೆ.

ಸಾಮಾಜಿಕ ವ್ಯವಸ್ಥೆ

ಸಮಾಜ ರಚನೆಯ ಸ್ವರೂಪಕ್ಕೆ ಸಾಂಸ್ಕೃತಿಕ ಮೌಲ್ಯಗಳಿಗೂ ನಿಕಟ ಸಂಬಂಧವಿದೆ. ಮೌಲ್ಯಗಳಿಗೆ ದೊರೆಯುವ ಮಾನ್ಯತೆಗೆ ಅನುಸಾರವಾಗಿ ಸಮಾಜದಲ್ಲಿ ವಿಭಿನ್ನ ಸ್ತರಗಳು ನಿರ್ಮಾಣವಾಗುವುದನ್ನು ಗಮನಿಸಬಹುದು. ಭಾರತೀಯ ಸಂದರ್ಭದಲ್ಲಿ "ಜಾತಿ" ಎನ್ನುವುದು. ಮನುಷ್ಯರು ಪ್ರಯತ್ನ ಪೂರ್ವಕವಾಗಿ ರೂಢಿಸಿಕೊಂಡಂತಹುದು. ಆದ್ದರಿಂದ ಅದನ್ನು ಸಂಸ್ಕೃತಿಯ ಒಂದು ಭಾಗವಾಗಿಯೇ ಅಧ್ಯಯನ ಮಾಡಬೇಕಾಗುತ್ತದೆ. ಜಾತಿವ್ಯವಸ್ಥೆ ಬಹಳ ಬಲಿಷ್ಠವಾದ ಸಾಮಾಜಿಕ ಗುಣವಾಗಿದ್ದು, ಸಾಂಸ್ಕೃತಿಕವಾಗಿ ಹಲವಾರು ಅಂಶಗಳನ್ನು ನಿಯಂತ್ರಿಸುವ, ನಿರ್ಮಿಸುವ ವ್ಯವಸ್ಥೆಯಾಗಿದೆ. ಅದನ್ನು ಸೈದ್ಧಾಂತಿಕವಾಗಿ ಅಲ್ಲಗಳೆಯುವವರೂ ವಾಸ್ತವ ಬದುಕಿನಲ್ಲಿ ಸ್ವೀಕರಿಸುವವರೇ ಆಗಿದ್ದಾರೆ. ಪ್ರತಿಯೊಬ್ಬರ ಅರಿವಿನ ಆಳದಲ್ಲಿ ಜಾತಿಯ ಪಾತಾಳಗರಡಿ ಕೈ ಹಾಕುತ್ತಲೇ ಇದೆ. ಇತರ ಸಂಸ್ಕೃತಿಗಿಂತಲೂ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳೆಂದರೆ ವಿಚಾರಕ್ಕೂ ಆಚರಣೆಗಳೂ ಸಂದರ್ಭವೇ ಇಲ್ಲದಿರುವಂಥದ್ದು. ಆದರೆ ಈ ವಿಚಿತ್ರ ಕಂದಕವು ಪ್ರಧಾನವಾಗಿ ಜಾತಿಯಿಂದ ಸೃಷ್ಟಿಯಾಗಿದೆ.[೧೫]

ಭಾರತೀಯ ಬದುಕಿನಲ್ಲಿ ಜಾತಿ ವ್ಯವಸ್ಥೆ ಎಂದೂ ಮನೆಯೊಳಗೆ ಉಳಿದಿಲ್ಲ. ಅದು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಭಾರತದ ಅಂಗುಲಂಗುಲಗಳಲ್ಲಿ ವ್ಯಾಪ್ತಿಸಿ ತನ್ನ ಬಿಗಿ ಮುಷ್ಟಿಯಲ್ಲಿ ಹಿಡಿದಿಟ್ಟಿದೆ. ಜಾತಿ ವ್ಯವಸ್ಥೆ ಸಾಂಸ್ಕೃತಿಕ ಮೌಲ್ಯಗಳ ರಚನೆ ಮಾತ್ರವಲ್ಲ. ಶ್ರೇಣೆಕೃತ ಸಮಾಜ, ಸಂಪತ್ತು ಮತ್ತು ಅಧಿಕಾರದ ಅಸಮಾನ ಹಂಚಿಕೆಯ ನಿರ್ದಿಷ್ಟ ವಿನ್ಯಾಸವು ಆಗಿದೆ. ಭಾರತೀಯ

ಸಾಮಾಜಿಕ ವ್ಯವಸ್ಥೆಯಲ್ಲಿನ ಚಾತುರ್ವರ್ಣದ ಶ್ರೇಣೀಕೃತ ವಿಭಜನೆಗಳು, ಊರು ಕಾಡೆನ್ನದೇ ಎಲ್ಲೆಡೆಯಲ್ಲೂ ತನ್ನ ನಿಡಿಯಾದ ಹಸ್ತವನ್ನು ಚಾಚಿ ಹಿಡಿದಿಟ್ಟಿತ್ತು. ಜನ್ಮಾಧಾರಿತವಾದ ಕುಲ, ಜಾತಿ ವ್ಯವಸ್ಥೆಗಳು ಯೋಗ್ಯತೆ ಅರ್ಹತೆಗಳಿಗಿಂತ ಮಿಗಿಲಾಗಿ, ಹುಟ್ಟಿನಿಂದೆ, ಉತ್ತಮ ಅಧಮ ಜಾತಿಗೆ ಮೂಲವೆಂದು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸುತ್ತಿತ್ತು.

ಆಚರಣೆಗಳು, ಮಡಿವಂತಿಕೆಯ ಆಧಾರದ ಮೇಲೆ ಹುಟ್ಟಿರುವ ಜಾತಿ ಅತ್ಯಂತ ಸಂಕೀರ್ಣ ಸ್ವರೂಪದ್ದು, ಒಂದು ಜಾತಿಯಲ್ಲಿ ಹುಟ್ಟಿದ್ದು, ಅವರವರ ಹಿಂದಿನ ಜನ್ಮದ ಕರ್ಮಫಲಗಳ ಆಧಾರದಿಂದ' ಎಂದು ನಂಬಿಸಿ ಸಾಯುವವರೆಗೂ ಹುಟ್ಟಿದ ಜಾತಿಯಲ್ಲೇ ಇರಬೇಕೆಂಬ ಅಲಿಖಿತ ಕಾನೂನು ಇಲ್ಲಿದೆ. ಚಾತುರ್ವರ್ಣ ಸಮಾಜವನ್ನು ಸೃಷ್ಟಿಸಿದ ಮನಸ್ಸುಗಳು ಹಾಕಿಕೊಟ್ಟ ಬುನಾದಿಯ ಮೇಲೆಯೇ ಇಂದಿಗೂ ಜಾತಿ ಪದ್ಧತಿಗಳ ಹೆಮ್ಮರವನ್ನು ಪೋಷಿಸಲಾಗುತ್ತಿದೆ. ನಾಲ್ಕು ವರ್ಣಗಳಲ್ಲೇ ಅಸಂಖ್ಯಾ ಜಾತಿ, ಉಪಜಾತಿಗಳು ಹುಟ್ಟಿವೆ. ಅದಲ್ಲದೆ ವೃತ್ತಿ, ಗುಂಪು, ಪ್ರದೇಶ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ಈ ಜಾತಿಗಳಲ್ಲೇ ಇನ್ನಷ್ಟು ಒಳಪ್ರಭೇದಗಳು ಸೀಳಿಕೊಂಡಿವೆ. ಅಸ್ಪೃಶ್ಯರೊಳಗೂ ಒಳಜಾತಿಗಳು ಸೃಷ್ಟಿಯಾಗಿವೆ. ಅಸ್ಪೃಶ್ಯತೆಯನ್ನು ಸಮಾಜದ ನಡುವೆ ಸೀಳಿ ಇಟ್ಟ ಕಾರಣದಿಂದ ಮೇಲು-ಕೀಳು-ಸ್ಪೃಶ್ಯ - ಅಸ್ಪೃಶ್ಯ, ಮಡಿ-ಮೈಲಿಗೆಯ ವಿಚಾರಗಳು, ತಾರತಮ್ಯತೆಗಳು ಹರಡಿ ಮೌಢ್ಯತೆಯ ಕಂದಾಚಾರಗಳಿಗೆ ದಾರಿಯಾಯಿತು. ಜೀವ ಜೀವಗಳ ನಡುವೆ ಅಡ್ಡಗೋಡೆ ಕಟ್ಟಿದ ಜಾತಿ ಪದ್ಧತಿಯ ಕರಾಳ ಹಸ್ತ ಭಾರತದಾದ್ಯಂತ ಅದಮ್ಯ ಹಿಡಿತ ಹೊಂದಿದೆ.

ಜಾತಿ ವ್ಯವಸ್ಥೆ

ಬಿಳಿಗಿರಿರಂಗನ ಬೆಟ್ಟ ಜನವಸತಿ ಇದ್ದ ತಾಣವಾಗಿತ್ತೆನ್ನಲು ಸುಮಾರು ಮೂರು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಬೃಹತ್ ಶಿಲಾಸಂಸ್ಕೃತಿಯ ಆಧಾರಗಳು ದೊರೆತಿವೆ. ಆಗ ಇಲ್ಲಿ ಚತುರ್ವರ್ಣಗಳ ವ್ಯವಸ್ಥೆ ಹೇಗಿತ್ತೆನ್ನುವುದನ್ನು ತಿಳಿಸುವ ಆಧಾರಗಳಿಲ್ಲ. ಆ ಕಾಲದಲ್ಲಿದ್ದ ಜನ, ಯಾವ ರೀತಿಯ ವ್ಯವಸ್ಥೆಗೆ ಬದ್ಧವಾಗಿ ಜೀವನ ನಡೆಸುತ್ತಿದ್ದರೆಂಬುದಕ್ಕೆ ಖಚಿತವಿಲ್ಲ. ಆದರೆ ಸಮಾಧಿಗಳ ಬೃಹತ್ ಗಾತ್ರವನ್ನು ಗಮನಿಸಿದಾಗ ಸಾಮೂಹಿಕ ಸಹಕಾರವಿರದೇ ಅವುಗಳನ್ನು ನಿರ್ಮಿಸಲು ಸಾಧ್ಯವಿಲ್ಲವೆನ್ನುವ ಸತ್ಯಗೋಚರ. ಪ್ರಾಚೀನ ಸಮಾಜಕ್ಕೆ ಸೇರಿದ ಆ ಜನ ಸಾವಿನ ಬಗ್ಗೆ ಇಟ್ಟುಕೊಂಡಿದ್ದ ಕೆಲವು ನಂಬಿಕೆಗಳ ವಿಶ್ಲೇಷಣೆಗೆ ಅವು ಸಹಾಯಕವಾಗಿವೆ.

ಭಾರತೀಯ ಸಂದರ್ಭದಲ್ಲಿ, ಸಾವಿರಾರು ವರ್ಷಗಳ ಹಿಂದೆ ಸಮಾನತೆಯ ಜೀವನ ನಡೆಸಿದ ಬುಡಕಟ್ಟು ಸಮಾಜ ನಿಧಾನವಾಗಿ ಜಾತಿ ಸಮಾಜವಾಗಿ ಪರಿವರ್ತಿತವಾಗಿರುವ ಇತಿಹಾಸ ಚಿರಪರಿಚಿತ, ಬಯಲು ಪ್ರದೇಶದ ಜಾತಿವ್ಯವಸ್ಥೆ ಆಧಾರಿತ ಸಮಾಜದಲ್ಲಿದ್ದ ಕೃಷಿ, ಪಶುಪಾಲನೆ ವ್ಯವಸ್ಥಿತವಾಗಿ ಕೆಲವೇ ಮೇಲ್ಜಾತಿಗಳ ಕೈಸೇರಿದ ಸಮಯದಲ್ಲಿ ಕಾಡು-ಬೆಟ್ಟಗಳಲ್ಲಿ ಸಂಚರಿಸುತ್ತಾ ಗಿರಿಜನ ಬುಡಕಟ್ಟುಗಳಾಗಿದ್ದ

ಪಂಗಡಗಳು, ನಾಗರಿಕತೆಯ ಅಂಚಿನಲ್ಲಿದ್ದ ಪಂಗಡಗಳು ಬಯಲು ಪ್ರದೇಶದ ನಾಗರಿಕ ಸಮಾಜಗಳಿಗೆ ಸೇರ್ಪಡೆಯಾದಾಗ, ಮೊದಲಿಗೆ ಇದ್ದ ಜಾತಿಗಳಿಗಿಂತ ಭಿನ್ನವಾದ ಹೆಸರನ್ನು ಕೊಟ್ಟು ಕೆಳಗಿರಿಸುವ ಕಾರ್ಯ ನಡೆಯಿತು. ಬಿಳಿಗಿರಿರಂಗನ ಬೆಟ್ಟ ಅರಣ್ಯ ಪ್ರದೇಶವಾಗಿರುವುದರಿಂದ ಮೊದಲಿಗೆ ಇಲ್ಲಿಯ ಪ್ರಾಕೃತಿಕ ಸಂಪತ್ತನ್ನು ನಾಡಿನ ಜನ ಅಗತ್ಯವಿದ್ದಾಗ ಬಂದು ತೆಗೆದುಕೊಂಡು ಹೋಗುತ್ತಿದ್ದರೇ ಹೊರತು ಇಲ್ಲಿಯೇ ಬಂದು ನೆಲೆಸಲು ಅವರಿಗೆ ಸೌಲಭ್ಯಗಳಿರಲಿಲ್ಲ. ಹೀಗಾಗಿ ಇಲ್ಲಿರುವ ಬುಡಕಟ್ಟು ಸಮಾಜ ಕೆಳಗಿನ ಬಯಲು ಪ್ರದೇಶದಲ್ಲಿದ್ದ ಸಮಾಜದ ಪ್ರಭಾವಕ್ಕೆ ಒಳಗಾಗದೆಯೇ ಅರಣ್ಯದಿಂದಲೇ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡು ಬದುಕಲು ಸಾಧ್ಯವಾಗುವ ಪರಿಸರವಿತ್ತು.

ಜಾತಿ ವ್ಯವಸ್ಥೆಯ ಮೇಲೆ ಧರ್ಮ, ಪ್ರಬಲವಾದ ಹಿಡಿತ ಹೊಂದಿದೆ. ಧಾರ್ಮಿಕ ಹಿನ್ನೆಲೆಯಿಂದ ಬೇರೆ ಬೇರೆ ಸಮಾಜದ ಜನರೂ ಬೆಟ್ಟಕ್ಕೆ ಬರಲಾರಂಭಿಸಿದರು. ಸರ್ವ ಚೇತನಾವಾದಿಗಳಾಗಿದ್ದ ಸೋಲಿಗರನ್ನು ಶೈವಮತ ಮೊದಲಿಗೆ ತನ್ನ ಕಕ್ಷೆಗೆ ಸೆಳೆಯುವ ಪ್ರಯತ್ನ ಮಾಡಿತ್ತು. ಈ ಪರಿವರ್ತನೆ ಬಿಳಿಗಿರಿಂಗನಬೆಟ್ಟದಲ್ಲಿಯೇ ನಡೆಯಿತು ಎನ್ನಲಾಗದು.

ರಂಗನಾಥಸ್ವಾಮಿ ದೇವಾಲಯದ ವ್ಯವಸ್ಥೆಗೆಂದು ಸಮಾಜ ವಿವಿಧ ಪರಧಿಯಲ್ಲಿದ್ದಂಥ ಜನರು ಬಂದಿದ್ದರಿಂದ ಸಮಾಜದ ಇತರ ವ್ಯವಸ್ಥೆಗಳೂ ಇಲ್ಲಿ ಕಾಲಕ್ಕಿದವು. ದೇವಾಲಯವನ್ನು ಜನಪ್ರಿಯ ಗೊಳಿಸುವ ಎಲ್ಲ ಮಾರ್ಗಗಳನ್ನು ಅನುಸರಿಸಿದ ಕಾರಣಕ್ಕಾಗಿ ಇಲ್ಲಿಗೆ ಬೇರೆ ಬೇರೆ ಜಾತಿಗಳ ಜನ, ನೂರಾರು ವರ್ಷಗಳ ಹಿಂದಿನ ಕಾಲದಿಂದಲೂ ಬರುತ್ತಿದ್ದಾರೆ. ಆದರೆ ಇಲ್ಲಿಯೇ ನೆಲೆಸಬೇಕಾಗಿ ಬಂದವರು ಮುಖ್ಯವಾಗಿ ಎರಡು ಜಾತಿಗೆ ಸೇರಿದ ಜನ ಮಾತ್ರ. ಆಲಯದ ವ್ಯವಸ್ಥೆಯ ಕಾರಣಕ್ಕಾಗಿ ಬ್ರಾಹ್ಮಣರು ಹಾಗೂ ನಾಯಕರು ಇಲ್ಲಿಯೇ ನೆಲೆಸಿದ್ದಾರೆ. ಈ ಪರಂಪರೆ ನೂರಾರು ವರ್ಷಗಳ ಕಾಲ ಅದೇ ರೀತಿ ಮುಂದುವರೆದುಕೊಂಡು ಬಂದಿದೆ.

ಬ್ರಾಹ್ಮಣರು

ರಂಗನಾಥಸ್ವಾಮಿಯ ಆಲಯದಲ್ಲಿದ್ದ ನಾನಾ ವೃತ್ತಿ ಸೇವೆಗಳ ಕಾರಣಕ್ಕಾಗಿ ಏಳೆಂಟು ಬ್ರಾಹ್ಮಣ ಕುಟುಂಬಗಳು ಬೆಟ್ಟದಲ್ಲಿ ನೆಲೆಸಿದ್ದವಾದರೂ ಈಗ ಇವರ ಸಂಖ್ಯೆ ಇಳಿಮುಖವಾಗಿದೆ. ಕಡತಗಳಲ್ಲಿರುವಂತೆ ನಡಾದೂರ ಮನೆತನದವರು ಬೆಟ್ಟದ ಆಲಯದಲ್ಲಿ ವೇದಪಾಠಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಇಂದಿಗೂ ಈ ಮನೆತನದವರು ದೇವಾಲಯದ ಸೇವೆಯಲ್ಲಿದ್ದಾರೆ. ತಾವು ಮೂಲತಃ ಕಾಂಚಿಪುರದ ಕಡೆಯವರು, ಈ ಆಲಯದಲ್ಲಿ ವೇದ ಪಾಠಕರಾಗಿ ಸೇವೆಗಳನ್ನು ಸಲ್ಲಿಸಲೆಂದು, ಬೆಟ್ಟದ ಕೆಳಗಿನ ಕೊಮರನಪುರದಲ್ಲಿ ಆಸ್ತಿಕೊಟ್ಟು ನೆಲೆಮಾಡಿಸಿದರು.[೧೬] ಹಿಂದೆ ತಮ್ಮ ಹಿರಿಯರು ವಾರಕ್ಕೆ ಎರಡು ದಿನ ಬಂದು ನಿಯತವಾಗಿ ಸೇವೆ ಸಲ್ಲಿಸುತ್ತಿದ್ದರು ಎಂದು ಹೇಳುತ್ತಾರೆ. ಕಪ್ಪು ಕಡತಗಳಲ್ಲಿ ಈ ಮನೆತನದವರು ಬೆಟ್ಟದಲ್ಲಿಯೇ ಇದ್ದುಕೊಂಡು ಸೇವೆ ಸಲ್ಲಿಸಿರುವ ಬಗ್ಗೆ ವಿವರಗಳಿವೆ.

ಅರ್ಚಕರ ಕುಟುಂಬವು ಯಳಂದೂರಿನಿಂದ ಬೆಟ್ಟಕ್ಕೆ ಬಂದು ಸೇರಿದವರು. ಕುಟುಂಬಗಳ ಸಂಖ್ಯೆ ಬೆಳೆದರೂ ಅದರಲ್ಲೊಂದು ಕುಟುಂಬ ಮಾತ್ರ ಅರ್ಚಕರಾಗಿ, ಉಳಿದವರು ಬೇರೆ ಬೇರೆ ಸ್ಥಳಗಳಲ್ಲಿ ಉದ್ಯೋಗಗಳಾಗಿ ನೆಲೆಸಿದ್ದಾರೆ. ಕಾಲಕ್ರಮೇಣ ದೇವಾಲಯದಲ್ಲಿ ಕೆಲವು ಹುದ್ದೆಗಳನ್ನು ಕಡಿಮೆ ಮಾಡಿದ್ದರಿಂದ ಅನೇಕರು ಬೆಟ್ಟದಿಂದ ದೂರವಾದರು. ರಂಗನಾಥಸ್ವಾಮಿ ದೇವಾಲಯದ ಸೇವೆಗೆ ಸಂಬಂಧಿಸಿದಂತೆ, ಪ್ರಸ್ತುತ ನಾಲ್ಕು ಬ್ರಾಹ್ಮಣ ಕುಟುಂಬಗಳಿವೆ. ಪೂರ್ಣಯ್ಯನ ಛತ್ರದ ಕೆಲಸಕ್ಕೆಂದು ಬಂದ ಮಾಧ್ವ ಪಂಥಕ್ಕೆ ಸೇರಿದ ಕುಟುಂಬವೊಂದು ಮೂರು ಕುಟುಂಬವಾಗಿ ಬೆಳೆದು ಬೆಟ್ಟದಲ್ಲಿ ನೆಲೆಸಿದೆ. ರಾಘವೇಂದ್ರನ ಮಠದ ಸೇವೆಗೆಂದು ಬಂದ ಮುದ್ರೆ ಬ್ರಾಹ್ಮಣರ ಒಂದು ಕುಟುಂಬ ಇಲ್ಲಿದೆ. ಇನ್ನುಳಿದಂತೆ ಬೆಟ್ಟದಲ್ಲಿ ಮೂರ್ನಾಲ್ಕು ಬ್ರಾಹ್ಮಣ್ಯ ಕುಟುಂಬಗಳು ಇನ್ನಿತರ ಸೇವೆಗಳಾಗಾಗಿ ಬಂದು ಇಲ್ಲಿಯೇ ನೆಲೆಸಿದ್ದಾರೆ.

ಪರಸ್ಥಳದ ಕೆಲವು ಬ್ರಾಹ್ಮಣರಿಗೆ ಬೆಟ್ಟದಲ್ಲಿ ಮನೆಗಳಿವೆ. ಆದರೆ ಉತ್ಸವಗಳ ಸಂದರ್ಭದಲ್ಲಿ ಬರುವ ಅವರು ಸೇವೆ ಮುಗಿಸಿ ಹೊರಟು ಹೋಗುತ್ತಾರೆ. ಗಂಗಾಧರೇಶ್ವರ ಸ್ವಾಮಿ ಆಲಯದ ಸ್ಮಾರ್ತ ಬ್ರಾಹ್ಮಣ ಅರ್ಚಕರು ಬೆಟ್ಟದಲ್ಲಿದ್ದಾರೆ. ಬೆಟ್ಟದಲ್ಲಿರುವ ಬ್ರಾಹ್ಮಣ ಕುಟುಂಬಗಳು ಅನೇಕ ಪಂಗಡಗಳಲ್ಲಿ ಹಂಚಿ ಹೋಗಿದ್ದಾರೆ. ಅವರವರ ಪಂಗಡಗಳ ಜನ ಕಡಿಮೆ ಇರುವುದರಿಂದ ಕೌಟುಂಬಿಕ ಕಾರ್ಯಗಳನ್ನು ಬಹುತೇಕ ಪರವೂರುಗಳಲ್ಲಿ ಮಾಡುತ್ತಿದ್ದಾರೆ. ಬೆಟ್ಟದಲ್ಲಿಯೇ ಸಣ್ಣ ಪುಟ್ಟ ಕಾರ್ಯಗಳನ್ನು ಮಾಡಿದರೆ, ತಮ್ಮ ಸಂಬಂಧಿಗಳನ್ನು, ಪರಿಚಯದವರನ್ನು ಕರೆಸಿಕೊಳ್ಳುತ್ತಾರೆ. ಶ್ರೀವೈಷ್ಣವ ಪಂಥದವರು ತಮಿಳು ಭಾಷೆಯನ್ನು ಮನೆಮಾತಾಗಿ ಬಳಸಿದರೂ ಹೊರಗಿನ ಸಾಮಾಜಿಕ ಸಂಪರ್ಕ ಭಾಷೆಯಾಗಿ ಕನ್ನಡವನ್ನೇ ಬಳಸುತ್ತಾರೆ.

ನಾಯಕರು

ರಾಜ ಪರಿವಾರ, ರಾಜಪರಿವಾರ ನಾಯಕ, ನಾಯಕ, ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಸಮುದಾಯದ ಜನರಿವರು. ರಾಜ್ಯವಾಳಿದ ನಾಯಕರ ಹಾಗೂ ರಾಜನ ಪರಿವಾರದಲ್ಲಿ ಹೆಚ್ಚಾಗಿ ತಮ್ಮ ಜನರೇ ಇದ್ದರು ಎನ್ನುವ ಇವರು, ತಮ್ಮ ಹೆಸರಿನ ಮುಂದೆ ಜಾತಿ ಸೂಚಕವಾಗಿ "ನಾಯಕ" ಎಂಬ ಉಪನಾಮವನ್ನು ಸೇರಿಸಿಕೊಳ್ಳುತ್ತಾರೆ. ವಿಜಯನಗರ ಕಾಲದಲ್ಲಿ ಅಮರನಾಯಕರ ವ್ಯವಸ್ಥೆ ಬಂದಾಗ ಬೇಡ ಪಡೆಯವರಲ್ಲಿ ಕೆಲವರು ರಾಜ್ಯವಾಳಿದ್ದ ನಿದರ್ಶಗಳಿವೆ. "ಯಳಂದೂರಿನ ಪಾಳೆಗಾರನಾಗಿದ್ದ ರಾಮಾರಾಜನಾಯಕನು ಶ್ರೀರಂಗ ಪಟ್ಟಣದ ಶ್ರೀರಂಗನಾಯಕನ ಸಂಬಂಧಿಕನೆಂದು ಯಳಂದೂರಿನಲ್ಲಿ ದೊರೆತಿರುವ ಶಾಸನದ ಪ್ರಕಾರ ತಿಳಿದುಬರುತ್ತದೆ.[12] ಉಮತ್ತೂರು, ಮೈಸೂರು ರಾಜರ ಪರಿವಾರದಲ್ಲಿದ್ದು ಸೇವೆ ಸಲ್ಲಿಸಿದವರಾದ್ದರಿಂದ ರಾಜ ಪರಿವಾರ ಹೆಸರು ಬಂದಿದೆ. ನಾಯಕ ಸಮುದಾಯಕ್ಕೆ ಸೇರಿದ ಬಹುತೇಕರು ಬೇಟೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಜೀವಿಸುತ್ತಿದ್ದರು.

ಧಾರ್ಮಿಕ ಸಂಪ್ರದಾಯ ಆಚಾರ ವಿಚಾರಗಳನ್ನು ಗಮನಿಸಿದಾಗ ನಾಯಕರಲ್ಲಿ ಚಿನ್ನಕುಲ, ದೇವಿಕುಲ, ಮುಗಿಲು ಮುಂತಾದ ಕುಲಗಳಿವೆ. ಶೈವ ಮತ್ತು ವೈಷ್ಣವ ಪಂಗಡಗಳಿವೆ. ವೈಷ್ಣವ ಪಂಗಡದವರು ವೆಂಕಟರಮಣ, ನಾರಾಯಣ ರಂಗನಾಥಸ್ವಾಮಿಯನ್ನು ಮನೆ ದೇವರನ್ನಾಗಿ ಹೊಂದಿದ್ದಾರೆ. ಶೈವ ಪಂಗಡದವರು ಶ್ರೀಕಂಠೇಶ್ವರ, ಮಹಾದೇಶ್ವರ, ಸಿದ್ದಾಪ್ಪಾಜಿ, ರಾಚಪ್ಪಾಜಿ ಮುಂತಾದ ದೇವರನ್ನು ಆರಾಧಿಸುತ್ತಾರೆ. ವೈಷ್ಣವ ಕ್ಷೇತ್ರವಾದ ಬಿಳಿಗಿರಿಯಲ್ಲಿ ಬಂದು ನೆಲೆಸಿರುವುದರಿಂದ ವೈಷ್ಣವ ಸಂಪ್ರದಾಯವನ್ನೇ ಅನುಸರಿಸುತ್ತಾರೆ. ಆದರೆ ಬೆಟ್ಟದಲ್ಲಿ ಮಾರಮ್ಮನ ಆಲಯದ ಪೂಜಾ ನಿರ್ವಹಣೆ ನಾಯಕರಿಗೆ ಸೇರಿದೆ. ನಾಯಕರ ಹಬ್ಬಗಳಲ್ಲಿ ಮಾರಮ್ಮನ ಹಬ್ಬಕ್ಕೆ ವಿಶೇಷ ಸ್ಥಾನವಿದೆ.

ವೀರಶೈವರು

ವೈಷ್ಣವ ನೆಲೆಯ ಬೆಟ್ಟದಲ್ಲಿ, ವೀರಶೈವ ಮತಕ್ಕೆ ಸೇರಿದವರ ಸಂಖ್ಯೆ ಹಿಂದಿನಿಂದಲೂ ಕಡಿಮೆಯೇ ಇದೆ. ನೂರಾರು ವರ್ಷಗಳ ಹಿಂದೆಯೇ ಗಂಗಾಧರೇಶ್ವರನ ಆಲಯ ನಿರ್ಮಾಣವಾಗಿದ್ದರೂ ಶೈವಮತಾನುಯಾಯಿಗಳ ಸಂಖ್ಯೆ ಕಡಿಮೆ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಕೆಲಸಕ್ಕೆಂದು ಬಂದು ನೆಲೆಸಿರುವ ನಾಲ್ಕೈದು ಕುಟುಂಬಗಳು ಮಾತ್ರ ಇಂದು ಬೆಟ್ಟದಲ್ಲಿವೆ. ಪೂರ್ವದಿಂದಲೂ ಬೆಟ್ಟದ ರಂಗನಾಥಸ್ವಾಮಿ ಆಲಯದ ಜೊತೆಗೆ ಶೈವರಿಗೆ ಸೇವಾ ಸಂಬಂಧಗಳಿದ್ದು, ಗೌಡಹಳ್ಳಿಯ ಲಿಂಗಾಯಿತರು ವರ್ಷಕ್ಕೊಮ್ಮೆ ಉತ್ಸವವನ್ನು ಹೊರಲು ಬರುವ ರಿವಾಜಿತ್ತು. ಈಗ ಬೆಟ್ಟದಲ್ಲಿ ಹೋಟಲ್ ನಡೆಸುತ್ತಿರುವ ಒಂದು ಕುಟುಂಬವಿದೆ.

ಉಪ್ಪಾರ ಶೆಟ್ಟರು

ಉಪ್ಪಾರರು. ಉಪ್ಪಾಲಿಗ, ಉಪ್ಪಾರಶೆಟ್ಟ, ಮೇಲುಸಕ್ಕರೆಶೆಟ್ಟಿ ಎಂದು ಕರೆಯಲಾಗುವ ಈ ಜಾತಿಯ ನಾಲ್ಕು ಕುಟುಂಬಗಳು ಬೆಟ್ಟದಲ್ಲಿದೆ. ಮೊದಲು ಉಪ್ಪು ಮಾಡುವುದನ್ನೇ ವೃತ್ತಿಯಾಗಿಸಿಕೊಂಡಿದ್ದ ಉಪ್ಪಾರರು ಆ ವೃತ್ತಿಯಿಂದ ದೂರವಾಗಿದ್ದಾರೆ. ಬೇಟೆಗೆಂದು ಬೆಟ್ಟಕ್ಕೆ ಬಹುವಾಗಿ ಬರುತ್ತಿದ್ದವರಲ್ಲಿ ಉಪ್ಪಲಿಗರೇ ಹೆಚ್ಚು. ದೇವರ ದರ್ಶನಕ್ಕೆಂದು ನೂರಾರು ವರ್ಷಗಳಿಂದ ಉಪ್ಪಲಿಗರು ಬೆಟ್ಟಕ್ಕೆ ಬರುವ ವಾಡಿಕೆಯಿದ್ದರೂ ಬೆಟ್ಟದಲ್ಲಿಯೇ ನೆಲೆಸಿದವರಲ್ಲ.

ಹರಿಜನರು

ಬೆಟ್ಟದಲ್ಲಿ ರೇಷ್ಮೆ ಇಲಾಖೆ ತುಂಬಾ ಭರಾಟೆಯಲ್ಲಿದ್ದಾಗ ಅದರಲ್ಲಿ ಸಾಕಷ್ಟು ಜನ ಹರಿಜನರು ಕೆಲಸ ಮಾಡುತ್ತಿದ್ದರು. ೧೯೯೧ರ ಜನಗಣತಿಯ ಪ್ರಕಾರ ಸುಮಾರು ನೂರಕ್ಕೂ ಹೆಚ್ಚು ಹರಿಜನರು ಬೆಟ್ಟದಲ್ಲಿದ್ದರು. ರೇಷ್ಮೆ ಇಲಾಖೆಯಲ್ಲಿದ್ದ ಅನೇಕರನ್ನು ಬೇರೆ ಬೇರೆ ಇಲಾಖೆಗೆ ವರ್ಗಾಯಿಸಿದ್ದರಿಂದ

ಕೆಲವರು ಊರು ಬಿಟ್ಟು ಹೋದರು. ಪ್ರಸ್ತುತ ಬೆಟ್ಟದಲ್ಲಿ ಖಾಯಂ ನಿವಾಸಿಗಳಾದ ಐದು ಹರಿಜನ ಕುಟುಂಬಗಳಿವೆ. ಎರಕನಗದ್ದೆಯಲ್ಲಿ ಇರುವ ಹರಿಜನ ಕುಟುಂಬದವರು ಇಟ್ಟಿಗೆ ತಯಾರಿಸುವ ಸಣ್ಣಪುಟ್ಟ ಕೆಲಸಗಳನ್ನು ಗುತ್ತಿಗೆ ಹಿಡಿದು ಮಾಡಿಸುತ್ತಾರೆ. ಇತರರು ಬೆಟ್ಟದಲ್ಲಿ ಸಣ್ಣ ಪುಟ್ಟ ಉದ್ಯೋಗಗಳನ್ನು ಅವಲಂಬಿಸಿ ಜೀವನ ನಿರ್ವಹಿಸುತ್ತಿದ್ದಾರೆ. ಮನೆಯ ಸಮಾರಂಭಗಳಿಗೆ ಬೇರೆ ಬೇರೆ ಊರುಗಳಲ್ಲಿರುವ ತಮ್ಮ ಬಂಧುಗಳನ್ನೆ ಅವಲಂಬಿಸಿದ್ದಾರೆ.

ವಿವಾಹ ಪದ್ಧತಿ

ವಿವಾಹ ಒಂದು ಪ್ರಮುಖ ಸಾಮಾಜಿಕ ಒಪ್ಪಂದ. ಕುಟುಂಬ ಮತ್ತು ವಿವಾಹ ಯಾವುದೇ ಸಮಾಜ ಮೂಲಭೂತ ಅವಶ್ಯ ಮತ್ತ ಅನಿವಾರ್ಯ ಸಂಸ್ಥೆಗಳು, ಅವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪರಸ್ಪರ ಪೂರಕ ಆಶಯಗಳಿಂದ ಕೂಡಿದೆ. ಕುಟುಂಬ ವ್ಯವಸ್ಥೆಗೆ ವಿವಾಹವೇ ಹೆಬ್ಬಾಗಿಲು. ಭಾರತದಂತಹ ದೇಶದಲ್ಲಿ ಅನೇಕ ನೆಲೆಗಳಲ್ಲಿ ಅಂತರ್ಜಾತೀಯ ಹಾಗೂ ಅಂತರಧರ್ಮೀಯ ವಿವಾಹಗಳು ನಿಷೇಧಿಸಲ್ಪಟ್ಟಿದ್ದವು. ಆದರೆ ಈ ನಿಷೇಧದ ಕಟ್ಟಳೆಯನ್ನು ಮೀರಿ ವಿವಾಹಗಳಾಗುತ್ತಿವೆ. ಪುರುಷ ಪ್ರಧಾನ ಸಮಾಜದಲ್ಲಿ ನಡೆಯುವ ವಿವಾಹಗಳಲ್ಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕು ಗಂಡಿಗೆ ಮಾತ್ರ ನೀಡಲ್ಪಟ್ಟಿದೆ. ಹೆಣ್ಣು ತನ್ನನ್ನು ವಿವಾಹವಾದ ವ್ಯಕ್ತಿಯ ಉನ್ನತಿಗಾಗಿ ತನ್ನ ಸರ್ವಸ್ವವನ್ನು ಧಾರೆಯರೆದು ಬದುಕುವ ಮೌಲ್ಯಗಳ ವ್ಯವಸ್ಥೆಯನ್ನು ಸ್ತ್ರೀ ಮುಂದೆ ಒಡ್ಡಿರುವುದರಿಂದ ಆಕೆಯ ಆಯ್ಕೆಯ ಅವಕಾಶಗಳಲಿಲ್ಲ.

ಪರಸ್ಥಳೀಯರ ವಿವಾಹಗಳು

ಬಿಳಿಗಿರಿರಂಗನಬೆಟ್ಟ ಧಾರ್ಮಿಕ ಕ್ಷೇತ್ರವಾದ್ದರಿಂದ ನೂರಾರು ವರ್ಷಗಳ ಹಿಂದಿನ ಕಾಲದಿಂದಲೂ ಪರಸ್ಥಳೀಯರು ಇಲ್ಲಿಗೆ ಬಂದು ವಿವಾಹ ಕಾರ್ಯಗಳನ್ನು ನೆರವೇರಿಸುತ್ತಾರೆ. ತಮ್ಮ ಮನೆ ದೇವರ ಸನ್ನಿಧಾನದಲ್ಲಿ ಮಗಳ ಮತ್ತು ಮಗನ ಮದುವೆ ಮಾಡಲು ಬರುವವರು ಕೆಲವರು, ಊರಿನಲ್ಲಾಗುವ ದುಬಾರಿಯಾದ ವೆಚ್ಚವನ್ನು ಭರಿಸಲಾಗದೆ ಇನ್ನು ಕೆಲವರು ಬೆಟ್ಟಕ್ಕೆ ಬಂದು ಮದುವೆ ಮಾಡುತ್ತಾರೆ.

ದೇವಸ್ಥಾನದಲ್ಲಿ ಅತ್ಯಂತ ಸರಳವಾಗಿ ಆಗುವ ಮದುವೆಗಳೂ ಇವೆ. ಈ ಮದುವೆಗಳಲ್ಲೂ ಎರಡು ವಿಧ. ಆರ್ಥಿಕವಾಗಿ ಕಷ್ಟ ಪರಿಸ್ಥಿತಿ ಇರುವವರ ಸರಳ ವಿಧಾನವೊಂದಾದರೆ, ಬೇಕಾದ ನಾಲ್ಕು ಜನರೊಡನೆ ಬಂದ ಪ್ರೇಮಿಗಳು ಗುಟ್ಟಾಗಿ ಮಾಡಿಕೊಳ್ಳುವ ಮದುವೆಗಳು ಮತ್ತೊಂದು ವಿಧ.

ಸ್ಥಳೀಯರ ವಿವಾಹಗಳು

ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲೆಸಿರುವ ಬುಡಕಟ್ಟು ಮತ್ತು ಇತರ ಸಮಾಜದವರ ಸಂಪ್ರದಾಯಗಳಿಗೆ ಅನುಗುಣವಾಗಿ ವೈವಾಹಿಕ ಸಂಬಂಧ ಮತ್ತು ಆಚರಣೆಗಳಿರುತ್ತವೆ. ಬೆಟ್ಟದಲ್ಲಿ ಮೂಲವಾಸಿಗಳಾಗಿರುವ

ಸೋಲಿಗರಲ್ಲದೇ ಅನಂತರದ ಕಾಲದಲ್ಲಿ ಇತರ ಜಾತಿಗಳ ಜನ ಬೇರೆ ಕಾರಣಗಳಿಂದ ಬಂದು ನೆಲೆಸಿದ್ದಾರೆ. ಅವರ ಬಂಧು ಬಳಗದವರು ಬೆಟ್ಟದಲ್ಲಿ ಸಾಕಷ್ಟಿಲ್ಲದ ಕಾರಣದಿಂದ ಬೆಟ್ಟದಿಂದ ಹೊರಗೆ ಮದುವೆ ಮಾಡುತ್ತಾರೆ. ಕೆಲವರು ಪರವೂರುಗಳಲ್ಲಿರುವ ತಮ್ಮ ಬಂಧುಗಳನ್ನು ಬೆಟ್ಟಕ್ಕೆ ಕರೆಸಿಕೊಂಡು, ಅವರ ಸಂಪ್ರಾದಾಯಗಳ ಪ್ರಕಾರವೇ ಮದುವೆ ಮಾಡುತ್ತಾರೆ.

ಸೋಲಿಗರ ವಿವಾಹಗಳು

ಸೋಲಿಗರು ಬುಡಕಟ್ಟು ಸಮಾಜದವರಾದರು ವಿವಾಹಕ್ಕೆ ಸಂಬಂಧಿಸಿದಂತೆ ತಮ್ಮದೇಯಾದ ರೀತಿ ರಿವಾಜುಗಳನ್ನು ಹೊಂದಿದ್ದಾರೆ. ಸೋಲಿಗರಲ್ಲಿ ಮದುವೆಗಳಲ್ಲಿ ಶಾಸ್ತ್ರಗಳಾಗಲೀ, ನಿಷಿದ್ಧತೆಗಳಾಗಲೀ ತುಂಬಾ ಕಡಿಮೆ. ಆದರೆ ಒಂದೇ ಕುಲದಲ್ಲಿ ಹುಟ್ಟಿದವರು ಅಣ್ಣ ತಂಗಿಯರಿದ್ದಂತೆ. ಆದ್ದರಿಂದ ಅವರ ಮಧ್ಯೆ ಮದುವೆಗಳನ್ನ ನಿಷೇಧಿಸಲಾಗಿದೆ. ಈ ಮೂಲಕ ಅಣ್ಣ ತಂಗಿಯರು ಅಥವಾ ಅಕ್ಕತಮ್ಮಂದಿರ ಮದುವೆಗಳನ್ನು ಸೋಲಿಗ ಸಮಾಜ, ಸ್ವಂತ ಬಂಧುತ್ವದಲ್ಲಿ ಮಾತ್ರವಲ್ಲದೆ ಒಂದೇ ಕುಲದ ನೆಲೆಯಲ್ಲಿಯೂ ನಿಷೇಧಿಸಿದೆ. ಸೋಲಿಗರು ತುಂಬಾ ದೂರದಲ್ಲಿರುವ ಹುಡುಗನಿಗೆ ಮದುವೆ ಮಾಡಿಕೊಡುವ ಬಗ್ಗೆ ಹಿಂದೇಟು ಹಾಕುತ್ತಾರೆ.

ಸೋಲಿಗ ಸಮುದಾಯದಲ್ಲಿ ವಧುವಿಗೆ ಇಂತಿಷ್ಟು ತೆರಕೊಡಬೇಕೆಂಬ ನಿಯಮವಿದೆ. ಈ ರೀತಿ ತೆರಕಟ್ಟುವ ಪದ್ಧತಿಯನು ಕುರಿತು ರಂಗನಾಥಸ್ವಾಮಿಯನ್ನು ಕೂಡಾ ಬಿಡದೆ, ತಮ್ಮ ಪದ್ಧತಿಯ ಪ್ರಕಾರ ತೆರ ಕಟ್ಟಿಕೊಡಯ್ಯ ಎಂದು ಕೇಳುತ್ತಾರೆ. ಮಹಾದೇಶ್ವರ ಕಾವ್ಯದ ಸಂಕಮ್ಮನ ಸಾಲಿನಲ್ಲಿಯೇ ಸೋಲಿಗರಲ್ಲಿ ತೆರ ಪದ್ಧತಿ ಇತ್ತೆನ್ನುವುದಕ್ಕೆ ಸೂಚನೆಗಳಿವೆ. ಸಂಕಮ್ಮನನ್ನು ತಾನೂ ಬೇಟೆಗೆ ಹೋಗುವಾಗ ಮಾತುಕೊಡು ಎಂದು ನೀಲಯ್ಯ ಕೇಳಿದಾಗ "ನೀನು ಕಟ್ಟಿದ ತೆರ ತಕ್ಕಯ್ಯ" ಎಂದು ಸಂಕಮ್ಮ ಹೇಳುವ ಮಾತಿನಿಂದಲೇ ಈ ಸಮುದಾಯದಲ್ಲಿ ಪೂರ್ವದಿಂದಲೂ ತೆರಕಟ್ಟಿ ಮದುವೆಯಾಗುವ ಸಂಪ್ರಾದಾಯವಿದ್ದ ಕುರುಹುಗಳಿವೆ.

ಆಸ್ತಿವ್ಯವಸ್ಥೆ

ಆಸ್ತಿ ಎಂಬುದು ಒಂದು ಸಾಮಾಜಿಕ ಜೀವನದ ಅವಿಚ್ಛಿನ್ನವಾದ ಭಾಗವಾಗಿದೆ. ಆಸ್ತಿಯ ಹಕ್ಕು ಅಥವಾ ವಸ್ತುವೊಂದರ ಒಡೆತನವನ್ನು ಹೊಂದಿದಾತನು ಆ ವಸ್ತುವನ್ನು ಸ್ವಂತ ಉಪಯೋಗಕ್ಕೆ ಬಳಸುತ್ತಾ ಅದರ ಉಪಯುಕ್ತತೆಯ ಲಾಭವನ್ನು ಅನುಭವಿಸುತ್ತಾನೆ. "ಪ್ರಕೃತಿ ಸಂಪತ್ತು ಯಾರೊಬ್ಬರ ವೈಯಕ್ತಿಕ ಆಸ್ತಿ ಆಗದೆ ಉಳಿಯುವ ಗುಣವೇ ಆಹಾರ ಸಂಗ್ರಹಣಾ ಜೀವನದ ಮುಖ್ಯ ನಿಯಮ. ಆದರೆ ನಾಗರಿಕ ಸಮಾಜ ಸ್ವಂತ ಆಸ್ತಿ ವ್ಯವಸ್ಥೆಯನ್ನು ಹುಟ್ಟಿಹಾಕಿ, ಕ್ರಮೇಣ ಪ್ರಕೃತಿ ಸಂಪತ್ತು ಕೆಲವರ ಆಸ್ತಿಯಾಗಿ ಮಾರ್ಪಡಲು ಕಾರಣವಾಗುತ್ತದೆ."[೧೮]

ಪ್ರಾಕೃತಿಕವಾಗಿ ಬುಡಕಟ್ಟು ಸಮುದಾಯದಲ್ಲಿ ನಾನು ನನ್ನದು ಎಂಬ ಕಲ್ಪನೆ ಇರುತ್ತಿರಲಿಲ್ಲ. ಸದಾ ಸಮುದಾಯದ ಒಟ್ಟಿಗೆ ಇರುತ್ತಿದ್ದರಿಂದ ಏನಿದ್ದರೂ ಅದು ಸಮುದಾಯಕ್ಕೆ ಸೇರಿದ್ದು ಎಂಬ ಭಾವನೆಯೇ ಇರುತ್ತದೆ. "ಮನುಷ್ಯ ಸಂಸ್ಕೃತಿಯ ಮೊದಲ ಹಂತದಲ್ಲಿ ಖಾಸಗಿ ಆಸ್ತಿಯೆಂಬುದೇ ಇರಲಿಲ್ಲ. ಅದು ಎಲ್ಲರ ಬಳಕೆಗೆ ಮುಕ್ತವಾಗಿತ್ತು. ಆಗ ಯಾವುದೂ ಯಾರೊಬ್ಬರ ಸ್ವಂತ ಸ್ವತ್ತಾಗಿರಲಿಲ್ಲ"[೧೯] ಅದರಂತೆ ಆಸ್ತಿಯ ಕಲ್ಪನೆಯೇ ಇರದಿದ್ದ ಸೋಲಿಗರು ಸ್ಥಳಾಂತರ ವ್ಯವಸಾಯ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದ ಕೃಷಿಕರಾಗಿದ್ದರೂ ತಮ್ಮ ಕೃಷಿಗಾಗಿ ಭೂಮಿಯನ್ನು ಬಳಸುತ್ತಿದ್ದರೂ ತಾವು ಅಲ್ಲಿ ಇದುವರೆಗೆ ಕೃಷಿ ಮಾಡಲು ಕಾಡಿನ ಭೂಮಿಯ್ನನು ಬಳಸುತ್ತಿದ್ದೇವೆಂಬ ವಿಚಾರ ಇತ್ತೇ ಹೊರತು, ಅದು ಶಾಶ್ವತವಾಗಿ ತಮಗೆ ಸೇರಿದ್ದೆಂಬ ಕಲ್ಪನೆಯನ್ನು ಹೊಂದಿರಲಿಲ್ಲ. ಯಾವನಿಗೆ ಎಷ್ಟು ಸಾಮರ್ಥ್ಯ ಇದೆಯೋ ಅಷ್ಟು ಭೂಮಿಯನ್ನು ಬಳಸಿಕೊಂಡು ವ್ಯವಸಾಯ ಮಾಡಿಕೊಳ್ಳುತ್ತಿದ್ದರೂ, ಬೇಡವಾದಾಗ ಅದನ್ನು ಬಿಟ್ಟು ಹೊಸ ಜಾಗವನ್ನು ಹುಡುಕಿಕೊಂಡು ಹೋಗುತ್ತಿದ್ದರು.

ಬಿಳಿಗಿರಿರಂಗನಬೆಟ್ಟದ ಕಂದಾಯ ಭೂಮಿಯಲ್ಲಿ ರಂಗನಾಥ ದೇವಾಸ್ಥಾನದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಜಮೀನನ್ನು ಹಂಚಿದ್ದರು. ಬೆಟ್ಟದ ಬಹುಪಾಲು ಕಂದಾಯ ಭೂಮಿ ಸೋಲಿಗೇತರರಿಗೆ ಸೇರಿದೆ. ಸೋಲಿಗರ ಜಮೀನನ್ನು ಕೆಲವರು ಬರೆಸಿಕೊಂಡಿದ್ದರೂ ಗಿರಿಜನರಿಗೆ ಕೊಟ್ಟ ಭೂಮಿಯಾದ್ದರಿಂದ, ಅದು ಮತ್ತೆ ಅವರ ಕೈ ಸೇರಿತು. ಬೆಟ್ಟದ ಬ್ರಾಹ್ಮಣರಿಗೆ ಒಂದು ಕಾಲದಲ್ಲಿ ಸಾಕಷ್ಟು ಜಮೀನಿದ್ದಿತ್ತು. ಕೆಲವರು ಊರುಬಿಟ್ಟು ಹೋಗುವಾಗ ತಮ್ಮ ಜಮೀನನ್ನು ಮಾರಿಕೊಂಡಿದ್ದಾರೆ.

ಪಿತೃ ಸಮಾಜ, ಆಸ್ತಿಯನ್ನು ಗಂಡು ಮಕ್ಕಳಿಗೆ ಮಾತ್ರ ಸೇರುವಂಥದ್ದೆಂದು ನಿಗದಿಪಡಿಸಿಕೊಳ್ಳುತ್ತದೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಕಳುಹಿಸುವ ಜವಾಬ್ದಾರಿ ಮಾತ್ರವೇ ಹೊರತು, ಆಸ್ತಿಯಲ್ಲಿ ಹಕ್ಕು ಕೊಡಲು ನಿರಾಕರಿಸುತ್ತದೆ. ತವರಿನವರು ಅವರ ಕಷ್ಟಸುಖಗಳಿಗೆ ಆಸರೆಯಾಗಿ ನಿಲ್ಲುತ್ತಾರೆಯೇ ಹೊರತು ಆಸ್ತಿಯಲ್ಲಿ ಪಾಲಿಲ್ಲ. ಬ್ರಾಹ್ಮಣರು ತಮ್ಮ ಆಸ್ತಿಯನ್ನು ಗಂಡು ಮಕ್ಕಳಿಗೆ ಕೊಡುವ ವ್ಯವಸ್ಥೆಗೆ ಬದ್ಧರಾಗಿದ್ದಾರೆ. ಅವರ ದಾರಿಯನ್ನೇ ನಾಯಕರು ಅನುಸರಿಸಿದ್ದಾರೆ. ಸೋಲಿಗರಲ್ಲಿ ಗಂಡು ಮಕ್ಕಳು ಇಲ್ಲವಾದರೆ ಆ ಆಸ್ತಿ ಹೆಣ್ಣು ಮಗಳಿಗೆ ಸೇರುತ್ತದೆ. ಮನೆ, ನಿವೇಶನ, ಒಡವೆ ಇತ್ಯಾದಿಗಳನ್ನು ಆಸ್ತಿಯೆಂದು ಸೋಲಿಗರು ಹಂಚಿಕೊಳ್ಳಬೇಕಾದ ವ್ಯವಸ್ಥೆ ಹಿಂದೆ ಇರಲಿಲ್ಲ.

ಸಾಮಾಜಿಕ ಸಂಬಂಧಗಳು

ಸಾಮಾಜಿಕ ಜೀವನ ಮಾನವ ಸಮಾಜದ ಪ್ರಮುಖ ಲಕ್ಷಣ. ಮೂಲತಃ ಸಂಘಜೀವಿಯಾದ ಪ್ರತಿ ವ್ಯಕ್ತಿಯೂ ಈ ಸಮಾಜದಲ್ಲಿ ತನ್ನ ಮುಂದುವರಿಯುವಿಕೆಗಾಗಿ ಅಸ್ತಿತ್ವದ ಪ್ರಕ್ರಿಯೆಯಲ್ಲಿ ತೊಡಗುತ್ತಾನೆ. ಅವನ ನಡೆನುಡಿಗಳು ಪ್ರಕೃತಿಯ ಹಾಗೂ ಸಾಮಾಜಿಕ ಶಕ್ತಿಗಳಿಂದ ಪ್ರಭಾವಿತವಾಗುತ್ತದೆ. ತನ್ನ ಸಾಮೂಹಿಕ ಜೀವನದಲ್ಲಿ ಅನೇಕ ವ್ಯಕ್ತಿಗಳೊಡನೆ ವಿವಿಧ ರೀತಿಯ ಸಂಬಂಧಗಳಿಂದ ಬಂಧಿಸಲ್ಪಟ್ಟಿ

ದ್ದಾನೆ. ಬಂಧುತ್ವವು ಒಂದು "ಸಾಂಸ್ಕೃತಿಕ ವ್ಯವಸ್ಥೆ" ಆಗಿದ್ದರೂ ಪ್ರಪಂಚದಲ್ಲೆಲ್ಲಾ ಏಕ ರೂಪಿಯಾಗಿದೆ ಎನ್ನುವಂತಿಲ್ಲ. ಅದರ ಪ್ರಕಾರಗಳು ಸಮುದಾಯದಿಂದ ಬದಲಾಗುವಂತಹವು. ಬಂಧುತ್ವವು ವ್ಯಕ್ತಿಯ ಹುಟ್ಟಿನಿಂದಲೇ ಬರುವುದು. ಮಾತಾಪಿತೃಗಳ ಸಂಪರ್ಕದಿಂದ ಅವು ವೃದ್ಧಿಗೊಳ್ಳಬಹುದು. ಕುಟುಂಬದ ಮೂಲ ಉದ್ದೇಶವು ಸಂತಾನೋತ್ಪತ್ತಿಯ ಕಾರ್ಯ ಮಾತ್ರವಾಗಿರದೆ ಬಂಧುತ್ವವನ್ನು ಗೊತ್ತುಪಡಿಸುವುದು ಆಗಿದೆ. ಹೆತ್ತವರ ಹಾಗೂ ಮಕ್ಕಳ ನಡುವಣ ಸಂಬಂಧಗಳು ಮತ್ತು ಒಂದೇ ತಂದೆತಾಯಿಯ ಮಕ್ಕಳ ನಡುವಣ ಸಂಬಂಧಗಳು 'ರಕ್ತ ಸಂಬಂಧಗಳು' ಸತಿಪತಿಯರ ನಡುವಣ ಸಂಬಂಧದ 'ವೈವಾಹಿಕ ಸುಬಂಧ'ಗಳಾಗಿವೆ.

ವ್ಯಕ್ತಿಬಂಧುತ್ವದ ಸಂಬಂಧಗಳಿಂದ ಬಂಧಿತವಾಗಿರುವಂತೆಯೇ ಸಾಮಾಜಿಕ ಸಂಬಂಧಗಳನ್ನು ಪಡೆದು ಸಹಬಾಳ್ವೆ ಮಾಡಬೇಕಾಗುತ್ತದೆ. ಒಂದು ಪ್ರದೇಶದಲ್ಲಿ ಜೀವನ ನಡೆಸುತ್ತಿರುವಾಗ ಒಂದಲ್ಲ ಒಂದು ಕಾರಣಕ್ಕೆ ಒಬ್ಬರು ಇನ್ನೊಬ್ಬರನ್ನು ಅವಲಂಬಿಸಿ ಹೊಂದಿಕೊಂಡು ಬಾಳ್ವೆ ಮಾಡಬೇಕಾಗುತ್ತದೆ. ಬೆಟ್ಟದ ಜನ ಮೇಲ್ನೋಟಕ್ಕೆ ಒಂದೇ ಎನ್ನುವಂತೆ ಹೊಂದಿಕೊಂಡು ಹೋಗುತ್ತಾರೆ. ಆದರೆ ಒಳಹೊಕ್ಕರೆ ಜಾತಿ, ವರ್ಗಾಧರಿತವಾದ ತಾರತಮ್ಯಗಳು ಅವರಲ್ಲಿ ತುಂಬಿಕೊಂಡಿವೆ. ಅಗಾಧವಾದ ಅಂತರವನ್ನು ತಮ್ಮ ನಡುವೆ ಇಟ್ಟುಕೊಂಡಿರುವ ಒಂದು ಜಾತಿಯ ಜನ ಮತ್ತೊಂದು ಜಾತಿಯ ಜನರಲ್ಲಿ, ಒಂದು ವರ್ಗದವರು ಮತ್ತೊಂದು ವರ್ಗದವರಲ್ಲಿ, ಹಿರಿಯರು ಕಿರಿಯರ ಮೇಲೆ ಪರಸ್ಪರ ನಂಬಿಕೆ ಪ್ರೀತಿ ಸಮಾನತೆಯನ್ನು ವ್ಯಕ್ತಪಡಿಸುವುದು ಕಡಿಮೆ ಎಂದು ಸ್ಥಳೀಯರು ಮಾಪನ ಮಾಡುತ್ತಾರೆ.

ಆಲಯದ ಮೇಲ್ಜಾತಿಯ ನೌಕರರು ತಮ್ಮ ಜಾತಿಗಳ ಒಳಗುಂಪುಗಳಲ್ಲಿ, ಅಗಾಧವಾದ ಅಂತರವನ್ನು ಇಟ್ಟುಕೊಳ್ಳಲು ಒಬ್ಬರು ಮತ್ತೊಬ್ಬರಿಗಿಂತ ಶ್ರೇಷ್ಠತ್ವದಲ್ಲಿ ಎತ್ತರಕ್ಕೆ ನಿಲ್ಲಬಯಸುತ್ತಾರೆ. ಅವರಿಂದ ತಾವು ಕೇವಲ ತೀರ್ಥ ಪಡೆಯುವುದನ್ನು ಬಿಟ್ಟರೆ ನಮಗೂ ಅವರಿಗೂ ಇನ್ನಾವುದೇ ಸಂಬಂಧಗಳಿಲ್ಲ ಎಂದು ದೂರ ಉಳಿಯುತ್ತಾರೆ. ಬೇರೆ ಮತದ ಗುರುಗಳು ಬಂದಾಗ ತಮ್ಮದಲ್ಲದ ಪಂಗಡದ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಸಲ್ಲದೆಂಬ ಆಂತರಿಕ ಆಲೋಚನೆಯಿಂದ ಕೈ ಮುಗಿಯುತ್ತಾರೆ. ಕ್ಷೇತ್ರಕ್ಕೆ ಬಂದ ಮೇಲೆ ದೇವಾಲಯಕ್ಕೆ ಬರಬೇಕು. ಆದರೆ ದೇವಾಲಯಕ್ಕೆ ಬಂದ ನಂತರ ಅದು ಕುಂಭ ಸ್ವಾಗತವೇ ಆಗಬೇಕು. ಆದರೆ ಮೇಲಿನಿಂದ ಅಪ್ಪಣೆಯಾಗಿ ಬಂದರೆ ಮಾತ್ರ ಅವರಿಗೆ ಈ ಬಗೆಯ ಅದ್ದೂರಿ ಸ್ವಾಗತ ಸಿಗಬೇಕು. ಹೀಗೆ ಒಂದೇ ಜಾತಿಯ ಒಳಪಂಗಡಗಳ ನಡುವೆ ಈ ತಾರತಮ್ಯಗಳ ಸೂಕ್ಷ್ಮಾಚರಣೆ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಆದರೆ ಈ ರೀತಿಯ ಆಚರಣೆಗಳು ಅವರನ್ನು ಮೇಲ್ಜಾತಿಯಿಂದ ಪ್ರತ್ಯೇಕಿಸುವುದಿಲ್ಲ. ತಮ್ಮ ಅಂತರ ಅಸಮಾಧಾನಗಳ ನಡುವೆಯು ಒಂದು ದೇವಸ್ಥಾನದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಹಂಚಿಕೊಂಡು ಮಾಡುತ್ತಾರೆ.

ಸೋಲಿಗ ಸಮುದಾಯದಲ್ಲಿ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ನೆರವಾಗಿ ಸಂಕಷ್ಟದಿಂದ ಪಾರಾಗಲೂ ಯತ್ನಿಸುತ್ತಾರೆ. ತಮ್ಮವರನ್ನು ಎಂದೂ ಬೇರೆಯವನೆಂದು ಪರಿಗಣಿಸುವುದೇ ಇಲ್ಲ. ಯಾರೇ ಆದರೂ "ಅವ ನಮ್ಮ ಸೋಲಿಗ" ಎಂಬ ಆತ್ಮೀಯ ಅಭಿಮಾನದಿಂದ ಕಾಣುತ್ತಾರೆ. ಹಿಂದಿನ ಕಾಲದಿಂದಲೂ ತಾವು ಬೆಳೆದದ್ದನ್ನು, ಪರಸ್ಪರ ಹಂಚಿಕೊಳ್ಳುತ್ತಾರೆ. ಕೌಟುಂಬಿಕವಾಗಿ ಒಟ್ಟಾಗಿ ಬಾಳದಿದ್ದರೂ ಪ್ರೀತಿ ವಿಶ್ವಾಸದಿಂದಿರುತ್ತಾರೆ. ಪೋಡಿನ ಕೆಲಸ ಆಗಬೇಕಾದರೆ ಒಟ್ಟುಗೂಡುತ್ತಾರೆ. ತಮ್ಮಗಿಲ್ಲದಿದ್ದರೂ ಮತ್ತೊಬ್ಬರಿಗೂ ಕೊಡಬೇಕೆಂಬ ಬುಡಕಟ್ಟು ಮೌಲ್ಯಗಳ ಸ್ವರೂಪ ಪೂರ್ಣರೂಪದಲ್ಲಿ ಉಳಿಯದಿದ್ದರೂ ತಮ್ಮ ಮನೆಗೆ ಬಂದ ಅತಿಥಿ ಅಥವಾ ಬಂಧುಗಳನ್ನ ಆದರಿಸಲು ಕಷ್ಟವಾದರೂ ಹೊರೆಯೆಂದು ಭಾವಿಸುವುದಿಲ್ಲ. ಒಟ್ಟಾಗಿದ್ದಾಗ ಅಥವಾ ಪಾಲು ಪಡೆದು ದೂರಾಗುವ ಸೋಲಿಗೇತರ ಕುಟುಂಬಗಳು ಮಾನವೀಯ ಅಂತಃಕರಣದಿಂದ ಬದುಕಬಲ್ಲವು. ಕುಟುಂಬವು ಪೋಡಿನ ಹಿರಿಯರ ಬಗ್ಗೆ ಇರುವ ಸಂಬಂಧವನ್ನು ಪರಿಶೀಲಿಸಿದಾಗ, ಬಹುತೇಕ ಸೋಲಿಗರು ತಮ್ಮ ಸಮುದಾಯದ ಹಿರಿಯರ ವಯಸ್ಸು ಅನುಭವಗಳಿಗೆ ಗೌರವ ನೀಡುತ್ತಾರೆ. ತಮ್ಮ ಹಿರಿಯರನ್ನು ಸಂಬಂಧಿಯಲ್ಲದವರನ್ನು ಗೌರವದ ಪರಿಭಾಷೆಯಲ್ಲಿಯೇ ಕಿರಿಯರು ಮಾತಾಡಿಸುತ್ತಾರೆ.

ಸಂಸ್ಕೃತಿಯ ಸಂದರ್ಭದಲ್ಲಿ ಪುರುಷರಿಗಿರುವಷ್ಟು ಸ್ವಾತಂತ್ರ್ಯ ಮಹಿಳೆಯರಿಲ್ಲ. ಹೀಗಾಗಿ ಮಹಿಳೆಯರು ಪುರುಷರಂತೆ ಬೀಡು ಬೀಸಾಗಿ ವರ್ತಿಸಲು ಸಾಧ್ಯವಾಗುವುದಿಲ್ಲ. ಬಿಳಿಗಿರಿರಂಗನಬೆಟ್ಟದ ಬಹುಪಾಲ ಸೋಲಿಗೇತರ ಗಂಡಸರು ತಮ್ಮ ಮನೆಯ ಹೆಂಗಸರನ್ನು ಒಂಟೊಂಟಿಯಾಗಿ ಬೆಟ್ಟದಲ್ಲಿ ಓಡಾಡದಂತೆ ನಿಯಂತ್ರಿಸುತ್ತಾರೆ. ಅದಕ್ಕೆ ಅವರ ಕೊಡುವ ಕಾರಣಗಳು ಅವರ ಮಾತುಗಳನ್ನು ಸಮರ್ಥಿಸುವಂತಿವೆ. ಬೆಟ್ಟಕ್ಕೆ ಹೊರಗಿನಿಂದ ಬರುವವರಲ್ಲಿ ಕೆಲವರು ವೈಯಕ್ತಿಕ ಸುಖಾಪೇಕ್ಷೆಯಿಂದ ಬರುವವರು, ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಆರ್ಥಿಕ ಪ್ರಗತಿಯಿಂದ ಹಿಂದಿನ ಪ್ರಾಥಮಿಕ ಸಂಬಂಧಗಳು, ಆತ್ಮೀಯತೆ, ಸ್ನೇಹ, ಸಹಾನುಭೂತಿಯ ಗುಣಗಳು ಮರೆಯಾಗಿ ವ್ಯವಹಾರಿಕತೆ, ಔಪಚಾರಿಕತೆ, ಎದ್ದು ಕಾಣಿಸಿತೊಡಗಿವೆ. ಸಾಮಾಜಿಕ ಜೀವನದಲ್ಲಿ ಮಾನವೀಯ ಸಂಬಂಧಗಳು ಯಾಂತ್ರಿಕವಾಗುತ್ತಿರುವುದು ಇಂದಿನ ಬದುಕಿನ ದೊಡ್ಡ ದುರಂತ. ಜೀವನದಲ್ಲಿ ಆತ್ಮೀಯವಾದ ಮಧುರ ಸಂಬಂಧಗಳಿಗಿಂತ ವ್ಯವಹಾರಿಕ ದೃಷ್ಟಿಯೇ ಪ್ರಮುಖವಾಗಿ ಸಂಬಂಧಗಳು ಯಾಂತ್ರಿಕವಾಗುತ್ತಿದೆ. ಸಾಮೂಹಿಕ ಹಾಗೂ ಕೌಟುಂಬಿಕ ನೆಲೆಗಳು ಸಂಬಂಧಗಳಲ್ಲಿಯೂ ಹದತಪ್ಪಿದೆ. ವ್ಯಕ್ತಿ ವ್ಯಕ್ತಿಗಳ ನಡುವೆ ಸಂಕುಚಿತತೆಗಳ ಅಡ್ಡಗೋಡೆಗಳಿಂದ ಸಾಮರಸ್ಯದ ಬದಲು ವೈಷಮ್ಯದ ಕಂದಕಗಳು ವಿಸ್ತರಿಸುತ್ತಿವೆ. ಮೇಲ್ಜಾತಿಯವರು, ಮೇಲ್ವರ್ಗದವರು ಉಳಿದವರನ್ನು ನಿಕೃಷ್ಟವಾಗಿ ಕಂಡು ಏಕವಚನದಿಂದ ಅಗೌರವದಿಂದ ಮಾತಾಡಿಸುವುದು ಸಾಮಾನ್ಯ.

ಸಮಾಜದ ಸಂತುಲತೆಯನ್ನು ಕಾಯ್ದುಕೊಳ್ಳುವಲ್ಲಿ ಸಾಮಾಜಿಕ ಮೌಲ್ಯಗಳ ಪಾತ್ರ ಹಿರಿದು. ಜನರನ್ನು ಒಂದೂಗೂಡಿಸಿ ಏಕ ಸೂತ್ರದಲ್ಲಿ ಬೆಸೆಯುವಲ್ಲಿ ಅವು ಸಹಕಾರಿ, ಸಾಮಾಜಿಕ ಬದಲಾವಣೆಯಿಂದಾಗಿ ಹೊಸಮೌಲ್ಯಗಳು ಹುಟ್ಟಿಕೊಳ್ಳುತ್ತದೆ. ಕೆಲವೊಮ್ಮೆ ಹಳೆಯ ಮೌಲ್ಯಗಳಿಗೆ ಸಂಪೂರ್ಣವಾಗಿ ಹೊಸ ಅರ್ಥವನ್ನು ಕಲ್ಪಿಸಲಾಗುತ್ತದೆ. ಮೌಲ್ಯಗಳಿಗೂ ಸಾಮಾಜಿಕ ಸಂಬಂಧಗಳಿಗೂ ನಿಕಟ ಬಾಂಧವ್ಯವಿರುವುದರಿಂದ ಮೌಲ್ಯಗಳು ಬದಲಾದಾಗ ವ್ಯಕ್ತಿ ಸಂಬಂಧಗಳೂ ಬದಲಾಗುತ್ತವೆ. ಪ್ರತಿಯೊಂದು ಸಮಾಜವು ತನ್ನ ಒಳಿತಿಗಾಗಿ ವ್ಯಕ್ತಿ ಹಿತಕ್ಕಿಂತ ಒಟ್ಟು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನದೇಯಾದ ಹಲವಾರು ಮೌಲ್ಯಗಳನ್ನು ರೂಪಿಸಿಕೊಂಡಿರುತ್ತದೆ. ಸೋಲಿಗರು ತಮ್ಮ ಬದುಕಿನಲ್ಲಿ ಕೆಲವು ಮೌಲ್ಯಗಳನ್ನು ರೂಪಿಸಿಕೊಂಡಿದ್ದಾರೆ. ಅರಣ್ಯದ ನಡುವೆ ಪರಸ್ಪರ ಪ್ರೀತಿ-ಸಹಕಾರಗಳೇ ಬದುಕಿನ ಬೇರನ್ನು ಗಟ್ಟಿಗೊಳಿಸುವಂಥವು. ತಮ್ಮಲ್ಲಿ ಇದ್ದುದನ್ನು ಹಂಚಿ ತಿನ್ನುವ ಮೌಲ್ಯವನ್ನು ಸೊಲಿಗರು ಕಂಡುಕೊಂಡಿದ್ದಾರೆ.

ಒಂದು ಪ್ರದೇಶದಲ್ಲಿರುವ ಸಮುದಾಯಗಳ ಸಂಸ್ಕೃತಿಯ ಅಧ್ಯಯನವನ್ನು ಮಾಡುವುದರಿಂದ ಸಂಸ್ಕೃತಿಗಳಲ್ಲಿರುವ ವೈವಿಧ್ಯತೆಗಳನ್ನು ಅರಿವಿಗೆ ತಂದುಕೊಳ್ಳಲು ಸಾಧ್ಯ. ಯಾವುದೇ ಒಂದು ಸಂಸ್ಕೃತಿಯೂ ಮೂಲರೂಪದಲ್ಲಿಯೇ ಬಹುಕಾಲದವರೆಗೆ ಮುಂದುವರೆಯಲಾರದು. ಸಂಸ್ಕೃತಿಯಲ್ಲಿ ಪರಿವರ್ತನೆಗಳು ಅನಿವಾರ್ಯವಾಗಿ ಉಂಟಾಗುತ್ತದೆ. ಸಾಮಾಜಿಕ ಪರಿವರ್ತನೆಯನ್ನು ಅನುಸರಿಸಿ ಸಂಸ್ಕೃತಿಯಲ್ಲಿಯೂ ರೂಪಾಂತರ ಸ್ಥಿತ್ಯಂತರಗಳು ಆಗುತ್ತಿರುತ್ತವೆ. ವಿಭಿನ್ನ ಸಂಸ್ಕೃತಿಯೂ ವ್ಯಕ್ತಿಗಳನ್ನುಳ್ಳ ಜನ ಸಮುದಾಯಗಳ ಪರಸ್ಪರ ನಿರಂತರ ಮುಖಾಮುಖಿ ಸಂಪರ್ಕ ಒಡನಾಟಗಳಿಂದ ಆ ಸಮಾಜದ ಸಂಸ್ಕೃತಿಯಲ್ಲಿ ಕೊಡುಗೆಗಳಿರುತ್ತವೆ.

ನಮ್ಮ ಜನ ಮದುವೆಯಾಗುವ ಪದ್ಧತಿ ಅಷ್ಟು ಸರಳವಲ್ಲ. ಉತ್ತಮ ಪದ್ಧತಿಯೂ ಅದರಲ್ಲಿರುವಾಗ ಅನಗತ್ಯವಾಗಿ ಅದನ್ನು ಖರ್ಚುಗಳ ಬಾಬತ್ತನ್ನಾಗಿ ಮಾಡುವುದು ತುಂಬಾ ತಪ್ಪು. ಹೊರಗಿನ ಜನ ಹೆಚ್ಚು ದುಂದುವೆಚ್ಚ ಮಾಡಿ ಮದುವೆ ಮಾಡುವುದನ್ನು ನೋಡಿ ಸೋಲಿಗರು ತಾವೂ ಅದೇ ರೀತಿ ತುಳಿಯಲು ಅಪೇಕ್ಷಿಸುತ್ತಾರೆ. ಭಾರತೀಯ ಸಮಾಜವೇ ಸಾಂಪ್ರದಾಯಿಕ ಸಮಾಜವಾಗಿದೆ. ಆದಿವಾಸಿಗಳ ಸಮಾಜ ಇನ್ನೂ ಸಾಂಪ್ರದಾಯಿಕವಾಗಿದೆ. ಎಲ್ಲಿ ಸಂಪ್ರಾದಾಯಗಳೂ ತಪ್ಪಲ್ಲ. ಆದರೆ ಎಲ್ಲ ಸಂಪ್ರದಾಯಗಳೂ ಸರಿಯಾಗಿಯೇ ಇರುತ್ತವೆ ಎನ್ನಲಾಗುವುದಿಲ್ಲ. ನಾಗರಿಕ ಜಗತ್ತಿನಿಂದಾಗಿ ಒಳ್ಳೆಯ ಕಾರ್ಯಗಳೂ ಆಗಿವೆ.

ಸೋಲಿಗರು

ಭಾರತದಂತಹ ಬಹು ಸಾಂಸ್ಕೃತಿಕ ಸ್ತರಗಳಿರುವ ಪ್ರದೇಶಗಳಲ್ಲಿ ಇಂದಿಗೂ ಬುಡಕಟ್ಟು ಸಾಮಾಜಿಕ ವ್ಯವಸ್ಥೆಗಳೇ ಉಳಿದುಕೊಂಡಿವೆ. ಬೆಟ್ಟದಲ್ಲಿ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು

ಹೊಂದಿರುವ ಸೋಲಿಗ ಬುಡಕಟ್ಟಿನ ಜನ ಇದ್ದಾರೆ. ಎಚ್.ಆರ್. ರಿವರ್ಸ್ ಅವರ ಪ್ರಕಾರ ಬುಡಕಟ್ಟು ಎಂಬುದು ಭಿನ್ನ ಗೋತ್ರ ವಿವಾಹ ಪದ್ಧತಿಯನ್ನು ಹೊಂದಿ, ಒಂದೇ ಮೂಲದಿಂದ ಬಂದವರೆಂದು ಕುಲಚಿಹ್ನೆ ಪಡೆದು, ಒಂದೇ ಪ್ರದೇಶದಲ್ಲಿ ವಾಸವಾಗಿರಬೇಕೆಂಬ ನಿಯಮಕ್ಕೆ ಒಳಪಟ್ಟಿರಬೇಕು. ಅಲ್ಲದೆ ಮೊದಲು ಅನೇಕ ಬುಡಕಟ್ಟುಗಳಿದ್ದು ಅವೆಲ್ಲ ಕ್ರಮೇಣ ನಾಶವಾಗಿ ಕೊನೆಗೆ ಹೊರಬಾಂಧವ್ಯ ಹೊಂದಿದ ಎರಡೇ ಕುಲ ಉಳಿದಾಗ, ಒಂದು ಕುಲದ ಜನಸಂಖ್ಯೆ ಹೆಚ್ಚಾಗಿ ಇನ್ನೊಂದು ಕುಲದ ಜನಸಂಖ್ಯೆ ಕ್ಷೀಣವಾಗಿ ಹೊರಬಾಂಧವ್ಯವನ್ನು ಉಳಿಸಿಕೊಂಡು ಬರಲಾರದೆ ಒಟ್ಟಿಗೆ ಸೇರಿಕೊಂಡಿರಬೇಕು. ಆದಿವಾಸಿಗಳನ್ನು ಕುರಿತು ವ್ಯಾಖ್ಯಾನ ಮಾಡುವಾಗ ಕೆಲವು ಸಂದರ್ಭದಲ್ಲಿ ಆದಿವಾಸಿ ಮತ್ತು ಬುಡಕಟ್ಟು ಎರಡು ಪದಗಳನ್ನು ಪರಸ್ಪರ ಪರ್ಯಾಯವಾಗಿ ಬಳಸುತ್ತಾರೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ ಎಂಟರಷ್ಟು ಮಾತ್ರ ಆದಿವಾಸಿಗಳು ಭಾರತದಲ್ಲಿದ್ದಾರೆ. ಆದಿವಾಸಿಗಳು, ಸ್ಥಳೀಯ ಜನರು, ಬುಡಕಟ್ಟಗಳು, 'ಪ್ರಕೃತಿಯ ಮಕ್ಕಳು' ಮುಂತಾದ ಬೇರೆ ಬೇರೆ ಹೆಸರುಗಳಿಮದ ಮೂಲವಾಸಿಗಳನ್ನು ಗುರುತಿಸುತ್ತಾರೆ. ಇವರು ನಿಸರ್ಗದ ಮಡಿಲಲ್ಲಿ ನಿಸರ್ಗದತ್ತವಾದ ಅನುಕೂಲಗಳನ್ನು ಪಡೆದು ಬದುಕುತ್ತಿದ್ದವರು. ಪ್ರಪಂಚದ ೪%ರಷ್ಟಿರುವ ಮೂಲವಾಸಿಗಳ ಬಗೆಗೆ ಕಾಡು ಜನರು, ಅನಾಗರಿಕರು ಎನ್ನುತ್ತಾ ಅವರನ್ನು ಇತರರು ಕಟ್ಟುಕಥೆಗಳ ಮೂಲಕ ದೂರವಿಟ್ಟಿದ್ದಾರೆ. ಆದರೆ ಈ ಭೂಮಿಯ ಸಂಪನ್ಮೂಲಗಳನ್ನು ಉಳಿಸಿ ಬೆಳೆಸಿದ, ಪ್ರಕೃತಿಯ ಆರಾಧಕರಾದ ಮೂಲವಾಸಿಗಳನ್ನು ಅವರ ಸಂಪ್ರಾದಾಯಿಕ ಮೂಲ ನೆಲೆಗಳಿಂದ ಹೊರತಳ್ಳುವ ಕಾರ್ಯ ನಡೆಯುತ್ತಿದೆ.

ಕರ್ನಾಟಕದ ಸುಮಾರು ೯ ಜಿಲ್ಲೆಗಳಲ್ಲಿ ಹಾಗೂ ನೆರೆಯ ತಮಿಳುನಾಡಿನ ಗಡಿಯ ಪ್ರದೇಶಗಳಲ್ಲಿ ಹಂಚಿ ಹೋಗಿರುವ ಸೋಲಿಗರಲ್ಲಿ ಮಲೆ ಸೋಲಿಗರು, ಬುರುಡೆ ಸೋಲಿಗರು, ಉರಾಳಿ ಸೋಲಿಗರು, ಕಾಡು ಸೋಲಿಗರು ಮುಂತಾದ ಅನೇಕ ಪ್ರಭೇದಗಳಿವೆ.

ಬಿಳಿಗಿರಿರಂಗನಬೆಟ್ಟದಲ್ಲಿರುವ ಸೋಲಿಗರು ಚಾರಿತ್ರಿಕವಾಗಿ ಇಲ್ಲಿಯವರೇ ಅಥವಾ ಇನ್ನೆಲ್ಲಿಂದಾದರೂ ಬಂದವರೆ ಎನ್ನುವುದಕ್ಕೆ ಸ್ಪಷ್ಟ ಆಧಾರಗಳಿಲ್ಲ. ನಾವು ಚೋಳರ ಕಾಲದವರು. ಅಲ್ಲಿಂದ ಬಂದವರು ಎಂದು ಕೆಲವರು ಹೇಳಿಕೊಂಡರೂ ಅದು ವಿಶ್ವಾಸಾರ್ಹವಾಗಿಲ್ಲ. ಅರೆ ಅಲೆಮಾರಿಗಳಾಗಿದ್ದ ಇವರ ದಣಿವರಿಯದ ಸಂಚಾರ "ಎಲ್ಲಿಂದ ಎಲ್ಲಿಗೆ ಆಗಿದ" ಎನ್ನುವುದರ ಸುಳಿವು ಅವರ ಇಂದಿನ ಹಾಡು ಕಥೆಗಳಲ್ಲಿ ಸಿಗದು, ತಮ್ಮ ಅಲೆದಾಟಕ್ಕೆ ಇದ್ದಿರಬಹುದಾದ ಭೌಗೋಳಿಕ ಮಿತಿಗಳ ಬಗ್ಗೆ ಸೋಲಿಗರು ಏನು ಹೇಳುವ ಸ್ಥಿತಿಯಲ್ಲಿಲ್ಲ. ಯಾವ ರಾಜರ ಆಳ್ವಿಕೆಯಲ್ಲಿದ್ದರೂ ಸೋಲಿಗರು ಅರೆ ಅಲೆಮಾರಿತನಕ್ಕೆ ನಿರ್ಬಧವನ್ನು ಹಾಕಿರಲಿಲ್ಲ. ತಾವಿದ್ದ ಕಾಡು ಇರುವಷ್ಟು ದಿನಗಳ ಕಾಲ ತಮ್ಮವೆಂದು ತಿಳಿದುಕೊಂಡವರು.

ಸೋಲಿಗರು ತಮ್ಮ ಹುಟ್ಟಿನ ಮೂಲವನ್ನು ಹೇಳಲು ಜನ್ಮ ಕಥೆ ಸ್ವಾರಸ್ಯವಾಗಿದೆ. ಒಮ್ಮೆ ಮಲೆಮಹದೇಶ್ವರರು ವಿಭೂತಿ ಉಂಡೆ ತೆಗೆದುಕೊಂಡು ಹೋಗುತ್ತಿದ್ದಾಗ, ಬಿಳಿಗಿರಿರಂಗನ ಬೆಟ್ಟದ ಅಡ್ಡ ಹಳ್ಳದಲ್ಲಿ ಜಡೆಸ್ವಾಮಿ ಅವನನ್ನು ತಡೆದು ನಿಲ್ಲಿಸಿ " ಏನಪ್ಪ ವಿಭೂತಿ ಉಂಡೆ ತೆಗೆದುಕೊಂಡು ಹೋಗುತ್ತಿದ್ದೀಯ" ಎಂದು ಕೇಳಿದ್ದಕ್ಕೆ "ನನ್ನ ಏಳು ಮಲೆಯ ಕೈಲಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ. ಅದನ್ನು ಇಲ್ಲಿ ಬಿಡುವುದಿಲ್ಲ" ಎಂದನಂತೆ. ಅದಕ್ಕೆ ಜಡೆಸ್ವಾಮಿ "ಹಾಗೆ ಮಾಡಬೇಡ, ಮಹಾಶಿವರಾತ್ರಿಯಲ್ಲಿ ಅಡ್ಡಹಳ್ಳದಲ್ಲಿ ತೋಪುಚಪ್ಪರ ಹಾಕಿಕೊಂಡು ನಿನ್ನ ಸೇವೆ ಮಾಡುತ್ತೇವೆ" ಎಂದು ಹೇಳಿದಾಗ ಮಾದೇಶ್ವರರು ಕೈಯಲ್ಲಿದ್ದ ವಿಭೂತಿ ಉಂಡೆಯನ್ನು ಮೂರು ದಿಕ್ಕಿಗೂ ಎಸೆದು ಬಿಟ್ಟಾಗ ಸೋಲಿಗರು ಉದ್ಭವರಾದರು! "ನಾವು ಕಾರಪ್ಪನ ಮಕ್ಕಳು" ಎಂದು ಸೋಲಿಗರು ಹೇಳಿ ಕೊಳ್ಳುತ್ತಾರೆ.[೨೦] ತಮ್ಮ ಹೆಸರಿನ ಬಗ್ಗೆ ಸೋಲಿಗರು ನೀಡಿದ ವಿವರಣಾತ್ಮಕ ಐತಿಹ್ಯವನ್ನು ಡಾ. ಚಂದ್ರು ಕಾಳೇನಹಳ್ಳಿಯವರು ಕೊಟ್ಟಿದ್ದಾರೆ. ಸೋಲನ ಹಂಬನೂ ಸೋಲಿಸಲಾಗದೆ ಹೋದವರು ಸೋಲಿಗರಾದವರು ಎನ್ನುವ ಐತಿಹ್ಯವಿದೆ. ಸೋಲಿಗರು ಇದನ್ನು

"ಆರೆಯ ಕೋಲು ನೂರೆಯ ಗೆಣಸು
ಕಾಯಂಬು ಗೆಣಸು ಕಲಂಬುತ್ತಾರ
ಸೋತುವೋಗಾರು ಸೋಲನ ಗೆಣಸು"

ಎನ್ನುವ ಹಾಡಿನಲ್ಲಿ ಗುರುತಿಸಿದ್ದಾರೆ. ಸೋಲನೆ ಗೆಣಸಿನಲ್ಲಿ 'ಸೋಲ' ಶಬ್ದ ಇದೆಯಾದರೂ ಅದರಿಂದ ಸೋಲಿಗ ಎಂಬ ಹೆಸರು ಬಂದಿತೆನ್ನುವುದು ಡಾ. ಚಂದ್ರಕಾಳೇನದಳ್ಳಿಯವರು ನಿರಾಕರಿಸುತ್ತಾರೆ.[೨೧]

ಕಾರಯ್ಯನ ಮಕ್ಕಳಾಗಿ ಹುಟ್ಟಿದ ಸೋಲಿಗರ ನಾಯಕ ಸೊತು ಹೋದ ಕಾರಣದಿಂದ ಇಡೀ ಗುಂಪಿಗೆ ಈ ಹೆಸರು ಬಂದಿತೆಂಬ ವಾದವನ್ನು ಒಪ್ಪುವಂತಿಲ್ಲ. "ಮೂಲತಃ ಪಶುಸಂಗೋಪನೆಯ ವೃತ್ತಿಯಲ್ಲಿದ್ದ ಜೇನು ಕುರುಬ, ಹಂಡೆ ಕುರುಬ, ಕಾಡು ಕುರುಬ, ಮುಳ್ಳು ಕುರುಬರ ಜೊತೆಗೆ ಸೋಲಿಗರು ಸೇರುತ್ತಾರೆ. ಪಶುಸಂಗೋಪನೆ ಕುರುಬರಿಗೆ ಮುಖ್ಯ ವೃತ್ತಿಯಾಗಿದ್ದು, ಅವರು ಅಲೆಮಾರಿಗಳಾಗಿಯೇ ಪಶುಸಂಗೋಪನೆ ಮಾಡುತ್ತಿದ್ದರು. ಹಾಗೆ ಹೋಗುವಾಗ ಒಬ್ಬೊಬ್ಬರು ಒಂದೊಂದೆಡೆ ಉಳಿದು ಗುಂಪುಗಳಿಗೆ ಪ್ರತ್ಯೇಕ ಹೆಸರುಗಳು ಬಂದವು. ಒಂದು ಗುಂಪಿನವರು ಮತ್ತೊಂದು ಗುಂಪಿನ ಜೊತೆಗೆ ಪಂಥವೊಂದರಲ್ಲಿ ಸೋತಿದ್ದರಿಂದ ಇವರು ಸೋಲಿಗರಾದರು ಎಂದು ಸೋಲಿಗರ ಹೆಸರಿನ ಮೂಲವನ್ನು ಸೂಚಿಸುತ್ತಾರೆ.

"ಸೋಲ"ವನ್ನು ಒಡ್ಡಿಕೊಂಡು ಸೋತು ಹೋಗಿದ್ದರಿಂದ ಸೋಲಿಗರು ಇವರ ಪಂಥದ ಪ್ರಕಾರ ಕಾಡುಪಾಲಾದರು. ಮೂಲತಃ ಪಶುಪಾಲಕರಾಗಿದ್ದವರು ಕ್ರಮೇಣ ಕೃಷಿಯನ್ನು ಅವಲಂಬಿಸಿದರು. ಒಂದು ವೇಳೆ ಸೋಲಿಗರು ಮೊದಲಿನ ಕೃಷಿಕ ವ್ಯವಸ್ಥೆಯಲ್ಲಿ ಇದ್ದಿದ್ದರೆ, ಕಾಡು ಪಾಲಾಗುವ ಹಂತವೇ

ಬರುತ್ತಿರಲಿಲ್ಲ. ಆದರೆ ಸೋಲಿಗರು ಪಂಥವೊಂದರಲ್ಲಿ ಸೋತು ಕಾಡುಪಾಲಾದರು ಎನ್ನುವ ಹಾಗೆ ಸಕಾರಾಣಾತ್ಮಕವಾಗಿಲ್ಲ. ಇಡೀ ತಂಡವೇ ಸೋತು ಕಾಡುಪಾಲಾಯಿತು ಎನ್ನುವುದು ಊಹೆಯಾಗಿಯೇ ಉಳಿಯುತ್ತದೆ. ಯಾವುದೇ ಒಂದು ಸಮುದಾಯ ತನಗೆ ಹೆಸರಿಟ್ಟುಕೊಳ್ಳುವಾಗ ಸಾಮಾನ್ಯವಾಗಿ ತನ್ನ ಘನತೆಗೆ ಹೊಂದದ ಹೆಸರನ್ನು ಇಟ್ಟುಕೊಳ್ಳವುದು ಅಪರೂಪ.

ಶೋಲೈಗಳಲ್ಲಿ ವಾಸ ಮಾಡುತ್ತಿದ್ದ ಕಾರಣದಿಂದ ಸೋಲಿಗ ಹೆಸರು ಬಂದಿದೆ. ಎನ್ನುವುದಾದರೆ, ಈ ಬಗ್ಗೆಯ ಶೋಲಾಗಳಲ್ಲಿಯೇ ಬಹುತೇಕ ಬುಡಕಟ್ಟು ಜನವಾಸ ಮಾಡುತ್ತಿದ್ದಾರೆ ಎನ್ನುವುದನ್ನು ಗಮನಿಸಬಹುದು. ತಾವೂ ಬಿದಿರ ಸೋಲೆಯಲ್ಲಿ ಹುಟ್ಟಿದವರು ಎಂದು ಸೋಲಿಗರು ಹೇಳಿಕೊಳ್ಳುತ್ತಾರೆ. ಇದು ಬಿದಿರಿನ ಜೊತೆ ಅವರ ಸಂಬಂಧವನ್ನು ಸ್ಥಾಪಿಸುತ್ತದೆಯೇ ಹೊರತು ಹೆಸರಿನ ಅಥವಾ ಹುಟ್ಟಿನ ಮೂಲವನ್ನು ಹುಡುಕಿ ಕೊಡುವುದಿಲ್ಲ. ಬಿಳಿಗಿರಿರಂಗನಬೆಟ್ಟದ ಸೋಲಿಗರ ಬದುಕಿನಲ್ಲಿ ಬಿದಿರಿನ ಸಂಬಂಧ ಇಂದು ಬಹುತೇಕ ಕಡಿದು ಹೋಗಿದೆ. ಸೋಲಿಗ, ಸೋಲಗ, ಶೋಲಗ, ಶೋಲಿಗ, ಸೈಲಿಗ ಮುಂತಾದ ಹೆಸರುಗಳಿಂದ ಕರ್ನಾಟಕ ಮತ್ತಿತರ ರಾಜ್ಯಗಳ್ಲಲಿ ಗುರುತಿಸಲ್ಪಟ್ಟ ಸೋಲಿಗರ ಹೆಸರಿನ ಮತ್ತು ಹುಟ್ಟಿನ ಮೂಲಗಳು ಪೌರಾಣಿಕ ಹಾಗೂ ದಂತಕಥೆಗಳು ಆಳದಲ್ಲಿ ಮುಳುಗಿ ಹೋಗಿದೆ. ಇವರ ಚರಿತ್ರೆಯನ್ನು ಪುನಾರಚಿಸುವಲ್ಲಿ ಕೇವಲ ಊಹೆಗಳನ್ನು ಅವಲಂಬಿಸಬೇಕಾಗಿದೆ.

ನೂರಾರು ವರ್ಷಗಳ ಕಾಲ ಕಷ್ಟ ಕಾರ್ಪಣ್ಯಗಳ ಬದುಕನ್ನೇ ಬಾಳಿದ್ದರೂ ಇತ್ತೀಚಿನ ದಿನಗಳಲ್ಲಿ ಸೋಲಿಗರ ಆರ್ಥಿಕ ಸ್ಥಿತಿ ಸುಧಾರಿಸಿದ ಕಾರಣದಿಂದ ಅವರ ಜೀವನ ವಿಧಾನಗಳಲ್ಲಿ ಹಲವು ಮಾರ್ಪಾಟು ಗಳಾಗಿವೆ. ಬಹಳ ಕಾಲದಿಂದ ಅವರನ್ನು ನಿರಂತರವಾಗಿ ದುಡಿಸಿಕೊಂಡಿದ್ದರೂ ಯಾವುದೇ ರೀತಿಯ ವಿಶ್ವಾಸ, ಗೌರವಗಳನ್ನು ಅವರಿಗೆ ತೋರಿಸದೆ ಇದ್ದ ಸೋಲಿಗೇತರರಿಗೆ ಸೋಲಿಗರ ಪರಿಸ್ಥಿತಿ ಸುಧಾರಿಸಿದ್ದು, ತಾವು ಅನ್ಯಾಯ ಮಾಡಿದರೂ ಸುಮ್ಮನಿದ್ದವರು ಈಗ ಬಗ್ಗದಿರುವುದು ಅಸಹನೆ ತಂದಿದೆ.

ವಸತಿ ವ್ಯವಸ್ಥೆ

ಅಲೆಮಾರಿಯಾಗಿದ್ದ ಮಾನವರು, ತಮ್ಮ ಜೀವನವನ್ನು ಪಶುಪಾಲನೆ, ಕೃಷಿಗಳಲ್ಲಿ ತೊಡಗಿಸಿಕೊಂಡು ಒಂದೆಡೆ ಸ್ಥಿರಗೊಳಿಸಿದ ಜೀವನ ಆರಂಭಿಸಿದಾಗ ವಸತಿ ನಿರ್ಮಾಣದ ಕಡೆಗೆ ವಿಶೇಷ ಗಮನ ಕೊಡಬೇಕಾಗಿ ಬಂತು. ಅಲ್ಲಿಯವರೆಗೂ ಗುಹೆ, ಗವಿ, ಪೊಟರೆಗಳಲ್ಲಿ ಕಾಲ ತಳ್ಳುತ್ತಿದ್ದವರು ತಮ್ಮಗೊಂದು ಸರಿಯಾದ ಮನೆಯ ಅಗತ್ಯ ಇದೆ ಎಂಬುದನ್ನು ಮನಗಂಡರು. "ತನ್ನ ದೇಹಶ್ರಮದಿಂದ ಮತ್ತು ಬುದ್ಧಿ ಬಲವನ್ನು ಉಪಯೋಗಿಸಿ ರಕ್ಷಣಾಸ್ಥಾನವನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯ ಅಗತ್ಯವಾಯಿತು."[೨] ಆದರೆ ಈ ಮನೆಯನ್ನು ಕಟ್ಟುವ ಮೂಲ ಮಾದರಿ ಅವನಿಗೆ ದೊರಕಿದ ಬಗ್ಗೆ ಹೀಗೆ ಇರಬಹುದು. "ಗವಿಯಲ್ಲಿ ಬದುಕುತ್ತಿದ್ದನು ಹೊರಗೆ ಬಂದಾಗ ಬೇಟೆಯೊಡನೆ ಮಾಂಸವನ್ನೋ

ಕಿತ್ತು ಹಾಕಿದ ಗೆಡ್ಡೆ ಗೆಣಸನ್ನೋ ತುಂಬಿಡಲು ಬುಟ್ಟಿ ಹೆಣೆದು ನೋಡಿದವನು. ಈ ಖಾಲಿಯಾದ ಬುಟ್ಟಿಯನ್ನು ಮಗುಚಿ ಹಾಕಿದಾಗ ಗವಿಯಾಗುತ್ತದೆ. ಪ್ರಾಣಿ ಪಕ್ಷಿಗಳ ಮರಿಗಳನ್ನು ಕೂಡಿ ಹಾಕಿ ರಕ್ಷಿಸಲು ಮನೆಯೂ ಆಗುತ್ತದೆ. ಈ ಗವಿ ಮತ್ತು ಬುಟ್ಟಿಯ ಕಲ್ಪನೆಯೇ ಮನುಷ್ಯ ವಾಸಿಸುವ ಗೂಡು ಅಥವಾ ಮನೆಗೆ ಮೂಲ ಪ್ರಚೋದನೆ ನೀಡಿರಬೇಕು.[೨೩]

ಪ್ರತಿಯೊಂದು ಪ್ರದೇಶದಲ್ಲಿ ಮನೆ ಕಟ್ಟುವ ಸಂದರ್ಭದಲ್ಲಿ ಅತ್ಯವಶ್ಯಕವಾಗಿ ಪರಿಗಣಿಸಬೇಕಾದ ಅಂಶ ಕಟ್ಟುವ ಮನೆ ವಾಸಿಸುವ ಭೌಗೋಳಿಕ ಪರಿಸರಕ್ಕೆ ಸೂಕ್ತವಾಗಿ ಹೊಂದಿಕೊಳ್ಳಬೇಕು. ಅತಿಯಾಗಿ ಮಳೆಯಾಗುವ ಮಲೆನಾಡಿನಲ್ಲಿ ಹೆಂಚು ಮತ್ತು ಹುಲ್ಲಿನ ಮನೆಗಳೇ ಹೆಚ್ಚು. ಮನೆ ಕಟ್ಟುವ ಪರಿಸರದಲ್ಲಿನ ಪ್ರಾಕೃತಿಕ ಆವರಣಕ್ಕೆ ಧಕ್ಕೆ ತರದಂತೆ, ವಾಸಿಸುವವರಿಗೆ ಸೂಕ್ತವೆನಿಸುವ ಹಾಗೆ ನಿರ್ಮಿಸಬೇಕು. ಬೆಟ್ಟದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ದೊರೆತಿದ್ದು ಇಲ್ಲಿ ಜನ ವಾಸವಾಗಿದ್ದರೂ ಎನ್ನುವುದು ತಿಳಿದುಬಂದರೂ ಅವರು ವಾಸಿಸಿದ್ದ ಮನೆಗಳ ಸ್ವರೂಪವನ್ನು ತಿಳಿಯಲು ಸಾಧ್ಯವಾಗಿಲ್ಲ. ಸಾಮಾನ್ಯವಾಗಿ "ಬೃಹತ್ ಶಿಲಾ ಸಂಸ್ಕೃತಿಯ ಜನ ಸಾವಿನಾನಂತರದ ಬದುಕಿನ ಸಮಾಧಿ ಕಟ್ಟುವುದರಲ್ಲಿ ತೋರಿದ ಆಸಕ್ತಿಯನ್ನು ನಿತ್ಯೋಪಯೋಗಿಯಾದ ವಾಸದ ಮನೆ ಕಟ್ಟುವುದರಲ್ಲಿ ತೋರುತ್ತಿರಲಿಲ್ಲ."[೨೪]

ಸೋಲಿಗರ ಕೃಷಿ

ಸೋಲಿಗರು ಬೆಟ್ಟದಲ್ಲಿ ಹಿಂದಿನಿಂದಲೂ ವ್ಯವಸಾಯ ಮಾಡುತ್ತಾ ಬಂದಿದ್ದರೂ ಅದು ತೀರಾ ಕಡಿಮೆ ಅಳತೆಯ ಭೂಮಿಯಾಗಿತ್ತು. ಚಾಮರಾಜನಗರ ಅರಣ್ಯ ವಿಭಾಗದಲ್ಲಿ ೧೯೮೦ರಲ್ಲಿ ಕುಮಾರಿ ಬೇಸಾಯ ಮಾಡುತ್ತಿದ್ದವರ ಪಟ್ಟಿಯಲ್ಲಿ ತಯಾರಿಸಿ ಸರ್ಕಾರಕ್ಕೆ ಕೊಡುವಾಗ, ಅದರಲ್ಲಿ ಸುಮಾರು ೫೯ ಕುಟುಂಬಗಳು ವ್ಯವಸಾಯ ಮಾಡಲು ಬಳಸಿದ್ದ ಒಟ್ಟು ಭೂಮಿ ಕೇವಲ ೨೯ ಎಕರೆಯಷ್ಟು ಮಾತ್ರ ಇದೆ ಎಂದು ದಾಖಲಿಸಿದ್ದಾರೆ. ಮೈಸೂರು ವಿಭಾಗದ ಅರಣ್ಯಾಧಿಕಾರಿ ತಯಾರಿಸಿದ್ದ ವರದಿಯಲ್ಲಿ, ಒಂದೆಕರೆಗಿಂತ ಹೆಚ್ಚು ಭೂಮಿಯಲ್ಲಿ ವ್ಯವಸಾಯ ಮಾಡಿದವರೆ ಇಲ್ಲ. ಬಹುತೇಕರು ಅರ್ಧ ಅಥವಾ ಕಾಲು ಎಕರೆ ಭೂಮಿಯಲ್ಲಿ ಮಾತ್ರ ಕುಮರಿ ಬೇಸಾಯ ಮಾಡುತ್ತಿದ್ದ ವಿವರಗಳಿವೆ.

ವ್ಯವಸಾಯ ಮಾಡಲು ಸೋಲಿಗರಿಗೆ ಇರುವ ಭೂಮಿಯೂ ಅತ್ಯಲ್ಪ. ಆದ್ದರಿಂದ ಕೂಲಿಗಳ ಸಹಾಯವಿಲ್ಲದೆ ಕುಟುಂಬದವರೇ ಸೇರಿ ಕೃಷಿ ಸಂಬಂಧಿತ ಕಾರ್ಯಗಳನ್ನು ಮಾಡಿಕೊಳ್ಳುತ್ತಾರೆ. ಹೆಚ್ಚೆಂದರೆ ತಮ್ಮ ನೆರೆಯವರ, ಬಂಧುಗಳ ಸಹಾಯವನ್ನು ಪಡೆದುಕೊಂಡರೆ, ಅವರಿಗೆ ಅಗತ್ಯವಿದ್ದಾಗ ಸಹಕರಿಸುತ್ತಾರೆ. ಬಹುಮಟ್ಟಿಗೆ ಪರಸ್ಪರ ಸಹಕಾರ ತತ್ವದ ಆಧಾರದ ಮೇಲೆ ಕೃಷಿ ಕಾರ್ಯ ನಿರ್ವಹಿಸುತ್ತಾರೆ. ಸೋಲಿಗರು ಬೇಸಾಯದಲ್ಲಿ ಸಾಮಾನ್ಯವಾಗಿ ಮಿಶ್ರಬೇಸಾಯಕ್ಕೆ ಪ್ರಾಶಸ್ತ್ಯ. ಅವರು ಏಳೆಂಟು ರೀತಿಯ ಬೆಳೆಗಳನ್ನು

ಒಟ್ಟಿಗೆ ಬೆಳೆಯುತ್ತಾರೆ. ಸೋಲಿಗರು ಕೃಷಿಗೆ ಬೇಕಾದ ಬಿತ್ತನೆ ಬೀಜವನ್ನು ಹಿಂದಿನ ಬೆಳೆಯ ಸಂದರ್ಭ ದಲ್ಲಿ ಉಳಿಸಿಕೊಂಡಿರುತ್ತಾರೆ. ಅವರೇ ಬೆಳಸಿ ರೂಢಿಸಿ ಸಂರಕ್ಷಿಸಿಕೊಂಡು ಬಂದ ಕೆಲವು ವಿಶಿಷ್ಟವಾದ ಉತ್ತಮ ತಳಿಯ ಬೀಜಗಳು ಇಂದಿಗೂ ಅವರ ಬಳಿ ಇವೆ.

ಸೋಲಿಗರ ವಸತಿಗಳು

ಬಿಳಿಗಿರಿರಂಗನಬೆಟ್ಟದಲ್ಲಿ ಮೊದಲು ವಸತಿ ವ್ಯವಸ್ಥೆ ಮಾಡಿಕೊಂಡವರು ಅಲ್ಲಿನ ಮೂಲವಾಸಿಗಳಾದ ಸೋಲಿಗರು, ತಾವು ವಾಸ ಮಾಡುತ್ತಿದ್ದ ಪೋಡುಗಳಲ್ಲಿ, ಬೇಕೆಂದ ಕಡೆ ಗುಳ್ಳು(ಗುಡ್ಲು) ಕಟ್ಟಿಕೊಳ್ಳುತ್ತಿದ್ದರು. ಇಂಥಲ್ಲಿಯೇ ಕಟ್ಟಬೇಕೆಂಬ ಯಾವ ನಿಯಮ ನಿರ್ಬಂಧಗಳು ಇಲ್ಲದ್ದರಿಂದ, ಇಚ್ಛೆ ಮತ್ತು ಅನುಕೂಲ ಒದಗಿದ ಕಡೆಗಳಲ್ಲಿ ಗುಳ್ಳು ಕಟ್ಟಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಕೆಲವು ಬುಡಕಟ್ಟು ಮಂದಿ ಅನನ್ಯವಾದ ವಿಶಿಷ್ಟ ವಿನ್ಯಾಸದಲ್ಲಿ ಕಲಾತ್ಮಕವಾದ ಆವರಣಕ್ಕೆ ಹೊಂದುವಂಥ ಗುಳ್ಳುಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಆದರೆ ಅಲೆಮಾರಿ ಜೀವನಕ್ಕೆ ಒಗ್ಗಿ ಹೋಗಿದ್ದ ಸೋಲಿಗರೂ ಎಲ್ಲೂ ನಾಲ್ಕು ವರ್ಷಗಳಿಗಿಂತ ಹೆಚ್ಚು ಕಾಲ ನೆಲೆ ನಿಲ್ಲುತ್ತಿರಲಿಲ್ಲ. ಆದ್ದರಿಂದ ಕೇವಲ ಕೆಲವು ಕಾಲ ಮಾತ್ರ ವಾಸಿಸುತ್ತಿದ್ದ ಮನೆಗಳ ನಿರ್ಮಾಣದಲ್ಲಿ ಸೊಗಸುಗಾರಿಕೆ, ದೀರ್ಘಕಾಲ ಬಾಳಿಕೆ ಬರುವಂತೆ ಕಟ್ಟುವ ತಂತ್ರದ ಬಗ್ಗೆ ಆಲೋಚನೆಗೆ ಅವಕಾಶ ಮಾಡಿಕೊಳ್ಳಲಿಲ್ಲ. ದಿನವಿಡೀ ಕಾಡು ಮೇಡು ಸುತ್ತುತ್ತಿದ್ದ ಸೋಲಿಗ ಕುಟುಂಬಕ್ಕೆ ಗಾಳಿ ಮಳೆಗಳ ಹೊಡೆತದಿಂದ ಪಾರಾಗಲೂ, ಇರುಳು ಒಂದೆಡೆ ಒರಗಲು ಒಂದು ಸುರಕ್ಷಿತ ಜಾಗ ಬೇಕಿತ್ತು, ಅವರ ಗೃಹ ವಿನ್ಯಾಸಕ್ಕೆ ಹೆಚ್ಚಿನ ಸ್ಥಳದ, ವಸ್ತುಗಳ ಅವಶ್ಯಕತೆ ಬೇಕಿರಲಿಲ್ಲ.

ಸೋಲಿಗರು, ಪೋಡು ಮಾಡಲು ಬೇಕಾದ ಜಾಗವನ್ನು ವಿಶಿಷ್ಟವಾದ ಉಪಾಯಗಳ ಮೂಲಕ ಹುಡುಕಿಕೊಳ್ಳುತ್ತಿದ್ದರು. ವಸತಿ ಸಂಬಂಧದ ನಂಬಿಕೆಗಳಲ್ಲಿ ಇದನ್ನು ಗಮನಿಸಲಾಗಿದೆ. ನೀರಿಗೆ ತುಂಬಾ ಹತ್ತಿರವಿರದ ಜಾಗಗಳಲ್ಲಿ ತಮ್ಮ ಬಂಧುಗಳು ತಮ್ಮ ಬಳಿಯೇ ಇರುವ ಹಾಗೆ ವಸತಿ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಅರಣ್ಯದಲ್ಲಿ ನೀರಿನ ಹತ್ತಿರ ಮನೆ ಮಾಡಿದರೆ ವನ್ಯ ಪ್ರಾಣಿಗಳೂ ನೀರು ಕುಡಿಯಲು ಅಲ್ಲಿಗೆ ಬರುವುದರಿಂದ ತಾವು ಹೀಗೆ ಮಾಡುತ್ತಿದ್ದೆವು ಎನ್ನುತ್ತಾರೆ.[೨೫]

ಸೋಲಿಗರು ತಮ್ಮ ಗುಳ್ಳಿನ ಬಾಗಿಲು ಯಾವ ದಿಕ್ಕಿಗೆ ಇರಬೇಕು ಎಂಬ ಯಾವ ವಾಸ್ತು ಆಧಾರಿತ ಯೋಚನೆಗೆ ಅವಕಾಶ ಇರಲಿಲ್ಲ. ಬಾಗಿಲಿಗೆ ಮರದ ತೊಗಟೆ ಅಥವಾ ಹಲಗೆಯನ್ನು ನಿಲ್ಲಿಸುವರು. ಆ ಬಾಗಿಲಿಗೆ ಬೀಗದ ಅಗತ್ಯವು ಒಂದು ಕಾಲದಲ್ಲಿರಲಿಲ್ಲ. ಕವೆಗೋಲುಗಳಿಗೆ, ಸೀಳುಗಳಿಗೆ ಬಳಸುತ್ತಿದ್ದ ಮರಗಳ ತೊಗಟೆಯನ್ನು ಕಿತ್ತು ಹಾಕುವುದರಿಂದ ಬೇಗ ಗೆದ್ದಲು ಹಿಡಿಯುವುದಿಲ್ಲ. ಸುಮಾರು ಮೂರ್ನಾಲ್ಕು ವರ್ಷ ಬಾಳಿಕೆ ಬರುತ್ತದೆ.

ಗುಳ್ಳಿನ ವ್ಯವಸ್ಥೆಗಳು ಕೂಡಾ ಸೀಮಿತ, ಇದ್ದ ಜಾಗದಲ್ಲೇ ಮಧ್ಯೆ ಒಂದು ಅಡ್ಡಗೋಡೆ ಹಾಕಿ ಅಡುಗೆ ಕೋಣೆಯೆಂದು ಗುರುತಿಸಿದ ಪ್ರತ್ಯೇಕತೆ ಬಿಟ್ಟರೆ ಬೇರೆನೂ ಇಲ್ಲ. ಆ ಅಡ್ಡ ಗೋಡೆಯ ರಚನೆ ತೀರಾ ಇತ್ತೀಚಿನದ್ದು. ಮನೆಯ ಒಂದು ಮೂಲೆಯಲ್ಲೆ ಅಡುಗೆ ಸಿದ್ಧವಾಗುತ್ತದೆ. ನಿಸರ್ಗ ನಿರ್ಮಿತ ಸ್ನಾನದಾಣಗಳು ಇರುತ್ತಿದ್ದುದರಿಂದ ಮನೆಗಳಲ್ಲಿ ಬಚ್ಚಲು ಮನೆಗೆ ಜಾಗವಿಲ್ಲ. ಇದ್ದ ಒಂದೇ ಕೋಣೆಯೇ ಸಾಂದರ್ಭಿಕವಾಗಿ ಅಗತ್ಯಗಳಿಗೆ ತಕ್ಕಂತೆ ಕಾರ್ಯ ನಿರ್ವಹಿಸುತ್ತದೆ. ಮನೆಯ ಒಂದು ಮೂಲೆಯಲ್ಲಿ ನೆಲದಿಂದ ನಾಲ್ಕಡಿ ಎತ್ತರದಲ್ಲಿ ಒಂದು ಅಟ್ಟವನ್ನು ಕಟ್ಟಿಕೊಂಡು, ಬೆಳೆದ ಜೋಳವನ್ನು ಇರಿಸಿ ಒಣಗಿಸಿಕೊಳ್ಳುವ ಕೆಲಸವೂ ಆಗುತ್ತದೆ. ಮೂಲೆಯಲ್ಲಿ ಕಟ್ಟಿಕೊಂಡ ಸಣ್ಣ ಅಟ್ಟವೇ ಪುಟ್ಟೇ, ಕಾಳು, ಬಟ್ಟೆ ಇತ್ಯಾದಿ ಸರ್ವ ಸಾಮಗ್ರಿಗಳನ್ನು ಸೇರಿಸಿಡುವ ಭಂಡಾರವಾಗುತ್ತದೆ.

ಉಡುಗೆ ತೊಡುಗೆಗಳು

ಪ್ರಾಣಿಗಳಿಗೆ ಹೊರಗಿನ ವಾತಾವರಣದ ಒತ್ತಡಗಳನ್ನು ತಡೆಯಲು ಬೇಕಾಗುವ ಜನ್ಮದತ್ತ ಶಕ್ತಿ, ಅನುಕೂಲವಿದೆ. ಆದರೆ ಪ್ರಾಣಿಗಳಂತೆ ಮನುಷ್ಯರಿಗೆ ಶೀತೋಷ್ಣಗಳನ್ನು ಎದುರಿಸಲು ಸಾಧ್ಯವಾಗದಿದ್ದಾಗ ಬಟ್ಟೆಗಳು ಬೇಕಾಗುತ್ತವೆ. ಪರಿಸರದ ಹವಾಮಾನ ವೈಪರೀತ್ಯಗಳ ಒತ್ತಡಗಳನ್ನು ತಡೆಯಲಾರದೆ, ಮೈಮುಚ್ಚುವ ಸಲುವಾಗಿ ಸೊಪ್ಪುಸದೆ ಹೊದ್ದುಕೊಂಡು ಬಳಿಕ ತಾವೇ ಬೇಟೆಯಾಡಿದ ಪ್ರಾಣಿಗಳ ತೊಗಲನ್ನು ಮಾನವರು ತೊಡಲಾರಂಭಿಸಿದರು. "ನಮ್ಮ ಸಾಮಾಜಿಕ ದೃಷ್ಟಿಯಿಂದ ಎಂದರೆ ನಮ್ಮ ಗುಂಪಿನ ಮನುಷ್ಯ ದೇಹದ ವಿವಿಧ ಅಂಗಗಳಿಗೆ ಕೊಟ್ಟ ನೀಚ, ಉಚ್ಚ ಸ್ಥಾನಗಳ ದೆಸೆಯಿಂದ, ಒಂದಿಷ್ಟಾದರೂ ಬಟ್ಟೆ ನಮ್ಮ ದೇಹದ ಕೆಲಕೆಲವು ಭಾಗಗಳನ್ನು ಮುಚ್ಚಲು ಬೇಕೇ ಬೇಕು ಎನಿಸುವಂತೆ ಮಾಡಿದೆ. ಹವೆಯನ್ನು ತಡೆಯಬೇಕಾಗಿದ್ದ ತೊಡುಗೆ, ಮಾನ ಮುಚ್ಚುವ ಕೆಲಸಕ್ಕೆ ಹೋಯಿತು. ಅನಂತರ ಸೊಗಸುಗಾರಿಕೆಯು ಹವಣಿಸಿತು.

ಬಟ್ಟೆ ಕೊಳ್ಳುವ ಚೈತನ್ಯವಿರದಿದ್ದ ಸೋಲಿಗರು ಎಲೆ ವಸ್ತ್ರವನ್ನು ಧರಿಸುತ್ತಿದ್ದರು. ಕಲ್ಲುಬಾಳೆ, ಕಾಡುಬಾಳೆ, ಸೌವ್ವೆ, ಎಲೆ, ತೊಗದೆಲೆಗಳನ್ನು ಬಟ್ಟೆಗಳಾಗಿ ಧರಿಸುವ ಪರಿಸ್ಥಿತಿಯಿತ್ತು. ಮಕ್ಕಳು ಕೌರಿನಾರಿನ ಉಡುದಾರಕಟ್ಟಿ ಸೌವ್ವೆ ಎಲೆ, ತೇಗಿನೆಲೆಗಳನ್ನು ಕಟ್ಟಿಕೊಂಡರೂ ಅವರು ಕುಣಿದಾಟಗಳಲ್ಲಿ ಅದು ಎಲ್ಲೆಲ್ಲೋ ಹರಿದು ಹೋಗುತ್ತಿತ್ತು.

ಸೋಲಿಗರು ಒಂದು ಕಾಲದಲ್ಲಿ ಹಳೆಯ ವಸ್ತುಗಳನ್ನು ಸಂಗ್ರಹ ಮಾಡಲು ಬರುತ್ತಿದ್ದ ಮುಸ್ಲಿಂರನ್ನು ಬೇಡಿ ಹರಿದ ಗೋಣಿ ಚೀಲಗಳನ್ನ ಪಡೆದು ಸುತ್ತಿಕೊಳ್ಳುತ್ತಿದ್ದರು. ಅಂದು ಗೋಣಿಚೀಲ ಸಿಕ್ಕಿದರೆ ಅವರಿಗೆ ಸ್ವರ್ಗ ಸಿಕ್ಕದ ಸಂತೋಷ, ಗೋಣಿ ಚೀಲವನ್ನು ಹರಿದು ಉದ್ದಕ್ಕೆ ಮಾಡಿ, ಸುತ್ತಿಕೊಂಡು ಎದೆಯ ಬಳಿಗಂಟು ಹಾಕಿಕೊಳ್ಳುತ್ತಿದ್ದರು. ಸೆರಗು ಹೊದೆಯುವಷ್ಟು ಉದ್ದವಿರುತ್ತಿರಲಿಲ್ಲ ವಾದ್ದರಿಂದ ಬೆನ್ನ ಹಿಂದಿನಿಂದ ತಂದು ಕಟ್ಟಿಕೊಂಡು ಮೇಲ್ಭಾಗವನ್ನು ಮುಚ್ಚಿಕೊಳ್ಳಬೇಕಾಗಿತ್ತು.

ಸೋಲಿಗರ ಕುಲಾಡಳಿತ

ಸೋಲಿಗರ ಕುಲಾಡಳಿತ ತನ್ನದೇಯಾದ ನೀತಿ ನಡಾವಳಿಯನ್ನು ಹೊಂದಿದೆ. ಸೋಮೇಶ್ವರ ಕೆರೆಯ ಬಳಿಯ ಕುಲಾ ಪಂಚಾಯಿತಿ ಸೇರುವ ಕಟ್ಟೆಮನೆಯಿತ್ತು. ಸೋಲಿಗರಲ್ಲಿ ಆಲರು ಮತ್ತು ಚುಳುಕರ ಕುಲಕ್ಕೆ ಸೇರಿದವರಿಗೆ ಮಾತ್ರ ಯಜಮಾನನ ಪಟ್ಟ. ಅವನ ಜೊತೆಗೆ ಸಹಾಯಕರಾಗಿ ತೆನೆಯರ ಕುಲದಿಂದ ಪಟ್ಟೆಗಾರ, ಬೆಳ್ಳರು ಕುಲದ ಕೋಲುಕಾರ ಮತ್ತು ಸೂರರ ಕುಲದ ಚಲುವಾದಿ ಇರುತ್ತಾರೆ. ಏಳು ಪೋಡಿಗಳಿಗೆ ಒಬ್ಬ ಯಜಮಾನ ಇರುತ್ತಾನೆ ಎಂದು ಗುರುತಿಸಿದ್ದಾರೆ.[೨೬] ಆದರೆ ಪಟ್ಟೆಗಾರ ತೆನೆಯರ ಕುಲಕ್ಕೆ ಸೇರಿದ್ದರೆ, ಯಜಮಾನ ಚಳಕರ ಕುಲಕ್ಕೆ ಸೇರಿರುತ್ತಾನೆ. ಸೂರರ ಕುಲದವನು ಚೆಲುವಾದಿಯಾದರೆ, ಚಳ್ಳರು ಕುಲಕ್ಕೆ ಸೇರಿದವರು ಕೋಲುಕಾರನಾಗುತ್ತಾನೆ. ಹಾಲರು ಕುಲದವನು ದಳವಾದಿಯಾಗುತ್ತಾನೆ. ಪಟ್ಟೆಗಾರ ನ್ಯಾಯ ತೀರ್ಮಾನಗಳ ಸಂದರ್ಭದಲ್ಲಿ ಸೂಕ್ತ ಸಲಹೆಗಳನ್ನು ಕೊಡುತ್ತಾನೆ. ಚುಲವಾದಿ ಯಜಮಾನರ ಕಾರ್ಯದಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಾನೆ. ಸೋಲಿಗರಲ್ಲಿ ಹದಿನಾರು ಪೋಡಿಗೆ ಒಬ್ಬ ಯಜಮಾನ ಇರುತ್ತಾನೆನ್ನುತ್ತಾರೆ.[೨೭] ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಸೋಲಿಗರಿಗೆ ಪ್ರತ್ಯೇಕವಾಗಿ ಯಜಮಾನ, ಪಟ್ಟೆಗಾರರು, ಕೋಲುಕಾರ, ಚಲುವಾದಿ, ದಳವಾದಿಗಳಿದ್ದಾರೆ. ನಾಡವರಲ್ಲಿ ಪಾಟೇಲ ಇದ್ದಂತೆ ಸೋಲಿಗರಲ್ಲಿ ಪಟ್ಟೇಗಾರ ಇರುತ್ತಾನೆ. ಆದರೆ ಈ ವರದಿಯಂತೆ ಯಜಮಾನನ ಪುಟ್ಟ ಅನುವಂಶಿಕವಾಗಿರದೇ, ಮೂರು ವರ್ಷಗಳ ಅವಧಿಗೆಂದು ಯಜಮಾನನ್ನು ಆರಿಸುತ್ತಾರೆ. ಯಜಮಾನನ ಆಯ್ಕೆಗೆ ಆತನ ಗುಣ, ವಯೋಮಿತಿ, ಜನಪ್ರಿಯತೆ, ಅನುಭವ, ಜ್ಞಾನಗಳೆ ಮಾನದಂಡವೆಂದು ಸೋಲಿಗರು ಹೇಳುತ್ತಾರೆ. ಆಯ್ಕೆ ಮಾಡಲು ಸೇರಿದ ಸಭೆಯಲ್ಲಿ ಇಂತಹ ಅರ್ಹತೆ ಇರುವವನ್ನನ್ನು ಮಾತ್ರ ಯಜಮಾನನಾಗಿ ಆಯ್ಕೆ ಮಾಡುತ್ತಾರೆ.

ಸೋಲಿಗರು ಪಂಚಾಯಿತಿ ಸಭೆ ಆರಂಭಿಸುವಾಗ ಮುದ್ರೆಯಿಟ್ಟಿರುವ ಪೆಟ್ಟಿಗೆಗೆ ಪೂಜೆ ಸಲ್ಲಿಸಬೇಕು. ಸೋಲಿಗರು ಶೈವ ಹಾಗೂ ವೈಷ್ಣವ ಸಮನ್ವಯದ ಸಂಕೇತವಾಗಿ ತುಳುಸಿ ಹಾಗೂ ವಿಭೂತಿಯನ್ನು ಬಳಸುತ್ತಾರೆ. ಈ ಪೂಜೆಯ ಖರ್ಚಿಗೆ, ಸಭೆಯ ಖರ್ಚಿಗೆಂದು ಸೋಲಿಗರು ಕಾಣಿಕೆ ಕೊಡುತ್ತಾರೆ. ಸೇರಿದ ಹಣವನ್ನು ಬಳಸುವ ಹೊಣೆ ಯಜಮಾನನಿಗೆ ಸೇರಿದ್ದು, ಸೋಲಿಗ ಯಜಮಾನನಿಗೆ ಮರ್ಯಾದೆಯ ದ್ಯೋತಕವಾಗಿ ಮುದ್ರೆ ಸಲ್ಲುತ್ತದೆ.

ಸೋಲಿಗರು ತಮ್ಮ ಪೋಡಿನ ಸಮಸ್ಯೆಗಳನ್ನು ಸಾಮಾನ್ಯವಾಗಿ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ನ್ಯಾಯಕ್ಕೆ ಕೊಡಬೇಕಾದಾಗ ಕೋಲುಕಾರನಿಗೆ ದೂರು ನೀಡಿದಕ್ಕೆ ಆತ ಚಲುವಾದಿಗೆ ವಿಷಯ ತಿಳಿಸುತ್ತಾನೆ. ಆತ ಯಜಮಾನ ಹಾಗೂ ಪಟ್ಟೆಗಾರರಿಗೆ ವಿಷಯ ತಿಳಿಸಿ ಸಭೆಯ ವ್ಯವಸ್ಥೆ ಮಾಡುತ್ತಾನೆ. ಸಭೆ ನಡೆಯುವ ವಿಚಾರವನ್ನು ಕೋಲುಕಾರ ಸಮೂಹಕ್ಕೆ ಸ್ವತಃ ಹೋಗಿ ಮುಟ್ಟಿಸುವ ಅಥವಾ ಸಾರಿಸುವ ಕಾರ್ಯ ಮಾಡಬೇಕು. ನ್ಯಾಯಾತೀರ್ಮಾನ ಮಾಡಲು ಕಟ್ಟೆಮನೆಯಲ್ಲಿ ಸೇರುತ್ತಾರೆ. ಕೆಲವು ಸಂದರ್ಭದಲ್ಲಿ

ನ್ಯಾಯಾವಿಚಾರಣೆ ಶೀಘ್ರವಾಗಿ ಮುಗಿದರೆ ಕೆಲವು ವೇಳೆ ಶೀಘ್ರವಾಗಿ ಮುಗಿದರೆ ಕೆಲವು ವೇಳೆ ವಿಷಯದ ವ್ಯಾಪ್ತಿಗೆ ತಕ್ಕಂತೆ ಹೆಚ್ಚು ದಿನಗಳೂ ಹಿಡಿಯಬಹುದು. ನ್ಯಾಯದ ಸಭೆಯನ್ನು 'ದೇವಸಭೆ' ಎಂದು ಗೌರವಿಸುವುದರಿಂದ ಸಭೆಗೆ ಬರುವ ಪ್ರತಿಯೊಬ್ಬರೂ ಗೌರವ ತೋರಿಸಬೇಕು. ಸೋಲಿಗರ ನ್ಯಾಯ ವಿಚಾರಗಳಲ್ಲಿ ಕೂಲಂಕುಶವಾಗಿ ವಿಚಾರಣೆ ಮಾಡಿ ತೀರ್ಮಾನ ನೀಡಿದರೂ ಪಂಚಾಯಿತಿಯ ಮುಖಂಡರಲ್ಲಿ ಪರಮಾತ್ಮನೇ ಕೂತು ತೀರ್ಮಾನ ಮಾಡಿಸುತ್ತಾನೆಂಬ ನಿರೀಕ್ಷೆ ನಂಬಿಕೆಗಳಿರುತ್ತದೆ.

ನ್ಯಾಯವಿಚಾರಣೆಯ ಸಂದರ್ಭದಲ್ಲಿ ದೂರು ಕೊಟ್ಟವರು ಮತ್ತು ಆರೋಪಿಗಳು ಇಬ್ಬರು ಹಾಜರಬೇಕು. ನ್ಯಾಯ ಮಾಡುವಾಗ ಅಪರಾಧಿಯಿಂದ ಪ್ರಮಾಣ ಮಾಡಿಸಬೇಕಾದರೆ, ಹಸುವಿನ ಸಗಣಿಯನ್ನು ತಂದು ಪ್ರಮಾಣ ಮಾಡುವವನ ಕೈಯಲ್ಲಿಟ್ಟ ಅದರ ಮೇಲೆ ಹಿಡಿಯಷ್ಟ ಉಪ್ಪನ್ನು ಸುರಿದು "ಇರುಳಲ್ಲಿ ಆಕಾಶದಲ್ಲಿ ಸೀತೆ ನಡೆದ ದಾರಿ ನೋಡಿರುವೆ ಸುಳ್ಳು ಏಳುವುದಿಲ್ಲ" ಎಂದು ಪ್ರಮಾಣ ಮಾಡಿಸುತ್ತಾರೆ. ಕೋಲುಕಾರ ಪ್ರಮಾಣ ಮಾಡುವವರ ಬಳಿ ನಿಂತು "ಆನೆಮಲೆ, ಜೇನುಮಲೆ, ಗುಂಜುಮಲೆ, ಗುಲಗಂಜಿಮಲೆ, ಕಾನುಮಲೆ, ಸಂಕುಮಲೆ, ಪಚ್ಚೆಮಲೆ, ರುದ್ರಾಕ್ಷಿಮಲೆ, ಉಬಾತಿಮಲೆ, ಕೊಂಗುಮಲೆ, ಕೋನಾಲಿ ಮಲೆ, ತುಳುವ ಮಲೆ, ನಾಗಮಲೆ, ನಡುಮಲೆ... ಮುಂತಾಗಿ ಹೇಳುತ್ತಾ ಈ ಎಪ್ಪತ್ತೇಳು ಮಲೆಯಲ್ಲಿರುವ ನಮ್ಮ ಮಹದೇಶ್ವರ ಬಿಳಿಗಿರಿರಂಗಪ್ಪ ಜಡೇಸ್ವಾಮಿ ಆಣೆಗೂ... ಎಂದು ಹೇಳಿ ಪ್ರಮಾಣ ಮಾಡಿಸುತ್ತಾರೆ.[೨೮] ದೇವರು ಹೆಸರನ್ನ ಹೇಳಿದವನು ಸುಳ್ಳಾಡದಿರಲೆಂದು ತಮ್ಮಗೆ ಗೊತ್ತಿರುವ ಎಲ್ಲ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿಸುತ್ತಾರೆ.

ಅಪರಾಧಿ ತಪ್ಪು ಮಾಡಿಲ್ಲ ಎನ್ನುವುದನ್ನು ಪರೀಕ್ಷಿಸಲು ಮಾನದಂಡವಾಗುವ ಕೆಲವು ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. ಐದು ಕುಲಕ್ಕೆ ಐದು ಕಳಸ ಇಟ್ಟು ಹೋಮವನ್ನು ಮಾಡುತ್ತಾರೆ. ಒಂದೊಂದು ಕಳಸವನ್ನು ಹೊತ್ತು, ನೆರೆದ ಸಭಾ ಸಮೂಹವನ್ನು ಬಳಸಿ ಐದೈದು ಸುತ್ತಿನಂತೆ ಒಟ್ಟು ಇಪ್ಪತ್ತೈದು ಸುತ್ತು ಬರಬೇಕು. ಇಪ್ಪತ್ತೈದು(೨೫) ಸುತ್ತು ಬರುವಷ್ಟರಲ್ಲಿ ಅಪರಾಧಿಯಾಗಿದ್ದರೆ ಆತನ ಬಾಯಲ್ಲಿ ನೊರೆ ಬಂದು ಕುಸಿಯುತ್ತಾನೆ. ಅವನು ಹೊತ್ತ ಕಳಸದಿಂದ ನೀರು ಹಾಕಿ ಎಬ್ಬಿಸಿ ಪ್ರಶ್ನಿಸಿದಾಗ ಆತ ತಪ್ಪೊಪ್ಪಿಕೊಳ್ಳುತ್ತಾನೆ. ಸೋಲಿಗರ ಪ್ರಕಾರ ತಪ್ಪು ಮಾಡಿಲ್ಲದ ಮನುಷ್ಯ ಕಳಸ ಹೊತ್ತು ಸುತ್ತುವಾಗ ಬೀಳುವುದಿಲ್ಲ. ಇದೇ ರೀತಿ ಮುದ್ರೆ ಪಟ್ಟಿಗೆಯನ್ನು ತಲೆಯ ಮೇಲೆ ಸುತ್ತಿಸುವುದರ ಮೂಲಕವೂ ಅಪರಾಧ ಪರೀಕ್ಷೆ ಮಾಡುತ್ತಾರೆ. ಅಪರಾಧಿಯ, ಅಪರಾಧದ ಸ್ವರೂಪ ಪ್ರಮಾಣವನ್ನು ಗಮನಿಸಿ ಶಿಕ್ಷೆ ಕೊಡುತ್ತಾರೆ. ಕೆಲವು ವೇಳೆ ಅಪರಾಧಿಯ ಅಪರಾಧ ತೀವ್ರತರವಾಗಿದೆ ಎಂದೂ ಭಾವಿಸಿದರೆ, ನ್ಯಾಯಾ ಸಭೆಯ ತೀರ್ಮಾನಕ್ಕೆ ಮಣಿಯದಿದ್ದರೆ ಬಹಿಷ್ಕಾರದಂತಹ ಶಿಕ್ಷೆಯನ್ನು ವಿಧಿಸಲೂ ಹಿಂಜರಿಯುವುದಿಲ್ಲ. ಆದರೆ ತಮ್ಮಗೆ ವಿಧಿಸಿದ ಶಿಕ್ಷೆ, ದಂಡ ಹೆಚ್ಚೆನಿಸಿದರೆ ಪಂಚಾಯಿತಿಯವರನ್ನು ಪ್ರಾರ್ಥಿಸಿಕೊಂಡು ಕಡಿಮೆ ಮಾಡಿಸಿಕೊಳ್ಳಬಹುದು.

ಯಾರಾದರೂ ಕುಲದ ವಿರುದ್ಧ ನಡೆದು ಕೊಂಡರೆ ಅವರ ಗುಳ್ಳಿಗೆ ಕಕ್ಕೆ ಸೊಪ್ಪು, ಸಿಕ್ಕಿಸಿದರೆ, ಅದು ಅವರಿಗೆ ಎಚ್ಚರಿಕೆ ಕೊಟ್ಟಂತೆ. ಅದಕ್ಕೂ ಅವರು ಜಗ್ಗದಿದ್ದರೆ ಕುಲದಿಂದ ಬಹಿಷ್ಕರಿಸುತ್ತಾರೆ. ಬಹಿಷ್ಕೃತರಾದವರು ತಪ್ಪುಕಾಣಿಕೆ ಕೊಟ್ಟು ಕುಲಕ್ಕೆ ಬರುವುದಿದ್ದರೆ ಒಪ್ಪಿಕೊಂಡು ತಪ್ಪುಕಾಣಿಕೆ ಪಡೆಯುತ್ತಾರೆ. ಆತ ಐದು ಕುಲದ ಸೋಲಿಗರಿಗೆ ಊಟ ಹಾಕಬೇಕು. ಕುಲಕ್ಕೆ ಮತ್ತೇ ಸೇರಿಸಿಕೊಳ್ಳಬೇಕಾದರೆ ಕುಲದವರನ್ನೆಲ್ಲಾ ಸೇರಿಸಿ ಏಳು ತೆರೆ ಹಾರಿಸಿ ಒಳಗೆ ಬಹುದು. ತಲೆ ಬೋಳಿಸಿಕೊಮಡು, ಮಿಂದು ಬಂದವರು, ರಂಗನ ಮುದ್ರೆ ಪೆಟ್ಟಿಗೆಯ ಸಮಕ್ಷಮದಲ್ಲಿ, ಆಲಯದಿಂದ ತಂದ ತುಳಸೀ ಮಾಲೆ ಧರಿಸಿ ತೀರ್ಥ ಹಾಕಿಸಿಕೊಳ್ಳಬೇಕು. ಒಂದೊಂದು ತೆರೆ ದಾಟುವಾಗಲೂ ಸಗಣಿ ನೀರು, ತುಳಸಿ ನೀರು, ನಾಮದ ನೀರು, ಅರಿಸಿನ ನೀರು, ಕುಂಕುಮದ ನೀರು ಮುಂತಾದ ಏಳೂ ಬಣ್ಣದ ನೀರು ಹಾಕಿಸಿಕೊಳ್ಳಬೇಕು. ಪ್ರತಿ ತೆರೆ ದಾಟುವಾಗ "ಜಾತಿ ಒಳ್ಳೆದು, ಜನ ಒಳ್ಳೇದು, ಕುಟಾ ಒಳ್ಳೆಯದು, ಕುಲಾಚಾರ ಒಳ್ಳೆದ್ದು, ನಮ್ಮ ದೇವರ ಲೋಕ ಒಳ್ಳೇದು..." ಎಂದು ಹೇಳುತ್ತಾ ದಾಟಿ ಪ್ರತಿಸಲವು ತೀರ್ಥಸ್ವೀಕರಿಸಿ ಮುಂದಿನ ತೆರೆ ದಾಟಬೇಕು. "ಈ ಲೋಕದ ಒಳ್ಳೇದು" ಎಂದು ಹೇಳಿಕೊಂಡು, ಕೊನೆಯ ತೆರೆ ದಾಟುವಾಗ ಸೇರಿದವರಿಗೆಲ್ಲ "ಸಭೆ ಒಳ್ಳೇದು, ದೇವಸಭೆ ಒಳ್ಳೇದು" ಎಂದು ಕೋಲುಕಾರ ಅವನಿಂದ ಹೇಳಿಸಿ ದಾಟಿಸುತ್ತಾನೆ. ಅವನ ಸ್ಥಿತಿಗತಿಗೆ ತಕ್ಕಂತೆ ತಪ್ಪುದಂಡ ಹಾಕಿದ್ದನ್ನು ಕಟ್ಟಿಕೊಡುತ್ತಾನೆ. ಸೇರಿದ ಜನಕ್ಕೆ ಮಾಂಸಹಾರ ಊಟ ಹಾಕುತ್ತಾನೆ.

ಸೋಲಿಗರ ನಂಬಿಕೆ ಮತ್ತು ಸಂಪ್ರದಾಯಗಳು

ಸಂಸ್ಕೃತಿ ಎನ್ನುವುದು ಮಾನವ ಸಮಾಜವನ್ನು ಆವರಿಸುವ ಒಂದು ವ್ಯವಸ್ಥೆ. ಅದು ಭೌತಿಕ ಮತ್ತು ಅಭೌತಿಕ ಅಂಶಗಳನ್ನಳವಡಿಸಿಕೊಂಡ ಸಮಾಜ ಒಪ್ಪಿಕೊಂಡ ಜೀವನಕ್ರಮ. ಬದುಕಿನ ಪ್ರತಿಯೊಂದನ್ನು ಪ್ರಭಾವಿಸುವ ಅದಕ್ಕೆ ಹಲವು ಆಯಾಮಗಳಿವೆ. ಸಮಾಜ ಒಪ್ಪಿಕೊಂಡ ಜೀವನ ಮೌಲ್ಯ, ರೀತಿ-ರಿವಾಜು, ಸಂಪ್ರದಾಯ, ಆಚರಣೆ ನಂಬಿಕೆಗಳು ಕಲಿಕೆ ಮುಖಾಂತರ ಪೀಳಿಗೆಗಳಿಗೆ ರವಾನೆಯಾಗುತ್ತಾ ಹೋಗುತ್ತದೆ. ಸಂಸ್ಕೃತಿಯನ್ನು ಉಳಿಸಿಕೊಂಡು ಬರಬೇಕಾದ ಕಾಳಜಿ ಪ್ರತಿ ಸಮಾಜಕ್ಕೂ ಇರುತ್ತದೆಯಾದರೂ ಅದು ಚಲನಶೀಲ ಲಕ್ಷಣಗಳನ್ನು ಹೊಂದಿರುವುದರಿಂದ ಪರಿವರ್ತನೆಯ ಪ್ರಭಾವಗಳಿಂದ ಮುಕ್ತವಾಗಿರುವುದಿಲ್ಲ.

ಜನರು ಏನನ್ನು ಮಾಡುತ್ತಾರೋ ಅದುವೇ ಸಂಸ್ಕೃತಿ. ಅದು ವೈಯಕ್ತಿಕ ನೆಲೆಯಲ್ಲಿದ್ದರೂ ಅದನ್ನು ಸಾಮಾಜಿಕರಣಗೊಳಿಸಿ ಸಮಸ್ತರಿಗೆ ಅರ್ಥಪೂರ್ಣವಾಗಿ ಅನ್ವಯವಾಗುವಂತೆ ಸಾಮಾಜಿಕ ನೆಲೆಗಟ್ಟಿನಲ್ಲಿ ನಿಯಂತ್ರಿಸಲು ಇಲ್ಲವೆ ನಿರ್ದೇಶಿಸಲು ನೀತಿ ನಿಯಮಗಳೊಡನೆ ಸಂಸ್ಥೆ ಮತ್ತು ಸಂಪ್ರದಾಯಗಳನ್ನು ಸಜ್ಜುಗೊಳಿಸಿದೆ. ಸಂಸ್ಕೃತಿ ಎನ್ನುವುದು ನಿರ್ದಿಷ್ಟ ಸಮಾಜಕ್ಕೆ ಅನ್ವಯವಾಗುವ ಪ್ರತಿಯೊಂದು ಸಾಮಾನ್ಯ ಹಾಗೂ ಅಸಾಮಾನ್ಯವಾದ ಆಚರಣೆಗಳ ಮೊತ್ತವಾಗಿದೆ. ಸಾಪೇಕ್ಷ ಸ್ವರೂಪದ

ಗುಣವನ್ನು ಹೊಂದಿದ ಸಂಸ್ಕೃತಿಯ ಮೂಲಕ ಸಮಾಜ ತಾನೂ ನಂಬಿದ ಮೌಲ್ಯಗಳನ್ನು ಬಿತ್ತರಿಸಿ ಸ್ಥಿರೀಕರಿಸುತ್ತಾ ಸಾಗುತ್ತದೆ. ಇಂತಹ ಸಂಪ್ರದಾಯ, ಆಚರಣೆ, ನಂಬಿಕೆಗಳ ಕುರಿತ ಸಾಂಸ್ಕೃತಿಕ ಅಧ್ಯಯನ ಪ್ರಮುಖ ಭಾಗವಾಗಿ ಬರುತ್ತದೆ.

ಬಿಳಿಗಿರಿರಂಗನ ಬೆಟ್ಟದ ಜನರಲ್ಲಿ ಕಂಡುಬರುವ ನಂಬಿಕೆ-ಸಂಪ್ರದಾಯ ಆಚರಣೆ ಮುಂತಾದವನ್ನು ಈ ಅಧ್ಯಯನ ಕಕ್ಷೆಗೆ ತಂದು ಪರಿಶೀಲಿಸಲಾಗಿದೆ. ಮಾನವರ ದೈನಂದಿನ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಕಾಲಿಟ್ಟ ನಂಬಿಕೆಗಳು ಪರಂಪರಾಗತ ಆಚರಣೆಯ ಮೂಲಕ ಸಂಪ್ರದಾಯಗಳಾಗುತ್ತದೆ. ನಂಬಿಕೆ, ಆಚರಣೆ, ಸಂಪ್ರದಾಯಗಳು ಸಂಸ್ಕೃತಿಗಳ ಹುಟ್ಟಿಗೆ ಕಾರಣವಾಗುತ್ತವೆ. ನಿರ್ದಿಷ್ಟ ಪ್ರದೇಶವೊಂದರ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸಂಪ್ರದಾಯ, ನಂಬಿಕೆ, ಆಚರಣೆಗಳ ಪ್ರಮುಖ ಪಾತ್ರ ತಿಳಿಸುತ್ತದೆ. ಆಚರಣೆಯಲ್ಲಿರುವ ಬಹುತೇಕ ಸಂಪ್ರದಾಯಗಳ ಸ್ಥಳೀಯಾ ಸಂಸ್ಕೃತಿಯ ಶಿಶುಗಳಾಗಿದ್ದರೂ ಆಚರಿಸುವವರ ಮನಃಸ್ಥಿತಿಗೆ ಸಂಬಂಧಿಸಿದ್ದರಿಂದ ಕ್ಷಿಪ್ರಗತಿಯಲ್ಲಿ ಪ್ರಚುರಗೊಂಡು ಸಾರ್ವತ್ರಿಕವಾಗಿ ಬಿಡುತ್ತವೆ. ಆದ್ದರಿಂದ ಬಿಳಿಗಿರಿರಂಗನ ಬೆಟ್ಟದಲ್ಲಿ ಕಂಡ ನಂಬಿಕೆ, ಸಂಪ್ರಾದಾಯ ಆಚರಣೆಗಳು, ನಿಷೇಧಗಳು ಅದರ ಸಮೀಪದ ಅಥವಾ ದೂರದ ಊರಿನ ಜನರಲ್ಲಿಯೂ ಇರುವ ಸಾಧ್ಯತೆಯುಂಟು.

ನಂಬಿಕೆಗಳು

ಮಾನವನಿಂದ ಸೃಷ್ಟಿಯಾದ ನಂಬಿಕೆಗೂ ಮತ್ತು ಜೀವನಕ್ಕೂ ನಿಕಟವಾದ ಸಂಬಂಧವಿದ್ದು, ಅವೆರಡು ಹಾಸುಹೊಕ್ಕಾಗಿ ಸೇರಿವೆ. ನಿಸರ್ಗದ ವ್ಯಾಪಾರಗಳಲ್ಲಿ ಮಾನವ ಕಲ್ಪಿಸುವ ಭಾವನೆಗಳಾಗಿರುವ ನಂಬಿಕೆಗಳ ನೆಲೆಗೆ ಎರಡು ಪಾತಳಿಗಳಿವೆ. ವಸ್ತು ಅಥವಾ ಸಂಗಾತಿ ಹಾಗೂ ನಂಬುವ ಮನಸ್ಸು, ಇವೆರಡು ಪರಸ್ಪರ ಪೂರಕವಾಗಿ ಕೆಲಸ ಮಾಡಿದಾಗ ನಂಬಿಕೆಯ ಮಾತು ಅಥವಾ ಕ್ರಿಯೆಯ ರೂಪ ತಾಳುತ್ತದೆ. ನಂಬಿಕೆ ಎನ್ನುವುದು ಸಮೃದ್ಧ ಹಾಗೂ ಸಮಗ್ರ ಜೀವನಾನುಭವದ ಉತ್ಪನ್ನವಾಗಿ ಪರಂಪರಾಗತವಾಗಿ ಸಮ್ಮತಿ ಪಡೆದು ಒಂದು ಪರಿಕಲ್ಪನೆ, ನಂಬಿಕೆಗಳಿಲ್ಲದ ದೇಶವಿಲ್ಲ, ಭಾಷೆಯಿಲ್ಲ, ಮಾನವರ ಪ್ರತಿಯೊಂದು ಕ್ರಿಯೆ ಮತ್ತು ಆಲೋಚನೆಯ ಹಿಂದೆ ಬಲವಾದ ನಂಬಿಕೆಯೊಂದರ ಪ್ರಭಾವ ಅಥವಾ ಪ್ರೇರಣೆ ಇದ್ದೇ ಇರುತ್ತದೆ.

ಪ್ರತಿಯೊಬ್ಬ ಮನುಷ್ಯನ ಜೀವನವು ನಂಬಿಕೆಗಳ ಒಂದು ವ್ಯವಸ್ಥೆಯನ್ನು ಆಧರಿಸಿ ವಿನ್ಯಾಸಗೊಂಡಿರುತ್ತದೆ. ಹಾಗೆಯೇ ಒಂದು ಸಂಸ್ಕೃತಿ ವಿನ್ಯಾಸವು, ಆ ಸಂಸ್ಕೃತಿ ಹುಟ್ಟು ಹಾಕಿಕೊಂಡಿರುವ ಆಧಾರದ ಮೇಲೆ ರೂಪುಗೊಂಡಿರುತ್ತದೆ. ಸಂಸ್ಕೃತಿಯ ಅನನ್ಯತೆಗೆ ಕಾರಣವಾಗುವ ಜನಾಂಗದ ವರ್ತನೆ, ಭಾಷೆ, ಉಡುಪು, ಆಹಾರ ಪದ್ಧತಿಗಳು, ವಿಧಿಗಳು ಮುಂತಾದ ಚಟುವಟಿಕೆಗಳ ಹಿಂದೆ ನಂಬಿಕೆಯ ಜಾಲ ಕಾರ್ಯಪ್ರವೃತ್ತವಾಗಿರುತ್ತದೆ.[೫೯] ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಆಚರಣಾ ಮೌಲ್ಯಗಳು

ಕಟ್ಟುಪಾಡುಗಳು ಬೇರೆಯಾಗಿವೆ. ಹಲವು ಸಂಸ್ಕೃತಿಗಳ ನಿರ್ಮಾಣಕ್ಕೆ ನಂಬಿಕೆಗಳ ವ್ಯತ್ಯಾಸವೂ ಒಂದು ಕಾರಣ. ಪ್ರತಿಯೊಂದು ಸಂಸ್ಕೃತಿಯು ತನ್ನ ಉಳಿವಿಗಾಗಿ ಕೆಲವೊಂದು ನಂಬಿಕೆಗಳನ್ನು ಇಟ್ಟುಕೊಂಡಿವೆ.

ಸಂಸ್ಕೃತಿಯ ಅಧ್ಯಯನದಲ್ಲಿ ನಂಬಿಕೆಗಳು ಪ್ರಾಥಮಿಕ ಆಕರಗಳಾಗುತ್ತದೆ. ನಂಬಿಕೆಯ ರಚನೆಯಲ್ಲಿ ಒಂದು ಮೌಲ್ಯ ವ್ಯವಸ್ಥೆ ಸಂಕೇತಿಸುತ್ತಿರುತ್ತದೆ. ನಂಬಿಕೆಗಳು ನಿರಂತರತೆಯನ್ನು ಪಡೆದಿದ್ದರೂ ಮಾನವರ ಬದುಕು ಪಲ್ಲಟಗಳಿಗೆ ಗುರಿಯಾದ ಹಾಗೆ ಹೊಸ ಪರಿಕಲ್ಪನೆ, ಆಚರಣೆ ಬಂದಂತೆ ಪ್ರತಿಪಾದಿಸುವ ಸಂಸ್ಕೃತಿಯ ಮೌಲ್ಯಗಳು ಬದಲಾಗಿವೆ. ನಂಬಿಕೆಗಳು ಸನ್ನಿವೇಶಕ್ಕೆ ತಕ್ಕಂತೆ ಪುನರಚನೆಗಳಾಗಿವೆ. ಕೆಲವೊಮ್ಮೆ ನಂಬಿಕೆಗಳ ನಡುವಿನ ಬಿಕ್ಕಟ್ಟು ಹೊಸ ನಂಬಿಕೆಯ ಹುಟ್ಟಿಗೆ ಕಾರಣವಾಗಿರುತ್ತದೆ.

ಮಾನವ ಬದುಕಿನ ವಿಕಾಸದ ಹಾದಿಯಲ್ಲಿ ಅವನ ಬದುಕಿನ ಮೊದಲ ಅಧ್ಯಯನದಿಂದ ಆರಂಭವಾದ ನಂಬಿಕೆಗಳ ಚಲನೆ, ಇಂದಿನ ಅತ್ಯಾಧುನಿಕ ಜಗತ್ತಿನವರೆಗೂ ನಿರಂತರವಾಗಿ ಸಾಗಿ ಬಂದಿವೆ. ಪ್ರೀತಿವಿಶ್ವಾಸದ ನೆಲೆಯಿಂದ ಹಿಡಿದು, ಅತಿಮಾನುಷ ಶಕ್ತಿಯಲ್ಲಿ ವಿಶ್ವಾಸವಿಡುವ ತನಕ, ಎಲ್ಲ ಆಯಾಮಗಳಲ್ಲೂ ಅವನ ಜೊತೆಗೂಡಿ ಬಂದಿವೆ. ಧಾರ್ಮಿಕ ನಂಬಿಕೆಗಳು ವಿಧಿನಿಷೇದಗಳಾದರೆ, ಸಾಮಾಜಿಕ ನಂಬಿಕೆಗಳು ಸಮೂಹದ ನಡಾವಳಿಗಳಾಗುತ್ತವೆ. ರಾಜಕೀಯ ನಂಬಿಕೆಗಳು ಕಾನೂನು ಕಟ್ಟಳೆಗಳಾದರೆ, ಆರ್ಥಿಕ ನಂಬಿಕೆಗಳು ಸಮಾಜದ ವಾಣಿಜ್ಯ ವ್ಯವಹಾರಗಳನ್ನು ನಿರ್ವಹಿಸುತ್ತವೆ. ಅಗೋಚರವಾದ ಭಾವನಾತ್ಮಕ ವೈಚಾರಿಕ ಮತ್ತು ವೈಜ್ಞಾನಿಕ ನಂಬಿಕೆಗಳ ಜೊತೆಗೆ ಮೌಢ್ಯ ಮುಗ್ಧತೆಗಳನ್ನು ಅಧಾರವಾಗಿರಿಸಿಕೊಂಡು ಅಸ್ತಿತ್ವದಲ್ಲಿರುವ ಮೂಢನಂಬಿಕೆಗಳು ಸಾಕಷ್ಟಿವೆ. ಕೆಲವು ನಂಬಿಕೆಗಳಿಗೆ ಧಾರ್ಮಿಕ ನೆಲೆಗಳನ್ನು ನೀಡಿ ಅವುಗಳು ನಮ್ಮ ಧರ್ಮದ ಆಚಾರ, ವಿಚಾರ ಮತ್ತು ಸಂಪ್ರದಾಯಗಳೆಂದು ಗೌರವಿಸಿ ಆಚರಿಸುತ್ತಾರೆ.

ನಡೆದಾಡುವ ನಾಣ್ಯಗಳಾದ ನಂಬಿಕೆ, ಬೆಟ್ಟವನ್ನೇ ಕದಲಿಸಬಲ್ಲ ಮಾನಸಿಕ ಗಟ್ಟಿತನವನ್ನು ಕೊಡುವ ಅಭಯ ಅಥವಾ ನಚ್ಚಿಕೆಯ ಒಂದು ಮಾನಸಿಕ ಸ್ಥಿತಿ. ನಂಬಿಕೆಯು ಅವಲಂಬನೆಯ ರೂಪವಾದರೆ, ಆಚರಣೆ, ಕ್ರಿಯಾರೂಪ ಮನಸ್ಸುಗಳು ಎಷ್ಟೇ ಬುದ್ಧಿವಂತವಾಗಿರಲಿ ಅಥವಾ ಬಿಡಲಿ ಅನೇಕ ವೇಳೆ ಇವುಗಳನ್ನು ಸ್ವಾಗತಿಸಿ ತಮ್ಮದನ್ನಾಗಿ ಮಾಡಿಕೊಳ್ಳಲು ತುದಿಗಾಲಲ್ಲಿ ಸಿದ್ಧವಾಗಿರುತ್ತವೆ. ಬಿಳಿಗಿರಿರಂಗನಬೆಟ್ಟದ ಜನರ ಜೀವನದಲ್ಲಿ ಅನೇಕ ವಿಚಾರಗಳನ್ನು ಕುರಿತು ಹೆಜ್ಜೆ ಹೆಜ್ಜೆಗೂ ನಂಬಿಕೆಗಳ ಜಾಲವೇ ನೇಯ್ದುಕೊಂಡಿವೆ. ನಂಬಿಕೆಗಳು ಜೀವನದ ಎಲ್ಲ ಎಲ್ಲೆಗಳನ್ನು ಸ್ಪರ್ಶಿಸಬಲ್ಲದು ಎನ್ನುವುದಕ್ಕೆ ಅವರು ತಮ್ಮ ಬದುಕಿನ ಪ್ರತಿಕ್ಷಣದಲ್ಲೂ ನಂಬಿಕೆಗಳ ನೆರಳಿನಲ್ಲಿ ಬದುಕುತ್ತಿರುವುದೇ ಸಾಕ್ಷಿ. ಬಿಳಿಗಿರಿ ರಂಗನ ಬೆಟ್ಟದ ಸುತ್ತಮುತ್ತ ವಾಸವಾಗಿರುವ ಜನಾಂಗಗಳಲ್ಲಿ ಸೋಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಂಗನಾಥನನ್ನು ಆರಾಧ್ಯ ದೇವವನ್ನಾಗಿ ಮಾಡಿಕೊಂಡಿರುವ ಅವರು ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಅನೇಕ ನಂಬಿಕೆ, ಸಂಪ್ರದಾಯಗಳಿಗೆ ಒಳಾಗಾಗಿರುವುದನ್ನು ಕಾಣುತ್ತೇವೆ.

೧. ಮಕ್ಕಳನ್ನು ಕುರಿತು ನಂಬಿಕೆಗಳು : ಮಕ್ಕಳ ಫಲ ಬಯಸುವವರು ರಂಗನಾಥಸ್ವಾಮಿಯನ್ನು ಪ್ರಾರ್ಥಿಸಿ, ದೇವಸ್ಥಾನದ ಬಳಿಯ ಮರಗಳಿಗೆ ಪುಟ್ಟ ತೊಟ್ಟಿಲುಗಳನ್ನು ಕಟ್ಟಿ ಅದರೊಳಗೆ ದೇವರ ಬಾಲರೂಪದ ಪ್ರತೀಕವಾಗಿ ಕಲ್ಲುಗಳನ್ನಿಟ್ಟು ತೂಗುತ್ತಾರೆ. ತೊಟ್ಟಿಲನ್ನು ತೂಗಿದಂತೆ ಮಕ್ಕಳನ್ನು ಹೆತ್ತು ತೊಟ್ಟಿಲು ತೂಗುವ ಭಾಗ್ಯ ತಮಗೂ ಲಭಿಸಲೆಂಬ ಸೌಮ್ಯತತ್ವದ ನಂಬಿಕೆಯಾಗಿದೆ.

ಮಗು ಹುಟ್ಟಿದ ತಕ್ಷಣ ಅದರ ತುಟಿಗೆ ರಕ್ತ ತಾಗಿದರೆ, ಮಗು ಬೆಳೆದಂತೆ ಅತಿ ಕೋಪಿಷ್ಠ ಸ್ವಭಾವ ಪಡೆಯುತ್ತದೆ ಎನ್ನುವ ಸೋಲಿಗರು ರಕ್ತ ತಾಗದಂತೆ ಎಚ್ಚರಿಕೆವಹಿಸುತ್ತಾರೆ. ರಕ್ತವರ್ಣ ಮತ್ತು ಕೋಪಗಳನ್ನು ಒಂದೇ ನೆಲೆಯಲ್ಲಿ ಸ್ವೀಕರಿಸಿದ ಕಾರಣದಿಂದ ಈ ನಂಬಿಕೆ ಹುಟ್ಟಿದೆ.

ಗಂಡು ಮಕ್ಕಳಿಗೆ ಮೂರು ವರ್ಷ, ಹೆಣ್ಣು ಮಕ್ಕಳಿಗೆ ಮೂರು ತಿಂಗಳ ಕಾಲ ಹವಳ, ಕಾಲುಮಣಿ, ಕರಿಮಣಿ, ಸೇರಿಸುವ ಕಕ್ಷೆಯನ್ನು ಕೈಗೆ ಕಟ್ಟುತ್ತಾರೆ. ಹೆಣ್ಣು ಮಕ್ಕಳಿಗೆ ಸ್ವಲ್ಪಕಾಲ ಕಟ್ಟಿದರೂ ಅವರಿಗಿಂತ ಗಂಡುಮಕ್ಕಳಿಗೆ ದೀರ್ಘಕಾಲ ಕಟ್ಟಿ ಕೈ ಚೆನ್ನಾಗಿ ಹುರಿಗಟ್ಟಲೆಂದು ಬಯಸುವುದರ ಜೊತೆಗೆ ತಮ್ಮ ಗಂಡುಮಕ್ಕಳಿಗೆ ಯಾರ ದೃಷ್ಟಿಯೂ ತಾಗದಿರಲೆಂಬ ಮುನ್ನೆಚ್ಚರಿಕೆಯೂ ಸೇರಿವೆ.

೨. ಗರ್ಭಿಣಿ-ಬಾಣಂತಿ ಸಂಬಂಧಿತ ನಂಬಿಕೆಗಳು : ಗರ್ಭಿಣಿ ಹೆಂಗಸು ಹೊಸಬಟ್ಟೆ, ಹೊಸ ಒಡವೆ ಹಾಕುವಂತಿಲ್ಲ. ಸ್ವಲ್ಪ ಹೊತ್ತಾದರೂ ಬೇರೆಯವರು ಧರಿಸಿದ ಬಳಿಕ ಧರಿಸಿದರೆ ಆಗ ದೋಷವಿರುವುದಿಲ್ಲ ಎಂಬ ನಂಬಿಕೆಯಿದೆ. ಹುಟ್ಟುವ ಮಗುವಿಗೆ ಕೆಂಬಾರ ಆಗದಿರಲೆಂದು ಗರ್ಭಿಣಿ ಸ್ತ್ರೀಯರಿಗೆ ಹಸಿರ ಔಷಧಿಯನ್ನು ಕುಡಿಸುವರು. ಆದರೆ ಅದನ್ನು ಗುರುವಾರ ಅಥವಾ ಭಾನುವಾರ ಮಾತ್ರ ಕುಡಿಸಬೇಕೆನ್ನುತ್ತಾರೆ. ಮಗು ಚೆನ್ನಾಗಿ ಬೆಳೆಯಲೆಂದು ಗರ್ಭಿಣಿಯರು ಹುತ್ತದ ಮಣ್ಣು, ಕೆಮ್ಮಣ್ಣನ್ನು ತಿನ್ನುವರು. ತುಂಬಾ ಹೊತ್ತು ಹೊರಗೆ ಹೋಗಿದ್ದ ಬಾಣಂತಿ ಮಗುವಿಗೆ ನೇರವಾಗಿ ಹಾಲು ಕುಡಿಸುವಂತಿಲ್ಲ. ಹಾಲುಣಿಸುವ ಮುನ್ನ ಮೊದಲು ಸ್ತನಗಳಿಗೆ ಕಬ್ಬಿಣ ಹಾಗೂ ಪೊರಕೆಯನ್ನು ತಾಗಿಸಿ, ಮೂರು ಬಾರಿ ನಿವಾಳಿಸಿ ಸ್ವಲ್ಪ ಹಾಲು ಕರೆದು ಗೋಡೆಗೆ ಚೆಲ್ಲಿದ ಬಳಿಕವೇ ಹಾಲು ಕುಡಿಸಬೇಕು ಎನ್ನುತ್ತಾರೆ. ಕಬ್ಬಿಣದ ಶಕ್ತಿಯ ಬಗ್ಗೆ ವಿಶ್ವಾಸವಿರಿಸಿದ ಭಾರತೀಯ ಸಮಾಜ ಕಬ್ಬಿಣಕ್ಕೆ ಅಗಾಧವಾದ ಮೌಲ್ಯವನ್ನು ಕಲ್ಪಿಸಿದೆ. ಕೆಟ್ಟ ಕಣ್ಣು, ದುಷ್ಟ ಶಕ್ತಿ ಮುಂತಾದ ಭಯಗಳನ್ನೊಡ್ಡಿ ಬಾಣಂತಿ ಮನೆಯಿಂದ ಹೊರಗೆ ಹೋಗದಂತೆ ನಿಯಂತ್ರಿಸಿದ ನಂಬಿಕೆಯಿದು. ಬಾಣಂತನದ ವಿಶ್ರಾಂತಿಯನ್ನು ೫ ದಿನಗಳಿಗಿಂತ ವಿಸ್ತರಿಸಲಾಗದ ಅಸಹಾಯಕ ಆರ್ಥಿಕ ಪರಿಸ್ಥಿತಿ ಇರುವ ಸೋಲಿಗರ ಸಮಾಜ ೫ ದಿನದ ತರುವಾಯ ತನ್ನ ನಿತ್ಯದ ಕೆಲಸಗಳಿಗೆ ಮರುಳುವಂತೆ ಮಾಡಿದೆ.

೩. ಮುಟ್ಟು ಸಂಬಂಧಿತ ನಂಬಿಕೆಗಳು : ಭಾರತೀಯ ಸಂಸ್ಕೃತಿ ಎಂದರೆ ಮಹಿಳೆಯರ ಮೇಲೆ ಹಲವು ವಿಧದ ನಿಯಂತ್ರಣವನ್ನು ಹೇರುವುದೇ ಆಗಿದೆ. ಪ್ರಕೃತಿ ನಿಯಮವನ್ನು ಹೆಣ್ಣಿನ ಶೋಷಣೆಗೆ ಬಳಸಿಕೊಂಡ

ಸಂಸ್ಕೃತಿ ಭಾರತೀಯರದು. ಮುಟ್ಟಿನ ಮೂರು ದಿನಗಳೂ ಆಕೆ ಅಸ್ಪಶ್ಯಳು. ವಿವಾಹಕ್ಕೆ ಮೊದಲೇ ಮೈನೆರೆದರೆ ಕಣ್ಣುಕಟ್ಟಿ ಕಾಡಿನಲ್ಲಿ ಬಿಡುವ ಸಂಪ್ರದಾಯವೂ ವೈದಿಕ ಪರಂಪರೆಯಲ್ಲಿತ್ತು.[೩೦] ಭಾರತದ ಬಹುತೇಕ ಸಮುದಾಯಗಳಿಗೆ ಹೆಣ್ಣು ಮಕ್ಕಳು ಪ್ರಾಯಕ್ಕೆ ಬರುವಂಥದ್ದನ್ನು ಮಡಿ ಮೈಲಿಗೆಯ ಪರಿಕಲ್ಪನೆಯಲ್ಲಿಯೇ ಸ್ವೀಕರಿಸುತ್ತಾರೆ. ಆಕೆಯ ರಸಸ್ರಾವದ ಅವಧಿಯನ್ನು ಮೈಲಿಗೆಯ ದಿನಗಳೆಂದು ಪರಿಗಣಿಸಿ, ಆ ದಿನಗಳಂದು ಆಕೆಯ ಓಡಾಟವನ್ನು ನಿಯಂತ್ರಿಸಿ, ಪ್ರತ್ಯೇಕವಾಗಿ ಇರುವಂತೆ ಎಚ್ಚರಿಸಿತು. ಆ ಅವಧಿಯಲ್ಲಿ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿಷೇಧಿಸಲಾಗಿದೆ. ಒಂದು ಸಮುದಾಯ ಹಿಂದುಳಿದಷ್ಟು ಸ್ತ್ರೀಯರ ಮುಟ್ಟು, ಪ್ರಸವದ ಸಂಗತಿಗಳು ಭೀಕರವಾಗಿ ಕಂಡು ಆ ಕಾರಣದಿಂದ ಮೈಲಿಗೆ, ಸೂತಕ ಮುಂತಾದ ನಂಬಿಕೆಗಳು ಮತ್ತಷ್ಟು ಉಗ್ರವಾಗುತ್ತಾ ಹೋಗುತ್ತವೆ.

ನಿಸರ್ಗಾರಾಧಕರಾಗಿರುವ ಸೋಲಿಗರು ದೊಡ್ಡ ಸಂಪಿಗೆ ಮರವನ್ನು ಅತ್ಯಂತ ಪವಿತ್ರವೆಂದು ಭಾವಿಸಿದ್ದಾರೆ. ಸಂಪ್ರಾದಾಯಸ್ಥ ಮನಸ್ಸುಗಳು ಸೋಲಿಗೇತರರು ಈ ಪವಿತ್ರವಾದ ಮರದಲ್ಲಿ ದೇವತೆಗಳು ನೆಲೆಸಿದ್ದಾರೆಂದು ಮುಟ್ಟಿದವರು ಮರವನ್ನು ಮುಟ್ಟಿದರೆ ಸರ್ಪ ಕಾಣಿಸಿಕೊಳ್ಳುತ್ತದೆಂದು ಭಯಪಡಿಸಿ ನಿಷೇಧಿಸಿದ್ದಾರೆ. ಮುಟ್ಟಾದ ಹೆಂಗಸರು ಬೆಳೆಯಿರುವ ಜಮೀನಿಗೆ ಕಾಲಿಟ್ಟರೆ ಭೂತಾಯಿ ಸಿಟ್ಟಾಗಿ ಬೆಳೆ ಹಾಳು ಮಾಡುತ್ತಾಳೆ. ಆನೆಗಳು ಬೆಳೆಯನ್ನು ನಾಶಪಡಿಸುತ್ತವೆಂದು ಹೆದರುವ ಸೋಲಿಗರು ಮುಟ್ಟಿನ ದಿನಗಳಲ್ಲಿ ಹೆಂಗಸರನ್ನು ಜಮೀನಿಗೆ ಬರದಂತೆ ನಿಷೇಧಿಸುತ್ತಾರೆ. ಕೃಷಿಯನ್ನು ಜೀವನ ವಿಧಾನವನ್ನಾಗಿ ತಡವಾಗಿ ಸ್ವೀಕರಿಸಿದ ಸೋಲಿಗರು ಇತರರನ್ನು ನೋಡಿ ಅವರ ರೀತಿರೀವಾಜುಗಳನ್ನು ಅನುಕರಿಸಿದ ಫಲವಾಗಿ ಇಂತಹ ನಿಯಮ ನಿರ್ಬಂಧಗಳು ಆಚರಣೆಯಲ್ಲಿವೆ.

೪. ವಾರ ಸಮಯಗಳ ಸಂಬಂಧಿತ ನಂಬಿಕೆಗಳು : ವಾರದ ದಿನಗಳಲ್ಲಿ ಕೆಲವನ್ನು ಶುಭ, ಇನ್ನುಳಿದನ್ನು ಅಶುಭ ಎಂದು ಸಂಪ್ರದಾಯಸ್ಥ ಮನಸ್ಸು ತನ್ನದಾದ ಮಾನದಂಡದಲ್ಲಿ ಗುರುತಿಸಿಕೊಂಡಿವೆ. ಶುಭದಿನಕ್ಕೆ ಕೆಲವು ನಿಷೇಧಗಳಿರುವಂತೆ, ಅಶುಭ ದಿನಕ್ಕೂ ಕೆಲವು ನಿಷೇಧಗಳಿವೆ. ಮಂಗಳವಾರ ಮಗಳು ಮತ್ತು ಶುಕ್ರವಾರ ಸೊಸೆಯನ್ನು ಊರಿಗೆ ಕಳುಹಿಸಬಾರದು. ಮನೆಮಗಳು ಮಂಗಳ ಸ್ವರೂಪಿ ಎನ್ನುವ ನಂಬಿಕೆಯಿಂದಾಗಿ ಆಕೆಯನ್ನು ಮಂಗಳವಾರದ ದಿನ ಕಳುಹಿಸಿ ಕೊಡಲು ಒಪ್ಪರು. ಮನೆಯ ಮಹಾಲಕ್ಷ್ಮಿ ಎಂದು ಮನೆಯ ಸೊಸೆಯನ್ನು ಪರಿಗಣಿಸುವುದರಿಂದ ಆಕೆಯನ್ನು ಸಂಪತ್ತಿನ ಸಂಕೇತವಾದ ಶುಕ್ರವಾರದಂದು ಕಳುಹಿಸಿಕೊಟ್ಟರೆ ಆಕೆಯ ಜೊತೆಯಲ್ಲಿ ಸಂಪತ್ತು ಹೊರಟು ಹೋದರೆಂಬ ಆತಂಕವೇ ಇಂತಹ ನಂಬಿಕೆಯನ್ನು ಸೃಷ್ಟಿಸಿದೆ.[೩೧]

ಸೋಲಿಗರು ಶುಕ್ರವಾರದ ಬಗ್ಗೆ ವಿಶೇಷ ಅಕ್ಕರೆ ತೋರಿಸಿದರೂ ಅದು ಲಕ್ಷ್ಮಿ ಸಂಬಂಧಿಯಾದ ವಾರವಾಗಿಯಂತೂ ಅಲ್ಲ. ಅವರ ಜೀವನದಲ್ಲಿ ದುಡ್ಡು ಪ್ರಭಾವ ಬೀರುತ್ತಿರುವುದನ್ನು ಅಲ್ಲಗಳೆಯಲಾಗದು. ಹಿಂದುಗಳಲ್ಲಿರುವ ಬಹುಪಾಲು ಸ್ತ್ರೀ ದೇವತೆಗಳ ಅಸ್ತಿತ್ವ ಸೋಲಿಗರಲಿಲ್ಲ.

೫. ದಾನ ಸಂಬಂಧಿತ ನಂಬಿಕೆಗಳು : ಅಗತ್ಯವಿದ್ದು ಕೇಳಿದವರಿಗೆ ತಮ್ಮ ಬಳಿ ಇದ್ದು ಇಲ್ಲವೆಂದರೆ, ದಾನಧರ್ಮ ಮಾಡದಿದ್ದರೆ, ಶಿಕ್ಷೆಗಳನ್ನು ಅನುಭವಿಸ ಬೇಕಾಗುತ್ತದೆಂಬ ನಂಬಿಕೆ ಸಾರ್ವತ್ರಿಕವಾದದ್ದು. ಬೆಟ್ಟದ ಸೋಲಿಗರ ಪ್ರಕಾರ ದಾನ ಮಾಡದವರನ್ನು ಇದ್ದೂ ಇಲ್ಲವೆಂದವರನ್ನು ಬ್ರಹ್ಮ ಶಿಕ್ಷಿಸುತ್ತಾನೆ. ಒಬ್ಬರಿಗೊಬ್ಬರು ಕಷ್ಟರದಲ್ಲಿ ಸಹಾಯ ಮಾಡುವ, ಪಡೆಯುವ ಸಹಕಾರ ಮನೋಭಾವ ಸೋಲಿಗರಿಗೆ, ಬ್ರಹ್ಮದ ಪರಿಕಲ್ಪನೆ ಮೊದಲಿಗೆ ಇರಲಿಲ್ಲ. ದಾನ ನೀಡುವುದು ಶೇಷ್ಠವೆಂದು ತಿಳಿಸಲು, ಅನಂತರದಲ್ಲಿ ಬ್ರಹ್ಮನನ್ನು ಜೊತೆಗೆ ಸೇರಿಸಿಕೊಂಡ ನಂಬಿಕೆಯಿದು. 'ನಾ ನಿನಗಿದ್ದರೆ ನೀ ನನಗೆ" ಎಂಬ ಪರಸ್ಪರ ಸಹಕಾರದ ಮನೋಭಾವದ ಸೋಲಿಗರರಲ್ಲಿ ಮೊದಲಿನಿಂದಲೂ ಒಬ್ಬರು ಇನ್ನೊಬ್ಬರಿಗೆ ಸಮಯ ಸಂದರ್ಭಗಳಲ್ಲಿ ಆಗ ಬೇಕೆಂಬ ಮನೋಧರ್ಮವಿದೆ. "ಇಕ್ಕನಾರದ ಕೈ ಎಂಜಲು" ಎನ್ನುವವರನ್ನು ಇಂತಹವರೂ ಇದ್ದಾರಾ ಎಂದು ತಿರಸ್ಕಾರದಿಂದ ನೋಡುತ್ತಾರೆ.

ತಮ್ಮ ಮನೆಯಲ್ಲಿ ಪದಾರ್ಥಗಳಿದ್ದೂ ಕೊಡಲು ಹಿಂದೇಟು ಹಾಕುವ ಜಿಪುಣರಿಗೆ, ಪ್ರತಿಫಲವಾಗಿ ಶಾರೀರಿಕ ತೊಂದರೆಯನ್ನು ಅನುಭವಿಸಬೇಕೆಂದು ಹೆದರಿಸಿದ ನಂಬಿಕೆಗಳುಂಟು. ಎಣ್ಣೆಯಿಲ್ಲ ಎಂದರೆ ಕಣ್ಣಲ್ಲಿ ನೀರು ಸುರಿಯುತ್ತದೆ. ಉಪ್ಪು ಇಲ್ಲವೆಂದರೆ ಕಿವಿಯಲ್ಲಿ ಕಲ್ಲಿನಂತೆ ಗುಗ್ಗೆ ಬರುತ್ತದೆಂಬ ನಂಬಿಕೆಯ ಅಸ್ತ್ರಗಳು ಕೊಡಲು ನಿರಾಕರಿಸುವ ಜಿಪುಣರನ್ನು ಭಯದಲ್ಲಿಡುತ್ತವೆ.

೬. ವಸತಿ ವಾಸ್ತು ಕುರಿತ ನಂಬಿಕೆಗಳು : ನೂರಾರು ವರ್ಷಗಳ ಕಾಲ ಅಲೆಮಾರಿಗಳಾಗಿ ಕಾಡಿನೊಳಗೆ ಸಂಚರಿಸುತ್ತಿದ್ದ ಸೋಲಿಗರು, ಕೃಷಿಯನ್ನು ಅವಲಂಬಿಸಿದ ನಂತರದ ಅರೆ ಅಲೆಮಾರಿತನದ ಜೀವನವನ್ನು ರೂಪಿಸಿಕೊಂಡರು. ಪೋಡುಗಳನ್ನು ನಿರ್ಮಿಸಿಕೊಂಡು ಕೊನೆಯ ಪಕ್ಷ ಮೂರ್ನಾಲ್ಕು ವರ್ಷಗಳಾದರೂ ಒಂದೆಡೆ ಇದ್ದೂ ವಾಸಿಸತೊಡಗಿದರು. ಪೋಡು ಸೋಡಾಯಿತೆಂದು ವಾಸದ ನೆಲೆಗಳನ್ನು ಬದಲಾಯಿಸುವಾಗ ಮುಂದಿನ ವಾಸ್ತವ್ಯಕ್ಕೆ ಅಗತ್ಯವಾದ ಸೂಕ್ತ ಜಾಗ ಹುಡುಕಿ ಕೊಳ್ಳಲು ತಮ್ಮದೇಯಾದ ವಿಧಿವಿಧಾನ, ಮಾನದಂಡಗಳನ್ನು ಅನುಸರಿಸುತ್ತಿದ್ದರು.

"ನಂಟರಿಗೆ ಹತ್ತಿರವಾಗದು ನೀರಿಗೆ ದೂರವಾಗಿರು" ಎಂಬಂತೆ ಕೆರೆಗೆ ಹತ್ತಿರವಿರುವ ಸ್ಥಳವನ್ನು ಪೋಡಿಗಾಗಿ ಆರಿಸುತ್ತಿರಲಿಲ್ಲ. ಕೆರೆಯಿದ್ದಲ್ಲಿಗೆ ಕಾಡು ಪ್ರಾಣಿಗಳು ನೀರಿಗಾಗಿ ಸದಾ ಬರುವುದರಿಂದ ಅಲ್ಲಿ ಪೋಡು ಮಾಡಿದರೆ ಅಪಾಯ ತಪ್ಪಿದ್ದಲ್ಲವೆಂಬ ವಾಸ್ತವತೆಯ ಅರಿವಿತ್ತು. ಕುಟುಂಬ ಚಿಕ್ಕದಾಗಿದ್ದರೂ ಸ್ವಂತ ಬಂಧುಗಳ ಸನಿಹದಲ್ಲಿ ನೆಲೆಸಿದ್ದರೆ ಕೆಲಸ ಕಾರ್ಯಗಳಲ್ಲಿ ಒಬ್ಬರಿಗೊಬ್ಬರು ನೆರವಿಗೆ ನಿಲ್ಲಬಹುದೆನ್ನುವ ನಿರೀಕ್ಷೆಗಳಿದ್ದವು.

ಸೋಲಿಗರು ತಾವು ಹುಡುಕಿದ ಸ್ಥಳ, ಪೋಡು ಮಾಡಲು, ಮನೆಕಟ್ಟಲು ಯೋಗ್ಯವೆ, ತಾವು ಇಲ್ಲಿ ನೆಲೆ ನಿಲ್ಲಲು ದೈವದ ಸಹಾಯ ಇದೆಯೇ ಎನ್ನುವುದನ್ನು ಕನಸುಗಳನ್ನು ವಿಶ್ಲೇಷಿಸುವ, ಹರಳು

ಶಾಸ್ತ್ರಗಳ ಮೂಲಕ ತಿಳಿಯಲು ಪ್ರಯತ್ನಿಸುತ್ತಿದ್ದರು. ಪೋಡು ಮಾಡಬೇಕೆಂದಿರುವ ಸ್ಥಳಕ್ಕೆ ತೆರಳಿದ ಐವರು ಅಲ್ಲಿ ಮಲಗಿ, ಆ ರಾತ್ರಿ ತಮಗೆ ಬಿದ್ದ ಕನಸುಗಳನ್ನು ಮರುದಿನ ವಿಶ್ಲೇಷಿಸಿ ಒಳ್ಳೆಯ ಕನಸು ಬಿದ್ದರೆ ಆ ಜಾಗ ಒಳ್ಳೆಯದೆಂದು ಕೆಟ್ಟ ಕನಸು ಬಿದ್ದರೆ ಸೂಕ್ತವಲ್ಲವೆಂದು ತಿಳಿಯುತ್ತಿದ್ದರು. ಶರಣರನ್ನೂ, ಗೊಬ್ಬರದ ಗುಡ್ಡೆಯನ್ನು ನೋಡಿದರೆ, ಆನೆಯ ಘರ್ಜನೆ ಕೇಳಿದರೆ ಅಲ್ಲಿ ಬೆಳೆ ಚೆನ್ನಾಗಿ ಬರುತ್ತದೆ ಎಂಬ ಲೆಕ್ಕಚಾರಗಳಿದ್ದವು.

೭. ಪ್ರಾಣಿ ಸಂಬಂಧಿತ ನಂಬಿಕೆಗಳು : ಮಾನವರು ಪ್ರಾಣಿಗಳನ್ನು ಪಳಗಿಸಿ, ಬಗ್ಗಿಸಿಕೊಂಡು ದುಡಿಸಿಕೊಂಡರೂ ಕೆಲವು ಪ್ರಾಣಿಗಳ ಬಗ್ಗೆ ತಮ್ಮ ಆತಂಕವನ್ನು ಕಳೆದುಕೊಂಡಿಲ್ಲ. ದುಷ್ಟ ಪ್ರಾಣಿಗಳನ್ನು ಹೆಸರು ಹಿಡಿದು ಕರೆದರೆ, ಅವುಗಳಿಂದ ಅಪಾಯವಾಗುತ್ತದೆಂಬ ಆತಂಕವಿದೆ. ಸೋಲಿಗರು ಹುಲಿಯನ್ನು ದೊಡ್ಡನಾಯಿ, ಹಾವನ್ನು ಹುಳುಸೆತ್ತೆ ಎನ್ನುತ್ತಾರೆ. ಅರಣ್ಯ ಮೂಲದ ಸೋಲಿಗರಿಗೆ ಹುಲಿ ಆತಂಕವುಂಟು ಮಾಡುವ ಪ್ರಾಣಿ. ಅದರ ಹೆಸರನ್ನು ಹೇಳಲು ಅಂಜಿ ದೊಡ್ಡನಾಯಿ ಎಂದು ಪರ್ಯಾಯವಾಗಿ ಗುರುತಿಸಿದರೂ ತಾವು ಇದನ್ನು ಭಯ ಮೂಲದಿಂದ ರೂಢಿಸಿಕೊಂಡಿದ್ದಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಮಹಾದೇಶ್ವರನಿಗೆ ಹೆದರಿ ನಾಯಿಯಂತೆ ಅಜ್ಞಾನುವರ್ತಿಯಾಗಿದ್ದ ಹುಲಿಯನ್ನು ದೊಡ್ಡ ನಾಯಿ ಎಂದು ಕರೆಯುವುದು ಸೂಕ್ತವೆನ್ನುತ್ತಾರೆ. ಹುಲಿಯನ್ನು ದೊಡ್ಡನಾಯಿ ಎಂದು ಕರೆದರೆ "ಇವರೇನು ನನ್ನನ್ನು ಹೀಗೆ ಕರೆಯುತ್ತಾರಲ್ಲ, ಇವರೆಂಥ ಶೂರರೋ" ಎಂದು ಹೆದರಿ ಹೊರಟು ಹೋಗುತ್ತದೆನ್ನುವ ಅವರ ನಂಬಿಕೆಯ ಹಿಂದೆ ಮಾನಸಿಕ ಸ್ಥೈರ್ಯಕ್ಕಾಗಿ ಸಿದ್ದಪಡಿಸಿಕೊಂಡ ತಂತ್ರವೆನ್ನುವುದು ಸ್ಪಷ್ಟ. ಸೋಲಿಗರಂತೆಯೇ ಹುಲಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವುದು ಇತರ ಕೆಡೆಗಳಲ್ಲಿಯೂ ರೂಢಿಯಲ್ಲಿದೆ. ಮಲೆನಾಡಿನ ವೈಷ್ಣವ ಒಕ್ಕಲಿಗರು "ಹುಲಿಯನ್ನು ನರಿ ಎಂದೂ ಕೂಗಿದರೆ ಮಾನವ ತನ್ನನ್ನು ನರಿಗೆ ಸಮಾನವಾಗಿ ಕಾಣುತ್ತಾನೆ ಎಂದು ತಿಳಿದು ಹುಲಿ ಹೆದರುತ್ತದೆ" ಎನ್ನುತ್ತಾರೆ.[೩೨]

ಆನೆ ಎದುರಾದಾಗ ಬಿಳಿಗಿರಿರಂಗ ಎಂದರೆ ದಾರಿ ಬಿಡುತ್ತದೆಂದು ಸೋಲಿಗರು ಹಾಗೂ ಬೆಟ್ಟದ ನಾಯಕರು ನಂಬುತ್ತಾರೆ. ದೇವರ ಹೆಸರು ಹೇಳಿದರೆ ಆನೆ ತೊಂದರೆ ಮಾಡುವುದಿಲ್ಲವೆಂದು ಪ್ರತಿದಿನ ಅರಣ್ಯದಲ್ಲಿ ಓಡಾಡಲು ಅರಣ್ಯವಾಸಿಗಳ ಧೈರ್ಯತುಂಬಲು ಸೃಷ್ಟಿಸಿರುವ ನಂಬಿಕೆ. ಇಡೀ ಬಿಳಿಗಿರಿರಂಗನ ಬೆಟ್ಟದ ರಕ್ಷಕನಾಗಿರುವ ರಂಗನಾಥಸ್ವಾಮಿ ತಮ್ಮ ಅರಣ್ಯದಲ್ಲಿರುವ, ತನ್ನಲಿಗೆ ಬರುವ ಭಕ್ತರನ್ನು ಅಪಾಯ ಬಂದಾಗ ರಕ್ಷಿಸುತ್ತಾನೆ. ಶ್ರದ್ಧೆ ಹುಟ್ಟಿಸುತ್ತಾ ಜನ ನೆಮ್ಮದಿಯಾಗಿ ಓಡಾಡಲೆಂಬ ಆಶಯವಿದೆ. ಆದರೆ ಈ ನಂಬಿಕೆಯ ವಿಶ್ವಾಸವನ್ನು ಮೀರಿ ಅನೇಕ ಸೋಲಿಗ, ಸೋಲಿಗೇತರರನ್ನು ಈ ಅರಣ್ಯಗಳಲ್ಲಿ ಆನೆಗಳು ಮೆಟ್ಟಿಕೊಂಡಿವೆ. ಆನೆ ಪೋಡಿಗೆ ನುಗ್ಗಿದರೆ ಅಪಶಕುನ, ಅದು ಸೋಲಿಗರ ಸತ್ವವನ್ನು ಪರೀಕ್ಷೆ ಮಾಡಿದಂತೆ ಎನ್ನುತ್ತಾರೆ. ಆದರೆ ಆನೆ ಕೂಗು ಕೇಳಿದರೆ ಮಾತ್ರ ಶುಭ ಶಕುನವೇ ಆಗಿದೆ.

೮. ವೃಕ್ಷ ಸಂಬಂಧಿಸಿದ ನಂಬಿಕೆಗಳು : ಅರಣ್ಯದ ಸಸ್ಯ ಸಂಪತ್ತಿನ ನಡುವೆಯೇ ಬದುಕಿರುವ ಸೋಲಿಗರಿಗೆ ಕೆಲವು ಮರಗಳ ಬಗ್ಗೆ ವಿಶೇಷವಾದ ನಂಬಿಕೆಗಳಿವೆ. ಅವರ ಪ್ರಕಾರ ಕಕ್ಕೆ ಹೂವು ಬಂದರೆ ರಾಗಿಯ ಫಸಲು, ಗೊಬ್ಬಳಿ ಹೂ ಬಂದರೆ ಜೋಳ ಚೆನ್ನಾಗಿ ಬರುತ್ತದೆ. ಮುತ್ತಗ ಹೂ ಬಿಟ್ಟರೆ ಜನ-ಜಾನವಾರುಗಳ ಆರೋಗ್ಯ ಚೆನ್ನಾಗಿರುತ್ತದೆ. ಆದರೆ ಹುಣಸೆ ಹೂ ಬಂದರೆ ಕೋಳಿಮರಿ ಬದುಕುವುದಿಲ್ಲ. ಗಂಧದ ಫಲ ಬಂದರೆ, ಮಾವು ಫಲಬಿಟ್ಟರೆ ಬಂದರೆ ಮಳೆ, ಬೆಳೆ ಚೆನ್ನಾಗಿ ಆಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಬಿದಿರು ಹೂ ಬಿಟ್ಟರೆ ಮಳೆಬೆಳೆ ಸರಿಯಾಗಿ ಆಗದೆ ಕ್ಷಾಮ ಆಗುತ್ತದೆ. ತಾರೆ ಮರದಲ್ಲಿ ಶನಿದೇವರು ಇರುತ್ತಾನೆಂಬ ನಂಬಿಕೆಯಿಂದ ಕೆಲವರು ತಾರೆ ಮರಗಳಿಗೆ ಪೂಜೆ ಸಲ್ಲಿಸುತ್ತಾರೆ. ತಾರೆ ಮರವನ್ನು ಶನಿದೇವಸ್ಥಾನದ ಕಟ್ಟಡಕ್ಕೆ ಮಾತ್ರ ಬಳಸುತ್ತಾರೆಯೇ ವಿನಾ ಮನೆಗಳನ್ನು ಕಟ್ಟಲು ಬಳಸುವುದಿಲ್ಲ. ಶನಿದೇವರ ನಲೆಯಾದ ಮರವನ್ನು ಬಳಸಿದರೆ ತಮಗೂ ಶನಿಕಾಟ ಬರಬಹುದೆಂಬ ಭಯ ಈ ರೀತಿಯ ನಿಷೇಧಕ್ಕೆ ಕಾರಣ.

೯. ಬೇಟೆ ಸಂಬಂಧಿತ ನಂಬಿಕೆಗಳು : ಬೇಟೆಗೆ ಹೋಗುವ ಮೊದಲಿನ ಶಕುನಗಳ ಆಧಾರದ ಮೇಲೆ ಬೇಟೆಯ ಫಲಾಫಲಗಳನ್ನು ನಿರ್ಧರಿಸಿಕೊಳ್ಳುವ ರೂಢಿ ಪ್ರಪಂಚದ ಎಲ್ಲೆಡೆಯೂ ಕಂಡುಬರುತ್ತದೆ. ಅಂತೆಯೇ ಬಿಳಿಗಿರಿರಂಗನ ಬೆಟ್ಟದವರೂ ಕನಸಿನಲ್ಲೂ ತಮ್ಮ ಹಿರಿಯರು, ಹೆಣ, ಹೊಗೆಸೊಪ್ಪು, ಹುಣಸೆಹಣ್ಣು, ರಾಗಿ ನೋಡಿದರೆ ಮರುದಿನ ಬೇಟೆ ಚೆನ್ನಾಗಿ ಸಿಗುತ್ತದೆಂದು ನಂಬಿದ್ದರು. ಬೇಟೆಯ ಸಂದರ್ಭದಲ್ಲಿ ಕಾಡಿನಿಂದ ಸೌದೆ ಹೊತ್ತು ತರುತ್ತಿರುವವರನ್ನು ಕಂಡರೆ ಬೇಟೆ ಸಿಗುತ್ತಿರಲಿಲ್ಲ. ಕೆಲವು ಬೇಟೆಗಳನ್ನಾಡಲು ಹೋಗುವಾಗ ನಿಶ್ಯಬ್ಧದಲ್ಲಿ ಹೋಗಿ ಅಡಗಿದ್ದರೆ ಬಳಕೆಯಿಲ್ಲದ ವಾಸನೆಗಳನನ್ನು ಗ್ರಹಿಸಿ ಪ್ರಾಣಿಗಳು ದೂರ ಓಡಿಹೋಗುತ್ತದೆ. ಕಾಡಿಗೆ ಹೋಗುವಾಗ "ಏನೂ ತೊಂದರೆಯಾಗದಂತೆ ನೀನೇ ಕಾವಲಾಗಿರು" ಎಂದು ಬೇಟೆರಾಯನಿಗೆ ನಮಸ್ಕರಿಸಿ ಹೋಗುತ್ತಿದ್ದರು. ಸೋಲಿಗರು ಬೇಟೆಗೆ ಹೋಗುವಾಗ ಕಲ್ಲುಗಳನ್ನು ಲೆಕ್ಕ ಹಾಕಿ ನಿರ್ದಿಷ್ಟ ಸಂಖ್ಯೆಯಲ್ಲಿ ಬಂದರೆ ಮಾತ್ರ ಬೇಟೆ ಫಲಪ್ರದವೆಂದು ನಂಬಿದರು.

ನಮ್ಮ ಒಳಿತು ಕೆಡುಕುಗಳು ಹಾಗೂ ಕೆಲಸ ಕಾರ್ಯಗಳು ತಮ್ಮ ಬದುಕಿನ ಒಳಿತು ಕೆಡುಕುಗಳನ್ನು ನಿರ್ಣಯಿಸುತ್ತವೆಯೇ ಹೊರತು ಮೂಢನಂಬಿಕೆಗಳಲ್ಲ, ಪಂಚಾಂಗಗಳಲ್ಲ, ಶಾಸ್ತ್ರ ಜ್ಯೋತಿಷ್ಯಗಳಲ್ಲ, ನಂಬಿಕೆಗಳು ಬದುಕಿಗೆ ಅವಶ್ಯ. ಆದರೆ ಯಾರ ನಂಬಿಕೆ ಯೋಗ್ಯ ಎಂಬ ಆಲೋಚನೆಗೆ ಅವಕಾಶ ಕೊಡದೆ ಮನೋದೌರ್ಬಲ್ಯಗಳಿಗೆ ಒಳಗಾಗಿ ನಂಬಿಕೆಗಳಿಗೆ ದಾಸಾನುದಾಸರಾದರೆ ಬದುಕು ದುರ್ಬರ ಆಗಬಹುದು. ಬೆಟ್ಟದ ಜನ ತಮ್ಮ ಬದುಕಿಗೆ ಊರು ಗೋಲಾಗಿ ನಂಬಿಕೆಗಳನ್ನು ಸಾರಸಗಟಾಗಿ ಸ್ವೀಕರಿಸಿರುವುದನ್ನು ಸೋಲಿಗ ಹಾಗೂ ಸೋಲಿಗೇತರರಲ್ಲಿ ಕಾಣಬಹುದು.

ಸಂಪ್ರದಾಯ

ಒಂದು ಮಾನವ ಸಮುದಾಯ ಪರಂಪರಾನುಗತವಾಗಿ ಒಪ್ಪಿರುವ ಕ್ರಿಯಾವಿನ್ಯಾಸವನ್ನು ಸಂಪ್ರಾದಾಯ ಎಂದು ಕರೆಯಬಹುದು. ಕಿಟ್ಟೆಲ್ ಅರ್ಥಕೋಶದಲ್ಲಿ ಸಂಪ್ರಾದಾಯ ಎನ್ನುವುದಕ್ಕೆ "Customs, tredition, usage a system of religious doctorines, traditional belief or usage" ಎಂಬ ಅರ್ಥಗಳಿವೆ. ಜನರು ಏನು ಮಾಡಬೇಕೆಂದು ತಿಳಿಸುವುದೇ ಸಂಪ್ರದಾಯ. ಏಕೆ ಅದನ್ನು ಮಾಡಬೇಕೆಂದು ತಿಳಿದಿದ್ದಾರೋ ಅದೇ ನಂಬಿಕೆ. ನಂಬಿದವರಿಗೆ ಒಂದೊಂದು ಆಚಣೆಯೂ ಜೀವಂತ ಅರ್ಥಪೂರ್ಣ. "ಪ್ರಭಾವಶಾಲಿಯಾದ ವ್ಯಕ್ತಿಯೊಬ್ಬನು ರೂಢಿವಾಡಿಕೆಗಳನ್ನು ನೆರೆಹೊರೆಯವರು ಅನುಕರಿಸಿ, ಅದು ಸಮಷ್ಠಿಯಿಂದ ಸ್ವೀಕೃತಗೊಂಡ ಸಂಪ್ರದಾಯಗಳಾಗಿ ಬಳೆಯುವ ಸಾಧ್ಯತೆ ಹೆಚ್ಚಿನ ಮಟ್ಟದಲ್ಲಿಯೇ ಇರುತ್ತದೆ."[೩೩] ಜನರು ಸಮುದಾಯದ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಕಟ್ಟುವಲ್ಲಿ ಮಹತ್ತರ ಪಾತ್ರವಹಿಸುವ ಸಂಪ್ರದಾಯದ ಹಿಂದಿರುವ ಬಲವಾದ ನಂಬಿಕೆಗಳು ಜನ ಸಮುದಾಯದ ಬದುಕನ್ನು ಚಲನಾತ್ಮಕವಾಗಿಡುವ ಭಾವನಾರೂಪಿಗಳು ನಂಬಿಕೆಗಳು ಸಂಪ್ರದಾಯಗಳನ್ನು ಹಿಮ್ಮೊಗ ಅಥವಾ ಮುಮ್ಮೊಗವಾಗಿ ಚಲಿಸಲು ಸಹಾಯಕವಾಹಕಗಳು.

ಮಾನವ ಸಮುದಾಯದ ಸಂಪ್ರದಾಯಿಕ ಜೀವನ ಕ್ರಮವನ್ನು ರೂಪಿಸಿ, ಪ್ರಭಾವಿಸುವ ಕಾರ್ಯವನ್ನು ನಂಬಿಕೆಗಳು ಮಾಡುತ್ತವೆ. ಸಂಪ್ರದಾಯಗಳ ಹಿಮದೆ ಬೀಜರೂಪದಲ್ಲಿ ನಂಬಿಕೆಗಳಿವೆ. ಜನ ಸಮುದಾಯದ ಶ್ರದ್ಧೆಯ ಪರಿಪಾಕದಲ್ಲಿ ನೆಲೆಗೊಂಡು ನಂಬಿಕೆಗಳು ಮಾತ್ರ ಸಂಪ್ರದಾಯಗಳಾಗುತ್ತವೆ. ಪರಂಪರೆಯಿಂದ ಬಂದ ಈ ಸಂಪ್ರಾದಾಯಿಕ ಆಚರಣೆಗಳು ಯಾವ ರೀತಿಯಲ್ಲೂ ಬದಲಾಗಬಾರದೆಂಬ ನಂಬಿಕೆಯ ಒತ್ತಡ ಪ್ರಬಲವಾಗಿರುತ್ತವೆ. ಸಂಪ್ರದಾಯ ಆಚರಣೆಗಳನ್ನು ಬೇರೂರಿಸುವ ಸಾಮಾಜಿಕ ಪರಿಸ್ಥಿತಿಗಳ ಜೊತೆಗೆ ಧರ್ಮವು ಸೇರಿದಾಗ ಅದು ಸಂಪ್ರದಾಯಗಳನ್ನು ಸಂರಕ್ಷಿಸುವುದರ ಮೂಲಕ ಅದಕ್ಕೆ ಸಂಬಂಧಿಸಿದ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸುತ್ತದೆ. ಈ ಪ್ರಯತ್ನದಿಂದಾಗಿ ಸಂಪ್ರಾದಾಯಗಳು ವೈಭವೀಕರಿಸಲ್ಪಡುತ್ತವೆ. "ಸಾಮಾಜಿಕ ಸಂಕಲ್ಪದ ಫಲವಾಗಿ ಕಾಣಿಸಿಕೊಳ್ಳುವ ಸಂಪ್ರಾದಾಯಗಳು ಒಂದು ರೀತಿಯ ಶಾಸನಶಕ್ತಿಯೂ ಆಗಿದೆ. ದೇಶದ ಅಧಿಕ ಶಕ್ತಿಗೂ ಸಂಪ್ರಾದಾಯಗಳಿಗೂ ಸ್ಪರ್ಧೆ ನಡೆಯುವುದಾದರೆ ಸಂಪ್ರದಾಯಗಳು ಅಧಿಕಾರ ಶಕ್ತಿ ಮತ್ತು ಅದರ ಕಾನೂನುಗಳಿಗಿಂತ ಮೇಲುಗೈ ಪಡೆಯುವುದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ, ಇವು ಎಲ್ಲಕ್ಕಿಂತ ಪ್ರಾಚೀನ, ಪವಿತ್ರ ಎಂಬ ಪ್ರತಿಷ್ಠೆಯನ್ನು ಪಡೆದು ಆಳುವ ಶಕ್ತಿಯನ್ನು ಆಳತೊಡಗುತ್ತವೆ. ಅಲಿಖಿತ ಕಾನೂನುಗಳಾಗುತ್ತವೆ ಎನ್ನಬಹುದು.

ಸಂಪ್ರಾದಾಯಗಳು ಒಂದು ಸಮಾಜದ ಸಂಸ್ಕೃತಿಯ ಪ್ರತೀಕಗಳಾಗಿವೆ. ಆದ್ದರಿಂದ ಅವುಗಳ ಸ್ವರೂಪ, ಆ ಸಮಾಜದ ಸ್ವರೂಪವನ್ನು ಅವಲಂಬಿಸಿರುತ್ತವೆ. ಜನ ವಾಸಿಸುವ ಪರಿಸರ, ಪರಿಸ್ಥಿತಿ, ಮನೋಧರ್ಮಗಳಿ ತಕ್ಕಂತೆ ಸಂಪ್ರದಾಯಗಳನ್ನು ಒಪ್ಪಿಕೊಂಡು, ಒಗ್ಗಿಸಿಕೊಂಡು ಬಾಳ್ವೆ ಮಾಡುತ್ತಾರೆ,

ಸಂಪರ್ಕದ ಜಾಲಗಳು ಹೆಚ್ಚುತ್ತಿದ್ದಂತೆ ಸ್ಥಳೀಯ ಆಚರಣೆಗಳ ಮೇಲೆ ಪರಸ್ಥಳೀಯ ಆಚರಣೆಗಳು ದಟ್ಟವಾಗಿ ಪ್ರಭಾವ ಬೀರುತ್ತವೆ. ಸಂಸ್ಕೃತಿಯಲ್ಲಿ ಸ್ಥಿರತೆ ಮತ್ತು ಚಲನಶೀಲತೆಗಳು ಏಕ ಕಾಲದಲ್ಲಿ ಇರುತ್ತವೆ. ಹೀಗಾಗಿ ಸಂಪ್ರದಾಯ ಮತ್ತು ಆಚರಣೆಗಳು ಆಯಾ ಸಮಾಜ ಮತ್ತು ಸಂಸ್ಕೃತಿಯಲ್ಲಾಗುವ ಬದಲಾವಣೆಯ ಜೊತೆ ಜೊತೆಗೆ ಸ್ಥಿರತೆಯನ್ನು ಪಡೆಯುತ್ತಾ ಹೋಗುತ್ತದೆ. ಸಂಪ್ರಾದಾಯಗಳು ಚಲನಶೀಲತ್ವ ಗುಣವನ್ನು ಪಡೆಯುವುದು ಅನಿವಾರ್ಯ.

''ಸಂಪ್ರಾದಾಯಗಳ ಜಡತ್ವವನ್ನು ಮೀರುವುದರಿಂದಲೇ ಸಂಸ್ಕೃತಿಯಲ್ಲಿ ಹೊಸ ವಿನ್ಯಾಸಗಳ ರೂಪಧಾರಣೆಗೆ ದಾರಿಯಾಗುತ್ತದೆ. ಸಂಸ್ಕೃತಿ ಎನ್ನುವುದು ಕೇವಲ ಭೂತದ ಉಗ್ರಾಣವಲ್ಲ, ವರ್ತಮಾನದ ಒತ್ತಾಸೆಯಲ್ಲಿ ಭೂತವನ್ನು ಬದಲಾಯಿಸಿಕೊಳ್ಳುತ್ತಾ ಭವಿಷ್ಯದತ್ತ ಹೆಜ್ಜೆಯಿರಿಸುವ ಒಂದು ಕ್ರಿಯಾ ಪರಂಪರೆ'' ನಿಯಮ, ಸಂಪ್ರಾದಾಯಗಳನ್ನು ಮೀರುವ ಕ್ರಿಯೆಗೂ ಎಂದಿಗೂ ಇರುತ್ತದೆ. ''ಸಂಪ್ರಾದಾಯದ ಬಲ ಇರುವುದು ಅದರ ಜೀರ್ಣಶಕ್ತಿಯ ಮೇಲೆ ಬಂಡುಗಾರಿಕೆಯ ಸಂಪ್ರಾದಾಯಕ್ಕೆ ಪ್ರತಿಯಾಗಿ ಬಂದರೂ ಕೂಡ ಅದರೊಳಗೆ ಹೊಕ್ಕು ಒಂದಾಗಿ ಅದನ್ನೇ ಪೋಷಿಸುತ್ತದೆ. ಅಂದರೆ ತನ್ನ ವಿರುದ್ಧ ಬಂದ ಅಲೆಯನ್ನು ಒಳಗೆ ಸೇರಿಸಿಕೊಂಡು ಮತ್ತೆ ಅದನ್ನು ಸಂಪ್ರಾದಾಯವಾಗಿಸುವ ವ್ಯವಸ್ಥೆಯೂ ಇದೆ.

ಆಚರಣೆಗಳು

''ಮತಧರ್ಮಗಳಿಗೆ ಸಂಬಂಧಿಸಿದಂತೆ, ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರ ಕರ್ಮವಿಧಿಗಳನ್ನು'' ಆಚರಣೆಗಳೆಂದು ಹೆಸರಿಸಿದೆ.[೩೪] ಒಂದು ಸಂಸ್ಕೃತಿಯಲ್ಲಿರುವ ನಂಬಿಕೆಗಳೆ ಆಚರಣೆಗಳ ಬೆನ್ನೆಲುಬುಗಳು, ನಂಬಿಕೆಗಳು ಆಶಯಗಳಾದರೆ, ಆಚರಣೆಗಳು ಆ ನಂಬಿಕೆ ಕ್ರಿಯಾ ರೂಪವಾಗಿವೆ. ಸಂಪ್ರದಾಯವು ನಂಬಿಕೆಯನ್ನು ಮೂಲವಾಗಿರಿಸಿಕೊಂಡು ಆಚರಣೆಯಲ್ಲಿ ಉಳಿಯುತ್ತದೆ. ''ಸಮುದಾಯಗಳಿಗೆ ಆಚರಣೆಗಳು ಅತ್ಯಂತ ಶ್ರದ್ಧೆಯ ಭಾಗ ಮತ್ತು ಪಾವಿತ್ರ್ಯತೆಯ ಜಗತ್ತು. ಬದುಕಿನ ಬಗ್ಗೆ ಇರುವ ದೃಷ್ಟಿಕೋನಗಳು ತಾತ್ವಿಕ ನಿಲುವುಗಳ ಆಚರಣೆಗಳು ಅಜೀವ ಗರ್ಭದಲ್ಲಿ ಜನಿಸುತ್ತವೆ.[೩೫] ಸಂಸ್ಕೃತಿಗೆ ಸಂಬಂಧಿಸಿದ ಆಚರಣೆಗಳು ಸತತ ಪ್ರಯೋಗಗಳ ನಂತರದಲ್ಲಿ ಸಮಾಜದಲ್ಲಿ ಆಚರಣೆಗೆ ಬರುತ್ತವೆ. ವೈಯಕ್ತಿಕ ನೆಲೆಯಿಂದ ಸಾಮೂಹಿಕ ನೆಲೆಗೆ ಬಂದು ತಲುಪುತ್ತದೆ. ಅಸ್ತಿತ್ವದಲ್ಲಿರುವ ಆಚರಣೆಗಳನ್ನು ಗಮನಿಸಿದಾಗ ''ಕೆಲವು ಪ್ರಕೃತಿ ಮೂಲದವಾಗಿದ್ದರೆ, ಕೆಲವು ವೃತ್ತಿ ಮೂಲದವಾಗಿವೆ. ಮಳೆ, ಫಲವಂತಿಕೆ, ಸಾವು, ಹುಟ್ಟು, ಪ್ರವಾಹ, ದೇವಾಲಯಕ್ಕೆ ಸಂಬಂಧಿಸಿದ ಆಚರಣೆಗಳು ಪ್ರಕೃತಿ ಮೂಲದವಾಗಿದ್ದರೆ, ಬೇಟೆ, ಕೃಷಿ, ಬೆಳೆ ಬೆಳೆಯುವುದು, ಪ್ರಾಣಿಗಳನ್ನು ಸಾಕುವುದು ಮುಂತಾದ ವೃತ್ತಿ ಮೂಲದವಾಗಿದೆ.[೩೬]

ಸಂಪ್ರಾದಾಯಿಕ ಆಚರಣೆಗಳಿಂದ ಜನಗಳಿಗೆ ಸಂತೋಷ ಆಗುತ್ತದೆ. ಆದರೆ ಆ ಸಂತೋಷದ ಆಚರಣೆಯಲ್ಲಿ ಕೂಡ ಸ್ಥಗಿತತೆ ಬಂದು ಬಿಡುತ್ತದೆ. ''ಸಂಪ್ರಾದಾಯಿಕ ಆಚರಣೆಗಳಲ್ಲಿ ಸಿದ್ಧರೂಪ

ಮರುಕಳಿಸುವುದರಿಂದ ಸಿಗುವ ಸಂತೋಷವೂ ಯಾಂತ್ರಿಕವಾಗುತ್ತದೆ. ಪ್ರತಿಸಲವೂ ಅದೇ ಸಿದ್ಧ ಸಂತೋಷವನ್ನು ಅನುಭವಿಸಿದಂತಾಗುತ್ತದೆ." ಈ ಸತ್ಯ ಗೊತ್ತಿದ್ದರೂ ಅದೇ ಸಾಂಪ್ರದಾಯಿಕ ಆಚರಣೆಗಳಲ್ಲಿ ಪಾಲ್ಗೊಂಡು ಸಿದ್ಧ ಸಂತೋಷವನ್ನು ಅನುಭವಿಸಲು ಸಿದ್ಧರಾಗುವ ಮನೋಭಾವದ ಜನ ಹೆಚ್ಚೆ ಹೆಚ್ಚಿಗೂ ಸಂಪ್ರಾದಾಯಿಕ ಜಾಡನ್ನು ಬಿಟ್ಟು ಹೋಗದಂತೆ.

ಸೋಲಿಗರ ಒಪ್ಪಿತ ಮದುವೆಯ ಶಾಸ್ತ್ರಾಚಾರಗಳು

ಸೋಲಿಗರಲ್ಲಿ ನಡೆಯುವ ಒಪ್ಪಿತ ಮದುವೆಯ ಸಂದರ್ಭದಲ್ಲಿ ಆ ಮದುವೆಗೆ, ದೈವಸಮ್ಮತಿ ಇರುವುದನ್ನು ಹೆಣ್ಣು-ಗಂಡಿನ ಹೆಸರಿನಲ್ಲಿ ಕೇಳಿ ತಮ್ಮಡಿಯ ಮೂಲಕ ಖಚಿತಪಡಿಸುತ್ತಾರೆ. ತಮ್ಮಡಿ ಇವರಿಗಾಗಿ ದೇವರನ್ನು "ಪರಸಾದ" ಕೇಳಿದಾಗ ದೈವಕ್ಕೆ ಒಪ್ಪಿಗೆಯಿದ್ದರೆ, ಪ್ರಸಾದ ರೂಪದಲ್ಲಿ ಬಲಗಡೆಗೆ ಹೂ ಕೊಡುತ್ತದೆ. ದೇವರ ಒಪ್ಪಿಗೆಯ ಬಳಿಕ ಮದುವೆಗೆ ಸಂಬಂಧವನ್ನು ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ. ಜಾತಿ ಸಮಾಜದ ಜನ ಇಂತಹ ಶಾಸ್ತ್ರಗಳನ್ನು ಕೇಳಲು ಪುರೋಹಿತರನ್ನು 'ಅಯ್ಯನೋರನ್ನು" ಅವಲಂಬಿಸಿದ್ದರೆ, ಸೋಲಿಗರು ತಮ್ಮಡಿಯ ಮುಖೇನ ದೈವವನ್ನೆ ಆಶ್ರಯಿಸಿದ್ದಾರೆ. ಆದರೆ ಬೆಟ್ಟದಿಂದ ಹೊರಗೆ ಮದುವೆಯಾದ ಸೋಲಿಗ ಯುವಕ ಪುರೋಹಿತ ಮಾರ್ಗದರ್ಶನದಲ್ಲಿ ಮದುವೆಯಾದ.

ಸೋಲಿಗರು ಶಾಸ್ತ್ರ ಸಂಪ್ರಾದಾಯಗಳಲ್ಲಿ ಕೆಲವು ಬದಲಾವಣೆಗಳನ್ನ ಮಾಡಿಕೊಂಡು ನಾಡವರಂತೆ ಆಚರಿಸಲು ಅವರ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗಿರುವುದೇ ಮುಖ್ಯ ಕಾರಣ. ಇದನ್ನು ಸ್ಪಷ್ಟಪಡಿಸಲು ಬೆಟ್ಟದಲ್ಲಿ ನಡೆಯುತ್ತಿರುವ ಇಂತಹ ಮದುವೆಯ ವಿಧಿ ವಿಧಾನಗಳನ್ನು ಕಲ್ಯಾಣಿ ಪೋಡಿನ ವರನೊಡನೆ ಸೀಗೆ ಬೆಟ್ಟದ ಪೋಡಿನ ಕನ್ಯೆಯ ಮದುವೆಯಾದ ಸಂದರ್ಭದಲ್ಲಿ ಪರಿಶೀಲಿಸಲಾಗಿದೆ. ಇವರಿಬ್ಬರ ಪೋಷಕರು ಆರ್ಥಿಕವಾಗಿ ಅನುಕೂಲವಾಗಿದ್ದರಿಂದ ಮದುವೆಯಲ್ಲಿ ನಡೆದ ಶಾಸ್ತ್ರಗಳು ಸೋಲಿಗ ಸಮುದಾಯದಲ್ಲಿ ಇರುವುದಕ್ಕೆ ಸ್ವಲ್ಪ ಹೆಚ್ಚೆ ಇದ್ದವು.

ಬಾಣಂತನ ಮತ್ತು ಶಿಶು ಸಂಬಂಧಿತ ಆಚರಣೆಗಳು

ಗರ್ಭದಲ್ಲಿ ಮಗುವನ್ನು ಹೊತ್ತು ಹೆತ್ತು ಬಳಲಿದ ತಾಯಿಯ ಮತ್ತು ತಾಯಿಯ ಉದರದಲ್ಲಿ ಸಂರಕ್ಷಿತವಾಗಿ ಬೆಳೆದು ಹೊರ ಪ್ರಪಂಚಕ್ಕೆ ಬಂದ ಮಗುವಿನ ದೃಷ್ಟಿಯಿಂದ, ಬಾಣಂತಿ ಮತ್ತು ಮಗುವನ್ನು ಕಾಳಜಿಯಿಂದ ಉಪಚರಿಸಬೇಕಾದುದು ಅವಶ್ಯ. ಆದ್ದರಿಂದ ಈ ಅವಧಿಯಲ್ಲಿ ಅವರವರ ಸಂಪ್ರದಾಯ ಮತ್ತು ರೂಢಿಗಳಂತೆ ಉಪಚರಿಸುತ್ತಾರೆ. ಆಹಾರದ ಪೋಷಣೆ, ಎಚ್ಚರಿಕೆಯ ಆರೈಕೆಗಳು ಅಲ್ಲದೆ ಈ ಸಂದರ್ಭದಲ್ಲಿ ಹಲವಾರು ಶಾಸ್ತ್ರ ಸಂಪ್ರಾದಾಯಗಳೂ ಇರುತ್ತವೆ.

ಸೋಲಿಗರಲ್ಲಿ ಸುಖಪ್ರಸವವಾಗಲಿ ಎಂದು ದೇವರನ್ನು ಬೇಡಿದರೂ ಸುಲಭವಾಗಿ ಪ್ರಸವವಾಗಲೆಂದು ಬೆಂಡೆ, ಸೆಲ್ಗೆ ಮರಗಳ ಚಕ್ಕೆ ರಸ ಮಾಡಿ ಕುಡಿಸುತ್ತಾರೆ. ಮಗುವಿನ ಹೊಕ್ಕಳ ಬಳ್ಳಿಯನ್ನು ಪ್ರಾಣಿ ಪಕ್ಷಿ ತಿನ್ನದಂತೆ ಮಗುವಿನ ಅಜ್ಜಿ ಅಥವಾ ಆ ವರಸೆಯವರು ಮಾತ್ರ ಅದನ್ನು ಹೂತು ಹಾಕಬೇಕು. ಸೆತ್ತೆಯನ್ನು ಸರಿಯಾಗಿ ಹೂತು ಹಾಕಿದಿದ್ದರೆ ಮಗು ಹಾಲುಕಕ್ಕುತ್ತದೆ ಎಂಬ ಆತಂಕದ ಜೊತೆಗೆ, ಮಾಟ ಮಾಡುವವರು, ಯಂತ್ರಗಳನ್ನು ಕಟ್ಟುವವರು ಈ ಕರುಳು ಬಳ್ಳಿಯನ್ನು ಬಳಸಿಕೊಳ್ಳುತ್ತಾರೆಂಬ ಭಯಪಡುತ್ತಾರೆ. ಮಗುವಿಗೆ ಯಾವುದೇ ಅಪಾಯ ಆಗದಿರಲೆಂದು ನಂಬಿಕಸ್ಥರಾದ, ಅನುಭವಸ್ಥರು ಮಾತ್ರ ಈ ಜವಾಬ್ದಾರಿ ನಿಭಾಯಿಸಬೇಕು. ಮಗು ಕರುಳು ಬಳ್ಳಿಯನ್ನು ಕೊರಳಿಗೆ ಸುತ್ತಿಕೊಂಡು ಹುಟ್ಟಿದ್ದರೆ, ಸೋದರಮಾವ ನೇರವಾಗಿ ನೋಡುವಂತಿಲ್ಲ ಎನ್ನುವ ನಾಡವರಲ್ಲಿರುವ ನಂಬಿಕೆಗಳನ್ನು ಸೋಲಿಗರು ಸ್ವೀಕರಿಸಿದ್ದಾರೆ. ಕಂಚಿನ ಬಟ್ಟಲಲ್ಲಿ ನೀರು ಅಥವಾ ಎಣ್ಣೆ ಬಿಟ್ಟು ಅದರಲ್ಲಿ ಅಥವಾ ಕನ್ನಡಿಯಲ್ಲಿ ಮಗುವಿನ ಪ್ರತಿಬಿಂಬವನ್ನು ಮೊದಲು ತೋರಿಸಿ ಅನಮತರ ನೋಡಬೇಕು. ಆತ ಮಗುವಿಗೆ ತಾಯಿತ ಅಥವಾ ಉಂಗುರವನ್ನು ಮಾಡಿಸಿ ಹಾಕಬೇಕು. ಕರುಳು ಬಳ್ಳಿ ಮಗುವಿನ ಕೊರಳಿಗೆ ಸುತ್ತಿಕೊಂಡಿದ್ದಾಗ ಬಿಗಿಯಾದರೆ ಮಗು ಸಾಯುವ ಸಂಭವವಿರುತ್ತದೆ. ಅಂತಹ ಸ್ಥಿತಿಯಿಂದ ಪಾರಾಗಿ ಉಳಿದ ಮಗುವನ್ನು ಸೋದರ ಮಾವ ಹಾಗೆಯೇ ನೋಡಿದರೆ ಮಗುವಿಗೆ ಬಂದಿದ್ದ ಕಷ್ಟ ದಾಟಿ ಮಾವನಿಗೆ ಬರುತ್ತದೆ ಎನ್ನುವ ಆತಂಕದಿಂದ ಈ ಸಂಪ್ರಾದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

ಹೆರಿಗೆ ಮಾಡಿಸುವವರು ಸೂತಕ ತೆಗೆಯುವ ಹಣವೆಂಬ ಒಂದು ಕಾಲು ರೂಪಾಯಿ ಪಡೆಯುತ್ತಾರೆ. ಸೂತಕದ ಸಂದರ್ಭದಲ್ಲಿ ಆಕೆಯೂ ಮುಟ್ಟಿಕೊಂಡಿರುವುದರಿಂದ ಅವರಿಗೂ ಸೂತಕವಿರುತ್ತದೆ. ಕೊಟ್ಟ ದುಡ್ಡಿನಲ್ಲಿ ಮನೆ ದೇವರಿಗೆ ಪೂಜೆ ಮಾಡಿಸಿ ಸೂತಕ ನಿವಾರಿಸಿಕೊಳ್ಳುತ್ತಾರೆ. ಈ ಕೆಲಸ ಮಾಡುವವರೆಗೂ ತಮ್ಮ ದೇವರ ಗುಡಿಗಳಿಗೆ ಹೋಗುವಂತಿಲ್ಲ. ಸೋಲಿಗರಲ್ಲಿಯೂ ಇದಕ್ಕಾಗಿ ಹಿಂದೆ ಇಪ್ಪತ್ತೈದು ಪೈಸೆ ಪಡೆಯುತ್ತಿದ್ದರೂ ಕಾಲಕ್ಕೆ ತಕ್ಕಂತೆ ಈಗ ಆ ದರ ಹೆಚ್ಚಾಗಿದೆ.

ಬಿಳಿಗಿರಿರಂಗನ ಬೆಟ್ಟದ ಸೋಲಿಗ ಹೆಂಗಸರು ಪ್ರಸವ ಸಂದರ್ಭದಲ್ಲಿ ಕಾಡಿಗೆ ಹೋಗುತ್ತಿದ್ದರು. ಗರ್ಭಿಣಿಯಾದ ಹೆಣ್ಣು ಕಾಡಿನಲ್ಲಿ ಸುಸೂತ್ರವಾಗಿ ಹೆತ್ತು ಮಗುವಿನ ಸಮೇತ ಬಂದರೆ ಆಕೆ ಪತಿವ್ರತೆ, ತನ್ನ ಗಂಡನಿಗೆ ಮೋಸ ಮಾಡಿಲ್ಲ. ಆಕೆ ಕಾಡಿನಲ್ಲಿ ಹೆರಿಗೆ ಸಂದರ್ಭದಲ್ಲಿ ತೊಂದರೆಗಳಿಗೊಳಗಾದರೆ, ಸರಿಯಾಗಿ ಹೆರಿಗೆಯಾಗದೆ ತಾಪತ್ರಯಗಳು ಎದುರಾದರೆ ಆಕೆ ಪತಿವ್ರತೆಯಲ್ಲ' ಎಂಬ ತೀರ್ಮಾನಕ್ಕೆ ಬರುತ್ತಿದ್ದರು. ಆದರೆ ಈ ರೀತಿಯ ಪದ್ಧತಿಗಳೇನೂ ಬೆಟ್ಟದಲ್ಲಿರದೆ, ಬಹುಪಾಲು ಹೆಂಗಸರ ಹೆರಿಗೆಗಳು ಪೋಡುನಲ್ಲಿಯೆ ಆಗಿವೆ. ಸೋಲಿಗ ಹಿರಿಯರೂ ನಮ್ಮ ಬೆಟ್ಟದ ಸೋಲಿಗರಲ್ಲಿ ಇಂತಹ ಆಚರಣೆ ರೂಢಿಯಲ್ಲಿತ್ತು ಎನ್ನುವುದನ್ನು ಬಲವಾಗಿ ನಿರಾಕರಿಸುತ್ತಾ "ಕಾಡಿನಲ್ಲಿ ಸಂಗ್ರಹಣೆಗೆಂದು ಹೋಗಿದ್ದಾಗ ಹೆರಿಗೆಯ ನೋವು ಬಂದು ಅಲ್ಲಿ ಹೆರಿಗೆ ಆಗಿರಬಹುದೇ ಹೊರತು ಸೋಲಿಗ ಹೆಂಗಸರ ಪಾತಿವ್ರತ್ಯದ ಪರೀಕ್ಷೆಯ ಅಂಗವಾಗಿತ್ತು.

"ಬರ್ಗೂರು ಬೆಟ್ಟಗಳ ಸೋಲಿಗರಲ್ಲಿ ಒಂದು ಪದ್ಧತಿ ಇದೆ. ಗರ್ಭಿಣಿ ಹೆರಲು ಇನ್ನೊಂದು ವಾರ ಇದೆ ಎನ್ನುವಾಗ ಅವಳ ಗಂಡ ಮೂರು ದಿನದ ಬುತ್ತಿಯೊಡನೆ ಅವಳನ್ನು ಕಾಡಿನಲ್ಲಿ ಬಿಟ್ಟು ಬರುತ್ತಾನೆ. ಮೂರನೇ ದಿನದ ಕೊನೆಗೆ ಅವಳು ವಾಪಸ್ಸು ಬಾರದಿದ್ದಾರೆ ಗಂಡ ಇನ್ನಷ್ಟು ಆಹಾರದೊಂದಿಗೆ ಕಾಡಿಗೆ ಹೋಗುತ್ತಾನೆ. ಮಗು ಹುಟ್ಟುವವರೆಗೂ ಅವಳು ವಾಪಸ್ಸು ಬರುವುದಿಲ್ಲ. ಆದರೆ ಮೂರನೇ ದಿನಾ ಅವಳು ವಾಪಸ್ಸು ಬಂದರೆ ಅವಳ ಗೌರವಾರ್ಥ ತಮ್ಮಟೆ ಬಡಿದು ಸ್ವಾಗತಿಸುತ್ತಾರೆ. ಸಾಕಷ್ಟು ಹಿಂದೆ ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಗರ್ಭಿಣಿ ಹೆಂಗಸು ಕಾಡಿಗೆ ಹೆರಿಗೆಗೆಂದು ಹೋದರೆ ಅವಳ ಗಂಡ ಅವಳಿಗೆ ಬೇಕಾದ ನೀರುನಿಡಿ ಕೊಟ್ಟುಕೊಂಡು ಇರುತ್ತಿದ್ದ. ಮಗುವಿನ ಜೊತೆಗೆ ಗಂಡ, ಹೆಂಡತಿ ಮರಳಿ ಬರುತ್ತಿದ್ದರು. ಅನಂತರದ ಕಾಲದಲ್ಲಿ ಪೋಡಿನಲ್ಲಿಯೇ "ಅವರು ವಾಸವಾಗಿರುವ ಗುಡಿಸಲಿನ ಪಕ್ಕದಲ್ಲಿಯೇ ಮಳೆ-ಗಾಳಿ-ಚಳಿಯನ್ನು ತಡೆಯುವಂತಹ ತಾತ್ಕಾಲಿಕ ಗುಡಿಸಲನ್ನು ನಿರ್ಮಿಸಿದರು. ಆ ಗುಡಿಸಲು ಇರುತ್ತದೆ. ಬಸುರಿ ಹೆಂಗಸನ್ನು ಒಬ್ಬ ವಯಸ್ಸಾದ ಹಾಗೂ ಅನುಭವಿಯಾದ ಮುದುಕಿಯ ಜೊತೆಯಲ್ಲಿ ಆ ಗುಡಿಸಲಿಗೆ ಸೇರಿಸುವರು. ಅಲ್ಲಿಗೆ ಅವರಿಗೆ ಬೇಕಾದ ಉಡುಗೆ, ಊಟದ ವ್ಯವಸ್ಥೆ ಮಾಡುತ್ತಿದ್ದರು.

ಬೆಟ್ಟದ ಸೋಲಿಗರಿಗೆ ಕಾಡಿನಲ್ಲಿ ಹೆರಿಗೆ ಮಾಡುತ್ತಿದ್ದುದು ಅಪರೂಪವಲ್ಲ. ಏಕೆಂದರೆ ಅವರು ಬದುಕು ಕಾಡಿನ ಜೊತೆ ಏಕೀಭವಿಸಿ ಹೋಗಿತ್ತು. ಸೋಲಿಗರ ಜಲ್ಲೆ ಸಿದ್ದಮ್ಮ ನೆನಪಿಸಿಕೊಳ್ಳುವ ಹಾಗೆ ಅವಳ ಬೀಗಿತ್ತಿಯೊಬ್ಬಳಿಗೆ ಕಾಡಲ್ಲೂ ಹೆರಿಗೆಯಾಗಿತ್ತು. ಅದಕ್ಕೆ ಸಿದ್ದಮ್ಮ ಕೊಡುವ ಕಾರಣ "ಅವಳ ಗಂಡ ಅವಳನ್ನು ಬಿಟ್ಟು ಇರುತ್ತಿರಲಿಲ್ಲ. ಅವಳು ಬಿಮ್ಮನಸೆಯಾಗಲಿ, ಬಾಣಂತಿಯಾಗಲಿ ಜೊತೆ ಜೊತೆಗೆ ಕರೆದುಕೊಂಡು ತಿರುಗುತ್ತಿದ್ದ. ಒಂದು ಸಾರಿ ಕಾಡಿಗೆ ಹೋಗಿದ್ದಾಗ ಅಲ್ಲೇ ಹೆರಿಗೆ ನೋವು ಬಂದು ಗಂಡನೆ ಹೆರಿಗೆ ಮಾಡಿಸಿ ಪೋಡಿಗೆ ಕರೆದುಕೊಂಡು ಬಂದಿದ್ದ.

ಮಕ್ಕಳಿಗೆ ಸಂಬಂಧಿಸಿದ ಆಚರಣೆಗಳು

ಸೋಲಿಗರಲ್ಲಿ ಮಕ್ಕಳು ಹುಟ್ಟಿದ ಸೂತಕ ದಿನಗಳ ಅವಧಿಯ ಬಗ್ಗೆ ಅವರದ್ದೇ ಆದ ಲೆಕ್ಕಚಾರಗಳಿವೆ. ಹೆಣ್ಣು ಮಗು ಹುಟ್ಟಿದ ಐದನೇ ದಿನಕ್ಕೆ, ಗಂಡು ಮಗು ಹುಟ್ಟಿದ ನಾಲ್ಕನೆಯ ದಿನಕ್ಕೆ ತೊಮೆ ಕಳಿಯಬೇಕು ಎನ್ನುತ್ತಾರೆ. ಹೆಣ್ಣು ಮಕ್ಕಳು ಒಮ್ಮೆ ಋತುಮತಿಯಾಗಿ ಮೈಲಿಗೆಯ ಜಾಡಿನಲ್ಲಿ ಹೆಜ್ಜೆಯಿಟ್ಟ ಮೇಲೆ, ಆಕೆಯ ಮೈಲಿಗೆಯ ಪುನರಾವರ್ತನೆ ತಿಂಗಳು ತಿಂಗಳೂ ಆಗುವುದರಿಂದ ಹೆಣ್ಣು ಮಗು ಹುಟ್ಟಿದಾಗ ಒಂದು ದಿನದ ಹೆಚ್ಚಿನ ಸೂತಕ ಎಂಬ ತರ್ಕವಿದೆ. ಹುಟ್ಟಿನ ಸೂತಕದ ತೊಮ ಕಳೆಯುವ ಕಾರ್ಯವನ್ನು ಕೋಲುಕಾರನಿಂದ ಮಾಡಿಸಿ, ಮಗುವಿಗೆ ನಾಮಕರಣ ಮಾಡಿಸುವುದನ್ನು ಸೋಲಿಗರು "ಮಡಕೆ ಹಿಟ್ಟು" ಎನ್ನುತ್ತಾರೆ. ಮಡಿಕೆ ಹಿಟ್ಟಿನ ದಿನ ಗುಡಿಸಿ ಸಾರಿಸಿ, ಪಾತ್ರೆಗಳನ್ನು

ತೊಳೆದು, ತಾಯಿ ಮಗುವಿಗೆ ಸ್ನಾನ ಮಾಡಿಸಿ, ಆ ನೀರು ಬೇರೆಲ್ಲೂ ಹೋಗದಂತೆ ಒಂದು ಗುಂಡಿಗೆ ಹರಿಯಬಿಟ್ಟು ಅದನ್ನು ಮುಚ್ಚುತ್ತಾರೆ. ಮನೆಯವರೂ ಮಡಿಮಾಡಿಕೊಂಡು, ವಿಭೂತಿ ಧರಿಸಿ, ಮಡಿ ಮಾಡಿದ ಪಾತ್ರೆಗಳಲ್ಲಿ ಅಡುಗೆ ಮಾಡುತ್ತಾರೆ. ಹತ್ತಿರದ ನಂಟರಿಷ್ಟರನ್ನು ಬರಮಾಡಿಕೊಳ್ಳುತ್ತಾರೆ. ಸೂತಕ ಕಳೆಯಲು ಶುದ್ಧನಾಗಿ ಬರುವ ಕೋಲುಕಾರ ಬಾಳೆಲೆಗೆ ತ್ರಿಶೂಲದ ರೀತಿಯಲ್ಲಿ ಬರೆದ ಗೋಡೆಗೆ ಒರಗಿಸಿ ನಿಲ್ಲಿಸುತ್ತಾನೆ.

ಋತುಮತಿಯಾದಾಗಿನ ಆಚರಣೆಗಳು

ಹದಿಹರೆಯ ಪ್ರಾಪ್ತಿಯಾಗುವಾಗ ಅನೇಕ ದೈಹಿಕ ಬದಲಾವಣೆಗಳು ಸಹಜ. ಹೆಣ್ಣು ಮಗು ಪ್ರಬುದ್ಧತೆಯ ಪಡೆದು ಸಂತಾನೋತ್ಪತ್ತಿ ಮಾಡಲು ಅರ್ಹವಾಗುವ ಹಂತವಿದು. ಅನಂತರ ಮಾಸಿಕವಾಗಿ ಕ್ರಮವಾಗಿ ಗಡಿಯಾರದಂತೆ ಮಹಿಳೆಯರಲ್ಲಿ ನಿರ್ಧಿಷ್ಟ ಹಂತದವರೆಗೆ ಈ ಜೈವಿಕ ಕ್ರಿಯೆ ಘಟಿಸುತ್ತಿರುತ್ತದೆ ಮೊದಲ ಬಾರಿಗೆ ಈ ಜೈವಿಕ ಕ್ರಿಯೆಗೆ ಒಳಗಾಗುವ ಸಂದರ್ಭವನ್ನು ಸಂಭ್ರಮದಿಂದ ಆಚರಿಸುವುದಷ್ಟೆ ಅಲ್ಲದೆ, ಈ ಅವಧಿಯನ್ನು ಅಶುದ್ಧವೆಂದು ಭಾವಿಸಿ ಅದನ್ನು ಶುದ್ಧಗೊಳಿಸುವ ಕಾರ್ಯ ಮಾಡುತ್ತಾರೆ. ಈ ಸಂದರ್ಭದಲ್ಲಿ ಒಂದೊಂದು ಸಮುದಾಯದಲ್ಲಿ ತನ್ನದೇಯಾದ ಸಂಪ್ರಾದಾಯಿಕ ಆಚರಣೆಗಳನ್ನು ರೂಡಿಸಿಕೊಂಡಿವೆ.

ಸೋಲಿಗರಲ್ಲಿ ಹೆಣ್ಣು ಮಗಳು ಋತುಮತಿಯಾದಾಗ ಐದು ದಿನದ ಸೂತಕ ಆಚರಿಸುತ್ತಾರೆ. ಮೈನೆರದ ತಕ್ಷಣ ಐವರು ಹೆಂಗಸರು ಅವಳಿಗೆ ಸ್ನಾನ ಮಾಡಿಸಿ, ಕೈಗೊಂದು ಕುಡುಗೋಲು ಕೊಟ್ಟು ಅವಳಿಗೆಂದೇ ಕಟ್ಟಿದ ಸೊಪ್ಪಿನ ಗಮ್ಮಿಯಲ್ಲಿ ಕೂರಿಸುತ್ತಾರೆ. ಒಬ್ಬಳೆ ಇದ್ದರೆ ಭಯಪಡಬಹುದೆಂದು ಆ ಐದು ದಿನಗಳ ಕಾಲ ಅವಳ ಜೊತೆಗೊಬ್ಬ ಗೆಳತಿಯನ್ನು ಇರಿಸುತ್ತಾರೆ. ಈ ಸೂತಕದ ಅವಧಿಯಲ್ಲಿ ಹುಡುಗಿ ಮತ್ತು ಗೆಳತಿಯನ್ನು ಯಾರೂ ಮುಟ್ಟಿಸಿಕೊಳ್ಳುವುದಿಲ್ಲ. ಗುಮ್ಮಿಯಲ್ಲಿದ್ದಷ್ಟು ಕಾಲ, ಆಕೆ ಮೇಲೆ ನೋಡಿದರೆ, ಅಂಗಾತ ಮಲಗಿದರೆ ದೆವ್ವಗಳು ಹಿಡಿಯುತ್ತವೆಂದು ನಂಬುತ್ತಾರೆ. ಆದ್ದರಿಂದ ಅಂಗಾತ ಮಲಗದೆ ಮಗ್ಗುಲಾಗಿ ಮಲಗಬೇಕೆಂದು ಸೂಚಿಸುತ್ತಾರೆ. ನಾಯಿ, ಕೋಳಿ, ದೆವ್ವಗಳು ಇರುವುದರಿಂದ ಆಕೆ ಎಚ್ಚರದಿಂದ ಇರಬೇಕೆನ್ನುತ್ತಾರೆ. ಆಕೆ ಹೊರಗೆ ಹೋಗಬೇಕಾದರೂ ಕತ್ತೆತ್ತಿ ಸಹ ನೋಡದೆ, ಆ ಕುಡುಗೋಲನ್ನು ಹಿಡಿದು ಅಥವಾ ಚಪ್ಪಲಿಯನ್ನು ಧರಿಸಿ, ಓಡಾಡಬೇಕು, ಕಬ್ಬಿಣಕ್ಕೆ ಮತ್ತು ಚಪ್ಪಲಿಗೆ ದೆವ್ವವೇ ಹೆದರುತ್ತದೆಂದು ಸೋಲಿಗರು ನಂಬಿದ್ದಾರೆ.

ಮೊದಲ ಬಾರಿಗೆ ಮೈ ನೆರೆದ ಹಸಿ ಮೈಯ್ಯ ಹೆಣ್ಣು ಮಗಳನ್ನು ದೆವ್ವವೂ ಬಯಸುತ್ತವೆಂಬ ಆತಂಕ ಸೋಲಿಗರಲ್ಲಿದೆ. ಬಹುಶಃ ಗಮ್ಮಿಯಲ್ಲಿದ್ದ ಹೆಣ್ಣು ಮಕ್ಕಳನ್ನು ದೆವ್ವದ ಹೆಸರು ಹೇಳಿ ಹೆದರಿಸಿ ಭೋಗಿಸುವ ಗಂಡಸರೂ ಇದ್ದರೆಂದು ತೋರುತ್ತದೆ. ಆದ್ದರಿಂದ ಒಂದೆಡೆ ಸಂಪ್ರಾದಾಯವನ್ನು

ಪರಿಪಾಲಿಸುತ್ತಾ ಇದ್ದಂತೆಯೇ ಶೋಧನೆಯಾದ ಅನಂತರ ಆ ಗಂಡಸರಿಂದ ಪಾರಾಗಲೂ ಪ್ರತಿತಂತ್ರಗಳನ್ನು ಹುಡುಕಿಕೊಂಡರು.

ಸೋಲಿಗರ ಸಾವು

Death is a law : not a punishment, Every man Knows he will die, but no man wants to belive it.[೩೭] ಸಮಾಜಕ್ಕೆ ಸಾವು ಒಂದು ಭೌತಿಕ ಸಂಗತಿಯೂ ಹೌದು. ಅದೇ ಕಾಲಕ್ಕೆ ಅದು ಒಂದು ಭಾವ ಪ್ರಪಂಚವೂ ಹೌದು. ಕುಟುಂಬಗಳು, ಸಮುದಾಯಗಳು ಈ ಎರಡು ನೆಲೆಯಲ್ಲಿ ಸಾವನ್ನು ಪರಿಭಾವಿಸುತ್ತವೆ.[೩೮] ಜೀವಿ ಹುಟ್ಟಿದ ಮೇಲೆ ಸಾಯುವುದು, ಹುಟ್ಟಿನಷ್ಟೇ ಸಹಜ ಕ್ರಮವಾದರೂ ಶಾಶ್ವತ ಅಗಲಿಕೆಯ ಸಾವು ಕೇವಲ ಒಂದು ಕುಟುಂಬದ ಒಂದು ಸಮಾಜದ ಒಬ್ಬ ಸದಸ್ಯನ ಸಾವಾಗಲಾರದು. ಕುಟುಂಬದ ಸದಸ್ಯನ ಅಗಲಿಕೆ ಅಲ್ಲಿರುವ ಭಾವನಾತ್ಮಕ ಎಳೆಗಳ ತಂತುವನ್ನು ಕಡಿದು ಹಾಕುವುದಲ್ಲದೆ, ಅಲ್ಲಿಯವರೆವಿಗೂ ಇದ್ದ ಒಂದು ವ್ಯವಸ್ಥೆಯನ್ನು ಸ್ವಲ್ಪಕಾಲದ ಮಟ್ಟಿಗಾದರೂ ಅಸ್ತವ್ಯಸ್ತಗೊಳಿಸುತ್ತವೆ. ಸತ್ತವರ ಸಂಬಂಧ ತೀವ್ರತೆಯಿಂದ ಕೂಡಿದ್ದರೆ, ಭರಿಸಲಾಗದ ಸಾವಿನ ನೋವಿನಿಂದ, ಸಾವು ಯಾಕಾದರೂ ಬರುತ್ತದೆಂದು ದಿಗ್ಭ್ರಾಂತರಾದರೂ ಅದು ಅನಿವಾರ್ಯವೆನ್ನುವ ಸತ್ಯವನ್ನು ನಿಧಾನವಾಗಿ ಒಪ್ಪಿಕೊಳ್ಳುತ್ತಾರೆ. ಒಂದು ಜೀವ ತನ್ನ ದೇಹವನ್ನು ಬಿಟ್ಟು ಹೋಗುವ ಯಾಂತ್ರಿಕ ಕ್ರಿಯೆಯಾಗಿ ಉಳಿಯದಂತೆ, ಆ ಸಂಬಂಧಿಯಾದ ಆಚರಣೆಗಳು ಎಚ್ಚರಿಸುತ್ತವೆ.

ಸೋಲಿಗರಲ್ಲಿ ಸಾಯುವ ಮೊದಲಿಗೆ ಸೂಲು ಇದ್ದಂತೆಯೇ ಗುಳ್ಳಿಂದಾಚೆಗೆ ಹಿಡಿಯುತ್ತಾರೆ. ಸೂಲು ಹೋದ ತಕ್ಷಣ ಕೈಕಾಲು ಮಡಿಸದೆ ಇದ್ದರೆ ಸಂಸ್ಕಾರದ ವೇಳೆ ಕಷ್ಟವಾಗುತ್ತದೆಂದು ಮಡಿಸುವ ಸಂಪ್ರಾದಾಯ ಇತರರಲ್ಲಿ ಇದ್ದರೂ ಸೋಲಿಗರಲ್ಲಿ ಈ ಪದ್ದತಿಯಿಲ್ಲ. ಸತ್ತ ಸುದ್ಧಿಯನ್ನು ಸಾಧ್ಯವಾದಷ್ಟು ಎಲ್ಲಾ ಪೋಡುಗಳಿಗೆ ಮುಟ್ಟಿಸುತ್ತಾರೆ. ಪೋಡಿನ ಪ್ರತಿಯೊಂದು ಮನೆಯಿಂದ ಒಬ್ಬರಾದರೂ ಶವಸಂಸ್ಕಾರಕ್ಕೆ ಬರಲೇಬೇಕು. ಬೆಳಿಗ್ಗೆ ಸತ್ತರೆ ಸಂಜೆಯೊಳಗೆ ಸಂಸ್ಕಾರ ಮಾಡಬೇಕು.

ಸೋಲಿಗರಲ್ಲಿ ತಿಥಿ ಕಾರ್ಯ

ಸೋಲಿಗರಲ್ಲಿ ಸತ್ತ ಐದನೆಯ ದಿನದಂದು ಹನ್ನೆರಡನೆ ದಿನದೊಳಗೆ ತಿಥಿ ಮಾಡಬಹುದು. ತಿಥಿ ಮಾಡಲು ಆರ್ಥಿಕವಾಗಿ ಅನುಕೂಲವಾದ ದಿನಕ್ಕೆ ಹೊಂದಿಸಿಕೊಳ್ಳುತ್ತಾರೆ. ಹಿಂಡೆಕೊಳನ್ನು ಸರಿಯಾಗಿ ಹಾಕಲಿಲ್ಲವೆಂದು ಸತ್ತವರು ದೈವವಾಗಿ ಕಾಡುತ್ತಾರೆಂಬ ಭಯವಿದೆ. ಸತ್ತವರು ಬಂದು ಹೋಗಿರುವುದನ್ನು ತಿಳಿಯಲು ತಿಥಿಗೂ ಮೊದಲೇ "ದೇವತಿ ಬಂದು ನೋಡಿ ಹೋಗಿದೆಯೇ ಎಂದು ತಿಳಿಯಲು ಮುದ್ದೆ ಸಾರು ಇಟ್ಟು ಪುಟ್ಟಿ ದಬ್ಬಾಕಬೇಕು. ಬಂದು ಹೋಗಿರುವುದರ ಪತ್ತೆ ಮಾಡಲು ಪುಟ್ಟಿಯ ಸುತ್ತ ಬೂದಿಯ ಅಥವಾ ಸಣ್ಣ ಮರಳಿನ ಜಾಡು ಬಿಟ್ಟು, ಬೆಳಿಗ್ಗೆ ನೋಡಿದರೆ, "ಮರುಳು

ಅಥವಾ ಬೂದಿಯ ಮೇಲೆ ದೇವತೆಯ ಕೈಬಿಟ್ಟು, ಕಾಲುಬೆಟ್ಟ ಗುರುತೇನಾದರೂ ಇರುತ್ತದೆ. ಅದು ತಿಂದುಕುಡಿದು ಹೋಗಿದೆಯೋ ಎನ್ನುವುದು ಇದರಿಂದ ಗೊತ್ತಾಗುತ್ತದೆ.[೯] ಹಿಟ್ಟಿನಲ್ಲಿಯೋ ನೀರಿನಲ್ಲಿಯೋ ಕಮ್ಮಿ ಆಗಿರಬಹುದು. ಅದು ಒಂದು ತಿಂದು ಹೋಗಿದ್ದರೆ ಮುಂದೆ ತೊಂದರೆ ಮಾಡದೆ ಅವರ ಆತ್ಮ ಶಾಂತವಾಗಿರುತ್ತದೆ ಎನ್ನುವ ಸೋಲಿಗರ ಪ್ರಕಾರ "ಬರದೆಯ ಹೋದರೆಯೆ ತೊಂದರೆ" ಸತ್ತವರ ದೈವ ಆಗಿದ್ದರೆ, ಅದಕ್ಕೆ ಬಂದೋಬಸ್ತು ಮಾಡಬೇಕು. ಸೋಲಿಗರ ಪ್ರಕಾರ ಬಂದೋಬಸ್ತೆಂದರೆ ದೇವರಿಗೆ ಹಣ್ಣುಕಾಯಿ ಪೂಜೆ ಮಾಡಿಸುವುದು. ಒಂದು ಕಟ್ಟು ಮಾಡಿ ತಡೆ ಒಡೆಸುವುದು. ಒಟ್ಟಿನಲ್ಲಿ ಸತ್ತವರು, ಬದುಕಿರುವವರು ಇಬ್ಬರೂ ಸುಖವಾಗಿರಬೇಕು ಎನ್ನುವುದೇ ಮುಖ್ಯ ಉದ್ದೇಶ.

ತಿಥಿಗೆ ಎಲ್ಲರೂ ಒಂದು ಸೇರಿದ ತರುವಾಯ ಸತ್ತವನ ಪ್ರೇತಾತ್ಮವನ್ನು ಬರಿಸಲು ಕಲ್ಲಿನ ಗೊಂಬೆಯೊಂದನ್ನು ತರಲು ಐದು ಕುಲದವರೂ ಹೋಗಬೇಕು. ಶುದ್ಧವಾಗಿ, ನೇರವಾಗಿರುವ ಕಲ್ಲೊಂದು ಯಾರಿಗೂ ಸಿಗುತ್ತದೆಯೋ ಅವರು ಅದನ್ನು ಎಡಗಾಲಿನಿಂದ ಒದ್ದು ಎತ್ತಿಕೊಂಡು ತಿಥಿ ಮಾಡುತ್ತಿದ್ದ ಸ್ಥಳಕ್ಕೆ ತರುತ್ತಾರೆ. ಎಣ್ಣೆ ಸೀಗೆಕಾಯಿಯಲ್ಲಿ ತೊಳೆದು ಹೂ, ಕುಂಕುಮ, ವಿಭೂತಿ ಹಾಕಿ ಪೂಜೆ ಮಾಡಬೇಕು. ಅದರ ಮುಂದೆ ಐದು ಮುದ್ದೆ, ಸಾಂಬಾರು, ತಿಂಡಿಸಾಮಾನು, ಹಣ್ಣುಹಂಪಲು, ಸತ್ತವನು ಏನೇನು ತಿನ್ನುತ್ತಿದ್ದನೋ ಆ ಸುಖ ಭೋಜನ ಎಲ್ಲಾ ಮಾಡಬೇಕು. ಒಬ್ಬ ಜಾತಿವಂತ ಆ ಕಲ್ಲನ್ನು ಎತ್ತುತ್ತಿದ್ದಂತೆ ಆತನ ಮೈಮೇಲೆ ಗಾಳಿ ಬರುತ್ತದೆ. ಹೀಗೆ ಬಂದರೆಂದು ಯಾರಿಗೂ ಏನು ತೊಂದರೆ ಇಲ್ಲವೆಂದು ಗೊತ್ತಾಗುತ್ತದೆ. ಆ ಕಲ್ಲಿನಲ್ಲಿ ಸತ್ತವರ ಪ್ರೇತಾತ್ಮ ಇರುವುದರಿಂದ ಅರ್ಥಕ್ಕೆ ಎತ್ತವಷ್ಟರಲ್ಲಿ ಎತ್ತುವವರಿಗೆ ಆಯಾಸ ಆಗುತ್ತದೆ. ಕಲ್ಲು ಹಿಡಿತದವರ ಮೈಮೇಲೆ ಸತ್ತವರ ಗಾಳಿ ಬಂದು ಜನರ ಜೊತೆಯಲ್ಲಿ ಮಾತಾಡುತ್ತದೆ. ಅದು ಬಿಟ್ಟು ಹೋಗುತ್ತಿದ್ದಂತೆ, ಆ ಕಲ್ಲನ್ನು ನೆಲದ ಮೇಲಿಡುತ್ತಾರೆ. ಅಂತ್ಯಕ್ರಿಯೆಯ ಸಂದರ್ಭದಲ್ಲಿ ತಿಥಿ ಮಾಡುವವರೆಗೆ ಸತ್ತವನ ಆತ್ಮದ ಸಂಕೇತವಾಗಿ ಒದು 'ಕಲ್ಲ'ನ್ನ (ಸತ್ತ ವ್ಯಕ್ತಿಯ ಆತ್ಮ ಕಲ್ಲಿನಲ್ಲಿ ಇರಲೆಂಬ ಉದ್ದೇಶದಿಂದ) ಎತ್ತಿಡುವ ಸಂಪ್ರಾದಾಯ ಅನೇಕರಲ್ಲಿದೆ.

ಕಲ್ಲಿನ ಶಾಸ್ತ್ರ ಮುಗಿದ ಅನಂತರದಲ್ಲಿ ಬಾಳೆ ಅಥವಾ ತೇಗದ ಎಲೆಯನ್ನು ಪ್ರತಿ ಭಿನ್ನ ಗೋತ್ರಕ್ಕೆ ಒಂದರಂತೆ ಆ ಕಲ್ಲಿನ ಸುತ್ತ ಹಾಸಿ, ಅದರ ಮೇಲೆ ವಿಧ ವಿಧವಾದ ಆಹಾರ ಇಡುತ್ತಾರೆ. ತನ್ನ ಗೋತ್ರಕ್ಕೆ ಇರಿಸಿದ ಆಹಾರವನ್ನು ಆಯಾ ಗೋತ್ರದವನು ತಿನ್ನುತ್ತಾನೆ.[೬೦] ಐದು ಕುಲದ ಮುಖಂಡರು ಊಟ ಮಾಡಿದ ಬಳಿಕ ಬಂದವರಿಗೆಲ್ಲ ಊಟ ಹಾಕುತ್ತಾರೆ. ಬಳಿಕ ಆ ಕಲ್ಲನ್ನು ಹಿಡಿದು, ಐದು ಕುಲದ ಯಜಮಾನರೂ ಒಂದೊಂದು ಹಿಡಿ ರಾಗಿಯನ್ನು ಹಿಡಿದು ಆ ಕಲ್ಲಿನ ಮೇಲೆ ಗರಿಕೆಯಿಂದ ನೀರು ಬಿಡುವುದೇ "ಹೆಗಲು ತೊಳೆಯುವುದು" ಅದಾದರೆ ಸತ್ತವನ ಜನ್ಮದ ದೋಷ, ಸೂತಕ ಕಳೆದು ಅವರ ಮನೆಯವರು ಹಾಗೂ ಉಳಿದವರು ಮೈಲಿಗೆ ಕಳೆದುಕೊಂಡರೆಂದು ಲೆಕ್ಕ.

ಸೋಲಿಗ ತಮ್ಮಡಿಗಳು

ತಂಬಿ+ಅಡಿ=ತಮ್ಮಡಿ ಎಂದರೆ ದೇವರ ದಾಸ ಎಂದರ್ಥ. ಸೋಲಿಗ ಪೂಜಾರಿಗಳನ್ನು ತಮ್ಮಡಿಗಳು ಎಂದು ಕರೆಯುತ್ತಾರೆ. ತಮ್ಮಡಿಗಳ ಕುರಿತು "The Thammadis are saivas & consider it sacred to serve in temele dedicated to siva, They perform siva pooja but donot recitu gaayatri."[೮೧] ಎಂಬ ಉಲ್ಲೇಖವಿದೆ. ತಮ್ಮಡಿಗಳು ಶಿವಾರ್ಚಕರು ಎನ್ನುವುದು ಇದರಿಂದ ಖಚಿತಪಡುತ್ತದೆ. ಸೋಲಿಗರು ಶೈವಾರಾಧಕರೆನ್ನಲು ಅವರ ಪೂಜಾರಿಗಳನ್ನು ತಮ್ಮಡಿ ಎಂದಿರುವುದೇ ಸಾಕ್ಷಿ. ತಮ್ಮ ತಮ್ಮಡಿಗಳು ಅಲೌಕಿಕ ಶಕ್ತಿಗಳನ್ನು ಸಂಪರ್ಕಿಸಿ ಮಾತಾಡಿಸುವ ಸಾಮರ್ಥ್ಯವುಳ್ಳವುದೆಂಬ ಧೃಡ ವಿಶ್ವಾಸ ಸೋಲಿಗರಿಗಿದೆ. ವಂಶಪಾರಂಪರ್ಯವಾಗಿ ತಮ್ಮಡಿಗಳಾಗುವುದರಿಂದ, ತನ್ನ ಹಿರಿಯ ಮಗನಿಗೆ ಪೂಜಾ ವಿಧಿವಿಧಾನಗಳ ಬಗ್ಗೆ ತಮ್ಮಡಿ ತರಬೇತಿ ನೀಡುತ್ತಾನೆ. ಅವನ ಇನ್ನುಳಿದ ಮಕ್ಕಳೂ ಈ ಕೆಲಸ ಮಾಡಬಹುದು. ಪ್ರತಿದಿನವೂ ಶಿಷ್ಟ ದೇವರ ಅರ್ಚಕರ ರೀತಿ ಸ್ನಾನ-ಮಡಿ ಮಾಡದೆ ಇದ್ದರೂ ದೇವರ ಪೂಜೆಯನ್ನು ಅದರಲ್ಲಿಯೂ ಸೋಮವಾರ ಮತ್ತು ಶುಕ್ರವಾರ ತಪ್ಪದೇ ಮಾಡುತ್ತಾರೆ. ಕೆಲವು ತಮ್ಮಡಿಗಳಂತೂ ಪೂಜೆ ಆಗುವವರೆಗೂ ನೀರು, ಕಾಫಿ ಕೂಡಾ ಕುಡಿಯದೆ ಕಟ್ಟುಪವಾಸದಲ್ಲಿರುತ್ತಾರೆ. ನಿಯಮದಿಂದ ಪೂಜೆ ಮಾಡಿದಿದ್ದರೆ ದೇವರ ಕೋಪಕ್ಕೆ ಗುರಿಯಾಗುವ ಭಯವಿದೆ.

ತಮ್ಮಡಿಗಳು ಸೋಲಿಗ ದೇವರ ಅರ್ಚಕರಾಗಿದ್ದರೂ ಅದಷ್ಟೇ ಅವರ ವೃತ್ತಿಯಾಗಿರುವುದಿಲ್ಲ. ಸೋಲಿಗರ ತಮ್ಮಡಿಗಳು ದೇವರ ಪೂಜೆ ಮಾಡುತ್ತಾ ಸೋಲಿಗ ಸಮುದಾಯ ಮತ್ತು ದೇವರ ನಡುವಣ ಧಾರ್ಮಿಕ ಕೊಂಡಿಗಳಾಗಿದ್ದಾರೆ. ಮಾಂತ್ರಿಕರಂತೆ ತಮ್ಮ ಮಂತ್ರಶಕ್ತಿಯಿಂದ ಸೋಲಿಗರ ಮೈಮೇಲಿನ ಭೂತೋಚ್ಚಾಟನೆಯನ್ನು ಮಾಡುವ ತಮ್ಮಡಿ, ವೈದ್ಯನಾಗಿ ಭಕ್ತರ ರೋಗಗಳಿಗೆ ವೈದ್ಯೋಪಚಾರ ಮಾಡಲೂ ಬಲ್ಲವನು. ಪ್ರತಿಯೊಬ್ಬ ತಮ್ಮಡಿಗೂ ಕೆಲವಾದರೂ ಔಷಧಿಗಳ ಬಗ್ಗೆ ತಿಳಿವಳಿಕೆಯಿರುತ್ತದೆ.

ಸೋಲಿಗರು ತಮ್ಮಡಿಗಳನ್ನು ಬಹಳ ಗೌರವದಿಂದಲೇ ಕಾಣುತ್ತಾರೆ. ದೇವತೆಗಳ ಸಂಪರ್ಕ ಬೆಳೆಸಬಲ್ಲ ಇವರು, ಬೇಕೆಂದಾಗಲೆಲ್ಲಾ ದೇವರನ್ನು ಅವಾಹಿಸಿಕೊಳ್ಳಬಲ್ಲ. ದೇವರ ಮೈಮೇಲೆ ಬಂದಾಗ ತಮ್ಮ ಬಳಿಗೆ ಬಂದ ಭಕ್ತರ ಸಮಸ್ಯೆಗಳನ್ನು ತಾಳಿಕೊಂಡು ಪರಿಹರಿಸುತ್ತಾರೆ.

ಅಡಿಟಿಪ್ಪಣಿಗಳು

೧. ತಪಸ್ವೀಕುಮಾರ ಎನ್., ಸಂಸ್ಕೃತಿ ವಿಕಾಸ, ಪು.೨೮

೨. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸ್ಮರಣ ಸಂಪುಟ, ಪು.೧೪

೩. ರಂಗನರಸಿಂಹಚಾರ್ಯ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೪. ಅನಂತಮೂರ್ತಿ, ಬೆತ್ತಲೆ ಪೂಜೆ ಯಾಕೆ ಕೂಡದು, ಪು.೧೬೪

೫. ನಾಗರಾಜ ಮೈ.ನ., ಬಿಳಿಗಿರಿರಂಗನಬೆಟ್ಟ, ಪು.೨೭

೬. ಸಿದ್ಧಾಂತ ದಾಸಯ್ಯ ಮನೆತನ, ಮದ್ದೂರು, ಸಂದರ್ಶನ

೭. ಮಾದಯ್ಯ, ಚಮ್ಮಾರ, ಬೂದಿತಿಟ್ಟು, ಸಂದರ್ಶನ

೮. ಗುಂಡಪ್ಪ ಡಿ.ವಿ., ಮೈಸೂರು ದಿವಾನರು, ಪು.೧೫

೯. ವಿವೇಕ ರೈ ಬಿ.ಎ., ಜಾನಪದ ಆಟಗಳು, ಪು.೨೪೨

೧೦. ಮಾಹಿತಿ ಮೂಲ ಕಪ್ಪು ಕಡತಗಳು, ವಿಭಾಗೀಯ ಪತ್ರಗಾರ

೧೧. ರಾಜ್ಯ ಪತ್ರಾಗಾರ, ಬೆಂಗಳೂರು, ವ್ಯವಸಾಯ ಕಡತ, ನಂ.೨

೧೨. ರಂಗನರಸಿಂಹಚಾರ್ಯ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೧೩. General and Revenue Secretary, Departments, Govt. of Mysore

೧೪. Survey and settlement in Mysore report, 1944

೧೫. ಲೋಹಿಯಾ ಸ್ವಾತಂತ್ರ್ಯ ಅಂತರ್ಜಾಲ, ಪು.೮೭

೧೬. ಸುಂದರಾಜ್ ಅಯ್ಯಂಗಾರ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೧೭. ಅನ್ನಪೂರ್ಣ ಎಂ.ನಾಯಕ್, ರಾಜ್ಯಪರಿವಾರದವರು, ಪು.೧೫

೧೮. ಕೊಸಂಬಿ, ಪ್ರಾಚೀನ ಭಾರತದ ಚರಿತ್ರೆ, ಪು.೪೧

೧೯. ಬರಗೂರು ರಾಮಚಂದ್ರಪ್ಪ, ವರ್ತಮಾನ, ಪು.೨೧೮

೨೦. ಚಂದ್ರಕಟ್ಟೆ, ಸೋಲಿಗರ ಕುಣಿತ, ಪು.೬೦-೬೨

೨೧. ಚಂದ್ರ ಕಾಳೇನಹಳ್ಳಿ, ಸೋಲಿಗರು, ಪು.೧೮೪-೧೮೫

೨೨. ಲಕ್ಕಪ್ಪಗೌಡ ಎಚ್.ಜೆ., ಜಾನಪದ, ಪು.೮

೨೩. ರಾಜೇಗೌಡ ಹೊಸಳ್ಳಿ, ಜಾನಪದ ಸಂಕಥನ, ಪು.೪೩

೨೪. ಗುರುರಾಜರಾವ್ ಬಿ.ಕೆ., ಕರ್ನಾಟಕದ ಲೋಹಯುಗ ಸಂಸ್ಕೃತಿಗಳು, ಪು.೩೮

೨೫. ಚಲವಾದಿ ಮಾದೇಗೌಡ, ಎರಕನಗದ್ದೆ, ಸಂದರ್ಶನ

೨೬. ಚಂದ್ರಪ್ಪ ಕೆ., ಸೋಲಿಗರು ಒಂದು ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಪು.೧೫೬

೨೭. ಬೊಮ್ಮಯ್ಯ, ಎರಕನಗದ್ದೆ, ಸಂದರ್ಶನ

೨೮. ಚಂದ್ರಶೇಖರಯ್ಯ, ಕಾರಮಕ್ಕ, ಪು.೧೨೦

೨೯. ನಾರಾಯಣಸ್ವಾಮಿ ಕೆ.ವೈ., ನಂಬಿಕೆಗಳ ಸಾಂಸ್ಕೃತಿಕ ಸ್ವರೂಪ ಚಿಂತನೆ ಹೊಸತು, ಪು.೯೧

೩೦. ಸಾರಾ ಅಬೂಬ್ಕರ್, ಅತ್ತಿಮಚ್ಚೆ ಮತ್ತು ಸಮಕಾಲೀನ ಸ್ತ್ರೀ ಸಂಸ್ಕೃತಿ, ಪು.೪೦-೪೧

೩೧. ಮಹಾದೇವಮ್ಮ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೩೨. ಹಿರಿಯಣ್ಣ ಅಂಬಳಿಕೆ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಪು.೧೪೬

೩೩. ಅದೇ, ಪು.೭೮

೩೪. ಕನ್ನಡ ವಿಶ್ವಕೋಶ, ಸಂ.೧, ಮೈಸೂರು ವಿಶ್ವವಿದ್ಯಾಲಯ, ಪು.೭೦೩

೩೫. ಪುಟ್ಟಯ್ಯ ಬಿ.ಎಂ., ಸಾವು ಒಂದು ಚಿಂತನೆ, ಪು.೯

೩೬. ಚಂದ್ರಶೇಖರ ಟಿ.ಆರ್., ಜಾನಪದ ಜಗತ್ತು, ಪು.೧೧

೩೭. ಹಿರೇಮಠ ಎಸ್.ಎಂ., ಹೀಬ್ರೂಗಾದೆ, ಸಾವಿನ ಪರಿಕಲ್ಪನೆ, ಪು.೭೮

೩೮. ಪುಟ್ಟಯ್ಯ ಬಿ.ಎಂ., ಸಾವು ಒಂದು ಚಿಂತನೆ, ಪು.೧೪

೩೯. ಚಲವಾದಿ ಮಾದೇಗೌಡ, ಎರಕನಗದ್ದೆ, ಸಂದರ್ಶನ

೪೦. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಪು.೧೮೮

೪೧. Anantha Krishna Iyyer L.K. & Nanjundiah, **The Mysore Tribes and Castes,** Vol.I, P.607

ಅಧ್ಯಾಯ ೬

ಜಾತ್ರೆ ಮತ್ತು ಉತ್ಸವ

೬

ಜಾತ್ರೆ ಮತ್ತು ಉತ್ಸವ

ಉತ್ಸವಗಳ ಹಿನ್ನೆಲೆ

ಕೆಲವು ಆಚರಣೆಗಳನ್ನು ವಿಶೇಷ ಸಂದರ್ಭದಲ್ಲಿ ಆಚರಿಸಲ್ಪಟ್ಟಾಗ ಹಬ್ಬಗಳಾಗುತ್ತವೆ. ಈ ಹಬ್ಬಗಳಿಗೆ ವಾಣಿಜ್ಯದ ಸ್ಪರ್ಶ ಸಿಕ್ಕಿದಾಗ ಜಾತ್ರೆಯಾಗುತ್ತವೆ. ಪಾರಂಪರಿಕವಾಗಿ ನಡೆಸಿಕೊಂಡು ಬಂದಿರುವ ಧಾರ್ಮಿಕವಾದ ಆಚರಣೆಗಳು ಸಾಮಾಜಿಕ ವ್ಯವಹಾರದ ನೆಲೆಗೆ ತಲುಪ ತೊಡಗಿವೆ. ಸಾಂಸ್ಕೃತಿಕ ಮಹತ್ವ ಪಡೆಯುತ್ತಿದ್ದಂತೆ ಅದರ ದಾರಿಗಳು ಹೆದ್ದಾರಿಗಳಾಗಿ ಅಲ್ಲಿಗೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗುತ್ತಾರೆ. ಒಂದೆಡೆ ಈ ರೀತಿಯ ಆಚರಣೆಗಳಿವೆ ಎಂದಾದರೆ, ಆ ದೇವರು ಜನಪ್ರಿಯವಾಗುತ್ತದೆ. ಆ ರೀತಿಯ ಉತ್ಸವಗಳನ್ನು ಇನ್ನೊಂದು ಕಡೆಯಲ್ಲಿ ಆಚರಿಸಲು ಮುಂದಾಗುತ್ತಾರೆ. ಹೀಗಾಗಿ ಬಿಳಿಗಿರಿಯಲ್ಲಿ ಕಾಣುವ ಉತ್ಸವಗಳ ಮೂಲ ಇನ್ನೆಲ್ಲಿಯೋ ಇರುತ್ತದೆ. ಹಾಗೆಯೇ ಬಿಳಿಗಿರಿಯಲ್ಲಿ ಕಾಣುವ ಆಚರಣೆಗಳನ್ನು ಅದಕ್ಕಿಂತ ದರ್ಜೆಯಲ್ಲಿ ಕಡಿಮೆ ಇರುವ ದೇವಸ್ಥಾನ ಹಾಗೂ ದೇವರ ವಿಚಾರದಲ್ಲಿ ಅನುಕರಿಸುವುದು, ಸಾಮಾನ್ಯ. ಆದ್ದರಿಂದ ದೇವರೂ ಮೇಲೇರಬೇಕಾದರೆ, ಮೇಲೇರಿರುವ ದೇವರನ್ನು ಅನುಕರಿಸುವುದು ಸಹಜ.

ದೇವಸ್ಥಾನ ಹೆಚ್ಚು ಜನರನ್ನು ಸೆಳೆಯಬೇಕೆಂದರೆ ಸಾಮಾಜಿಕರು ಸೇರಲು ಅವಕಾಶ, ಅನುಕೂಲವಾಗುವ ಉತ್ಸವಗಳನ್ನು ಏರ್ಪಡಿಸುತ್ತಲೇ ಇರಬೇಕು. ಉತ್ಸವ ಆಚರಿಸುವ ಮನಸ್ಸು ಮತ್ತು ಅನುಕೂಲ ಎರಡೂ ಇದ್ದರೆ ಅದಕ್ಕೆ ಬೇಕಾದ ಸಂದರ್ಭಗಳನ್ನು ಜೋಡಿಸಿಕೊಳ್ಳುವುದು ಕಷ್ಟವಲ್ಲ. ಆದ್ದರಿಂದ ದೇವರ ಸ್ಥಾನಮಾನ ಹೆಚ್ಚಿದಷ್ಟು ಉತ್ಸವಗಳಲ್ಲೂ ಹೆಚ್ಚಳವಿರುತ್ತದೆ. ಕೆಲವು ಆಚರಣೆಗಳು ದೇವಸ್ಥಾನದ ಆವರಣದಲ್ಲಿಯೇ ನಡೆದರೂ, ಇನ್ನು ಕೆಲವು ದೇವಸ್ಥಾನವನ್ನು ಬಿಟ್ಟು ಹೊರಗೆ ನಡೆಯುತ್ತವೆ. ಆಚರಣೆಗಳು ದೇವಾಲಯದೊಳಗೆ ನಿತ್ಯವು ಸಾಂಪ್ರದಾಯಿಕವಾಗಿ ನಡೆದರೂ, ಕೆಲವು ವಿಶೇಷವಾದ ಸಂದರ್ಭಗಳಲ್ಲಿ ಇರುತ್ತವೆ. ದೊಡ್ಡ ಉತ್ಸವಗಳಿಗೆ ಸಾಮಾಜಿಕ ಭಕ್ತರ ದಂಡು ಬಂದು ಸೇರಿ ಮಾಡುವ ಭಕ್ತಿಯ ಪ್ರಚಾರ ವರ್ಷ ವರ್ಷವೂ ಸೇರುವವರ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗುತ್ತದೆ. ದೇವಾಲಯಕ್ಕೆ ಸೇವೆಯನ್ನು ಸಲ್ಲಿಸಿದರೂ ದೇವರನ್ನು ನೋಡಲು ಸಾಧ್ಯವಿಲ್ಲದಂತವರು

ದೇವಾಲಯವನ್ನೇ ನೋಡಿ ಸಂತೃಪ್ತಿ ಪಡೆಯಬೇಕಾಗುವ ವಿಚಿತ್ರ ಸ್ಥಿತಿ ಭಾರತದಲ್ಲಿ ಮಾತ್ರ ಇದೆ. ಅಂತಹವರು ದೂರದಿಂದಲೇ ದೇವರನ್ನು ದರ್ಶಿಸಲು ಅನುವಾಗುವ ಕಾರಣಕ್ಕೆ ಉತ್ಸವಗಳು ಜಾತ್ರೆಗಳು ಹೆಚ್ಚುತ್ತಾ ಹೋಗಿವೆ.

ದೇವಾಲಯ ಬೆಳೆಯುತ್ತಾ ಬಂದಂತೆ ಮತ್ತು ದೇವರ ಬಗ್ಗೆ ಪ್ರಚಾರ ದೊಡ್ಡದಾದಂತೆ ತೇರು, ಉತ್ಸವಗಳು ಬೆಳೆಯುತ್ತಾ ಹೋಗುತ್ತವೆ. ಅದಕ್ಕೆ ತಕ್ಕಂತೆ ವಿಶೇಷ ಆಭರಣ, ಅಲಂಕಾರಗಳ ಅಗತ್ಯವೂ ಬೀಳುತ್ತದೆ. ವಿಶೇಷ ಸಂದರ್ಭ ಎನ್ನುವಾಗಲೇ ಅಂದು ಹೆಚ್ಚು ಜನ ಸೇರುವಂತ ಏರ್ಪಡುಗಳಾಗುತ್ತವೆ. ಸಂಕ್ರಾಂತಿಯ ಸುಗ್ಗಿ ಕಳೆದ ಬಳಿಕ ಮುಂಗಾರ ಮೊದಲ ಹನಿಗಳು ಬೀಳುವವರೆಗೂ ರೈತರಿಗೂ ಬಿಡುವು. ಈ ಅವಧಿಯಲ್ಲಿ ತೇರು ಜಾತ್ರೆಗಳನ್ನು ನಡೆಸಲಾಗುತ್ತದೆ. ಸಾಮಾನ್ಯವಾಗಿ ಪ್ರತಿವರ್ಷವೂ ಸಾಮಾಜಿಕ ಕ್ಷೇಮಕ್ಕೆಂದು ಧಾರ್ಮಿಕ ಆಚರಣೆಗಳನ್ನು ಕೈಗೊಳ್ಳುವ ಪರಂಪರೆಯಾಗಿ ಜಾತ್ರೆ ಅಥವಾ ತೇರುಗಳನ್ನು ಕಾಣಬೇಕಾಗುತ್ತದೆ.

ಆಗ ತಾನೇ ಸುಗ್ಗಿ ಮುಗಿದು, ಬೆಳೆದದ್ದನ್ನು ತಾವು ಬಳಸುವ ಮೊದಲಿಗೆ ದೇವರಿಗೆಂದು ಎತ್ತಿಟ್ಟದ್ದನ್ನು ಆಲಯಕ್ಕೆ ತಂದೊಪ್ಪಿಸುವ ಪದ್ಧತಿಯಿದೆ. ಅದನ್ನು ತಂದು ತೇರಿನ ಮೇಲೆಯೂ ಎರಚುತ್ತಾರೆ. ತಾವೂ ಬರಲಾಗಲಿಲ್ಲ ಎಂದರೆ ಬೆಟ್ಟಕ್ಕೆ ಬರುವವರ ಕೈಯಲಿ ಕೊಟ್ಟು ಕಳುಹಿಸುತ್ತಾರೆ. ಮೊದಲ ಬೆಳೆಯಲ್ಲಿ ಎತ್ತಿಟ್ಟ ಭಾಗವನ್ನು ದೇವರಿಗೆ ಸಲ್ಲಿಸಿದ ತರುವಾಯ ದೇವರ ಹೆಸರು ಹೇಳಿ ನಾಲ್ಕು ಜನಕ್ಕೆ ಅನ್ನ ಹಾಕಿದರೆ ಪಾಪ ತೀರಿದಂತೆ ಎನ್ನುವ ಶ್ರದ್ಧೆ, ಈ ರೀತಿಯ ಕಾರ್ಯಗಳನ್ನು ಮಾಡಲು ಉತ್ತೇಜಿಸುತ್ತದೆ. ಇದನ್ನು ಮಾಡಿಸಿಕೊಂಡು ಹೋಗುವುದರಿಂದ ಆ ವರ್ಷ ಬೆಳೆಯುವ ಫಸಲಿಗೆ ಯಾವ ತೊಂದರೆಯೂ ಆಗುವುದಿಲ್ಲವೆಂದೂ ಗ್ರಾಮೀಣ ಜನರ ವಿಶ್ವಾಸ. ದೇವರ ಪೂಜೆ ಮಾಡಿಸಿ ತೀರ್ಥ ತೆಗೆದುಕೊಂಡು ಹೋಗಿ ಜಮೀನಿಗೆ, ಮೋಟಾರು, ಬಾವಿ, ದನಕರು ಎಲ್ಲದಕ್ಕೂ ಹಾಕುವುದರಿಂದ, ತಮ್ಮ ಭತ್ತ ಕಬ್ಬುಗಳ ಗದ್ದೆಗೆ ಪ್ರಾಣಿಕಂಟವಿರದಂತೆ ರಂಗಪ್ಪನೆ ತಡೆದು ಕಾವಲಾಗಿರುತ್ತಾನೆ ಎನ್ನುವರು.

ಶಿಷ್ಟ ದೇವತೆಗಳ ಸಂದರ್ಭದಲ್ಲಿ ಮಾತ್ರ ರಥೋತ್ಸವ ಶಬ್ದದ ಬಳಕೆಯಾಗುತ್ತದೆ. ಜನಪದ ದೇವರದ್ದೆಲ್ಲಾ ಜಾತ್ರೆಯಾಗಿ ಬಿಡುತ್ತದೆ. ಬಿಳಿಗಿರಿಯಲ್ಲಿ ವೈಶಾಖ ಮಾಸದಂದು ನಡೆಯುವಂತಹದ್ದು "ಬ್ರಹ್ಮರಥೋತ್ಸವ". ಶಿಷ್ಟರು ಇದನ್ನು ತೇರಿನ ಉತ್ಸವವೆಂದು ಗುರುತಿಸಿದರೂ ಜನಪದರಿಗೆ ಅದು ದೊಡ್ಡ ಜಾತ್ರೆಯಾಗುತ್ತದೆ. ಅಷ್ಟು ದೊಡ್ಡದಲ್ಲದಿರುವ ಸಂಕ್ರಾಂತಿಯ ಜಾತ್ರೆ, ಚಿಕ್ಕ ಜಾತ್ರೆ ಮಾತ್ರವಾಗುತ್ತದೆ. ಒಂದು ತೇರಿಗೆ ಹೆಚ್ಚು ಜನ ಸೇರಿ ತೇರಿನ ಬೀದಿಯಲ್ಲಿ ಸಾಗಿದರೆ, ಮತ್ತೊಂದು ತೇರು ದೇವಸ್ಥಾನದ ಆವರಣ ಬಿಟ್ಟು ಹೋಗುವುದಿಲ್ಲ.

ಜಾತ್ರೆಗಳು

ದೇವಾಲಯಗಳ ಧಾರ್ಮಿಕ ಪರಂಪರೆಯಲ್ಲಿ ಜಾತ್ರೆಗಳು ಅತ್ಯಂತ ಮಹತ್ವದ ಪಾತ್ರವನ್ನು ಪಡೆದಿವೆ. ಶಿಷ್ಟರು ರಥೋತ್ಸವ ಎಂದು ಕರೆದರೂ ಜನಪದರಿಗೆ ಅವು ತೇರುಗಳಾಗುತ್ತವೆ. ಶಿಷ್ಟ ದೈವವೆಂದು ನಂಬಿರುವ ಜನರ ಪಾತ್ರ ಆಲಯ ಮತ್ತು ರಥದ ಮುಂದೆ ಸೀಮಿತವಾಗಿರುತ್ತದೆ. ಆದರೆ ಆ ದೇವರನ್ನು ಆಪ್ತ ದೈವವೆಂದು ನಂಬಿರುವ ಜನಪದರೇ ಹೆಚ್ಚಾಗಿ ಜಾತ್ರೆಯ ಸಂದರ್ಭದ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ರಂಗನಾಥಸ್ವಾಮಿಯ ತೇರು ಕಟ್ಟುವ ಕಾರ್ಯ ಬುಡಕಟ್ಟು ಸಮುದಾಯಕ್ಕೆ ಸೇರಿದರೆ, ಅದನ್ನೆಳೆಯುವ ಕಾರ್ಯವನ್ನು ಜನಪದರೇ ಮಾಡುತ್ತಾರೆ.

ಜನ ನಂಬಿದ ದೈವದ ಮಹಿಮೆ, ಪವಾಡವನ್ನು ಈ ದಿನಗಳಲ್ಲಿ ಪುನಾರವರ್ತನೆ ಮಾಡಿ ಅದರ ಮೂಲಕ ತಾವು ನಂಬಿದ ದೇವರ ಬಗೆಗಿನ ತಮ್ಮ ಭಕ್ತಿ ಗೌರವಗಳನ್ನು ವ್ಯಕ್ತಪಡಿಸುವ ಸಲುವಾಗಿ ಜಾತ್ರೆಗಳಿಗೆ ಜನ ಸೇರುತ್ತಾರೆ. ರಂಗನಾಥಸ್ವಾಮಿಯನ್ನು ಚಿಕ್ಕ ತೇರಿನಲ್ಲಿ ಕೂರಿಸಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ವೈಶಾಖ ಮಾಸದಲ್ಲಿ ದೊಡ್ಡ ತೇರಿನಲ್ಲಿ ಕೂರಿಸಿ ತೇರು ಬೀದಿಯಲ್ಲಿ ಕರೆದೊಯ್ಯುವ ಬ್ರಹ್ಮರಥೋತ್ಸವ ಜರುಗುತ್ತದೆ. ಇದಕ್ಕಾಗಿ ಎರಡು ರಥಗಳು ದೇವಾಲಯದಲ್ಲಿವೆ. ಅಷ್ಟೇನು ಅಲಂಕೃತವಲ್ಲದ ಸಾಮಾನ್ಯವಾದ ರಥವನ್ನು ಸಂಕ್ರಾಂತಿಯ ಜಾತ್ರೆಗೆ ಬಳಿಸಿದರೆ, ಸಾಕಷ್ಟು ದೊಡ್ಡದಾದ, ಕಾಷ್ಠ ಶಿಲ್ಪಗಳಿಂದ ಕೂಡಿದ ರಥವನ್ನು ವೈಶಾಖದ ರಥೋತ್ಸವಕ್ಕೆ ಬಳಸುತ್ತಾರೆ. ಬೆಟ್ಟದಲ್ಲಾಗುವ ಜಾತ್ರೆಗೆ ಜಾತಿಮತ ಭೇದವಿಲ್ಲದೆ ಎಲ್ಲಾ ಜಾತಿ ಜನಾಂಗದ ಜನ ಸೇರುತ್ತಾರೆ. "ಹಬ್ಬ ಊಟಕ್ಕೆ ಚಂದ ಜಾತ್ರೆ ನೋಟಕ್ಕೆ ಚಂದ" ಎನ್ನುವಂತೆ ವರ್ಷಕ್ಕೆರಡು ಸಲ ನಡೆಯುವ ಜಾತ್ರೆಗಳಲ್ಲಿ ಜನ ಈ ಉತ್ಸವನ್ನು ನೋಡುವ ಸಂಭ್ರಮಕ್ಕಾಗಿಯೇ ಸೇರುತ್ತಾರೆ. ೧೭೫೦ರ ಗುರುಲಿಂಗಜಂಗಮ ಚಾರಿತ್ರ್ಯದಲ್ಲಿ ಶ್ವೆತಾಂದ್ರಿ ರಥೋತ್ಸವದ ಪ್ರಸ್ತಾಪ ಮಾಡಲಾಗಿದೆ.

> "ಶ್ವೇತಾದ್ರಿಯೊಳಗೆ ನೀ ನಿಂದೊಡೆ ಕೇಳು| ಭೂತಳದಿಂದಲಿ ಜನರೆಲ್ಲ
> ಪ್ರೀತಿಯಿಂದಲಿ ಬಂದು ಪೂಜಿಸುತ್ತಿರಲು ಮಹಾ| ತೀರ್ಥ ಜಾತ್ರೆಯಾದ ಪುದು|| ೯೫||
> ಎಂದಡೊಳ್ಳಿಯ ಎಂದು ಗಂಗಾಧರನಿಗೆ| ವಂದನೆಯನು ಮಾಡಿ ಕಮಲೆ
> ಅಂದೊಡಗೂಡಲವರೀರ್ವರೊಂದಾಗಿ| ನಿಂದರು ಶ್ವೇತಗಿರಿಯೊಳು| ೯೬||
> ಅಂದು ರಥೋತ್ಸವವನೆ ಮಾಡಿ ಹರುಷದಿ| ಬಂದು ನೃಪರು ಸಂಭಯಿಸೆ
> ಕುಂದದೆ ಮಳೆಬೆಳೆ ಪದಿನಾಡಿಗೆ ಸುಖ| ವೆಂದು ಕಳಪೆ ಕೃಷ್ಣನವರ| ೯೭||"[೧]

ಬ್ರಹ್ಮ, ಸಪ್ತರ್ಷಿಗಳೊಡನೆ ಬಂದು ನಾನಾ ರೀತಿಯ ಉತ್ಸವಗಳನ್ನು ಮಾಡಿಸುವುದರ ಸಂಕೇತ ವಾಗಿ ಈ ಬ್ರಹ್ಮರಥೋತ್ಸವ ನಡೆಯುತ್ತದೆ. ದೊಡ್ಡ ಜಾತ್ರೆ ನಿರ್ದಿಷ್ಟವಾದ ನಕ್ಷತ್ರ ಮತ್ತು ವಾರದ

ದಿನ ನಡೆಯುತ್ತದೆ. ಆದರೆ ಚಿಕ್ಕ ಜಾತ್ರೆ ಮಾತ್ರ ಸಂಕ್ರಾಂತಿಯ ಮರುದಿನವೇ ಆಗುತ್ತದೆ. ಬೆಟ್ಟದ ಮೇಲೆ ದೇವಾಲಯವಿದ್ದುದರಿಂದ ಅಲ್ಲಿ ದೊಡ್ಡ ರಥವನ್ನು ನಡೆಸಲು ಹೆಚ್ಚಿನ ಭಕ್ತರು ಪಾಲ್ಗೊಳ್ಳಲೂ ಸ್ಥಳಾವಕಾಶವಿಲ್ಲ. ಆದ್ದರಿಂದ ಕಡಿಮೆ ಜನರು ಸೇರುವ ಚಿಕ್ಕಜಾತ್ರೆ ಅಥವಾ ಸಂಕ್ರಾತಿ ತೇರನ್ನು ಆಲಯದ ಅಂಗಳದಲ್ಲಿ ಮಾಡಿದರೆ, ಹೆಚ್ಚು ಜನರನ್ನು ಆಕರ್ಷಿಸುವ ದೊಡ್ಡ ರಥದ ಉತ್ಸವವನ್ನು ತೇರಿನ ಬೀದಿಯಲ್ಲಿ ಮಾಡುತ್ತಾರೆ.

ಜಾತ್ರೆಯ ಸಂದರ್ಭದಲ್ಲಿ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆ. ಒಮ್ಮೆ ರಥಕ್ಕೆ ಹತ್ತುವ ಕಾಲಾವಧಿಯ ವ್ಯವಸ್ಥೆ ಸಮರ್ಪಕವಾಗಿರದೆ ಉತ್ಸವಮೂರ್ತಿಗೆ ಜಖಂ ಆಗಿತ್ತು. ೧೯೫೬ರ ದೊಡ್ಡ ಜಾತ್ರೆ ತೇರನ್ನು ಎಳೆಯುವಾಗ ಬಾಳೆಹಣ್ಣು, ಕಾಸುಗಳನ್ನು ಆಯ್ದುಕೊಳ್ಳುವ ಗೊಂದಲದಲ್ಲಿ ನಾಲ್ವರು ಚಕ್ರಕ್ಕೆ ಸಿಕ್ಕು ಸತ್ತು ಹೋದರು, ತೇರನ್ನು ಎಳೆಯುವ ಮಾರ್ಗದಲ್ಲಿ ಸರಪಳಿಗಳ ಮಧ್ಯೆ ಬಹಳ ಜನರು ಸೇರಿದ್ದರಿಂದ ಅವರನ್ನು ಚದುರಿಸುವಾಗ, ಈ ದುರ್ಘಟನೆಗೆ ಕಾರಣವಾಯಿತು.[೨]

ದೊಡ್ಡಜಾತ್ರೆಯಲ್ಲಿ ಪ್ರಥಮ ರಥ ಚಾಲನೆ

ದೊಡ್ಡ ಜಾತ್ರೆಗೆ ಒಂದು ತಿಂಗಳ ಮೊದಲೆ ಎನ್ನುವಂತೆ ನಡೆಯುವ ಪ್ರಥಮ ರಥ ಚಲನೆಯನ್ನು ಮಟ್ಟತೇರು ಎಂದೂ ಕರೆಯುತ್ತಾರೆ. ಗಣಿಗನೂರು, ಎರಿಯೂರುಗಳ ಹರಿಜನರಲ್ಲಿ ಮನೆಗೊಬ್ಬರಂತೆ ಬಂದು ರಥ ಎಳೆಯುತ್ತಾರೆ. ರಥದ ಪರೀಕ್ಷೆಯನ್ನು ಮಾಡುವ ಉತ್ಸವವಿದು. ಮುಂದಿನ ವರ್ಷದ ಜಾತ್ರೆ ಸಮೀಪಿಸುವವರೆಗೂ ಒಂದು ವರ್ಷ ಕಾಲ ಮೌನದಲ್ಲಿ ನಿಂತು ನೋಡುಗರ ಕಣ್ನೋಟಕ್ಕೆ ಸಿಕ್ಕಿ ಕೊಳ್ಳುತ್ತಿದ್ದ ರಥ. ಉತ್ಸವದ ದಿನ ಸುಸೂತ್ರವಾಗಿ ಸಾಗಲೆಂದು ರಥದ ಪರೀಕ್ಷೆ ಮಾಡಿ, ಸ್ವಸ್ಥಾನಕ್ಕೆ ತಂದು ನಿಲ್ಲಿಸುತ್ತಾರೆ. ರಥಕ್ಕೆ ಅಗತ್ಯವಾದರೆ ದುರಸ್ತು ಮಾಡಿಸುತ್ತಾರೆ. ಬೆಳಿಗ್ಗೆ ವರಪೂಜೆ-ವನಸ್ಪತಿ ಪೂಜೆ ಸಲ್ಲಿಸಿ ರಥೋತ್ಸವದ ಅಲಂಕಾರಕ್ಕೆ ಅಗತ್ಯವಾದ ಹೊಸಮರವನ್ನು ಶಾಸ್ತ್ರವತ್ತಾಗಿ ತಂದು ರಥದ ಮುಂಭಾಗದಲ್ಲಿಟ್ಟು ಪೂಜೆ ಸಲ್ಲಿಸುತ್ತಾರೆ.

ಮಟ್ಟತೇರಿನ ಸಂದರ್ಭದಲ್ಲಿ ಈ ಹಿಂದೆ ಪ್ರಾಣಿಬಲಿಯೂ ಇರುತ್ತಿತ್ತು. ಅದರ ರಕ್ತವನ್ನು ರಥದ ಚಕ್ರಕ್ಕೆ ಲೇಪಿಸುತ್ತಿದ್ದರು. ಆದರೆ ಬಲಿಯಾದ ಕುರಿಯ ಮಾಂಸವನ್ನು ಹಂಚಿಕೊಳ್ಳುವುದರಲ್ಲಿ ಎರಡು ಊರಿನವರ ನಡುವೆ ಹುಟ್ಟಿದ ಅಸಮಾಧಾನದಿಂದ ಅದನ್ನು ನಿಲ್ಲಿಸಲಾಗಿದೆ. ಆದರೂ ದೇವಸ್ಥಾನಗಳಲ್ಲಿ ಪ್ರಾಣಿಬಲಿಗೆ ಅಸ್ಪದ ನೀಡಬಾರದೆನ್ನುವುದೇ ಮುಖ್ಯಕಾರಣವಿರಬೇಕು. ಈಗ ರಸಬಲಿ ಮಾತ್ರ ಇಡುವುದರಿಂದ ದೇವರಿಗೆ ಸೌಮ್ಯ ಪೂಜೆ ಸಲ್ಲುತ್ತಿದೆ. ತೇರು ಎಳೆಯುವ ಕಾಲ ೭-೧೦ ದಿನವಿದ್ದಾಗ ಸೋಲಿಗರು ಅವಶ್ಯಕವಾಗಿರುವ ಮರ, ಬಿದಿರು ಅಚ್ಚೆಯನ್ನು ಕತ್ತರಿಸಿ ತಂದು ತೇರಿಗೆ ಬಿಗಿದು ಉತ್ಸವಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತಾರೆ.

ದೊಡ್ಡರಥ

ತೇರು, ರಥ ಎಂದು ಕರೆಯುವ ಇದನ್ನು ಮೇಲ್ಭಾಗ, ಮಧ್ಯಭಾಗ ಹಾಗೂ ಕೆಳಭಾಗ ಎಂದು ಪ್ರತ್ಯೇಕಿಸಿಕೊಳ್ಳಬಹುದು. ಕೆಳಭಾಗದಲ್ಲಿ ಚಕ್ರಗಳು ಹಾಗೂ ರಥದ ಮೂಲರಚನೆಯಿದೆ. ಎರಡನೆಯ ಭಾಗದ ಪೀಠ, ದೇವರನ್ನು ಕೂರಿಸಲು ಹಾಗೂ ಕೆಲವರು ನಿಲ್ಲಲ್ಲು ಸಾಧ್ಯವಾಗುವಷ್ಟು ವಿಶಾಲವಾಗಿದೆ. ಜಾತ್ರೆಗಳಲ್ಲಿ ಅದರ ಸುತ್ತ ಗೋಪುರಾಕಾರದಲ್ಲಿ ಬಿದಿರಿನಿಂದ ಕಟ್ಟಿ, ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟುತ್ತಾರೆ. ತೇರಿನ ಮೂರನೆಯ ಭಾಗವೆಂದರೆ ತೇರಿನ ತುದಿಯಲ್ಲಿ ಪೀಠ ಭಾಗದಿಂದ ಕಟ್ಟಿಕೊಂಡ ಬಿದಿರದೆಬ್ಬೆಗಳನ್ನು ಸೂಪಾಗಿ ಬಿಗಿದು ಕಳಸ ಕಟ್ಟುವರು. ಜಾತ್ರೆಗೆಂದು ಬಂದ ಜನರ ದೃಷ್ಟಿ ಈ ಕಳಶದತ್ತಲೇ ಇರುತ್ತದೆ. ಸಾಧ್ಯವಾದಷ್ಟು ಎತ್ತರಕ್ಕೂ ಬಾಳೆಹಣ್ಣು, ಜವನಗಳನ್ನು ಗುರಿಯಿಟ್ಟು ಹೊಡೆಯುತ್ತಾರೆ. ದೇವರು ರಥವೇರಿ ಚಲಿಸಿದ ತಕ್ಷಣ ಹೆಜ್ಜೆಯತ್ತಿಡಲು ಸ್ಥಳವಿಲ್ಲದಂತೆ ನಿಂತಿದ್ದ ಇಕ್ಕಟ್ಟಾದ ರಥಬೀದಿಯಲ್ಲಿ ಜಾಗ ತೆರವಾಗಿ ರಥದ ಚಲನೆ ಆರಂಭವಾಯಿತು ಎನ್ನುವಷ್ಟರಲ್ಲಿ ಆಗಲೇ ಮರಳಿ ಸ್ವಸ್ಥಾನಕ್ಕೆ ಬಂದು ನಿಂತು ಮರುವರ್ಷಕ್ಕೆ ಕಾಯತೊಡಗುತ್ತದೆ.

ದೊಡ್ಡರಥದಲ್ಲಿ ದೇವರು, ಮನುಷ್ಯರು ಹಾಗೂ ಪ್ರಾಣಿ ಪಕ್ಷಿಗಳ ಕೆತ್ತನೆಗಳಿವೆ. ಕೆಲವು ಮಿಥುನ ಶಿಲ್ಪಗಳು ಇದರಲ್ಲಿವೆ. ಕೂರ್ಮನ ಬೆನ್ನ ಮೇಲೆ ರಥವಿದೆ. ಎಂಬಂತೆ ಅದನ್ನು ನಿರ್ಮಿಸಲಾಗಿದೆ. "ಮೊದಲಿದ್ದ ರಥದ ಶಿಲ್ಪಗಳೂ ಸಡಿಲವಾಗಿ ಅವನ್ನು ಯಾರ‍್ಯಾರೋ ಎತ್ತಿಕೊಂಡು ಹೋದುದರಿಂದ, ರಥವನ್ನು ಜೀರ್ಣೋದ್ಧಾರ ಮಾಡಿಸಲಾಗಿದೆ.[5] ರಥದ ಶಿಲ್ಪಗಳ ಕೆತ್ತನೆಯಲ್ಲಿ ರಚನಾ ಚಾತುರ್ಯ, ಕೌಶಲ್ಯ ಕಂಡುಬರುವುದಿಲ್ಲ. ನಯಗಾರಿಕೆಯ ಬೆಡಗಿಲ್ಲ, ಆದರೂ ಈ ರಥ ನವಚಿತ್ರದಿಂದ ಕೂಡಿ ನೋಟಕರನ್ನು ಆಕರ್ಷಿಸುವಂತಿವೆ. ರಥದ ಶಿಲ್ಪಗಳು ಹಿಂದೆ ಬಣ್ಣ ರಹಿತವಾಗಿದ್ದವು. ಇತ್ತೀಚೆಗೆ ಅವಕ್ಕೆ ಬಣ್ಣವನ್ನು ಲೇಪಿಸಿರುವುದರಿಂದ ವರ್ಣಮಯ ರಥವಾಗಿ ಕಾಣುತ್ತಿದೆ. ರಥಕ್ಕೊಂದು ನೆಲೆಯಿದ್ದು, ಅದಕ್ಕೆ ನೆರಳನ್ನು ಕಲ್ಪಿಸಿದ್ದಾರೆ.

ರಥದಲ್ಲಿ ಮಿಥನ ಶಿಲ್ಪಗಳನ್ನು ಅಳವಡಿಸಿರುವ ಕುರಿತು ಅನೇಕರು ಬಗೆ ಬಗೆಯ ಕಾರಣಗಳನ್ನು ಕೊಡುತ್ತಾರೆ. ತೇರು ಹಾಗೂ ದೇವಾಲಯಗಳಲ್ಲಿ ಮಿಥನ ಶಿಲ್ಪಗಳ ಕೆತ್ತನೆಗಳ ದೃಷ್ಟಿ ಪರಿಹಾರದ ಕಾರಣಗಳನ್ನು ನೀಡಿದರೂ, ವಾಸ್ತವ ಕಾರಣಗಳು ಬೇರೆಯೇ ಇರುತ್ತವೆ. ಹಿಂದೆ ದೇವಸ್ಥಾನಗಳು ಕಲಿಕೆಗೆ, ಕಲೆಗೂ ಕೇಂದ್ರಗಳು ಆಗಿದ್ದವು. ಹಾಗಾಗಿ ಅವುಗಳಲ್ಲಿ ಕಾಮ ಮತ್ತು ಪ್ರೇಮದ ವಿಚಾರಗಳೂ ಸ್ಪಷ್ಟವಾಗಿ ನಿರೂಪಿಸಲ್ಪಡುತ್ತಿದ್ದವು. ದೇವಸ್ಥಾನಕ್ಕೆ ಬರುತ್ತಿದ್ದ ಭಕ್ತರ ಕಾಮದ ತಣಿವು ಆಗುತ್ತಿತ್ತು.

ರಂಗನಾಥಸ್ವಾಮಿ ತೆಪ್ಪ

ತೆಪ್ಪೋತ್ಸವಕ್ಕೆ ಅಂಕುರಾರ್ಪಣೆ ಮಾಡಿದ ಬಳಿಕ ಸುಮಾರು ಹದಿಮೂರುದಿನಗಳ ಕಾಲದ ತೆಪ್ಪೋತ್ಸವವನ್ನು ಆಚರಿಸುತ್ತಾರೆ. ಪ್ರತಿದಿನವೂ ದೇವಾಲಯದಿಂದ ದೇವರನ್ನು ಒಂದೂವರೆ ಮೈಲಿ

ದೂರವಿರುವ ಸೋಮೇಶ್ವರನ ಕೆರೆಗೆ ತಂದು ತೆಪ್ಪಮಾಡಿಸುತ್ತಾರೆ. ಕೆರೆಯ ದಡದಲ್ಲಿರುವ ಮಂಟಪದಲ್ಲಿ ಮಂಟಪೋತ್ಸವ, ಮಹಾಮಂಗಳಾರತಿಯಾಗಿ ಪ್ರಸಾದ ವಿನಿಯೋಗದ ಬಳಿಕ ಆಲಯಕ್ಕೆ ದೇವರನ್ನು ತಲುಪಿಸಲಾಗುತ್ತದೆ. ಒಂದು ದಿನ ಸೋಲಿಗರ ತೆಪ್ಪವಿರುತ್ತದೆ. ಹದಿನಾಲ್ಕನೆಯ ದಿನ ಗಂಗಾಧರೇಶ್ವರನ ತೆಪ್ಪವಿರುತ್ತದೆ. ಹಿಂದೆ ತೆಪ್ಪೋತ್ಸವಗಳಲ್ಲಿ ಕೆರೆಯನ್ನು ಪೂರ್ಣವಾಗಿ ಸುತ್ತುಹಾಕಿ ಬರುತ್ತಿದ್ದರೆ, ಈಗ ಸ್ವಲ್ಪದೂರ ಮಾತ್ರ ಹೋಗಿ ಮರಳುತ್ತಾರೆ. ತೆಪ್ಪಮಾಡಿ ಮುಗಿಸಿದರೆ, ದೊಡ್ಡ ಜಾತ್ರೆಯಲ್ಲಿ ಮದುವೆಯಾದ ರಂಗನಾಥಸ್ವಾಮಿಯ ಅಳಿಗುಳಿ (ಅತ್ತೆ ಮನೆಗೆ ಹೋಗುವ) ಕೆಲಸ ಮುಗಿಯಿತೆಂದು ಲೆಕ್ಕ.

ಸುಮಾರು ಇಪ್ಪತ್ತು ಜನರ ದುಡಿಮೆಯನ್ನು ಬಯಸುವ ತೆಪ್ಪವನ್ನು ಸೋಲಿಗರು ನಿರ್ಮಿಸುತ್ತಾರೆ. ಕಾಡಿನಿಂದ ತೆಪ್ಪ ಕಟ್ಟಲು ಬೇಕಾದ ಬೊಂಬು ಬಿದಿರನ್ನು ತರುವ ಕಾರ್ಯದಿಂದ ಹಿಡಿದು ತೆಪ್ಪ ಕಟ್ಟುವ, ಅದಕ್ಕೆ ಬೇಕಾದ ಬಿದಿರಿನ ಅಚ್ಚೆಗಳನ್ನು ಸಿದ್ಧಪಡಿಸುವ ಕೆಲಸಗಳನ್ನು ಹಂಚಿಕೊಂಡು, ತೆಪ್ಪವನ್ನು ಸಿದ್ಧಪಡಿಸುತ್ತಾರೆ. ಕುರ್ಜಕಟ್ಟಿ ಆಲಯದಿಂದ ಕೊಟ್ಟ ಅಲಂಕರಣ ವಸ್ತುಗಳನ್ನು ಕಟ್ಟಿ ಶೃಂಗರಿಸುತ್ತಾರೆ. ಬಟ್ಟೆಗಳಿಂದಲೇ ರಂಗನಾಥ ಸ್ವಾಮಿಯ ಎರಡು ತೇರುಗಳಿಗೂ ಅಲಂಕಾರ ಮಾಡುತ್ತಾರೆ. ರಥಕ್ಕೆ ಬೆಟ್ಟದ ಮೇಲಿನ ಆಲಯದಿಂದ ದೇವರನ್ನು ಹೊತ್ತು ತರುವ, ತೆಪ್ಪವಾಡಿಸುವ, ಆಲಯಕ್ಕೆ ಮರಳಿಸುವ ಜವಾಬ್ದಾರಿ ಸೋಲಿಗರಿಗೆ ಸೇರಿದೆ. ಇವೆಲ್ಲವೂ ಬಿಟ್ಟಿ ಸೇವೆಗಳಾಗಿದ್ದು ಊಟದ ಪಡಿ ಮಾತ್ರ ದೊರೆಯುತ್ತದೆ. ಹಿಂದೆ ತೆಪ್ಪದ ಸಂದರ್ಭದಲ್ಲಿ ಬ್ರಾಹ್ಮಣರ ಊಟ ಮತ್ತಿತರ ಉದ್ದೇಶಗಳಿಗಾಗಿ ಐದಾರು ಹುಲ್ಲುಗುಡಿಸಲುಗಳನ್ನು ಹಾಕುತ್ತಿದ್ದರು. ಬ್ರಾಹ್ಮಣರು ಈಗ ಇಲ್ಲಿ ಸಂತರ್ಪಣೆಯ ಕಾರ್ಯ ಮಾಡುವುದಿಲ್ಲ.

ಆದರೆ ಈ ರಂಗನಾಥಸ್ವಾಮಿಗೆ ಸೇವೆ ಮಾಡಿ ಬಂದ ಫಲವೇನೆಂದು ಸೋಲಿಗರು ತಮ್ಮ ಮನದಾಳವನ್ನು ತೋಡಿಕೊಂಡಿದ್ದಾರೆ. ರಂಗನಗಿರಿ ರಂಗಪ್ಪನೆ, ನಾನು ಬಿಟ್ಟಿ ಮಾಡಿ ಫಲವೇನಯ್ಯ, ನಿನ್ನ ಎಷ್ಟು ಹೊತ್ತು ಫಲವೇನಯ್ಯ ಅನ್ನಕ ದಾರಿ ನೀ ಕೊಡಲಿಲ್ಲವೋ ನೀ ಕೊಡಲಿಲ್ಲ ಅಪ್ಪ ರಂಗಪ್ಪಾನೆ, ಆಳು ಜೀತಾವ ಮಾಡಿತಾನೆ ಫಲವೇನಯ್ಯ. ನಾ ಬಿಟ್ಟ ಮಾಡಲಾರೆ ರಂಗಪ್ಪನೆ'' ಎಂದು ಫಲವಿಲ್ಲದ ಬಿಟ್ಟಿ ಸೇವೆಯನ್ನು ಮಾಡುವ ಬಗ್ಗೆ ಅಸಮಾಧಾನವಿದೆ. ರಂಗಪ್ಪನ ಬಳಿ ಸೇವೆ ಮಾಡಿ ಫಲ ಪಡೆಯುವ ಆಲಯದವರನ್ನು ಕಂಡಾಗ ಕೇವಲ ಪಡಿಗಾಗಿ ದುಡಿಯಬೇಕಾಗಿ ಬಂದ ತಮಗೇನನ್ನು ಕೊಟ್ಟಿಲ್ಲವೆಂದು ಅಸಮಾಧಾನ ಇಲ್ಲಿ ಇಣುಕಿದೆ. ಇಷ್ಟಾದಾರೂ ಹಿರಿಯರು, ನಂಬಿದವರು ಈ ಅಸಮಾಧಾನ ಭುಗಿಲೇಳದ ಹಾಗೆ ಪ್ರತಿವರ್ಷವು ಅಗತ್ಯ ಇದ್ದಾಗಲೆಲ್ಲ ಬಿಟ್ಟಿ ಸೇವೆ ಮಾಡಲು ಮುಂದಾಗುತ್ತಾರೆ.

ಬೇಟೆ ಮಣೆ ಸೇವೆ

ರಂಗನಾಥ ಸ್ವಾಮಿಯನ್ನು 'ಬೇಟೆರಾಯ' ಎಂದೇ ಜಾನಪದ ಸಮಾಜ ಒಪ್ಪಿಕೊಂಡಿರುವುದರಿಂದ ಬೇಟೆ ಮಣೆ ಸೇವೆ ಮಾಡಿಸುವ ಸಂಪ್ರಾದಾಯವೂ ಈ ಆಲಯದ ಆವರಣದಲ್ಲಿ ನಡೆಯುತ್ತಿರುತ್ತದೆ. ಈ ಸೇವೆ ಮಾಡಿಸುವ ಹರಕೆ ಹೊತ್ತವರು ತೆಂಗಿನಕಾಯಿ ಚೂರು, ಕಜ್ಜಾಯ, ಬೆಲ್ಲ, ಬಾಳೆಹಣ್ಣು, ಕಡ್ಲೆ ಪುರಿ ಮುಂತಾದವನ್ನು ಬೆರೆಸಿ, ಹಾಸಿದ ಬಟ್ಟೆಯ ನಾಲ್ಕು ತುದಿ ಹಾಗೂ ಮಧ್ಯದಲ್ಲಿ ಗುಪ್ಪೆ ಮಾಡಿರುತ್ತಾರೆ. ಮೊದಲೇ ಗೊತ್ತುಪಡಿಸಿದ್ದ ದಾಸಯ್ಯನನ್ನು ಆಡಲು ಬಿಡುತ್ತಾರೆ. ಆತ ಬೆತ್ತ ಹಿಡಿದು "ಆ ಪಾರಾಕ್ ಭೋ ಪರಾಕ್ " ಎಂದು ಕೂಗುಹಾಕುತ್ತಾ ಬಾಯಿತೆರೆದು ಅದನ್ನು ನುಂಗುವಂತೆ ನಟಿಸುತ್ತಾ ಅದರ ಸುತ್ತು ಸುತ್ತುತ್ತಾನೆ. ಕೊನೆಗೆ ದಾಸಯ್ಯ ತಾನೇ ಬಾಯಿ ಹಾಕಿ ತಿನ್ನುತ್ತಾನೆ. ಕೆಲವರು ಪೂಜೆ ಮಾಡಿಸಿ ಇದನ್ನು ಮನೆಗೆ ಪ್ರಸಾದವಾಗಿ ಕೊಂಡೆಯ್ಯುತ್ತಾರೆ.[೪]

ದೇವಾಲಯದಲ್ಲಿ ನಡೆಯುವ ಉತ್ಸವಗಳು

ತುಳಸಿ-ಕುಂಕುಮ ಸಹಸ್ರನಾಮಗಳು, ತುಳಸಿ-ಕುಂಕುಮ ಅಷ್ಟೋತ್ತರ, ಪಂಚಾಮೃತಾಭಿಷೇಕ, ಪಾದದ ಏಟು, ಗಜಲಕ್ಷ್ಮೀ ಉತ್ಸವ, ರಾಸಕ್ರೀಡೋತ್ಸವ, ಸೂರ್ಯಮಂಡಲೋತ್ಸವ, ಚಂದ್ರ ಮಂಡಲೋತ್ಸವ, ಕಲ್ಯಾಣೋತ್ಸವ, ರಂಗವಿಲಾಸ ಮಂಟಪ, ತೆಪ್ಪೋತ್ಸವ, ಬಾಯಿಬೀಗ, ಬೇಟೆಮಣೆ, ರೂಪುಕೆತ್ತನೆ, ನವರಾತ್ರಿ ಉತ್ಸವ, ಕಾರ್ತಿಕೋತ್ಸವಗಳು, ಇದಲ್ಲದೇ ಹಬ್ಬ ವ್ರತಗಳೆಂದು ಆಲಯದಲ್ಲಿ ವಿಶೇಷ ಪೂಜೆಗಳನ್ನು ಮಾಡುತ್ತಾರೆ.

೧. ಸಂಕ್ರಾಂತಿ ರಥೋತ್ಸವದ ಆಚರಣೆಗಳು : ಸಂಕ್ರಾಂತಿ ಸಂದರ್ಭದ ರಥೋತ್ಸವದ ಮೊದಲಿಗೆ ಹಾಗೂ ಅನಂತರದಲ್ಲಿಯೂ ಸಹ ಕೆಲವು ಉತ್ಸವಗಳು ಜರುಗುತ್ತವೆ. ಆಚಾರ್ಯ ಪರಂಪರೆಯ ಮುಖಾಂತರ ಮೋಕ್ಷ ಪಡೆಯಬೇಕೆಂಬ ಹಿನ್ನಲೆಯಲ್ಲಿ ಕೊಠಾರೋತ್ಸವ ನಡೆಯುತ್ತದೆ. ಆಗಮಶಾಸ್ತ್ರದ ಪ್ರಕಾರ ೫-೭ ದಿನಗಳ ಕಾಲ ಯಜ್ಞಗಳಾಗಬೇಕು. ವೈಖಾನಸ ಆಗಮೋಕ್ತವಾಗಿ ಯಾಗಕ್ಕೆ ಅಂಕುರಾರ್ಪಣೆ ಆಗಬೇಕು. ಪರ್ವಕಾಲದಲ್ಲಿ ಪ್ರಾಸಾದಶುದ್ಧಿ ಮತ್ತು ಬಿಂಬಶುದ್ಧಿ ಮಾಡಿ ಧ್ವಜಾರೋಹರಣ ನಡೆಸಿ ರಕ್ಷಬಂಧನ ಮಾಡಬೇಕು. ಯಾವುದೇ ಸಂದರ್ಭದಲ್ಲಿ ನಿಶಾನೆ ಮುಖ್ಯ. ವೈಷ್ಣವ ದೇವಾಲಯದಲ್ಲಿ ಗರುಡನಿಗೆ ಮೊದಲ ಸ್ಥಾನ, ನಂತರದ ಸ್ಥಾನ ಆಂಜನೇಯನಿಗೆ ಇರುತ್ತದೆ. ದುಷ್ಟಶಕ್ತಿಗಳನ್ನು ಉಚ್ಚಾಟಿಸಿ, ಶಿಷ್ಟಶಕ್ತಿಗಳನ್ನು ಆಮಂತ್ರಿಸುವ ಭೂತಬಲಿ ಜಾತ್ರೆಗಳ ಆದಿ ಅಂತ್ಯಗಳ ಆಚರಣೆಯಾಗಿರುತ್ತದೆ. ಅಷ್ಟದಿಕ್ಪಾಲಕರಿಗೂ ಬಲ ಕೊಡುವರು. ಉತ್ತರಾಯಣ ಪುಣ್ಯಕಾಲವಾದ ಸಂಕ್ರಾಂತಿಯ ರಾತ್ರಿ ಸ್ವರ್ಗದ ಬಾಗಿಲೂ ತೆರೆಯುವುದರ ಜೊತೆಗೆ ನಮ್ಮಾಳ್ವಾರರ ಪರಮಹೋತ್ಸವ ಇರುತ್ತದೆ.

ಸಂಕ್ರಾತಿಯ ಮರುದಿನಕ್ಕೆ ಕಲ್ಯಾಣೋತ್ಸವ, ಮಂಟಪೋತ್ಸವ, ರಥಾರೋಹಣ ಹಾಗೂ ಅದೇ ಸಂಜೆ ಸಂಧಾನೋತ್ಸವ, ಪಾರು ದಾಟೆ (ಮೊಸಳೆ) ಉತ್ಸವ, ಸಂಕ್ರಾತಿಯಾದ ಮೂರು ದಿನಕ್ಕೆ ಸಂಧಾನ ಸೇವೆ ಮಾಡಿ, ಸಂಕ್ರಾಂತಿ ತೀರ್ಥಸ್ನಾನ ಮಾಡಿಸಬೇಕು. ರಾತ್ರಿ ಧ್ವಜಾವರೋಹಣ ಮಾಡಿ ಕೊನೆಗೆ ಪೂರ್ಣಾಹುತಿ ಕೊಡುತ್ತಾರೆ.

ಸ್ವರ್ಗದ ಬಾಗಿಲು

ಮಕರ ಸಂಕ್ರಾಂತಿಯ ಉತ್ತರಾಯಣದ ಪುಣ್ಯಕಾಲದಲ್ಲಿ ಆಚಾರ್ಯರುಗಳ ಸಮೇತ ಸ್ವರ್ಗದ ಬಾಗಿಲಿನಿಂದ ಹೊರಟು ದೇವರ ಮೆರವಣಿಗೆ ನಡೆಯುತ್ತದೆ. ಮೊದಲು ಗುರುಗಳ ಮಾರ್ಗದರ್ಶನದಲ್ಲಿ ಸ್ವಾಮಿಯನ್ನು ಈ ಬಾಗಿಲ ಮೂಲಕ ಕರೆದುಕೊಂಡು ಬರಬೇಕು. ಸಂಕ್ರಾಂತಿಯಂದು ಸಾಯಂಕಾಲ ನಿರ್ದಿಷ್ಟ ಅವಧಿಯವರೆಗೆ ಉತ್ತರಮುಖಿಯಾದ ಬಾಗಿಲನ್ನು ತೆರೆದಿಡುತ್ತಾರೆ. ರಂಗನಾಥಸ್ವಾಮಿ ದರ್ಶನ ಮಾಡಿದ ಬಳಿಕ ಸ್ವರ್ಗದ ಬಾಗಿಲಲ್ಲಿ ಹೊಕ್ಕು ಬಂದರೆ ಮುಕ್ತಿ ಸಿಕ್ಕುತ್ತದೆಂದು ನಂಬಿಕೆಯನ್ನು ಹೊಂದಿದ್ದಾರೆ. ರಂಗನಾಥಸ್ವಾಮಿಯ ಆಲಯದ ವಾಸ್ತುರಚನೆಯನ್ನು ಗಮನಿಸಿದರೆ, ಮೊದಲಿಗೆ ಈ ಸ್ವರ್ಗದ ಬಾಗಿಲ ನಿರ್ಮಾಣವಿರಲಿಲ್ಲ. ಆದರೆ ಮುಂದೆ ದೇವಿಗುಡಿಯನ್ನು ಸೇರಿಸಿಕೊಂಡು ನವರಂಗವನ್ನು ವಿಸ್ತರಿಸಿದ ಸಂದರ್ಭದಲ್ಲಿ ಈ ಸ್ವರ್ಗದ ಬಾಗಿಲನ್ನು ಅಳವಡಿಸಿರುವ ಸಾಧ್ಯತೆಯಿದೆ. ಸಂಕ್ರಾಂತಿಯಂದು ರಂಗನಾಥಸ್ವಾಮಿಯನ್ನು ದೇವಿಗುಡಿಗೆ ಬಂದು, ಅನಂತರ ಸ್ವರ್ಗದ ಬಾಗಿಲಿನಲ್ಲಿ ಹಾಯ್ದು ಬರುತ್ತಾರೆ. ಹೀಗೆ ಬಂದವರಿಗೆ ದೆವ್ವಗಳು ಏನೂ ತೊಂದರೆ ಮಾಡುವುದಿಲ್ಲವೆಂದು ಸೋಲಿಗರೂ ನಂಬಿ ಸ್ವರ್ಗದ ಬಾಗಿಲಿನಿಂದ ಹೊಕ್ಕು ಬರುತ್ತಾರೆ.

ಕನೂ ಉತ್ಸವ

ತಮಿಳು ಸಂಪ್ರದಾಯದ ಹೆಂಗಸರು ತಮ್ಮ ತವರು ಮನೆಗೆ ಶ್ರೇಯಸ್ಸನ್ನು ಕೋರುವ ಸಲುವಾಗಿ ಸಂಕ್ರಾಂತಿ ಹಬ್ಬದ ಮರುದಿನ ಕನೂ ಹಬ್ಬವನ್ನು ಆಚರಿಸುತ್ತಾರೆ. ಅಲಮೇಲಮ್ಮನ ಬಳಿ ಈ ಸಂಪ್ರಾದಾಯವನ್ನು ಪರಿಪಾಲಿಸುತ್ತಾರೆ. ಸಂಕ್ರಾಂತಿಯಂದು ಸೋಲಿಗರಿಗೆ ವಿಶೇಷ. ಅವರು ತಮ್ಮ ಹೆಣ್ಣೂ ಮಗಳಾದ ಕುಸುಮಾಲೆಗೆ ಮಡಿಲು ತುಂಬುವ ಕಾರ್ಯ ಮಾಡುತ್ತಾರೆ. ಮಡಿಲನ್ನು ತುಂಬಿಸಿಕೊಳ್ಳಲು ಮಹಿಳೆಯರು ಮಾತ್ರ ವರದತ್ತಿ ಮಂಟಪಕ್ಕೆ ಹೋಗುತ್ತಾರೆ. ಸೋಲಿಗರು ತಂದ ಪದಾರ್ಥವನ್ನು ಕೊಡುವ ಶಾಸ್ತ್ರ ಅಲ್ಲಿ ನಡೆಯುತ್ತದೆ. ದೇವಸ್ಥಾನ ಹೇಗೆ ಸ್ಥಳೀಯರನ್ನು ಭಾವನಾತ್ಮಕವಾಗಿ ಒಳಗೆ ಎಳೆದುಕೊಂಡು ಅವರ ಸಂಬಂಧಗಳನ್ನು ದೇವಸ್ಥಾನದ ಕಾರ್ಯಗಳಿಗೆ ಬಳಸಿಕೊಳ್ಳುತ್ತಾರೆ ಎನ್ನುವುದಕ್ಕೆ ಇದೊಂದು ನಿದರ್ಶನ. ಯಾವ ಸೋಲಿಗರಲ್ಲಿ ಮನೆಯ ಹೆಣ್ಣು ಮಗಳನ್ನು ತವರಿಗೆ ಕರೆದು ಮಡಿಲು ತುಂಬುವ ಸಂಪ್ರಾದಾಯವೇ ಇಲ್ಲವೋ ಆ ಸೋಲಿಗರನ್ನು ಈ ಶಾಸ್ತ್ರಚರಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಕುಸುಮಾಲೆಯ ಕತೆಗೆ ಮತ್ತಷ್ಟು ಸಂಬಂಧ ಗಟ್ಟಿಗೊಳಿಸುವ ಪ್ರಯತ್ನವಿದು.

ಅಂಗಮಣಿ ಸೇವೆ

ಸಂಕ್ರಾಂತಿ ಜಾತ್ರೆಯ ಸಂದರ್ಭದಲ್ಲಿ ರಂಗನಾಥಸ್ವಾಮಿ ಬೇಟೆಗೆ ಹೋಗಿದ್ದ ಎನ್ನುವುದನ್ನು ತೋರಿಸುವ ಸಲುವಾಗಿ ಕಾಡಿನಿಂದ ಹಿಡಿದು ತಂದ ಮೊಲವನ್ನು ಅಲಂಕರಿಸಿ ಪೂಜಿಸಿ ಪುನಃ ಕಾಡಿಗೆ ಬಿಡುತ್ತಾರೆ. ಮೊಲ ಅಡ್ಡವಾಗಿ ಬಂದರೆ ಶುಭಶಕುನವಲ್ಲವೆಂಬ ನಂಬಿಕೆಯಿದೆ. ದೇವರು ಮನುಷ್ಯ ರೂಪ ತಾಳಿ ಭೂಲೋಕಕ್ಕೆ ಬಂದ ಮೇಲೆ ಮಾನವಲೋಕಕ್ಕೆ ಅಗತ್ಯವಾದ ನಡೆನುಡಿಯನ್ನು ಹೊಂದಿದ್ದಾನೆ ಎನ್ನುವಂತಹ ಘಟನೆಗಳಾಗುತ್ತದೆ. "ಯಾವುದೋ ಸಂದರ್ಭದಲ್ಲಿ ಹೆಂಡತಿಯ ಮಾತುಕೇಳಿ ರಂಗನಾಥಸ್ವಾಮಿ ಕೋಪತಾಳಿ ಮನೆಬಿಟ್ಟು ಹೊರಟನು, ದಾರಿಯಲ್ಲಿ ಅಪಶಕುನವಾದರೆ ಆಗ ಹೋಗುವುದನ್ನು ಕೊಂಚ ನಿಧಾನಿಸಿ ಹೋಗುವ ಮಾನವ ಸಹಜ ಪ್ರವೃತ್ತಿಯಂತೆ, ಇವನಿಗೂ ದೇವಿಯನ್ನು ಬಿಟ್ಟು ಹೋಗದಿರಲೆಂದು ಮೊಲವನ್ನು ದಾರಿಗೆ ಅಡ್ಡ ಬರುವಂತೆ ಮಾಡುತ್ತಾರೆ. ಆಗ ಅಪಶಕುನ ಎದುರಾಯಿತೆಂದು ಹಿಂದಿರುಗಿ ಬರುವಂತೆ ಮಾಡಲಾಗುತ್ತದೆ.[೭]

ಇದನ್ನೇ ಮತ್ತಷ್ಟು ಮುಂದುವರೆಸುವ ಶಿಷ್ಯರು "ಹಿಂದೆ ರಾಕ್ಷಸರು ಈ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳಿಗೆ ತುಂಬಾ ತೊಂದರೆಯುಂಟು ಮಾಡುತ್ತಿದ್ದರೆಂದೂ, ಆಗ ತಪಸ್ವಿಗಳೆಲ್ಲ ರಂಗನಾಥನ ಮೊರೆ ಹೋಗಲು, ಅವನು ಖಡ್ಗಧರಿಸಿ ಈ ರಾಕ್ಷಸರೊಡನೆ ಸೆಣೆಸಿ, ಅವರನ್ನು ಕೊಂದು ಋಷಿಗಳ ಕೋಟಲೆಯನ್ನು ಪರಿಹರಿಸಿದನೆಂದೂ ಚಿಕ್ಕಜಾತ್ರೆಯ ದಿನ ನಡೆಯುತ್ತದೆ.[೮] "ಮೊಲದ ಬೇಟೆ" ಶಿಷ್ಟ ಮನೋಧರ್ಮ ಈ ಬಗೆಯ ವಿವರಣೆ ನೀಡಿದರೆ ಆಚರಣೆಯ ಬಗ್ಗೆ ಜಾನಪದೀಯ ಮನೋಧರ್ಮ ಕೊಡುವ ವಿವರ ವಿಭಿನ್ನವಾಗಿರುತ್ತದೆ ಬಹಳ ಹಿಂದೆ ಅರಣ್ಯ ಪ್ರದೇಶವೇ ಸಮೃದ್ಧವಾಗಿದ್ದಾಗ ಬೇಟೆಯ ಸಂಭ್ರಮಕ್ಕೆ ಕೊನೆ ಮೊದಲಿರಲಿಲ್ಲ. ಅದರಲ್ಲೂ ಸೂರ್ಯ ತನ್ನ ಪಥ ಬದಲಾಯಿಸುವ ದಿನವನ್ನು ಬೇಟೆ, ಕುಣಿತವೇ ಮೊದಲಾದ ಸಂಭ್ರಮಗಳಿಗಾಗಿ ಮೀಸಲಾಗಿರಿಸುತ್ತಿದ್ದರು. ಸಾಂಕೇತಿಕವಾಗಿ ಬೇಟೆಗೆ ಹೋಗುವ ಸಂಪ್ರಾದಾಯವು ಅನಂತರದ ಕಾಲದಲ್ಲಿ ಆಚರಣೆಗೆ ಬಂದಿತು. ಈ ರೀತಿ ಬಿಳಿಗಿರಿ ರಂಗನಾಥನಿಗೆ ವರ್ಷದುದ್ದಕ್ಕೂ ಅನೇಕ ಉತ್ಸವಗಳು ಪಾರಂಪರಿಕವಾಗಿ ನಡೆಸಿಕೊಂಡು ಬರಲಾಗಿದೆ.

ಅಡಿಟಿಪ್ಪಣಿಗಳು

೧. ಮರುಳಸಿದ್ಧ, ಗುರುಲಿಂಗ ಜಂಗಮ ಚಾರಿತ್ರ, ಪು.೬೩

೨. ಸಾಧ್ವಿ, ದಿನಪತ್ರಿಕೆ, ೨೫ ಏಪ್ರಿಲ್ ೧೯೫೬

೩. ಸೋಮಣ್ಣ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೪. ಯಜಮಾನ ಕ್ಯಾತಶೆಟ್ಟಿ, ಮಂಗಲ, ಸಂದರ್ಶನ

೫. ಸಿದ್ಧಾಂತ ದಾಸಯ್ಯ ಮನೆತನದವರು, ಮದ್ದೂರು, ಯಳಂದೂರು ತಾಲೂಕು, ಸಂದರ್ಶನ

೬. ರಂಗನಾಥ ದೇಶಿಕಾಚಾರ, ಬಿಳಿಗಿರಿರಂಗನಬೆಟ್ಟ, ಸಂದರ್ಶನ

೭. ನಾಗರಾಜು ಮೈ.ನಾ., ಬಿಳಿಗಿರಿರಂಗನಬೆಟ್ಟ, ಪು.೩೦

ಅಧ್ಯಾಯ ೭

ಸಮಾರೋಪ

೭

ಸಮಾರೋಪ

ಇತಿಹಾಸ ಮತ್ತು ಪುರಾತತ್ವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಅಧ್ಯಯನಗಳು ನಡೆದಿವೆ. ಆದರೆ ಬಿಳಿಗಿರಿರಂಗನ ಬೆಟ್ಟದ ಚರಿತ್ರೆ, ದೇವಾಲಯ, ಮೂರ್ತಿಶಿಲ್ಪ ಕುರಿತಂತೆ ಪ್ರಸ್ತುತ ಅಧ್ಯಯನವು ಬಹುಮುಖ್ಯವಾಗಿದೆ. ಅಲ್ಲದೇ ದೇವಾಲಯದ ಪರಿಸರದಲ್ಲಿ ಪಾರಂಪರಿಕವಾಗಿ ನಡೆದು ಬಂದಿರುವ ನಂಬಿಕೆ, ಆಚರಣೆ, ಸಂಪ್ರದಾಯ, ಜಾತ್ರೆ ಮತ್ತು ಉತ್ಸವಗಳ ಬಗ್ಗೆ ಅಧ್ಯಯನ ಮಾಡಿದಾಗ, ಅನೇಕ ಮೌಖಿಕ ಮತ್ತು ಚಾರಿತ್ರಿಕಾಂಶಗಳು ಬೆಳಕಿಗೆ ಬರುತ್ತವೆ. ಈ ಪರಿಸರದ ಇತಿಹಾಸವನ್ನು ವಿಶೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕ್ಷೇತ್ರಕಾರ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಪ್ರಕೃತಿಯ ಮಡಿಲಿನಲ್ಲಿ ಅರಳಿದ ಬೆಟ್ಟದ ಸಂಸ್ಕೃತಿಯ ಹಿನ್ನೆಲೆಯಾಗಿ ಅಲ್ಲಿನ ಭೌಗೋಳಿಕ ಲಕ್ಷಣಗಳನ್ನು ವಿವರವಾಗಿ ನೀಡಲಾಗಿದೆ. ಬಿಳಿಗಿರಿರಂಗನ ಬೆಟ್ಟದ ಭೂಸ್ವರೂಪ, ಹವಾಗುಣ, ಪ್ರಾಕೃತಿಕ ಪರಿಸರ ಬೆಟ್ಟದ ಸಾಂಸ್ಕೃತಿಕ ಬದುಕಿನ ಅನನ್ಯತೆಗೆ ಪ್ರೇರಕವಾಗಿದೆ. ಇದನ್ನು ಕಂಡುಕೊಳ್ಳುವ ಮೊದಲ ಹೆಜ್ಜೆಯಲ್ಲಿ ಲಕ್ಷಾಂತರ ವರ್ಷಗಳ ಹಿಂದೆ ಸಂಭವಿಸಿದ ಸ್ತರಭಂಗದಿಂದ ಬಿಳಿಗಿರಿರಂಗನಬೆಟ್ಟ ರೂಪುಗೊಂಡದ್ದನ್ನು ಗುರುತಿಸಲಾಗಿದೆ. ಲಕ್ಷಾಂತರ ವರ್ಷಗಳ ಹಿಂದೆ ಭೌಗೋಳಿಕ ಸ್ತರಗಳ ರೂಪಾಂತರ ಗಳಿಂದ ಬೆಟ್ಟದ ಸೃಷ್ಟಿಗೆ ಕಾರಣವಾದರೆ, ಸಾಮಾಜಿಕ ಹಾಗೂ ಆರ್ಥಿಕ, ಧಾರ್ಮಿಕವಾಗಿ ಇಲ್ಲಿ ರೂಪುಗೊಂಡ ಹಂತಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ತನ್ನ ಮಡಿಲಲ್ಲಿ ಬದುಕುತ್ತಿರುವವರ ಜೀವನವನ್ನು ಆವರಿಸಿಕೊಂಡ ಅರಣ್ಯವನ್ನು ಅದರ ವೈವಿಧ್ಯತೆಯನ್ನು ಅನಿವಾರ್ಯವಾಗಿ ಉಳಿಸಿಕೊಳ್ಳಲು ಈ ಅಧ್ಯಯನದಲ್ಲಿ ಒತ್ತು ನೀಡಲಾಗಿದೆ.

ದೇವಾಲಯವೊಂದು ವ್ಯವಸ್ಥಿತವಾಗಿ ಅನೇಕ ಹಂತಗಳಲ್ಲಿ ಬೆಳೆದ ಬಗೆಯನ್ನು, ವಾಸ್ತು ಆಚರಣೆಗಳ ಮೂಲಕ ಗಮನಿಸಲಾಗಿದೆ. ಈ ರೀತಿ ಬೆಳೆದು ಜನಪ್ರಿಯವಾಗಲೂ ದೇವಾಲಯ ವ್ಯವಸ್ಥೆ ಅನುಸರಿಸುವ ಹಾದಿಯನ್ನು ಗಮನಿಸಲಾಗಿದೆ. ಸರ್ವ ಚೇತವಾದಿಗಳಾಗಿದ್ದ ಬುಡಕಟ್ಟು ಜನರನ್ನು ವೈಷ್ಣವ ಹಾಗೂ ಶೈವಧರ್ಮಗಳು ತಮ್ಮ ತೆಕ್ಕೆಗೆ ತಂದುಕೊಳ್ಳುವ ಮೇಲಾಟದಲ್ಲಿದ್ದವು ಎನ್ನುವುದಕ್ಕೆ ಬಿಳಿಗಿರಿರಂಗನ

ಬೆಟ್ಟ ಸಂಸ್ಕೃತಿ ಸ್ಪಷ್ಟ ನಿದರ್ಶನವಾಗಿದೆ. ರಂಗನಾಥನ ಉತ್ಸವಗಳಿಗೆ ಊರೂರುಗಳ ಜನ ಸೇರಿದರೆ, ಗ್ರಾಮಾದೇವತೆಯಾದ ಮಾರಮ್ಮನಿಗೆ ಬ್ರಾಹ್ಮಣೇತರರು ಒಟ್ಟುಗೂಡುತ್ತದೆ. ಈ ಪರಿಸರದಲ್ಲಿ ನಾಯಕರ ಓಡಾಟವೇ ಹೆಚ್ಚು. ಆದರೆ ಸೋಲಿಗರ ಹಬ್ಬ, ಆಚರಣೆಗಳು, ಆ ಸಮುದಾಯಕ್ಕೆ ಮಾತ್ರ ಸೀಮಿತ ಗೊಂಡಿವೆ. ಈ ವ್ಯವಸ್ಥೆಗಳ ಸ್ವರೂಪ, ಆಲಯ ವ್ಯವಸ್ಥೆ, ಆಚರಣೆ, ಆಹಾರ ಮುಂತಾದ ಎಲ್ಲ ಅಂಶಗಳನ್ನು ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುವುದನ್ನು ಸಾಧಾರಣಪೂರ್ವಕವಾಗಿ ವಿವೇಚಿಸಲಾಗಿದೆ.

ಬೆಟ್ಟದ ಮೂಲ ವಾಸಿಗಳ ಧರ್ಮಾಚರಣೆ, ಸರಳತೆಯಿಂದ ಸಂಕೀರ್ಣ ಘಟ್ಟಗಳನ್ನು ಹಾಯ್ದು ಬಂದಿದೆ. ಸೋಲಿಗರು ಅನುಸರಿಸುವ ಧಾರ್ಮಿಕ ಪದ್ಧತಿ ಸಂಸ್ಕೃತಿಯ ವಲಯದಲ್ಲಿ ಸೇರಿಕೊಂಡು ಸಂಕೀರ್ಣತೆಯನ್ನು ತಂದುಕೊಟ್ಟಿದೆ. ಆಚರಣೆಗಳ ಒಂದು ಕಾಲ ಘಟ್ಟದಲ್ಲಿ ಶೈವ ಧಾರ್ಮಿಕ ವ್ಯವಸ್ಥೆ ಮೂಲಕ ಅವರನ್ನು ಪೂರ್ಣವಾಗಿ ತನ್ನ ಹಿಡಿತಕ್ಕೆ ತಂದುಕೊಂಡಿತ್ತು. ಅನಂತರದ ಕಾಲ ಘಟ್ಟದಲ್ಲಿ ವೈಷ್ಣವ, ಧಾರ್ಮಿಕ ವ್ಯವಸ್ಥೆಯು ಬೇರೆ ಬೇರೆ ರೀತಿಯಲ್ಲಿ ಹಿಡಿದಿಟ್ಟುಕೊಳ್ಳುವಲ್ಲಿ ಸಂಪೂರ್ಣ ಯಶಸ್ವಿಯಾಯಿತ್ತು. ಆದರೆ ಇವೆರಡು ಕ್ರಮಿಸುವ ಮಾರ್ಗ ಮಾತ್ರ ಭಿನ್ನವಾಗಿ ಕಾಣುತ್ತದೆ.

ಸಾಮಾಜಿಕ ಬದುಕಿನ ಸ್ವರೂಪವನ್ನು ವಿವೇಚಿಸಿದ ಈ ಕ್ಷೇತ್ರದಲ್ಲಿ ಶ್ರೇಣಿಕೃತ ಜಾತಿ ವ್ಯವಸ್ಥೆಯು ಬಹಳ ಕಟ್ಟು ನಿಟ್ಟಾಗಿದ್ದು, ಜಾತಿ ಜಾತಿಗಳ ನಡುವೆ ಅಂತರವನ್ನು ಜತನದಿಂದ ಉಳಿಸಿಕೊಂಡು ಬರಲಾಗಿದೆ. ಆಧುನಿಕ ಕಾನೂನುಗಳಿಂದಾಗಿ ಅಸ್ಪೃಶ್ಯರನ್ನು ದೇವಾಲಯದ ಒಳಗೆ ಬಿಟ್ಟಿದ್ದರೂ, ಅವರ ಬಗ್ಗೆ ಇರುವ ದೃಷ್ಟಿಕೋನಗಳು ಸಂಪೂರ್ಣವಾಗಿ ಬದಲಾಗಿಲ್ಲ ಎನ್ನುವುದನ್ನು ಗಮನಿಸಲಾಗಿದೆ. ವಿವಾಹ, ಕುಟುಂಬ ಮುಂತಾದ ಸಾಂಸ್ಥಿಕ ವ್ಯವಸ್ಥೆಗಳ ಸ್ವರೂಪಗಳು ಬದಲಾಗಿವೆ. ಕುಟುಂಬ ವ್ಯವಸ್ಥೆಯಲ್ಲಿ ಬಹುಪಾಲು ಅವಿಭಕ್ತ ಕುಟುಂಬ ವ್ಯವಸ್ಥೆಯೇ ಇದೆ. ವಿಭಿನ್ನ ಸಂಸ್ಕೃತಿಯ ಜನ ಸಮುದಾಯಗಳ ನಡುವಣ ನಿರಂತರ ಮುಖಾಮುಖಿ ಸಂಪರ್ಕ ಒಡನಾಟಗಳಿಂದ ಬೆಟ್ಟದ ಸಮುದಾಯಗಳ ಸಂಸ್ಕೃತಿಯಲ್ಲಿ ಕೊಡುಗೆಗಳು ಉಂಟಾಗಿವೆ.

ಆರ್ಥಿಕ ವ್ಯವಸ್ಥೆಯ ಸ್ವರೂಪ ಮತ್ತು ವೈಶಿಷ್ಟ್ಯಗಳು ಬದಲಾಗುತ್ತಾ ಬಂದು, ಅದು ಬೆಟ್ಟದ ಸಾಂಸ್ಕೃತಿಕ ಪ್ರಪಂಚದ ಮೇಲೆ ಬೀರಿದ ಪರಿಣಾಮಗಳನ್ನು ಈ ಅಧ್ಯಯನದಲ್ಲಿ ಅನಾವರಣಗೊಳಿಸಲಾಗಿದೆ. ಕೃಷಿ ವ್ಯವಸ್ಥೆಯ ಮೂಲಕ ಬಿಳಿಗಿರಿರಂಗನ ಬೆಟ್ಟದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವ ಪ್ರಯತ್ನಗಳು ಅಷ್ಟಾಗಿ ಯಶಸ್ಸು ಕಾಣದಿರಲು, ಇಲ್ಲಿ ನೀರಾವರಿ ಯೋಜನೆಗಳು ಇಲ್ಲದೇ ಇರುವುದು. ಇಲ್ಲಿನ ಮಳೆಯಾಧಾರಿತ ಕೃಷಿಗೆ, ವನ್ಯ ಪ್ರಾಣಿಗಳ ಹಾವಳಿಯು ಸೇರಿ, ಕೃಷಿಕರ ಬದುಕು ಮುರಿದು ಬೀಳುತ್ತದೆ. ಇದರಿಂದ ಕೃಷಿ ಮಾಡುವವರಷ್ಟೇ ಅಲ್ಲದೇ ಕೃಷಿ ಕಾರ್ಮಿಕರ ಬದುಕು ಕೂಡ ಅಸ್ತವ್ಯಸ್ತವಾಗುತ್ತಿದೆ. ಆದ್ದರಿಂದ ಅರಣ್ಯೋತ್ಪನ್ನಗಳ ಸಂಗ್ರಹದ ಮೇಲೆ ಒತ್ತು ಬೀಳುತ್ತಿದೆ. ಸರ್ಕಾರದ ಕಲ್ಯಾಣ

ಕಾರ್ಯಕ್ರಮಗಳಲ್ಲಿ ಸಾಫಲ್ಯ ವೈಫಲ್ಯಗಳ ಎರಡು ಮುಖಗಳು ಕಾಣಸಿಗುತ್ತವೆ. ಸರ್ಕಾರ ನೀಡಿದ ಸೌಲಭ್ಯಗಳನ್ನು ಬಳಸಿಕೊಂಡು ಬೆಟ್ಟದ ಜನ ಉತ್ತಮ ಸ್ಥಿತಿಯನ್ನು ತಲುಪುವಲ್ಲಿ ಸೂಕ್ತವಾದ ಮುನ್ನೆಚ್ಚರಿಕೆಯ ಮಾರ್ಗದರ್ಶನದ ಅಗತ್ಯವಿದೆ.

ಬೆಟ್ಟದವರ ನಂಬಿಕೆ-ಸಂಪ್ರದಾಯಿಕ ಆಚರಣೆಗಳ ಸಂದರ್ಭದಲ್ಲಿ ಮೂರು ಹಂತಗಳು ಎದ್ದು ಕಾಣುತ್ತವೆ. ಬ್ರಾಹ್ಮಣ, ಬ್ರಾಹ್ಮಣೇತರ ಮತ್ತು ಬುಡಕಟ್ಟುಗಳ ನೆಲೆಗಟ್ಟಿನಲ್ಲಿ ಬಹುತೇಕ ನಂಬಿಕೆ, ಆಚರಣೆಗಳು ರೂಪುಗೊಂಡಿವೆ. ಬಹುಕಾಲ ಬುಡಕಟ್ಟು ನಂಬಿಕೆ ಸಂಪ್ರದಾಯಗಳ ಅನ್ಯ ಪ್ರಭಾವಗಳಿಂದ ಮುಕ್ತವಾದವು. ಕಾಲಕ್ರಮೇಣ ಅನುಕರಿಸಲು ಹಾಗೂ ಆಚರಿಸಲು ಸಾಧ್ಯವಾಗುವ ಅನೇಕ ಆಚರಣೆಗಳು ಬೇರೆ ಕಡೆಯಿಂದ ಬಂದರೂ ಒಪ್ಪಿಕೊಳ್ಳುವ ಮನಃಸ್ಥಿತಿಗೆ ಬೆಟ್ಟದ ಜನ ತಲುಪಿದ್ದಾರೆ.

ಸೋಲಿಗರ ಮೂಲ ನೆಲೆಗಳ ಸಂಬಂಧ ಕಳಚಿಕೊಂಡು ಬಂದರೂ ಅವರ ಪ್ರಯಾಣ ನೂರಾರು ಮೈಲಿಗಿನ ಒಳಗೆ ಮಾತ್ರ. ಆದರೆ ಅವರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ಬಂದ ಸ್ವಯಂ ಸೇವಾ ಸಂಸ್ಥೆಯ ಕಾರಣದಿಂದ ಸೋಲಿಗರು ಹಾಗೂ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಿತವಾಗಿದ್ದಾರೆ. ಎಷ್ಟೋ ಸಲ ಸೋಲಿಗ ಎಂಬ ಶಬ್ದವೇ ಮಂತ್ರ ದಂಡದಂತೆ ಕಾರ್ಯನಿರ್ವಹಿಸುತ್ತಿದೆ. ಪ್ರಪಂಚದ ಉನ್ನತ ರೈಟ್ ಲೈವ್ಲಿಹುಂಡ ಪ್ರಶಸ್ತಿಯನ್ನು ಸಂಸ್ಥೆಯ ಸ್ಥಾಪಕರು ಪಡೆಯಲು ನೆರೆವಾಯಿತು. ಈ ಸಂಸ್ಥೆಯು ಇನ್ನು ಉತ್ತಮವಾದ ರೀತಿಯಲ್ಲಿ ಒತ್ತಡ ಬೀರಿ ಒತ್ತಾಸೆಯಾಗಿ ನಿಂತರೆ ಸೋಲಿಗರ ಪ್ರಗತಿ ಉತ್ತಮ ಹಾದಿಯಲ್ಲಿ ಸಾಗಬಹುದು.

ಜಾತ್ರೆ ಉತ್ಸವಗಳು ಧಾರ್ಮಿಕ ಪರಂಪರೆಯನ್ನು ಕಟ್ಟಿಕೊಡುವುದರ ಮೂಲಕ ಸಾಮಾಜಿಕ ಸಾಮರಸ್ಯವನ್ನು ಬೆಸೆಯುತ್ತವೆ. ಹಾಗೆಯೇ ಇಲ್ಲಿ ಆಚರಣೆಯಿಂದ ಆಯಾ ಕಾಲದ ರಾಜರ ಇತಿಹಾಸವನ್ನು, ಪರಂಪರೆಯನ್ನು, ಉದ್ದೇಶ ಮತ್ತು ಹಿನ್ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಈ ಅಂಶದಿಂದ ಚರಿತ್ರೆಯನ್ನು ರೂಪಿಸಲು ಅನುಕೂಲವಾಗುತ್ತದೆ. ದೇವಾಲಯವೊಂದನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತಂದುಕೊಂಡು ಸ್ಥಾಪಿತ ಧರ್ಮಗಳ ಆಚರಣೆಗಳು, ಜಾತಿ ಮತ್ತು ಧರ್ಮಗಳಲ್ಲಿನ ಭೇದ ಭಾವನೆ ತೊರೆದು ಭಾವೈಕತೆಯನ್ನು ಮೂಡಿಸುತ್ತದೆ. ಇಲ್ಲಿಯ ಬುಡಕಟ್ಟು ಸಮುದಾಯಗಳು ಬೆಟ್ಟದಲ್ಲಿ ನಡೆಯುತ್ತಿರುವ ಜಾತ್ರೆ, ಉತ್ಸವ, ಧಾರ್ಮಿಕ ಆಚರಣೆ, ಸಾಮಾಜಿಕ ಕಟ್ಟುಪಾಡುಗಳನ್ನು ಮೌಖಿಕ ಪರಂಪರೆಯ ಮೂಲಕ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಎಲ್ಲ ಅಂಶಗಳನ್ನು ದಾಖಲೀಕರಣ ಮಾಡಿಕೊಂಡು ಸಾಂಸ್ಕೃತಿಕ ಇತಿಹಾಸವನ್ನು ಗಟ್ಟಿಗೊಳಿಸಲಾಗಿದೆ.

ಹೀಗೆ ಪ್ರಸ್ತುತ ಅಧ್ಯಯನದಿಂದ ಬಿಳಿಗಿರಿರಂಗನಬೆಟ್ಟದ ರಂಗನಾಥಸ್ವಾಮಿ ದೇವಾಲಯದ ಹಿನ್ನೆಲೆಯಲ್ಲಿ, ಅಲ್ಲಿಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕಾಣಬಹುದಾಗಿದೆ. ಆದರೂ ಪ್ರಸ್ತುತ

ಅಧ್ಯಯನದಿಂದ ಸೂಕ್ಷ್ಮವಾಗಿ ಅವಲೋಕಿಸಿದಾಗ, ಪಾರಂಪರಿಕವಾಗಿ ವಾಸಮಾಡಿಕೊಂಡಿರುವ ಬುಡಕಟ್ಟುಗಳ ಸಮಸ್ಯೆ, ದೇವಾಲಯ ಮತ್ತು ಇತರೆ ಸ್ಮಾರಕಗಳ ಸಂರಕ್ಷಣೆಗೆ, ಜಾತ್ರೆ, ಉತ್ಸವಗಳಲ್ಲಿ ನಿರ್ವಹಿಸಬೇಕಾದ ಅಚ್ಚುಕಟ್ಟುತನ ಮೊದಲಾದ ಪ್ರಮುಖ ವ್ಯವಸ್ಥೆಗಳು ಆಗಬೇಕಾಗಿರುವುದು ತುಂಬಾ ಅವಶ್ಯವೆನಿಸುತ್ತದೆ. ಮುಂದಿನ ವಿಸ್ತೃತ ಅಧ್ಯಯನದಲ್ಲಿ ಈ ಪರಿಸರದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮುಂತಾದ ಸೂಕ್ಷ್ಮ ಅವಲೋಕನಗಳಿಗೆ ಪ್ರಸ್ತುತ ಅಧ್ಯಯನವು ಪ್ರಾಥಮಿಕ ಆಕರವಾಗಬಹುದೆಂದು ಆಶಯವಾಗಿದೆ.

ಅನುಬಂಧಗಳು

೧. ಗ್ರಂಥ ಋಣ

೨. ಛಾಯಾಚಿತ್ರಗಳು

೧

ಗ್ರಂಥಋಣ

೧. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೯

೨. ಅನಂತ ರಾಮು ಕೆ., ಸಕ್ಕರೆ ಸೀಮೆ, ಅನಂತ ಪ್ರಕಾಶನ, ಮೈಸೂರು ೧೯೮೨

೩. ಅನಂತಮೂರ್ತಿ ಯು.ಆರ್., ಬೆತ್ತಲೆ ಪೂಜೆ ಯಾಕೆ ಕೂಡದು, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬

೪. ಅನ್ನಪೂರ್ಣ ಎಂ.ನಾಯಕ, ರಾಜ ಪರಿವಾದರವರು, ಸಂಚಿಕೆ ೧, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪

೫. ಆಶಾ ಎಂ.ಎ., ಸಾಮಾಜಿಕ ವಿಘಟನೆ ಮತ್ತು ಸಮಸ್ಯೆಗಳು, ಉಷಾ ಪ್ರಕಾಶನ, ಮೈಸೂರು, ೨೦೦೭

೬. ಈಶ್ವರಪ್ಪ ಎಂ.ಜಿ., ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೫

೭. ಕಾಳೇಗೌಡ ನಾಗವಾರ ಮತ್ತು ಹುಚ್ಚಪ್ಪ ಮಾಸ್ಟರ್ ಎನ್., ಗಿರಿಜನ ಸಂಸ್ಕೃತಿ(ಸಂ), ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೮. ಕುಪ್ಪಸ್ವಾಮಿ ಬಿ., ಶ್ರದ್ಧೆ, ನಂಬಿಕೆ ಮತ್ತು ವೈಚಾರಿಕತೆ, ಶಶಿ ಪ್ರಕಾಶನ, ಮೈಸೂರು, ೧೯೯೧

೯. ಕೃಷ್ಣ ಬಿ.ಆರ್., ಭಾರತೀಯ ಸಮಾಜ ಶಾಸ್ತ್ರ, ಚೇತನ ಬುಕ್ ಹೌಸ, ಮೈಸೂರು, ೧೯೯೭

೧೦. ಗುರುರಾಜ್ ರಾವ್ ಬಿ.ಕೆ., ಕರ್ನಾಟಕ ಲೋಹಯುಗ ಸಂಸ್ಕೃತಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೧

೧೧. ಚಂದ್ರಶೇಖರ ಟಿ.ಆರ್.(ಸಂ), ವಿಕೇಂದ್ರಿಕರಣ ತತ್ವ ಆಚರಣೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೨. ಚಂದ್ರಶೇಖರಯ್ಯ, ಕಾರಮಕ್ಕ, ಸಂವದ ಪ್ರಕಾಶನ, ಮೈಸೂರು, ೧೯೯೭

೧೩. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ, ಪರಿಷತ್ ಸಂ.೧ ಮತ್ತು ೨, ೧೯೮೫

೧೪. ಚಂದ್ರಕಾಳೇನ ಹಳ್ಳಿ, ಸೋಲಿಗರು, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು ೧೯೯೩

೧೫. ಡಾ. ಚಂದ್ರಪ್ಪ ಕೆ., ಸೋಲಿಗರ ಒಂದು ಅಧ್ಯಯನ, ಪ್ರೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೯೦

೧೬. ಜ್ಞಾನಾನಂದ ಜಿ., ಶಿಲ್ಪಾದರ್ಶ ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

೧೭. ಡಾ. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳ ಒಂದು ಅಧ್ಯಯನ, ಕರ್ನಾಟಕ ಸಾಹಿತ್ಯ ಪರಿಷತ್, ೧೯೯೪

೧೮. ನಾಗರಾಜು ಮೈ.ನ., ಬಿಳಿಗಿರಿರಂಗನ ಬೆಟ್ಟ, ಐ.ಬಿ.ಹೆಚ್., ಪ್ರಕಾಶನ, ಬೆಂಗಳೂರು, ೧೯೮೪

೧೯. ನಾಗೇಗೌಡ ಎಚ್.ಎಲ್., ಗ್ರಾಮದೇವತೆ ಮಾರಮ್ಮ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು ೧೯೯೧

೨೦. ನಾಗೇಶ ಹೆಗಡೆ, ವನ್ಯ ಸಂಜೀವನ, ಬಿ.ಆರ್.ಜಿ., ಅಭಯಾರಣ್ಯ, ಕರ್ನಾಟಕ ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೦೪

೨೧. ನಂಜರಾಜು ಅರಸ ಪಿ.ವಿ., ಚಂದ್ರರಾಜ ಅರಸು, ನಾಲ್ವಡಿ ಕೃಷ್ಣರಾಜ ಒಡೆಯರ ಒಂದು ದರ್ಶನ, ಅಖಿಲ ಕರ್ನಾಟಕ ಅರಸ ಪರಿಷತ್ (ರಿ), ಮೈಸೂರು ೧೯೯೬

೨೨. ಬರಗೂರು ರಾಮಚಂದ್ರಪ್ಪ, ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೬

೨೩. ಬಸವರಾಜ ಕಲ್ಗುಡಿ, ಅನುಭಾವ, ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಪ್ರಿಯದರ್ಶಿ ಪ್ರಕಾಶನ, ಬೆಂಗಳೂರು, ೧೯೯೭

೨೪. ಬಾಲಗೋಪಾಲ ಕೆ., ಪ್ರಾಚೀನ ಭಾರತ ಚರಿತ್ರೆ (ಅನುವಾದ), ಎಚ್.ಎಸ್., ಕೊಸಾಂಬಿಯವರ ಚಿಂತನೆಗಳು, ಬೆಳ್ಳಿಚುಕ್ಕಿ ಪುಸ್ತಕಾಲಯ, ಬೆಂಗಳೂರು, ೧೯೯೪

೨೫. ಮಂಜುನಾಥ ಜಿ.ಜಿ., ಗುರುಲಿಂಗ ಜಂಗಮ ಚಾರಿತ್ರ (ಸಂಪುಟ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫

೨೬. ಮಂಜುಳಾ ಹೆಚ್.ಪಿ., ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ, ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೦

೨೭. ಮರುಳು ಸಿದ್ದಪ್ಪ(ಸಂ), **ಕೆಲವು ಲಾವಣಿಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ೧೯೭೨

೨೮. ಮರುಳುಸಿದ್ದಯ್ಯ ಹೆಚ್.ಎಂ., **ಅರಿವು-ಆಚರಣೆ**, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು, ೧೯೯೫

೨೯. ರಂಗಸ್ವಾಮಯ್ಯ ಜಿ.ಆರ್. ಮತ್ತು ಷೇಕ್ ಆಲಿ ಬಿ., **ದಕ್ಷಿಣ ಭಾರತದ ಇತಿಹಾಸ**, ಅನಂತ ಪ್ರಕಾಶನ, ಮೈಸೂರು, ೧೯೯೪

೩೦. ರಂಗನಾಥ, **ಪ್ರಾಕೃತಿಕ ಭೂಗೋಳ ಶಾಸ್ತ್ರ**, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯

೩೧. ರಘುಪತಿ ಕೆಮ್ತೂರು, **ಸ್ಥಳನಾಮಾಧ್ಯಯನದ ಇತ್ತೀಚಿನ ಒಲವುಗಳು ಒಂದು ಸ್ಥೂಲ ನೋಟ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೮೭

೩೨. ರಾಜೇಗೌಡ ಹೊಸಳ್ಳಿ, **ಜಾನಪದ ಸಂಕಥನ**, ಸ್ವಾತಿ ಪ್ರಕಾಶನ, ಬೆಂಗಳೂರು, ೧೯೯೯

೩೩. ರಾಮಕೃಷ್ಣರಾವ್ ಬಿ., **ಶ್ರೀ ಮನ್ಮಹರಾಜರ ವಂಶಾವಳಿ ಭಾಗ-೧**, ಸರ್ಕಾರಿ ಮುದ್ರಾಣಾಲಯ, ಮೈಸೂರು, ೧೯೧೬

೩೪. ರಾಮಚಂದ್ರರಾವ್ ಎಸ್.ಕೆ., **ಭಾರತೀಯ ದೇವಾಲಯಗಳ ಜಾನಪದ ಮೂಲಕ**, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು, ೧೯೮೨

೩೫. ಲೀಲಾ ಅಪ್ಪಾಜಿ, **ಬಿಳಿಗಿರಿರಂಗನ ಬೆಟ್ಟ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೨೦೦೨

೩೬. ಲಕ್ಕಪ್ಪಗೌಡ ಹೆಚ್.ಜಿ., **ಜಾನಪದ ಸಂಕಥನ**, ಸ್ವಾತಿ ಪ್ರಕಾಶನ, ಬೆಂಗಳೂರು, ೧೯೯೯

೩೭. ವಿವೇಕ ರೈ ಬಿ.ಎ.(ಸಂ), **ಜನಪದ ಆಟಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೦

೩೮. ಸಣ್ಣಯ್ಯ ಬಿ.ಎಸ್.(ಸಂ), **ದೇವಚಂದ್ರ ವಿರಚಿತ ರಾಜಾವಳಿ, ಕಥಾಸಾರ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೮

೩೯. ಶಂಕರರಾವ್ ಚ.ನ., **ಭಾರತೀಯ ಸಮಾಜಶಾಸ್ತ್ರ**, ಜೈಭಾರತ ಪ್ರಕಾಶನ, ಮಂಗಳೂರು ೧೯೯೪

೪೦. ಶಂಕರ ನಾರಾಯಣ ತೀ.ನಂ., **ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨

೪೧. ಶಾಲಿನಿ ರಘುನಾಥ, **‘ಸ್ಥಳನಾಮ’, ಸ್ಥಳೀಯ ಚರಿತ್ರೆ ಪುರಾತತ್ವ ಮಾಲೆ ೨, ಹಾನಗಲ್ಲ**, ವಾಸುದೇವ ಬಡಿಗೇರ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪೨. **ಶೇಷಶಾಸ್ತ್ರಿ ಆರ್., ಕನ್ನಡ ಶಾಸನಗಳಲ್ಲಿ ಇತಿಹಾಸ ಮತ್ತು ಪುರಾಣ ಪ್ರಜ್ಞೆ, ಕನ್ನಡ ಸಾಹಿತ್ಯದಲ್ಲಿ** ಚರಿತ್ರೆ ಮತ್ತು ಪುರಾಣ ಕನ್ನಡ ಸಾಹಿತ್ಯ ಪರಿಷತ್, ೧೯೯೩

೪೩. **ವಿಶ್ವಕೋಶಗಳು,** ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ, ಮೈಸೂರ ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

೪೪. **ಎಪಿಗ್ರಾಫಿಯ ಕರ್ನಾಟಕಾ ಸಂಪುಟಗಳು,** ಕನ್ನಡ ಅಧ್ಯನ ಸಂಸ್ಥೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೪೫. **ಜಂಗಮ : ಸ್ಮರಣೆ ಸಂಚಿಕೆ,** ಜಯಂತಿ ಮಹೋತ್ಸವ ಸಮಿತಿ, ಟಿ.ನರಸೀಪುರ, ೧೯೯೯

೪೬. **ನಿರಂಜನ ಸ್ಮರಣೆ ಸಂಚಿಕೆ,** ಶ್ರೀಗುರು ಮಲ್ಲೇಶ್ವರ ಸಂಸ್ಕರಣಾ ಶತಮನೋತ್ಸವ ಸಮಿತಿ, ದೇವನೂರು ಮಠ, ನಂಜನಗೂಡು, ೨೦೦೦

೪೭. **ಬಯಲು ಸ್ಮರಣ ಸಂಚಿಕೆ,** ಜಯಂತಿ ಮಹೋತ್ಸವ ಸಮಿತಿ, ಚಾಮರಾಜನಗರ, ೧೯೯೬

೪೮. **ಶ್ವೇತಾಚಲ ಮಹಾತ್ಮೆ,** ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಪ್ರಕಟಣೆ


ಇಂಗ್ಲಿಷ್ ಗ್ರಂಥಗಳು

1. Buchanan J.Francies, **A Journey from Madras through the confries,** Canara & Malabar
2. Ganeshaiah K.N., **Biligiriranga Swamy Temple wild life Sanctuary,** ATREE & V.G.K.K.
3. Gopal H., **Problems of Soliga Social welfare,** Vol.12, No.8, 1992, I.B.M.Publisher, Bangalore
4. Gayathri J.V., **Selection from the records of the Mysore Place,** Mysore Government Press
5. Morab G., **The Soliga of Biligiraranana Hills,** M.P.Publisher, 1992
6. Ramesha B.R., **Evergreen Forests of B.R.hills Karnataka,** French Insitutition, Pondichery, 1982
7. Srinivas M.N., **Indian Village,** M.P.Publisher, (P) Ltd, Bomby, 1993
8. Swami Nirmalanada, **A Garknd of Forest Flowers,** Viswashatinikethan, B.R.Hills, 1993

ಛಾಯಾಚಿತ್ರಗಳು



ಬಿಳಿಗಿರಿರಂಗನಬೆಟ್ಟದ ಆವರಣ



ಬಿಳಿಗಿರಿರಂಗನಬೆಟ್ಟದ ವಿಹಂಗಮನೋಟ



ಬೃಹತ್‌ಶಿಲಾಯುಗದ ಹಾದಿಕೋಣೆ




ದಿವಾನ್ ಪೂರ್ಣಯ್ಯನವರ ಭಂಗಲೆ



ರಂಗನಾಥಸ್ವಾಮಿ ಮತ್ತು ಆಲಮೇಲಮ್ಮನ ದೇವಾಲಯ





ದ್ವಾರಪಾಲಕ ಮತ್ತು ಆಂಜನೇಯ ಮೂರ್ತಿಶಿಲ್ಪಗಳು



ಕಲ್ಯಾಣಿಕೊಳ



ರಂಗನಾಥಸ್ವಾಮಿಯ ಪಾದರಕ್ಷೆ



ಬಿಳಿಗಿರಿರಂಗನಬೆಟ್ಟದ ಮನೆಗಳ ವಿಹಂಗಮನೋಟ



ಸೋಲಿಗರ ಹಬ್ಬದಸಂಭ್ರಮ



ಸೋಮೇಶ್ವರನ ಕೆರೆ



ಬಿಳಿಗಿರಿರಂಗನಾಥಸ್ವಾಮಿಯ ಉತ್ಸವ



ಬಿಳಿಗಿರಿರಂಗನಬೆಟ್ಟದ ದೊಡ್ಡರಥ



ಬಿಳಿಗಿರಿರಂಗನಬೆಟ್ಟದ ಸೋಲಿಗರು



ಬಿಳಿಗಿರಿರಂಗನಬೆಟ್ಟದ ದೊಡ್ಡಸಂಪಿಗೆ